ಮಂಗಳೂರು
ಭಾನುವಾರ, 21 ಜೂನ್ 2026
ಸಂಪುಟ 48, ಸಂಚಿಕೆ 94 ಪುಟಗಳು 12+6
ಬೆಂಗಳೂರು ಮಂಗಳೂರು ಶಿವಮೊಗ್ಗ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಇಂದು ವಿಶ್ವ ಯೋಗ ದಿನ

ಕಿರುಸುದ್ದಿ

ಸಿ ಎ ಅಂತಿಮ ಪರೀಕ್ಷೆ: ಪ್ರಥಮ ಪ್ರಯತ್ನದಲ್ಲಿಯೇ ರಾಹುಲ್ ಉತ್ತೀರ್ಣ



ಪಡುಬಿದ್ರಿ: ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಹಳೆ ವಿದ್ಯಾರ್ಥಿ ರಾಹುಲ್ ಎಂ. ಅವರು ಮೇ 2026ರಲ್ಲಿ ನಡೆದ ಸಿ ಎ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಮಂಜು ಟಿ. ಮತ್ತು ಶೋಭಾ ಟಿ. ದಂಪತಿಯ ಪುತ್ರರಾಗಿದ್ದಾರೆ. ಮೂಲತಃ ಅದಮಾರಿನ ತೆಂಕ ಮನೆಯಲ್ಲಿ ಇದ್ದು ಕಲಿಯುತ್ತಿದ್ದ ರಾಹುಲ್ ಪ್ರಸ್ತುತ ಹೆತ್ತವರೊಂದಿಗೆ ಬೆಂಗಳೂರಲ್ಲಿ ನೆಲೆಸಿದ್ದಾರೆ.ಈ ಸಾಧನೆ ಮಾಡಿದ ರಾಹುಲ್ ರನ್ನು ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು, ಗೌರವ ಕಾರ್ಯದರ್ಶಿ ರಮೇಶ್ ಹಂದೆ ಗೌರವ ಕೋಶಾಧಿಕಾರಿ ಗಣೇಶ್ ಹೆಬ್ಬಾರ್, ಗೌರವ ಸಹ ಕಾರ್ಯದರ್ಶಿ ಸುದರ್ಶನ್ ರಾವ್ ಕಾಲೇಜಿನ ಪ್ರಾಂಶುಪಾಲ ಸಂಜೀವ ನಾಯ್ಕ ಅಭಿನಂದಿಸಿದ್ದಾರೆ.

ಮಂಗಳೂರು ಹವ್ಯಕ ಸಭಾ ಅಧ್ಯಕ್ಷರಾಗಿ ದಿವಾಣ ಗೋವಿಂದ ಭಟ್



ಮಂಗಳೂರು: ಮಂಗಳೂರು ಹವ್ಯಕ ಸಭಾ ಅಧ್ಯಕ್ಷರಾಗಿ ಅನನ್ಯ ಪಶು ಆಹಾರ ತಯಾರಿಕಾ ಸಂಸ್ಥೆಯ ಮಾಲೀಕ ದಿವಾಣ ಗೋವಿಂದ ಭಟ್ ಆಯ್ಕೆಯಾಗಿದ್ದಾರೆ. ನಂತೂರಿನ ಸಭಾಭವನದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಗೌರವ ಸಲಹೆಗಾರ ಡಾ.ರಾಜೇಂದ್ರ ಪ್ರಸಾದ್ ಹಾಗೂ ಅಧ್ಯಕ್ಷೆ ಗೀತಾದೇವಿ ಜೂಂತಾರು ಇವರ ಉಪಸ್ಥಿತಿಯಲ್ಲಿ ಇವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಪದಾಧಿಕಾರಿಗಳಾಗಿ ಅನಂತ ಶರ್ಮಾ– ಉಪಾಧ್ಯಕ್ಷ, ಅನುಪಮಾ ಎಸ್. – ಉಪಾಧ್ಯಕ್ಷೆ, ಸೌಜನ್ಯ ಪದ್ಯಾಣ– ಕಾರ್ಯದರ್ಶಿ, ಸವಿತಾ ಭಟ್– ಜೊತೆ ಕಾರ್ಯದರ್ಶಿ, ಅನಿತಾ ವಿ. ಭಟ್ ಕೋಶಾಧಿಕಾರಿಯಾಗಿ ಆಯ್ಕೆಗೊಂಡರು.

ನಾರಾಯಣ ಗುರು ಯುವ ವೇದಿಕೆ : ಅಧ್ಯಕ್ಷರಾಗಿ ನವೀನ್ ಅಮೀನ್



ಮಂಗಳೂರು: ನಾರಾಯಣ ಗುರು ಯುವ ವೇದಿಕೆ ಮಂಗಳೂರು ನೂತನ ಅಧ್ಯಕ್ಷರಾಗಿ ನವೀನ್ ಅಮೀನ್ ಆಯ್ಕೆಯಾಗಿದ್ದಾರೆ. ನಗರದ ಕೇರಳ ಸಮಾಜಂ ಸಭಾಂಗಣದಲ್ಲಿ ಇತ್ತೀಚೆಗೆ ಸುದರ್ಶನ್ ಸುವರ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಮಹಾಸಭೆಯಲ್ಲಿ ನವೀನ್ ಅಮೀನ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ರಾಜ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಸುಮಂತ ಕುಮಾರ್, ಜತೆ ಕಾರ್ಯದರ್ಶಿಯಾಗಿ ಸುಧೀರ್ ಕುಮಾರ್, ಕೋಶಾಧಿಕಾರಿ ಪದ್ಮನಾಭ ಕೆ., ಸಂಘಟನಾ ಕಾರ್ಯದರ್ಶಿ ಯುವರಾಜ್, ಸಾಹಿತ್ಯ ಹಾಗೂ ಸಾಂಸ್ಕ ತಿಕ ರಘುನಾಥ ವರ್ಕಾಡಿ, ಸಮಾಜ ಸೇವೆ ಸಿತೇಶ್ ಮೂಡುಶೆಡ್ಡೆ, ವ್ಯಕ್ತಿತ್ವ ವಿಕಸನ ದಿಶಿತ್‌ಕುಮಾರ್, ಕ್ರೀಡೆ ನವೀನ್ ಬಂಗೇರ, ವ್ಯಕ್ತಿತ್ವ ವಿಕಸನ ಬ್ರಿಜೇಶ್ ಅಂಚನ್, ನಾರಾಯಣಗುರುಗಳ ತತ್ವ ಪ್ರಚಾರ ಲೋಹಿತ್‌ಕುಮಾರ್, ವಿದ್ಯಾನಿಧಿ ಸುದರ್ಶನ್ ಡಿ. ಸುವರ್ಣ ಆಯ್ಕೆಯಾಗಿದ್ದಾರೆ.

ಕಾಂಗ್ರೆಸ್ ಮುಖಂಡೆ ಚಂದ್ರಪ್ರಭಾ ಗೌಡಗೆ ರಾಜ್ಯಮಟ್ಟದ ಪ್ರಶಸ್ತಿ



ಪುತ್ತೂರು: ಸಮಾಜ ಸೇವೆ, ಶಿಕ್ಷಣ, ಮಾನವ ಹಕ್ಕುಗಳ ರಕ್ಷಣೆ, ಪರಿಸರ ಜಾಗೃತಿ ಮತ್ತು ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆಗಾಗಿ ಪುತ್ತೂರು ಮಹಿಳಾ ಕಾಂಗ್ರೆಸ್ ಕಾರ್ಯಾಧ್ಯಕ್ಷೆ, ಚಂದ್ರಪ್ರಭಾ ಗೌಡ ಅವರು ಎ.ಎಸ್.ಜೆ.ಎಸ್. ಫೌಂಡೇಶನ್ ಇಂಟರ್‌ನ್ಯಾಷನಲ್ ಹ್ಯೂಮನ್ ಡೆವಲಪ್‌ಮೆಂಟ್ ಕೌನ್ಸಿಲ್ (ಅಂತಾರಾಷ್ಟ್ರೀಯ ಮಾನವ ಅಭಿವೃದ್ಧಿ ಮಂಡಳಿ) ಕೊಡಮಾಡುವ ರಾಜ್ಯಮಟ್ಟದ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಗಳನ್ನು ಮುಖ್ಯವಾಗಿ 'ಗ್ಲೋಬಲ್ ಐಕಾನಿಕ್ ಅಚೀವರ್ಸ್ ಅವಾರ್ಡ್'ಎಂಬ ಹೆಸರಿನಲ್ಲಿ ನೀಡಲಾಗುತ್ತಿದ್ದು, ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ನಿಸ್ವಾರ್ಥ ಸೇವಕರನ್ನು, ಮಾನವ ಹಕ್ಕುಗಳು, ಶಾಂತಿ ಮತ್ತು ಸುಸ್ಥಿರ ಅಭಿವೃದ್ಧಿಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಗಳನ್ನು ಮಾಡುತ್ತಿರುವವರನ್ನು ಗುರುತಿಸಿ ಗೌರವಿಸುವುದು ಈ ಪ್ರಶಸ್ತಿಯ ಮುಖ್ಯ ಉದ್ದೇಶವಾಗಿದೆ. ಪ್ರಶಸ್ತಿ ಪ್ರಧಾನ ಸಮಾರಂಭವು ಜೂ.24 ರಂದು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.



ಮುಂಬೈಗೆ ಆಗಮಿಸಿದ ಕರ್ನಾಟಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮುಂಬೈ ವಿಮಾನ ನಿಲ್ದಾಣದಲ್ಲಿ ಜಯಶ್ರೀಕೃಷ್ಣಪರಿಸರ ಪ್ರೇಮಿ ಸಮಿತಿ ಎನ್ ಜಿಒ ವತಿಯಿಂದ ಸ್ವಾಗತಿಸಲಾಯಿತು. ಜಯಶ್ರೀಕೃಷ್ಣಪರಿಸರ ಪ್ರೇಮಿ ಸಮಿತಿ ಸ್ಥಾಪಕ ತೋನ್ಸೆ ಜಯಕೃಷ್ಣ ಎ. ಶೆಟ್ಟಿ, ಸಮಿತಿ ಅಧ್ಯಕ್ಷ ನಿತ್ಯಾನಂದ ಕೋಟ್ಯಾನ್, ರಾಜ್ಯ ಕೋ ಆರ್ಡಿನೇಟರ್ ಕೆ.ಪಿ. ಜಗದೀಶ್ ಅಧಿಕಾರಿ, ಸಮಿತಿ ಉಪಾಧ್ಯಕ್ಷ ಐ.ಆರ್. ಶೆಟ್ಟಿ, ಉಪಾಧ್ಯಕ್ಷ ಫೆಲಿಕ್ಸ್ ಡಿಸೋಜ, ಗೌರವ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಸಾಲಿಯಾನ್ ಉಪಸ್ಥಿತರಿದ್ದರು.

ಪ್ರೈವೇಟ್ ಬಸ್ ಆಪರೇಟರ್ಸ್ ಫೆಡರೇಶನ್‌ನ ಕಾಸರಗೋಡು ಸಮಿತಿ

ಕೇರಳ ಬಜೆಟ್‌ನಿಂದ ತೀರಾ ನಿರಾಶೆ

ಕಾಸರಗೋಡು: ಕೇರಳ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಶುಕ್ರವಾರ ವಿಧಾನಸಭೆಯಲ್ಲಿ ಮಂಡಿಸಿದ ರಾಜ್ಯ ಬಜೆಟ್ ಖಾಸಗಿ ಬಸ್‌ಗಳಿಗೆ ಸಂಬಂಧಿಸಿ ತೀರಾ ನಿರಾಶಾದಾಯಕದಿಂದ ಕೂಡಿದೆ ಎಂದು ಕೇರಳ ಸ್ಟೇಟ್ ಪ್ರೈವೇಟ್ ಬಸ್ ಆಪರೇಟರ್ಸ್ ಫೆಡರೇಶನ್‌ನ ಕಾಸರಗೋಡು ಜಿಲ್ಲಾ ಸಮಿತಿ ಪದಾಧಿಕಾರಿಗಳು ಶನಿವಾರ ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಏರ್ಪಡಿಸುವ ವೇಳೆ ಖಾಸಗಿ ಬಸ್‌ಗಳನ್ನು ಸಂರಕ್ಷಿಸಲಾಗುವುದು ಎಂದು ಸಿಎಂ ವಿ.ಡಿ.ಸತೀಶನ್ ಖಾಸಗಿ ಬಸ್ ಮಾಲಕರಿಗೆ ಭರವಸೆ ನೀಡಿದ್ದರು. ಆದರೆ ಮುಖ್ಯಮಂತ್ರಿಗಳು ಖಾಸಗಿ ಬಸ್‌ಗಳಿಗೆ ಯಾವುದೇ ಸಂರಕ್ಷಣೆ ಒದಗಿಸಿಲ್ಲ ಎಂದರು. ಕೆಎಸ್‌ಆರ್‌ಟಿಸಿ ಬಸ್ ಸಂಚಾರ ನಡೆಸದ ಒಳಭಾಗದ ಮಹಿಳಾ ಪ್ರಯಾಣಿಕರು ಖಾಸಗಿ ಬಸ್‌ಗಳಲ್ಲಿ ಸಂಚಾರ ನಡೆಸಿ ಬಳಿಕ ರಾಷ್ಟ್ರೀಯ ಹೆದ್ದಾರಿಗೆ ತಲುಪಿ ಅಲ್ಲಿ ಇಳಿದು ಅಲ್ಲಿಂದ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಂಚಾರ ಮುಂದುವರಿಸುತ್ತಾರೆ. ಇದು ಎಲ್ಲಾ ಖಾಸಗಿ ಬಸ್‌ಗಳ ಆದಾಯಕ್ಕೆ ಭಾರೀ ಹೊಡೆತ ನೀಡಿದೆ ಎಂದರು.

ರಸ್ತೆ ತೆರಿಗೆ ವಿಭಾಗದಲ್ಲಿ ಶೇಕಡಾ 50ರಷ್ಟು ತೆರಿಗೆ ಕಡಿಮೆ ಮಾಡಲಾಗಿದೆ ಎಂದು ಮುಖ್ಯಮಂತ್ರಿಗಳು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಘೋಷಿಸಿದ್ದರು. ಆದರೆ ಇದರಿಂದ ಒಂದು ಖಾಸಗಿ ಬಸ್‌ಗೆ ದಿನವೊಂದಕ್ಕೆ ಗರಿಷ್ಠ 150 ರೂ. ಮಾತ್ರ ಸರಕಾರದ ಉಚಿತ ವ್ಯವಸ್ಥೆ ಲಭಿಸಲಿದೆ. ಈಗ ಪ್ರತೀ ಬಸ್ ಮಾಲಕರಿಗೆ ದಿನವೊಂದಕ್ಕೆ 1500 ರೂ.ಗಳಿಂದ 3000 ರೂ. ತನಕ ಕಲೆಕ್ಷನ್ ನಷ್ಟ ಉಂಟಾಗುತ್ತಿದೆ. ಆದ್ದರಿಂದ ಡೀಸೆಲ್‌ಗೆ ಅರ್ಧದಷ್ಟು ಸಬ್ಸಿಡಿ ನೀಡಬೇಕು. ತೆರಿಗೆ ಪಾವತಿಯನ್ನು ಸಂಪೂರ್ಣವಾಗಿ ಕೈಬಿಡಬೇಕು. ಇಲ್ಲದಿದ್ದರೆ ಖಾಸಗಿ ಬಸ್‌ಗಳನ್ನು ಸರಕಾರವೇ ವಹಿಸಬೇಕು. ಖಾಸಗಿ ಬಸ್‌ಗಳನ್ನು ಉದ್ಯಮವನ್ನಾಗಿ ಅಂಗೀಕರಿಸಬೇಕು ಎಂದು ಪದಾಧಿಕಾರಿಗಳು ಸರಕಾರವನ್ನು ಒತ್ತಾಯಿಸಿದರು.

ಕೆ.ಗಿರೀಶ್, ಹಿ.ಎ.ಮುಹಮ್ಮದ್ ಕುಂಞ, ಟಿ.ಎಸ್. ಕಾರ್ತಿಕ್‌ರಾಜ್, ಬಿ.ರತ್ನಾಕರ ಆಳ್ವ, ಕೆ.ಚಂದ್ರಶೇಖರ, ಸಿ.ಎ.ಮುಹಮ್ಮದ್ ಕುಂಞ ಉಪಸ್ಥಿತರಿದ್ದರು.

ದ.ಕ. ಜಿಲ್ಲೆಯಲ್ಲಿ 5570 ಅಭ್ಯರ್ಥಿಗಳು | ಜಿಲ್ಲಾಡಳಿತ ಸಕಲ ಸಿದ್ಧತೆ

12 ಕೇಂದ್ರಗಳಲ್ಲಿ ಇಂದು ನೀಟ್ ಪರೀಕ್ಷೆ

ಮಂಗಳೂರು: ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಜೂ. 21 ರಂದು ರಾಷ್ಟ್ರಾದ್ಯಂತ ನಡೆಯಲಿರುವ ನೀಟ್ ಪರೀಕ್ಷೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5570 ಅಭ್ಯರ್ಥಿಗಳು ನೋಂದಾಯಿಸಿದ್ದಾರೆ. ಜಿಲ್ಲೆಯ 12 ಕೇಂದ್ರಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದ್ದು, ಎಲ್ಲಾ ಕೇಂದ್ರಗಳು ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿದೆ.

ಈ ಸಂಬಂಧ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರ ಜಿಲ್ಲಾಧಿಕಾರಿ ರಾಜು ಕೆ. ಮಾತನಾಡಿ, ನೀಟ್ ಮರುಪರೀಕ್ಷೆಯನ್ನು ನಕಲು ಮುಕ್ತ, ಪಾರದರ್ಶಕ ಹಾಗೂ ವ್ಯವಸ್ಥಿತವಾಗಿ ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ನಿಯಮಗಳಂತೆ ಯಾವುದೇ ಲೋಪವಾಗದಂತೆ ಪರೀಕ್ಷೆ ನಡೆಸಬೇಕು. ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ವಿದ್ಯಾರ್ಥಿಗಳಿಗೆ ಆಸನಗಳ ವ್ಯವಸ್ಥೆ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಬೇಕು. ಪ್ರತಿ ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಇಬ್ಬರು ಮೇಲ್ವಿಚಾರಕರು ಇರಲಿದ್ದಾರೆ. ಅಭ್ಯರ್ಥಿಗಳ ತಪಾಸಣೆಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ದಿಂದ ತಪಾಸಣಾ ಸಾಮಗ್ರಿ ಹಾಗೂ ಅಗತ್ಯ ಸಿಬ್ಬಂದಿಗಳನ್ನು ಒದಗಿಸಿದೆ ಎಂದರು.

ಬಿಗುಭದ್ರತೆಯಲ್ಲಿ ಪರೀಕ್ಷೆ

ಈ ಬಾರಿ ನೀಟ್ ಪರೀಕ್ಷೆ ಬಿಗು ಭದ್ರತೆಯಿಂದ ನಡೆಸಲಾಗುತ್ತಿದ್ದು, ಸ್ಥಳೀಯ ಪೊಲೀಸರೊಂದಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯನ್ನು (ಸಿಎಪಿಎಫ್) ನಿಯೋಜಿಸಲಾಗಿದೆ. ಇದಕ್ಕಾಗಿ 30 ಸದಸ್ಯ ಬಲದ ಸಿಎಪಿಎಫ್ ತಂಡ ಮಂಗಳೂರಿಗೆ ಆಗಮಿಸಲಿದೆ. ಪ್ರತೀ ಪರೀಕ್ಷಾ ಕೇಂದ್ರಕ್ಕೆ ಸ್ಥಳೀಯ ಪೊಲೀಸರನ್ನು ಸಶಸ್ತ್ರವಾಗಿ ನಿಯೋಜಿಸಲಾಗುವುದು ಎಂದರು.

ಪರೀಕ್ಷಾ ಕಾರ್ಯಗಳ ಮೇಲ್ವಿಚಾರಣೆಗೆ ಎನ್‌ಟಿಎ ಜಿಲ್ಲೆಗೆ ಇಬ್ಬರು ನೋಡಲ್ ಅಧಿಕಾರಿಗಳನ್ನು ನೇಮಿಸಿದೆ. ತೀವ್ರ ಕಣ್ಗಾವಲಿನಲ್ಲಿ ಈ ಪರೀಕ್ಷೆ ನಡೆಯುತ್ತಿದ್ದು, ಯಾವುದೇ ಲೋಪಗಳಿಗೆ ಅವಕಾಶ ನೀಡದಂತೆ ಅವರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಬೆಳಿಗ್ಗೆ 11ರಿಂದ ಪರೀಕ್ಷಾ ಕೇಂದ್ರ ಪ್ರವೇಶ

ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಭಾನುವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಪ್ರವೇಶಿಸಬಹುದು. ಮಧ್ಯಾಹ್ನ 2 ರಿಂದ ಸಂಜೆ 5.15 ಗಂಟೆಯವರೆಗೆ ಪರೀಕ್ಷೆ ನಡೆಯಲಿದ್ದು, ವಿಶೇಷಚೇತನರಿಗೆ ಹೆಚ್ಚುವರಿ ಒಂದು ಗಂಟೆ ಕಾಲಾವಕಾಶ ನೀಡಲಾಗುತ್ತದೆ. ಈ ಬಾರಿಯ ಪರೀಕ್ಷೆಯಲ್ಲಿ ಎಲ್ಲ ಅಭ್ಯರ್ಥಿಗಳಿಗೆ ಹೆಚ್ಚುವರಿ 15 ನಿಮಿಷಗಳ ಕಾಲಾವಕಾಶ ನೀಡಲಾಗಿದೆ ಎಂದು ಅವರು ಹೇಳಿದರು.

ಸಭೆಯಲ್ಲಿ ನೀಟ್ ನೋಡಲ್ ಅಧಿಕಾರಿ, ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಟೇಕ್ ಚಂದ್, ಮತ್ತೋರ್ವ ನೋಡಲ್ ಅಧಿಕಾರಿ ಜಸ್ವೀಂದರ್, ಜಿಲ್ಲಾ ವಾರ್ತಾಧಿಕಾರಿ ಖಾದರ್ ಶಾ, ಪದವಿಪೂರ್ವ ಶಿಕ್ಷಣ ಇಲಾಖೆ ಕಚೇರಿ ಅಧೀಕ್ಷಕ ನಿತಿನ್ ಶೆಟ್ಟಿ, ಪೊಲೀಸ್ ನಿರೀಕ್ಷಕ ಗೋಪಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಪರೀಕ್ಷಾ ಕೇಂದ್ರಗಳಲ್ಲಿ ಅಧಿಕಾರಿಗಳಿಂದ ತಯಾರಿ

ನಿಷೇಧಾಜ್ಞೆ ಜಾರಿ

ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ 12 ಪರೀಕ್ಷಾ ಕೇಂದ್ರಗಳಲ್ಲಿ ನೀಟ್ (ಯುಜಿ)-2026ರ ಪರೀಕ್ಷೆ ನಡೆಯಲಿದೆ. ಬಲ್ಮಠ ಸರ್ಕಾರಿ ಪದವಿ ಪೂರ್ವಕಾಲೇಜು, ಬಲ್ಮಠ ಸರ್ಕಾರಿ ಪ್ರಥಮ ದರ್ಜೆಕಾಲೇಜು, ಸೈಂಟ್ ಆ್ಯಗ್ನೇಸ್ ಪದವಿ ಪೂರ್ವ ಕಾಲೇಜು, ಸೈಂಟ್ ಅಲೋಶಿಯಸ್ ಡೀಮ್ಡ್ ಟು ಬಿ ಯುನಿವರ್ಸಿಟಿ, ಕಾರ್‌ಸ್ಟ್ರೀಟ್ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಸೈಂಟ್ ಅಲೋಶಿಯಸ್ ಪದವಿ ಪೂರ್ವ ಕಾಲೇಜು ಬ್ಲಾಕ್-ಎ, ಸೈಂಟ್ ಅಲೋಶಿಯಸ್ ಪದವಿ ಪೂರ್ವ ಕಾಲೇಜು ಬ್ಲಾಕ್- ಬಿ, ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲ್, ಎಕ್ಕೂರು ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ನಂ.2, ವಿಶ್ವವಿದ್ಯಾನಿಲಯ ಕಾಲೇಜು, ಪಣಂಬೂರು ಪಿ.ಎಂ. ಶ್ರೀ ಕೇಂದ್ರೀಯ ವಿದ್ಯಾಲಯನಂ.1, ಮುಡಿಪು ಕುರ್ನಾಡು ಪಿ.ಎಂ.ಶ್ರೀ ಜವಾಹರ್ ನವೋದಯ ವಿದ್ಯಾಲಯ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಯಾವುದೇ ಕಾನೂನು ಬಾಹಿರಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮತ್ತು ಪರೀಕ್ಷೆಗಳನ್ನು ಸುಸೂತ್ರವಾಗಿ ಹಾಗೂ ದೋಷರಹಿತವಾಗಿ ಶಾಂತ ವಾತಾವರಣದಲ್ಲಿ ನಡೆಸುವ ನಿಟ್ಟಿನಲ್ಲಿಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತಲಿನ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿಗೊಳಿಸಿ ಉಪ ಪೊಲೀಸ್ ಆಯುಕ್ತ ರವಿಶಂಕರ್ ಆದೇಶಿಸಿದ್ದಾರೆ. ಪರೀಕ್ಷಾ ಕೇಂದ್ರದ ಆವರಣದಲ್ಲಿ ಮೊಬೈಲ್ ದೂರವಾಣಿ, ಬ್ಲೂಟೂತ್ ಹಾಗೂ ಪೇಜರ್ ಇತ್ಯಾದಿ ಇಲೆಕ್ಟ್ರಾನಿಕ್ಸ್ ಸಂಪರ್ಕ ಉಪಕರಣಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಎರಡು ದಿನಗಳ ಮಾವು-ಹಲಸು ಮೇಳಕ್ಕೆ ಚಾಲನೆ

ಭೂಮಿ ಸಸ್ಯಶ್ಯಾಮಲೆಯಾಗಿರಲಿ

ಮಂಗಳೂರು: ಕಲ್ಕೂರ ಪ್ರತಿಷ್ಠಾನ ಮಂಗಳೂರು ವತಿಯಿಂದ ಸಾವಯವ ಕೃಷಿಕ ಗ್ರಾಹಕ ಬಳಗದ ಸಹಕಾರದೊಂದಿಗೆ ಎರಡು ದಿನಗಳ ಮಾವು ಹಲಸು ಮೇಳ ನಗರದ ಕದ್ರಿ ಕಂಬಳ ಮಲ್ಲಿಕಾ ಬಡಾವಣೆಯಲ್ಲಿರುವ 'ಮಂಜು ಪ್ರಾಸಾದ'ದ ಆವರಣದಲ್ಲಿ ಶನಿವಾರ ಆರಂಭಗೊಂಡಿತು.

ಮೇಳ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಮಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಜಿತಕಾಮಾನಂದಜಿ, ಸಾವಯವ ಕೃಷಿಕರೇ ಬೆಳೆಸಿರುವ ಮಾವು, ಹಲಸಿಗೆ ಮಾರುಕಟ್ಟೆ ಒದಗಿಸುವ ನಿಟ್ಟಿನಲ್ಲಿ ಮೇಳ ಆಯೋಜಿಸಿರುವುದು ಶ್ಲಾಘನೀಯ. ಕರಾವಳಿ ಭಾಗ ಮಾವು ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳಿಗೆ ಹೆಸರಾಗಿದೆ. ದೇಶದ ಇತರೆಡೆಯಲ್ಲೂ ಹಲಸು ಬೆಳೆಯಲಾಗುತ್ತಿದ್ದರೂ, ಅವರಿಗೆ ಅದರ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿ ಬಗ್ಗೆ ಅರಿವಿಲ್ಲ. ಮಾವು ಹಾಗೂ ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳಿಗೆ ಇನ್ನಷ್ಟು ಪ್ರೋತ್ಸಾಹ ದೊರೆಯಬೇಕಿದೆ. ಸಾವಯವ ಕೃಷಿ ಮೂಲಕ ಭೂಮಿಯನ್ನು ಮುಂದಿನ ಪೀಳಿಗೆಗೆ ಸಸ್ಯ ಶ್ಯಾಮಲೆಯಾಗಿ ಉಳಿಸೋಣ ಎಂದರು.

ಶರವು ದೇವಸ್ಥಾನ ಶಿಲೆಶಿಲೆ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ ದೀಪ ಪ್ರಜ್ವಲನೆ ಮಾಡಿದರು. ವೈದ್ಯ ಡಾ. ಜೀವರಾಜ ಸೊರಕೆ ಉದ್ಘಾಟಿಸಿ, ಶುಭ ಹಾರೈಸಿದರು. ವಿದ್ವಾಂಸರಾದ ಡಾ. ಪ್ರಭಾಕರ ಅಡಿಗ ಕದ್ರಿ, ಡಾ.ಎಂ. ಪ್ರಭಾಕರ ಜೋಶಿ ಶುಭಾಶಂಸನೆ ಮಾಡಿದರು.

ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ ಕುಮಾರಕಲ್ಕೂರಮಾತನಾಡಿ,ಪೇಜಾವರ ಮಠಾಧೀಶರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ ಷಷ್ಠ್ಯಬ್ದ ಸಂಭ್ರಮಾಚರಣೆ - 60 ನಾಡು ನುಡಿ ಜಾಗೃತಿ ಸಮ್ಮೇಳನ ಸರಣಿ ಕಾರ್ಯಕ್ರಮಗಳಡಿ 'ಹಲಸು - ಮಾವು ಮೇಳ, ಯೋಗ, ಸಾವಯವ ಆಹಾರ - ಆರೋಗ್ಯ' ಎಂಬ ಎರಡು ದಿನಗಳ ಕಾರ್ಯಕ್ರಮ ನಡೆಯುತ್ತಿದೆ. ಮೇಳದಲ್ಲಿ ಸಾವಯವ ಉತ್ಪನ್ನಗಳು ಇವೆ. ಹಲಸು, ಮಾವಿನ ಮೌಲ್ಯವರ್ಧಿತ ಉತ್ಪನ್ನಗಳನ್ನು ತೆಂಗಿನಎಣ್ಣೆ, ತುಪ್ಪ ಬಳಸಿ ತಯಾರಿಸಲಾಗಿದೆ ಎಂದರು.

ಪ್ರಮುಖರಾದ ಡಾ. ಹರಿಕೃಷ್ಣ ಪುನರೂರು, ದಯಾನಂದ ಕಟೀಲು, ಸುಧಾಕರ ರಾವ್ ಪೇಜಾವರ, ಪ್ರಭಾಕರ ರಾವ್ ಪೇಜಾವರ, ಪೂರ್ಣಿಮಾ ರಾವ್ ಪೇಜಾವರ, ಜನಾರ್ದನ ಹಂದೆ ಭಾಗವಹಿಸಿದ್ದರು.

ರಾಮನಗರದ ಚಂದ್ರ ಹಲಸು, ಕುಣಿಗಲ್, ಮೈಸೂರು ಹಲಸು, ಹಲಸಿನ ಮೌಲ್ಯವರ್ಧಿತ ಉತ್ಪನ್ನಗಳಾದ ಹಪ್ಪಳ, ಚಿಪ್ಸ್, ಸ್ಥಳದಲ್ಲೇ ತಯಾರಿಸುವ ಹೋಳಿಗೆ, ಜಿಲೇಬಿ, ಮಾವು ಹಾಗೂ ವಿವಿಧ ಹಣ್ಣುಗಳ ಐಸ್ ಕ್ರೀಂ, ಉಪ್ಪಿನಕಾಯಿ, ಸೇರಿದಂತೆ ವಿವಿಧ ಬಗೆ ಬಗೆಯ ವೈವಿಧ್ಯಮಯ ಉತ್ಪನ್ನಗಳು ಹಾಗೂ ಇತರ ವಸ್ತುಗಳ ಪ್ರದರ್ಶನ-ಮಾರಾಟ ನಡೆಯುತ್ತಿದೆ. ಭಾನುವಾರವೂ ಮೇಳ ಇರಲಿದೆ.



ಕಲೆ -ಕಲಾವಿದರನ್ನು ಬೆಳೆಸುವ ಕಾರ್ಯ ಶ್ಲಾಘನೀಯ: ಅಗರಿ ರಾಘವೇಂದ್ರ ರಾವ್

ಮಂಗಳೂರು: 'ಭ್ರಾಮರಿ ಯಕ್ಷ ಮಿತ್ರರು ಮಂಗಳೂರು ಟ್ರಸ್ಟ್' ಆಯೋಜಿಸುತ್ತಿರುವ 9ನೇ ವರ್ಷದ 'ಭ್ರಾಮರಿ ಯಕ್ಷವೈಭವ' ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಉದ್ಯಮಿ ಆಗರಿ ರಾಘವೇಂದ್ರ ರಾವ್ ಅವರು ಶುಕ್ರವಾರ ಮಂಗಳೂರಿನಲ್ಲಿ ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಭ್ರಾಮರಿ ಯಕ್ಷಮಿತ್ರರು ಟ್ರಸ್ಟ್ ಅತ್ಯಂತ ಶಿಸ್ತುಬದ್ಧವಾಗಿ ಮತ್ತು ಆತ್ಮೀಯವಾಗಿ ಯಕ್ಷಗಾನ ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸುತ್ತಿದೆ. ಯಕ್ಷಗಾನದ ವಿವಿಧ ಶೈಲಿಗಳನ್ನು ಉಳಿಸಿ ಬೆಳೆಸುವಲ್ಲಿ ಈ ಸಂಸ್ಥೆಯ ಪಾತ್ರ ಬಹಳ ದೊಡ್ಡದು. ಇಂತಹ ಸಾಂಸ್ಕ ತಿಕ ಕಾರ್ಯಕ್ರಮಗಳು ನಾಡಿನ ಕಲೆಗೆ ಮತ್ತಷ್ಟು ಉತ್ತೇಜನ ನೀಡುತ್ತವೆ ಎಂದು ಶ್ಲಾಘಿಸಿದರು.

ಹಿರಿಯ ಕಲಾವಿದರನ್ನು ಗೌರವಿಸುವ, ನೇಪಥ್ಯ ಕಲಾವಿದರನ್ನು, ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುವ ಸಂಸ್ಥೆಯನ್ನು ಗುರುತಿಸಿ ಗೌರವಿಸುವ ಸಂಸ್ಥೆಯ ಉದ್ದೇಶ ನಿಜಕ್ಕೂ ಪ್ರಶಂಸನೀಯ ಎಂದರು.

ವೈದ್ಯ ಡಾ. ಪ್ರವೀಣ್ ಆಚಾರ್ಯ, ಟ್ರಸ್ಟ್‌ನ ರವಿಶಂಕರ್ ಭಟ್ ಉಪಸ್ಥಿತರಿದ್ದರು. ಟ್ರಸ್ಟ್‌ನ ಸತೀಶ್ ಮಂಜೇಶ್ವರ ಸ್ವಾಗತಿಸಿ, ವಿನಯಕೃಷ್ಣ ಕುರ್ನಾಡು ವಂದಿಸಿದರು.



ಆ.1ರಂದು ಭ್ರಾಮರಿ ಯಕ್ಷ ವೈಭವ

ಈ ವರ್ಷದ 'ಭ್ರಾಮರಿ ಯಕ್ಷವೈಭವ' ಕಾರ್ಯಕ್ರಮ ಆ.1ರಂದು ಮಂಗಳೂರಿನ ಪುರಭವನದಲ್ಲಿ ಸಂಜೆ 7ರಿಂದ ಮರುದಿನ ಮುಂಜಾನೆಯವರೆಗೆ ಜರಗಲಿದೆ. ಈ ಕಾರ್ಯಕ್ರಮದಲ್ಲಿ ಗಣ್ಯರು ಹಾಗೂ ಕಲಾಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ. ಹಿರಿಯ ಕಲಾವಿದ ಕೆ.ಎಚ್ .ದಾಸಪ್ಪ ರೈ ಅವರಿಗೆ 'ಭ್ರಾಮರೀ ಯಕ್ಷಮಣಿ' ಪ್ರಶಸ್ತಿ, ನೇಪಥ್ಯಕಲಾವಿದ ಮೋನಪ್ಪ ಗೌಡ ಹಾಗೂ ಮುಡಿಪು ಕುರ್ನಾಡಿನ ಶ್ರೀ ದತ್ತಾತ್ರೇಯ ಯಕ್ಷಗಾನ ಮತ್ತು ಭಜನಾ ಮಂಡಳಿಗೆ 'ಭ್ರಾಮರೀ ಯಕ್ಷಸೇವಾ ಪುರಸ್ಕಾರ' ನೀಡಿ ಗೌರವಿಸಲಾಗುವುದು. ಸಭಾ ಕಾರ್ಯಕ್ರಮದ ಬಳಿಕ ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ 'ಅಂಬಾಶಪಥ', 'ಲಕ್ಷ್ಮೀ ಸ್ವಯಂವರ', 'ತಾಮ್ರಧ್ವಜ ಕಾಳಗ' ಎಂಬ ಪೌರಾಣಿಕ ಪ್ರಸಂಗ ಉಚಿತವಾಗಿ ಪ್ರದರ್ಶನಗೊಳ್ಳಲಿದೆ.


ಕಡಬ ತಾಲೂಕು ಆಲಂಕಾರು ಗ್ರಾಮದ ಕಜೆ ಎಂಬಲ್ಲಿ ನಡೆದ ದುರಂತ । ಗಂಡನಿಗೆ ಕುಡಿತದ ಚಟವಿತ್ತು । ಹೆತ್ತವರನ್ನು ಕಳೆದುಕೊಂಡ 2 ವರ್ಷದ ಕಂದಮ್ಮ

ಪತ್ನಿಯನ್ನು ಕಡಿದು ಕೊಂದು ನೇಣಿಗೆ ಶರಣಾದ ಹೊಟೇಲ್ ಉದ್ಯಮಿ

ಆಲಂಕಾರು : ಹೊಟೇಲ್ ಉದ್ಯಮಿಯೋರ್ವ ಪತ್ನಿಯನ್ನು ಮಚ್ಚಿನಿಂದ ಕಡಿದು ಬಳಿಕ ತಾನು ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಕಡಬ ತಾಲೂಕು ಆಲಂಕಾರು ಗ್ರಾಮದ ಕಜೆ ಎಂಬಲ್ಲಿ ಶನಿವಾರ ಬೆಳಕಿಗೆ ಬಂದಿದೆ.

ಆಲಂಕಾರು ಪೇಟೆಯಲ್ಲಿ ಕಳೆದ ಒಂದು ವರ್ಷದಿಂದ ಹೊಟೇಲ್ ಉದ್ಯಮ ನಡೆಸುತ್ತಿದ್ದ ಬಜಗೋಳಿ ಮೂಲದ ದಿನೇಶ್ ಪೂಜಾರಿ (45) ತನ್ನ ಪತ್ನಿ ಸಂಗೀತಾ (39) ಎಂಬವರನ್ನು ಕೊಲೆ ನಡೆಸಿ ಆತ್ಮಹತ್ಯೆಗೆ ಶರಣಾಗಿದ್ದು ಎರಡು ವರ್ಷದ ಪುಟ್ಟ ಮಗು ಧೃವಿ ಅನಾಥವಾಗಿದೆ.

ದಿನೇಶ್ ಕಳೆದ ಒಂದು ವರ್ಷದಿಂದ ಆಲಂಕಾರು ಪೇಟೆಯಲ್ಲಿ ಹೊಟೇಲ್ ನಡೆಸಿಕೊಂಡು ಬಾಡಿಗೆ ಮನೆಯಲ್ಲಿ ಪತ್ನಿ ಮಗುವಿನೊಂದಿಗೆ ವಾಸ್ತವ್ಯವಿದ್ದರು. ವಿಪರೀತ ಕುಡಿತದ ಚಟವಿದ್ದ ದಿನೇಶ್ ಕಳೆದ ಒಂದೂವರೆ ತಿಂಗಳಿನಿಂದ ಹೊಟೇಲ್ ಬಂದ್ ಮಾಡಿದ್ದರು. ಕೆಲ ದಿನಗಳ ಕಾಲ ಬಾಡಿಗೆ ಮನೆಯಲ್ಲೇ ಉಳಿದಿದ್ದರು. ಈ ವೇಳೆ ಕುಡಿತದ ಚಟ ವಿಪರೀತವಾಯಿತು. ಕುಡಿತದ ಚಟ ಬಿಡಿಸುವ ಉದ್ದೇಶದಿಂದ ಪತ್ನಿ ತವರು ಮನೆಗೆ ಪತಿಯನ್ನು ಕರೆದುಕೊಂಡು ಬಂದು ಕುಡಿತದ ಚಟ ಬಿಡಿಸುವ ಔಷಧಿ ಮಾಡಿದ್ದರು. ಕಳೆದ 17 ದಿನಗಳಿಂದ ಹೆಂಡತಿಯ ತವರು ಮನೆಯಲ್ಲೇ ಉಳಿದಿದ್ದ ಇವರುಗಳು ಶುಕ್ರವಾರ ಆಲಂಕಾರಿನ ತಮ್ಮ ಬಾಡಿಗೆ ಮನೆಗೆ ಹಿಂತಿರುಗಿದ್ದರು,



ಮೃತ ದಿನೇಶ್, ಸಂಗೀತಾ

ಮೊಬೈಲ್ ಕರೆ ಸ್ವೀಕರಿಸದಿದ್ದಾಗ ತಾಯಿಗೆ ಬಂತು ಸಂಶಯ

ಶನಿವಾರ ಬೆಳಿಗ್ಗೆಯಿಂದ ಮಗಳ ಮೊಬೈಲ್‌ಗೆ ತಾಯಿ ಕರೆ ಮಾಡಿದಾಗ ಕರೆ ಸ್ವೀಕರಿಸಿರಲಿಲ್ಲ. ಸತತ ಕರೆ ಮಾಡಿದರೂ ಯಾವುದೆ ಸ್ಪಂದನೆ ದೊರೆತಿರಲಿಲ್ಲ. ಈ ಬಗ್ಗೆ ಸಂಶಯಗೊಂಡ ತಾಯಿ ಪಕ್ಕದ ಮನೆಯ ಅಜ್ಜಿಗೆ ಕರೆ ಮಾಡಿ ನಮ್ಮ ಮಗಳು ಕರೆ ಸ್ವೀಕರಿಸುತ್ತಿಲ್ಲ ಒಮ್ಮೆ ಗಮನಿಸಿ ಎಂದು ವಿನಂತಿಸಿದ್ದರು.

ಅಜ್ಜಿ ಸಂಗೀತಳ ಮನೆಗೆ ಬಂದು ಕರೆದಾಗ ಯಾವುದೆ ಪ್ರತಿಕ್ರಿಯೆ ಬರಲಿಲ್ಲ. ಕಿಟಕಿ ಬಾಗಿಲುಗಳನ್ನು ಲಾಕ್ ಮಾಡಿ ಭದ್ರಪಡಿಸಿಕೊಳ್ಳಲಾಗಿತ್ತು. ಮಗು ಅಳುತ್ತಿರುವ ಶಬ್ದ ಮಾತ್ರ ಕೇಳಿಸುತ್ತಿತ್ತು. ತಕ್ಷಣ ಮನೆ ಮಾಲಿಕನಿಗೆ ವಿಚಾರ ತಿಳಿಸಿ ಕಡಬ ಪೊಲೀಸರ ಮುಖಾಂತರ ಮನೆಯ ಬಾಗಿಲು ಒಡೆದು ಒಳ ಪ್ರವೇಶಿಸಿ ಪರಿಶೀಲಿಸಿದಾಗ ಕೊಲೆ ಹಾಗೂ ಆತ್ಮಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ.

ಆರಂಭದಿಂದಲೂ ಈತ ಸಂಚಾರಿ

ಮೂಡಾರು ಗ್ರಾಮದ ಬಜಗೋಳಿ ನಿವಾಸಿಯಾಗಿರುವ ದಿನೇಶ್ 2013ರಲ್ಲಿ ಸಿದ್ದಕಟ್ಟೆ ಸಮೀಪದ ಮೂಡಾರು ಗ್ರಾಮದ ಅರಂಬೋಡು ಸುರಾಂಟೆ ನಿವಾಸಿ ತುಂಗಮ್ಮ ಶೀನಪ್ಪ ಪೂಜಾರಿ ದಂಪತಿಯ ಹಿರಿಯ ಪುತ್ರಿ ಸಂಗೀತಳನ್ನು ವರಿಸಿದ ದಿನೇಶ್ ಎಲ್ಲೂ ನಿಯತ್ತಾಗಿ ದುಡಿದ ವ್ಯಕ್ತಿಯಲ್ಲ ಎಂಬ ವಿಚಾರ ತಿಳಿದು ಬಂದಿದೆ. ಆರಂಭದಲ್ಲಿ ಬೆಳಗಾವಿಯಲ್ಲಿ ಹೊಟೇಲ್ ಕೆಲಸಕ್ಕೆ ಸೇರಿ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಿದ್ದ. ಬಳಿಕ ಸಿದ್ದಕಟ್ಟೆ ತನ್ನ ಮನೆಗೆ ವಾಪಸಾಗಿ ಮನೆಯಲ್ಲೇ ಉಳಿದಿದ್ದ. ಬಳಿಕ ಜೋಡುಕಟ್ಟೆಯಲ್ಲಿ, ಪಡ್ಯಾರ ಬೆಟ್ಟುವಿನಲ್ಲಿ ಹೊಟೇಲ್ ಮಾಡಿಕೊಂಡು ಕಳೆದ ಒಂದು ವರ್ಷದ ಹಿಂದೆ ಆಲಂಕಾರಿನಲ್ಲಿ ಹೊಟೇಲ್ ಮಾಡಿಕೊಂಡಿದ್ದ ಎಂದು ತಿಳಿದು ಬಂದಿದೆ.

ಬಾಡಿಗೆ ಮನೆಯಲ್ಲಿದ್ದರೂ ದಂಪತಿ ಗಲಾಟೆ ಮಾಡಿಕೊಳ್ಳುವ ಯಾವ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿಲ್ಲ. ಮೇಲ್ನೋಟಕ್ಕೆ ದಂಪತಿ ಅನ್ಯೋನ್ಯವಾಗಿದ್ದ ಹಾಗೆ ಕಾಣುತ್ತಿದ್ದರು ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ. ಆದರೆ ಕೌಟುಂಬಿಕ ಕಲಹ ಇವರ ಮದುವೆಯಾದ ಆರಂಭದಿಂದಲೂ ನಡೆಯುತ್ತಿತ್ತು ಎಂದು ಸಂಗೀತಳ ತಾಯಿ ಆರೋಪಿಸಿದ್ದಾರೆ.

ಸಂಗೀತಾಳ ಸಹೋದರಿ ಸುಮಲತಾ ನೀಡಿರುವ ದೂರಿನಂತೆ ಘಟನಾ ಸ್ಥಳಕ್ಕೆ ಡಿವೈಎಸ್ಪಿ ರೋಹಿಣಿ ಸಿ ಆರ್ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಭೂಮ್ ರೆಡ್ಡಿ ಉಪ್ಪಿನಂಡಿ ಸರ್ಕಲ್ ಇನ್ಸ್‌ಪೆಕ್ಟರ್ ನಾಗರಾಜ್, ಕಡಬ ಠಾಣಾಧಿಕಾರಿ ಜಂಬೂರಾಜ್ ಮಹಾಜನ್ ಮೊದಲಾದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಸಂಗೀತ ತನ್ನ ಎರಡು ವರ್ಷದ ಕಂದ ಸೇರಿದಂತೆ ಇಬ್ಬರು ಸಹೋದರಿಯರು, ತಂದೆ, ತಾಯಿಯನ್ನು ಅಗಲಿದ್ದಾರೆ. ದಿನೇಶ್ ಇಬ್ಬರು ಸಹೋದರರು ಸೇರಿದಂತೆ ತಂದೆ, ತಾಯಿಯನ್ನು ಅಗಲಿದ್ದಾರೆ.

ಮಗುವಿನ ಆಭರಣದ ವಿಚಾರವಾಗಿ ನಡೆಯಿತೇ ಕೊಲೆ ?

ಆಭರಣ ವಿಚಾರವಾಗಿ ದಿನೇಶ್ ತನ್ನ ಹೆಂಡತಿಯೊಂದಿಗೆ ಆಗಾಗ ಜಗಳವಾಡುತ್ತಿದ್ದ ಎಂದು ಸಂಗೀತಾರ ತಾಯಿ ತುಂಗಮ್ಮ ಪತ್ರಿಕೆಗೆ ತಿಳಿಸಿದ್ದಾರೆ. ಮಗುವಿನ ಸುಮಾರು 90 ಸಾವಿರ ಮೊತ್ತದ ಚಿನ್ನದ ಸರ ನಾಪತ್ತೆಯ ವಿಚಾರವಾಗಿ ಗಂಡ-ಹೆಂಡತಿಯ ಮಧ್ಯೆ ಚರ್ಚೆ ನಡೆಯುತ್ತಿತ್ತು. ಚಿನ್ನದ ಸರ ತಮ್ಮ ಬಾಡಿಗೆ ಮನೆಯಲ್ಲೇ ಬಾಕಿಯಾಗಿದೆ, ಹುಡುಕಿ ತರುವ ಎಂದು ಶುಕ್ರವಾರ ಆಲಂಕಾರಿನ ತಮ್ಮ ಬಾಡಿಗೆ ಮನೆಗೆ ವಾಪಸಾಗಿದ್ದರು, ಚಿನ್ನದ ವಿಚಾರದಲ್ಲಿ ಚರ್ಚೆ ನಡೆದು ತನ್ನ ಮಗಳನ್ನು ಕೊಲೆ ಮಾಡಲಾಗಿದೆ. ಈ ಹಿಂದೆ ಮಗಳ ಕುತ್ತಿಗೆಗೆ ಬಟ್ಟೆ ಸುತ್ತಿ ಈತ ಕೊಲೆಗೆ ಪ್ರಯತ್ನಿಸಿದ್ದ ಎಂದು ಮೃತಳ ತಾಯಿ ತುಂಗಮ್ಮ ಆರೋಪಿಸಿದ್ದಾರೆ.

- ವಿಪರೀತ ಕುಡಿತದ ಚಟವಿದ್ದ ದಿನೇಶ್ ಕಳೆದ ಒಂದುವರೆ ತಿಂಗಳಿನಿಂದ ಹೊಟೇಲ್ ಬಂದ್ ಮಾಡಿದ್ದರು.
- ಕೌಟುಂಬಿಕ ಕಲಹ ಇವರ ಮದುವೆಯಾದ ಆರಂಭದಿಂದಲೂ ನಡೆಯುತ್ತಿತ್ತು ಎಂದು ಸಂಗೀತಳ ತಾಯಿ ಆರೋಪಿಸಿದ್ದಾರೆ.

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ವಿಶ್ವವ್ಯಾಪಿ ಯೋಗ ಸಂಭ್ರಮ

12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಬೆಳಗ್ಗೆ 5ಕ್ಕೆ ಆರಂಭ

6 ಲಕ್ಷಕ್ಕೂ ಹೆಚ್ಚು ಸಂಘ-ಸಂಸ್ಥೆಗಳ ನೋಂದಣಿ

210 ಕ್ಕೂ ಅಧಿಕ ಭಾರತೀಯ ರಾಯಭಾರ ಕಚೇರಿಗಳ ಸಹಭಾಗಿತ್ವ

100 ಪಾರಂಪರಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಈ ಬಾರಿಯ ಯೋಗ ದಿನದ ಧ್ಯೇಯವಾಕ್ಯ

ಯೋಗ: ಆರೋಗ್ಯಕರ ಸಮಾಜದ ಅಡಿಪಾಯ

ಪುಟ ೬

ಬದುಕಿನ ದಿನಗಳಿಗೆ ಸಾರ್ಥಕತೆಯ ಸ್ಪರ್ಶ

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಲೇಖನ

ಪುಟ ೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಸಪ್ತಮಿ, ನಕ್ಷತ್ರ: ಪೂರ್ವೆ

ದಿನದ ಮಾತು

ಮಾಡುವ ಪ್ರಯತ್ನಗಳು ನಂಬಿಕೆಯಿಂದ ಕೂಡಿದ್ದರೆ ಸೂಕ್ತವಾದ ಪ್ರತಿಫಲವು ದಕ್ಕುವುದರಲ್ಲಿ ಸಂಶಯವಿಲ್ಲ.

▲ನಾಣ್ನುಡಿ

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷರಾಗಿ ಇಂದು ಬಿ.ಕೆ.ಹರಿಪ್ರಸಾದ್ ಪದಗ್ರಹಣ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಅವರು ಜೂ.21ರಂದು ಪದಗ್ರಹಣ ಮಾಡಲಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭಕ್ಕೆ ಭರ್ಜರಿ ಸಿದ್ಧತೆ ಕೈಗೊಳ್ಳಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಭಾಗವಹಿಸಲಿದ್ದಾರೆ.

ಪುಟ ೪

ಇಂದು ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ

ಪುಟ ೫

ಅಬುಧಾಬಿ ಆರಿಸಿದ್ದು ಸ್ವತಃ ವಿದ್ಯಾರ್ಥಿಯೇ!

ಪುಟ ೧೧

ಹಿಂದು ವಿಭಜನೆಗೆ ಮೌಲಾನ ಕುತಂತ್ರ

ಪುಟ ೧೧

ಜನರ ಕುಂದುಕೊರತೆ ಆಲಿಸುವ ಸಲುವಾಗಿ ಇಲಾಖೆ
ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟ ಸಭೆ ನಿರ್ಧಾರ

ಪ್ರಜಾಸೇವೆಗೆ ಇಲಾಖೆ

ಬೆಂಗಳೂರು: ರಾಜ್ಯದಲ್ಲಿ ಸಾರ್ವಜನಿಕರ ಕುಂದು ಕೊರತೆಗಳು, ಹೋರಾಟಗಳ ಅಹವಾಲುಗಳನ್ನು ಆಲಿಸಲು ಹೊಸದಾಗಿ ಪ್ರಜಾಸೇವೆ ಇಲಾಖೆಯೊಂದನ್ನು ಆರಂಭಿಸಲಿದ್ದು, ಪ್ರತ್ಯೇಕ ಸಚಿವರಿಗೆ ಇದರ ಜವಾಬ್ದಾರಿ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ವಿಧಾನಸೌಧದಲ್ಲಿ ಶನಿವಾರ ನಡೆದ ಸಚಿವ ಸಂಪುಟ ಸಭೆಯ ನಂತರ ಅವರು ಸಭೆಯ ನಿರ್ಣಯಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ನಮ್ಮನ್ನು ಭೇಟಿಯಾದಾಗ, ಸಚಿವರನ್ನು ಭೇಟಿ ಯಾದಾಗ ಜನರು ತಮ್ಮ ಅಹವಾಲುಗಳನ್ನು ಸಲ್ಲಿಸುತ್ತಾರೆ. ಜನರ ಕಷ್ಟ ಭಾವನೆಗಳನ್ನು ಅರಿತು, ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರ್ಕಾರದ ಗುರಿ. ಹೀಗಾಗಿ ಈ ಇಲಾಖೆಗೆ ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಲಾಗುವುದು. ಅವರು ಎಲ್ಲಾ ಸಮಸ್ಯೆಗಳನ್ನು ಪರಿಶೀಲನೆ ಮಾಡಿ ಮಾಹಿತಿ ನೀಡುವ ಕೆಲಸ ಮಾಡಲಾಗುವುದು. ಈ ಮೂಲಕ ಜನರಿಗೆ ನ್ಯಾಯ ಒದಗಿಸಲು ಸರ್ಕಾರ ಮುಂದಾಗಿದೆ. ನನಗೆ ಹಾಗೂ ಇತರೇ ಸಚಿವರಿಗೆ ನೀಡಿದ ಮನವಿಗಳನ್ನು ಈ ಇಲಾಖೆ ಅಡಿಯಲ್ಲಿ ತರಲು ಆಲೋಚಿಸಲಾಗಿದೆ ಎಂದರು.



ಸುಪ್ರೀಂ ಕೋರ್ಟಿನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದಿಲ್ಲಿಯ ಕಾನೂನು ವಿಭಾಗವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಥಾನೀಯ ಆಯುಕ್ತರ ಕಚೇರಿ ಕಾರ್ಯವೈಖರಿ ನನಗೆ ಸಮಾಧಾನ ತಂದಿಲ್ಲ. ಆದ್ದರಿಂದ ಅದನ್ನು ಹೊಸದಾಗಿ ಸಮೀಕರಿಸಲಾಗುತ್ತಿದೆ.

■ **ಡಿ.ಕೆ. ಶಿವಕುಮಾರ್,** ಮುಖ್ಯಮಂತ್ರಿ

- ಪ್ರತ್ಯೇಕ ಸಚಿವರಿಗೆ ಈ ಸಚಿವಾಲಯದ ಜವಾಬ್ದಾರಿ
- ಹಿರಿಯ ಐಎಎಸ್ ಅಧಿಕಾರಿಯೊಬ್ಬರ ನೇಮಕ
- ಸಿಎಂಗೆ, ಸಚಿವರಿಗೆ ಜನ ಸಲ್ಲಿಸುವ ಮನವಿಗಳ ಇತ್ಯರ್ಥ
- ಸಮಸ್ಯೆ ಹೇಳಿಬಂದ ಜನರಿಗೆ ಪರಿಹಾರ ನೀಡುವ ಹೊಣೆ

ರಾಜ್ಯಕ್ಕೆ ಕೇಂದ್ರದ ಯೋಜನೆ ತರಲು ಅಧಿಕಾರಿಗಳ ತಂಡ

ಕೇಂದ್ರದ ಯೋಜನೆಗಳನ್ನು ರಾಜ್ಯಕ್ಕೆ ತರುವುದು ಹೇಗೆ? ಯಾವ ಯೋಜನೆಗಳಿಗೆ ಅರ್ಜಿ ಸಲ್ಲಿಸಬೇಕು. ಯಾವ ಯೋಜನೆಗಳು ಇತರೇ ರಾಜ್ಯಗಳಲ್ಲಿದೆ. ತಮಿಳುನಾಡು, ಆಂಧ್ರ ಪ್ರದೇಶ, ಗುಜರಾತ್ ಸೇರಿದಂತೆ ಇತರೆ ರಾಜ್ಯಗಳು ಯಾವ ಯೋಜನೆಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಯಲು ಹೊಸ ಅಧಿಕಾರಿಗಳ ತಂಡ ರಚಿಸಿ ನೇಮಕ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಪುಟ ೪

224 ಕ್ಷೇತ್ರಗಳಲ್ಲೂ ಕಡ್ಡಾಯ ಸಭೆ

ರಾಜ್ಯದಲ್ಲಿ 224 ವಿಧಾನಸಭಾ ಕ್ಷೇತ್ರಗಳಿವೆ. ಉಸ್ತುವಾರಿ ಸಚಿವರ ನೇಮಕವಾದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ಜವಾಬ್ದಾರಿಯ ಜಿಲ್ಲೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ವಾರಕ್ಕೊಮ್ಮೆ ಸ್ಥಳೀಯ ಶಾಸಕರೊಂದಿಗೆ ಪ್ರಜಾಸೇವೆ ಇಲಾಖೆ ಮೂಲಕ ಜನಸ್ಪಂದನ ಸಭೆ ಅಥವಾ ಜನಸಂಪರ್ಕ ಸಭೆ ನಡೆಸಬೇಕು. ಆನಂತರ ಅದನ್ನು ಪರಿಶೀಲಿಸುವ ಕೆಲಸ ಮಾಡಲಾಗುವುದು. ಪುಟ ೪

ವಿದ್ಯುತ್ ಸಂಪರ್ಕಕ್ಕೆ 15 ದಿನ ಕಾಲಾವಕಾಶ

ರಾಜ್ಯದಲ್ಲಿ ನಿಯಮ ಉಲ್ಲಂಘಿಸಿದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿ ಅವಕಾಶ ನೀಡಲಾಗುತ್ತದೆ. 2026ರ ಮೇ 31 ರೊಳಗೆ ಪೂರ್ಣಗೊಂಡಿರುವ ಎಲ್ಲಾ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ವಿನಾಯಿತಿ ನೀಡಲಾಗಿದೆ. ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಿದ ದಿನದಿಂದ 15 ದಿನಗಳ ಕಾಲಾವಕಾಶ ನೀಡಲಾಗುವುದು. ಕಟ್ಟಡ ಮಾಲೀಕರು ಕಟ್ಟಡದ ಜೊತೆಗಿನ ಫೋಟೋ ಹಾಗೂ ಜಿಪಿಎಸ್ ದಾಖಲೆ ಕಡ್ಡಾಯವಾಗಿ ಸಲ್ಲಿಕೆ ಮಾಡಬೇಕು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ಪುಟ ೪



ವಿಶ್ವದ 2,500 ಸ್ಥಳಗಳಲ್ಲಿ ಯೋಗ ದಿನದ ಸಂಭ್ರಮ

ಐತಿಹಾಸಿಕ ರೆಡ್ ರೋಡ್‌ನಲ್ಲಿ ಮೋದಿ ನೇತೃತ್ವದಲ್ಲಿ ಯೋಗ

ಕೋಲ್ಕತ್ತದಲ್ಲಿ ಇಂದು ಯೋಗ ದಿನಾಚರಣೆ

ಹೊಸದಿಲ್ಲಿ: ಹನ್ನೆರಡನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ರಾಷ್ಟ್ರೀಯ ಕಾರ್ಯಕ್ರಮ ಭಾನುವಾರ ಕೋಲ್ಕತ್ತದ ಐತಿಹಾಸಿಕ ರೆಡ್ ರೋಡ್‌ನಲ್ಲಿ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಸಾಮೂಹಿಕ ಯೋಗಾಭ್ಯಾಸಕ್ಕೆ ನೇತೃತ್ವ ನೀಡಲಿದ್ದಾರೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಧ್ಯೇಯವಾಕ್ಯದಡಿ ಆಯುಷ್ ಸಚಿವಾಲಯವು ಈ ಬಾರಿಯ ಯೋಗ ದಿನಾಚರಣೆಯನ್ನು ಆಯೋಜಿಸಿದೆ. ಬೆಳಗ್ಗೆ 5 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ರೆಡ್ ರೋಡ್‌ನಲ್ಲಿ ಸಾವಿರಾರು ಯೋಗಾಸಕ್ತರು ಭಾಗವಹಿಸಲಿದ್ದಾರೆ. ದೇಶ-ವಿದೇಶಗಳಿಂದ ಲಕ್ಷಾಂತರ ಜನರು ಆನ್‌ಲೈನ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

6 ಲಕ್ಷ ಸಂಸ್ಥೆಗಳ ನೋಂದಣಿ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಆಯುಷ್ ಸಚಿವಾಲಯ ಆರಂಭಿಸಿರುವ ಯೋಗ ಸಂಗಮ ಜಾಲತಾಣದಲ್ಲಿ ಆರು ಲಕ್ಷಕ್ಕೂ ಅಧಿಕ ಸಂಘ-ಸಂಸ್ಥೆಗಳು ನೋಂದಣಿ ಮಾಡಿಕೊಂಡಿವೆ. ನೋಂದಣಿ ಸಂಖ್ಯೆ ಇನ್ನೂ ಏರಿಕೆಯಾಗುತ್ತಿದ್ದು, ಯೋಗವನ್ನು ಜನಾಂದೋಲನವಾಗಿ ರೂಪಿಸುವಲ್ಲಿ ಸಾರ್ವಜನಿಕರು ಮತ್ತು ಸಂಸ್ಥೆಗಳು ತೋರಿಸಿರುವ ಉತ್ಸಾಹಕ್ಕೆ ಇದು ಸಾಕ್ಷಿಯಾಗಿದೆ ಎಂದು ಸಚಿವಾಲಯ ತಿಳಿಸಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ ಸಮನ್ವಯದಲ್ಲಿ ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ಸುಮಾರು 2,500 ಸ್ಥಳಗಳಲ್ಲಿ ಯೋಗ ದಿನಾಚರಣೆ ಹಮ್ಮಿಕೊಂಡಿವೆ. ಆನ್‌ಲೈನ್ ಮೂಲಕ ಭಾಗವಹಿಸುವವರು ಪ್ರಧಾನಿ ಮೋದಿ ಅವರೊಂದಿಗೆ ಸಾಮಾನ್ಯ ಯೋಗ ಶಿಷ್ಟಾಚಾರದಂತೆ ಯೋಗಾಭ್ಯಾಸ ನಡೆಸಿ, ತಮ್ಮ ಯೋಗದ ಕ್ಷಣಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವಂತೆ ಆಯುಷ್ ಸಚಿವಾಲಯ ಮನವಿ ಮಾಡಿದೆ.




ಹಂಪಿಯಲ್ಲೂ ವಿಶೇಷ ಯೋಗೋತ್ಸವ

ಕೇಂದ್ರ ಸಂಸ್ಕೃತಿ ಸಚಿವಾಲಯ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ದೇಶದ 100 ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳಲ್ಲಿ ವಿಶೇಷ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಕರ್ನಾಟಕದ ವಿಶ್ವವಿಖ್ಯಾತ ಹಂಪಿ ಸೇರಿದಂತೆ ದಿಲ್ಲಿಯ ಕೆಂಪುಕೋಟೆ, ಹರಿದ್ವಾರ, ಕೋನಾರ್ಕ್, ಮಹಾಬಲಿಪುರಂ, ಮುಂಬೈ, ನಳಂದಾ, ಅಹಮದಾಬಾದ್, ಸಾರನಾಥ್, ಲೇಹ್, ಹೈದರಾಬಾದ್ ಮತ್ತು ಸಿಲ್ಚಾರ್‌ನಲ್ಲಿ ಪ್ರಮುಖ ಕಾರ್ಯಕ್ರಮಗಳು ನಡೆಯಲಿವೆ.

ಇಂದು ನೀಟ್(ಯುಜಿ)

ಹೊಸದಿಲ್ಲಿ: ಪ್ರಶ್ನೆ ಪತ್ರಿಕೆ ಸೋರಿಕೆಯಿಂದಾಗಿ ಮೊದಲ ಪರೀಕ್ಷೆ ರದ್ದಾಗಿದ್ದರಿಂದ ಬಿಗಿ ಭದ್ರತೆಯಲ್ಲಿ ಭಾನುವಾರ ನೀಟ್(ಯುಜಿ) ಮರುಪರೀಕ್ಷೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸಿದ್ಧವಾಗಿದೆ. ಈ ಬಾರಿ ಪ್ರಶ್ನೆ ಪತ್ರಿಕೆಗಳನ್ನು ಸಾಗಿಸಲು ಸೇನೆಯ ಹೆಲಿಕಾಪ್ಟರ್‌ಗಳು, ವಿಮಾನಗಳನ್ನು ಬಳಸಿರುವುದು ವಿಶೇಷ.

- ಯಾವುದೇ ದೋಷವಾಗದಂತೆ ಎನ್‌ಟಿಎ ಎಚ್ಚರಿಕೆ
- ಸೇನಾ ವಿಮಾನಗಳಲ್ಲಿ ಪ್ರಶ್ನೆಪತ್ರಿಕೆಗಳ ಸಾಗಾಟ



ಭಾರತ ಮತ್ತು ವಿದೇಶಗಳಲ್ಲಿನ ಪರೀಕ್ಷಾ ಕೇಂದ್ರಗಳಲ್ಲಿ 22 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರ ಹಾಗೂ ಮಾನ್ಯ ಫೋಟೋ ಐಡಿ ಕಾರ್ಡ್ ಅನ್ನು ಕಡ್ಡಾಯವಾಗಿ ತರಬೇಕು. ಪರೀಕ್ಷೆ ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15 ಗಂಟೆಯವರೆಗೆ ಪೆನ್ ಅಂಡ್ ಪೇಪರ್‌ನಲ್ಲಿ ನಡೆಯಲಿದ್ದು, ಬೆ.11 ಗಂಟೆಗೇ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಆಗಮಿಸಬೇಕು. ಮಧ್ಯಾಹ್ನ 1.30ಕ್ಕೆ ಗೇಟ್‌ಗಳನ್ನು ಮುಚ್ಚಲಾಗುತ್ತದೆ. ಅಭ್ಯರ್ಥಿಗಳಿಗೆ ಕಡ್ಡಾಯ ಬಯೋಮೆಟ್ರಿಕ್ ಪರಿಶೀಲನೆ, ದಾಖಲೆಗಳ ತಪಾಸಣೆ ಇರಲಿದೆ. ಪುಟ ೪

ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

ರಾಮನಗರ: ಬಿಡದಿ ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಭಾನುವಾರ ಬೃಹತ್ ಪಾದಯಾತ್ರೆ ನಡೆಯಲಿದೆ.



- ನಿಖಿಲ್ ಕುಮಾರಸ್ವಾಮಿ ನೇತೃತ್ವ
- ಇಂದು 8 ಗ್ರಾಮಗಳಲ್ಲಿ ಪಾದಯಾತ್ರೆ

ಅಂಚಿಪುರ ಗ್ರಾಮದಿಂದ ಹೊಸೂರುವರೆಗೆ 8 ಗ್ರಾಮಗಳ ಮೂಲಕ ಈ ಪಾದಯಾತ್ರೆ ಸಾಗಲಿದ್ದು, ಸಾವಿರಾರು ರೈತರು ಭಾಗವಹಿಸಲಿದ್ದಾರೆ. ಭಾನುವಾರ ಬೆಳಗ್ಗೆ ಒಂಭತ್ತು ಗಂಟೆಗೆ ಆರಂಭವಾಗುವ ಪಾದಯಾತ್ರೆಯು ಅಂಚಿಪುರ ಕಾಲೊನಿ, ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡು ತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಹಾಗೂ ಹೊಸೂರುವರೆಗೂ ಸಾಗಲಿದ್ದು, ಹೊಸೂರಿನಲ್ಲಿ ಬಹಿರಂಗ ಸಭೆಯೊಂದಿಗೆ ಸಮಾರೋಪಗೊಳ್ಳಲಿದೆ. ನಮ್ಮ ಭೂಮಿ ನಮ್ಮ ಹಕ್ಕು, ರೈತರ ಬದುಕು ಮತ್ತು ಕೃಷಿ ಚಟುವಟಿಕೆಗಳನ್ನು ಉಳಿಸಲು ಈ ಹೋರಾಟ ನಡೆಸುತ್ತಿದ್ದೇವೆ. ಪುಟ ೪


ಕರ್ನಾಟಕ ಭವನ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ



◆**ಬೆಂಗಳೂರು:** ಯುಪಿಎಸ್‌ಸಿ ಸೇರಿದಂತೆ ಇತರೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಒಂದೇ ಸೂರಿನಡಿ ಎಲ್ಲಾ ಅನುಕೂಲ ದೊರೆಯಬೇಕು ಎನ್ನುವ ಕಾರಣಕ್ಕೆ ಪಿಡಬ್ಲ್ಯುಡಿ ವತಿಯಿಂದ ಹೊಸದಿಲ್ಲಿಯಲ್ಲಿ ಕರ್ನಾಟಕ ಭವನ-4 ಅನ್ನು ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.

ವಿಧಾನಸೌಧದಲ್ಲಿ ಶನಿವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಅವರು ಸಭೆಯ ನಿರ್ಣಯಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಪಿಡಬ್ಲ್ಯುಡಿ ವತಿಯಿಂದ ಹೊಸದಿಲ್ಲಿಯಲ್ಲಿ ಕರ್ನಾಟಕ ಭವನ-4 ಅನು ಮಾಡಲು 80.30 ಕೋಟಿ ರೂ.ಗೆ ಅನುಮೋದನೆ ನೀಡಲಾಗಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಶೇ. 50, ಇತರೇ ಸಮುದಾಯದ ವಿದ್ಯಾರ್ಥಿಗಳಿಗೆ ಶೇ. 50 ರಷ್ಟು ಮೀಸಲು ಇಡಲಾಗಿದೆ ಎಂದು ವಿವರಿಸಿದರು. ರಾಜ್ಯದ ವಿವಿಧ ಸಾರಿಗೆ ನಿಗಮಗಳಿಗೆ ಒಟ್ಟು 235.60 ಕೋಟಿ ರೂ. ವೆಚ್ಚದಲ್ಲಿ 620 ನೂತನ ಬಸ್‌ಗಳ ಖರೀದಿಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ನೂತನ ಬಸ್ಸುಗಳ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳು ಹಾಗೂ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 220 ಬಸ್ಸುಗಳನ್ನು ಒದಗಿಸಲಾಗುತ್ತದೆ. ಹೊಸ ಬಸ್ಸುಗಳು ಬಿಎಸ್-4 ಪೂರ್ಣ ನಿರ್ಮಿತ ಮೊಫುಸಿಲ್ ಬಸ್ಸುಗಳಾಗಿವೆ. ಅಲ್ಲದೇ ಎಲ್ಲಾ ಸಾರಿಗೆ ನಿಗಮಗಳ ಅಡಿಯಲ್ಲಿ 11 ಕಡೆ ಎಲೆಕ್ಟ್ರಿಕ್ ಬಸ್‌ಗಳ ಡಿಪೋಗಳನ್ನು ತೆರೆಯಲು 112.72 ಕೋಟಿ ರೂ. ವೆಚ್ಚ ಮಾಡಲಾಗುವುದು. 30 ಕೋಟಿ ರೂ. ವೆಚ್ಚದಲ್ಲಿ ಸಂಡೂರು ತಾಲೂಕು ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು ಎಂದು ವಿವರಿಸಿದರು.

ರಾಮ ಬಾಣ



ಜಾಗತಿಕ ಉಗ್ರ ನಿಗಾ ಸಂಸ್ಥೆಗೆ ಭಾರತದ ವಿವೇಕ್ ಉಪಾಧ್ಯಕ್ಷ

◆**ಹೊಸದಿಲ್ಲಿ:** ಕೇಂದ್ರ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ವಿವೇಕ್ ಅಗರ್‌ವಾಲ್ ಅವರು ಜಾಗತಿಕ ಉಗ್ರ ನಿಗಾ ಸಂಸ್ಥೆ ಎಫ್‌ಎಟಿಎಫ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಹಣಕಾಸು ಕ್ರಮ ಕಾರ್ಯಪಡೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಮೊದಲ ಭಾರತೀಯರಾಗಿದ್ದಾರೆ. 2026ರ ಜುಲೈನಿಂದ 2027ರ ಜೂನ್‌ವರೆಗೆ ವಿವೇಕ್ ಉಗ್ರ ನಿಗಾ ಸಂಸ್ಥೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ.

ವಿವೇಕ್ ಅಗರ್‌ವಾಲ್ ಅವರು 1994ರ ಮಧ್ಯಪ್ರದೇಶ ಕೇಡರ್‌ನ ಭಾರತೀಯ ಆಡಳಿತ ಸೇವೆ(ಐಎಎಸ್) ಅಧಿಕಾರಿ ಆಗಿದ್ದಾರೆ. ಜಾಗತಿಕ ಉಗ್ರ ನಿಗಾ ಸಂಸ್ಥೆಗೆ ಭಾರತೀಯರೊಬ್ಬರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಭಯೋತ್ಪಾದನೆ ವಿರುದ್ಧ ಹೋರಾಟದಲ್ಲಿ ಸಂಪೂರ್ಣ ಸಹಮತ ನೀಡುವ ಭಾರತಕ್ಕೆ ಇದೊಂದು ದೊಡ್ಡ ಗೆಲುವು. ಜಾಗತಿಕ ಭಯೋತ್ಪಾದನೆ ಹಾಗೂ ಅದರ ಹಣಕಾಸಿನ ಸಂಪರ್ಕಜಾಲಗಳ ವಿರುದ್ಧದ ಹೋರಾಟದಲ್ಲಿ ಭಾರತದ ಪಾತ್ರದ ಮಹತ್ವವನ್ನು ತೋರಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ವಿವೇಕ್ ಅಗರ್‌ವಾಲ್ ಯಾರು? ಕೇಂದ್ರ ಸರ್ಕಾರ, ಪಂಜಾಬ್ ಮತ್ತು ಮಧ್ಯಪ್ರದೇಶ ಸರ್ಕಾರದ ಹಲವು ಪ್ರಮುಖ ಹುದ್ದೆಗಳನ್ನು ವಿವೇಕ್ ಅಲಂಕರಿಸಿದ್ದಾರೆ. 2025ರಲ್ಲಿ ಮಧ್ಯಪ್ರದೇಶ ಕೇಡರ್‌ನ ಮುಖ್ಯ ಕಾರ್ಯದರ್ಶಿಯಾಗಿ ಬಡ್ತಿ ಪಡೆದಿದ್ದರು. ಕಂದಾಯ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದ ವಿವೇಕ್, ಹಣಕಾಸು ಗುಪ್ತಚರ ಘಟಕ-ಭಾರತ(ಎಫ್‌ಐಯು-ಐಎನ್‌ಡಿ) ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಹಣಕಾಸು ನಿರ್ವಹಣೆ, ಸಾರ್ವಜನಿಕ ಆಡಳಿತ ಮತ್ತು ನೀತಿಗಳ ಅನುಷ್ಠಾನದಲ್ಲಿ ತಜ್ಞರಾಗಿ ಅಗರವಾಲ್ ಹೆಸರುವಾಸಿ ಆಗಿದ್ದರು. ಕಂದಾಯ ಆಡಳಿತ, ಕೃಷಿ ಸುಧಾರಣೆಗಳು, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ಗುಪ್ತಚರ ವಿಭಾಗಗಳಲ್ಲೂ ವಿವೇಕ್ ಕೊಡುಗೆ ನೀಡಿದ್ದರು.

ದಿನ ಭವಿಷ್ಯ

ಮೇಷ ಮನೆಯಲ್ಲಿ ಕೆಟ್ಟಿರುವ ಸಂಬಂಧ ಸುಧಾರಣೆಗೆ ಗಮನ ಕೊಡಿ. ಬಿಗುಮಾನ ಬಿಟ್ಟು ವ್ಯವಹರಿಸಿ. ಬಂಧು ಭೇಟಿಯಿಂದ ಸಮಾಧಾನ.

ವೃಷಭ ನಿಮ್ಮ ಗುರಿ ಈಡೇರಬೇಕಾದರೆ ವಸ್ತುಸ್ಥಿತಿ ಅರಿಯಿರಿ. ಕೆಲ ವಿಷಯಗಳಲ್ಲಿ ಭ್ರಮೆ ಬಿಡಿ. ಮನೆಯವರ ಬೆಂಬಲ ಪಡೆಯಿರಿ.

ಮಿಥುನ ಮಾಡುವ ಕೆಲಸದಲ್ಲಿ ಸಫಲತೆ. ಆದರೆ ಸುಲಭದಲ್ಲಿ ಆಗದು. ಅಡ್ಡಿ, ವಿಳಂಬ ಸಾಧ್ಯತೆ. ಕೌಟುಂಬಿಕ ಮನಸ್ತಾಪ ನೆಮ್ಮದಿ ಕೆಡಿಸುವುದು.

ಕಟಕ ಭಿನ್ನಾಭಿಪ್ರಾಯ ನಿವಾರಣೆ. ಅನಿರೀಕ್ಷಿತ ವಿದ್ಯಮಾನ ಸಂಭವಿಸಿದರೆ ಅಂಜಬೇಡಿ. ವಿಶ್ವಾಸದಿಂದ ಎದುರಿಸಿ. ನೆರೆಮನೆಯವರ ಕಿರಿಕಿರಿ.

ಸಿಂಹ ವೃತ್ತಿಯಲ್ಲಿ ಯಶಸ್ಸು. ಮನೆಯಲ್ಲಿ ಸೌಹಾರ್ದ. ಬಂಧುಗಳ ಭೇಟಿ. ಧನವ್ಯಯ ಹೆಚ್ಚಾದರೂ ಬೇಸರ ಮೂಡದು.

ಕನ್ಯಾ ಮಾನಸಿಕ ಅಶಾಂತಿ. ಕೆಲಸದಲ್ಲಿ ನಿರಾಸಕ್ತಿ. ವ್ಯವಹಾರದಲ್ಲಿ ತೊಡಕು. ಎಲ್ಲರ ಜತೆ ಹೊಂದಾಣಿಕೆ ಬೆಳೆಸಿ. ಭಿನ್ನವಾಗಿ ವರ್ತಿಸಲು ಹೋಗದಿರಿ.

ತುಲಾ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ. ವೃತ್ತಿ ಸಮಸ್ಯೆಯೊಂದು ಪರಿಹಾರ ಕಾಣಲಿದೆ. ಕುಟುಂಬಸ್ಥರ ಹಿತ ಕಾಯುವಲ್ಲಿ ಸಫಲ.

ವೃಶ್ಚಿಕ ವೃತ್ತಿ ಒತ್ತಡ ಕಡಿಮೆ ಮಾಡಿಕೊಳ್ಳಿ. ಇಲ್ಲವಾದರೆ ಆರೋಗ್ಯದ ಮೇಲೆ ಪರಿಣಾಮ. ಮೆಚ್ಚಿನ ಹವ್ಯಾಸದಲ್ಲಿ ಚಿಂತೆ ಮರೆಯಲೆತ್ನಿಸಿ.

ಧನು ಮನೆಯಲ್ಲಿ ಶಾಂತಿ, ಸೌಹಾರ್ದ. ಹಣದ ವ್ಯವಹಾರ ಸಫಲ. ಆರೋಗ್ಯದ ಚಿಂತೆ ಪರಿಹಾರ. ಮಕ್ಕಳ ಸಾಧನೆಯ ಖುಷಿ.

ಮಕರ ಆದಾಯ ಹೆಚ್ಚಳದ ಸಂಕೇತ ತೋರಲಿದೆ. ಎಲ್ಲರಿಂದ ಉತ್ತಮ ಸಹಕಾರ ಪಡೆಯುವಿರಿ. ಆರೋಗ್ಯದ ಸಮಸ್ಯೆ ಕಡೆಗಣಿಸಬೇಡಿ.

ಕುಂಭ ವೃತ್ತಿಯಲ್ಲಿ ಯಾವುದೇ ಕೆಲಸ ಬಾಕಿ ಉಳಿಸಬೇಡಿ. ವಿಳಂಬ ದೊಡ್ಡ ಹಾನಿ ತಂದೀತು. ಅನಾರೋಗ್ಯಕರ ಆಹಾರ ಸೇವಿಸಬೇಡಿ.

ಮೀನ ಇತರರ ಜತೆ ವಿನಯದಿಂದ ವರ್ತಿಸಿ. ಇಲ್ಲವಾದರೆ ನಿಷ್ಠುರ ಕಟ್ಟಿಕೊಳ್ಳುವಿರಿ. ಆರ್ಥಿಕ ವ್ಯವಹಾರ ತುಸು ಚಿಂತೆಗೆ ಕಾರಣವಾದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,8,2,5

ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಅಲ್ಲ: ಕೇಂದ್ರ ಸಚಿವ ಎಚ್ಚರಿಕೆ
ಮೈತ್ರಿ ಬಿಕ್ಕಟ್ಟು ಸೃಷ್ಟಿಗೆ ಯತ್ನ

◆**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡ ಮತದಾನದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಲ್ಲಿ ಬಿರುಕು ಉಂಟಾಗುವುದಿಲ್ಲ. ಈ ಚುನಾವಣೆ ಮುಂದಿನ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯೂ ಅಲ್ಲ ಹಾಗೂ ನಮ್ಮ ನಡುವೆ ಬಿಕ್ಕಟ್ಟು ಸೃಷ್ಟಿಸಲು ಕಾಂಗ್ರೆಸ್ ವಿಫಲ ಪ್ರಯತ್ನ ನಡೆಸುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು, ನಾನು ನಮ್ಮ ಅಭ್ಯರ್ಥಿಯನ್ನು ನಿಲ್ಲಿಸುವುದಕ್ಕೆ ಮೊದಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬೀನ್, ರಾಜ್ಯಾಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಹಾಗೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾದ ಆರ್. ಅಶೋಕ್ ಅವರೊಂದಿಗೆ ಚರ್ಚೆ ನಡೆಸಿ ಅವರೆಲ್ಲರ ಸಹಮತದಿಂದ ಅಭ್ಯರ್ಥಿಯನ್ನು ಹಾಕಲಾಯಿತು. ಹೀಗಾಗಿ ನಮ್ಮ ಮೈತ್ರಿಯಲ್ಲಿ ಬಿರುಕು ಬರುವ ಪ್ರಶ್ನೆ ಇಲ್ಲ ಎಂದರು.

ಅನುದಾನಕ್ಕಾಗಿ ಶಾಸಕರು ಆಸೆ ಪಟ್ಟಿದ್ದಾರೆ: ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೊಟ್ಟರೆ ನಿಮಗೆ (ಕಿಸೆಗೆ) 50 ಕೋಟಿ ರೂ. ಕೊಡುತ್ತೇವೆ, ಅದರ ಜೊತೆಗೆ 100 ಕೋಟಿ ರೂ. ಅನುದಾನ ಕೊಡುತ್ತೇವೆ ಎಂದು ಆಮಿಷ ಒಡ್ಡಿದ್ದಾರೆ. ಆ ಆಮಿಷಗಳು ಚುನಾವಣೆಯಲ್ಲಿ ಕೆಲಸ ಮಾಡಿವೆ ಎಂದು ಆರೋಪಿಸಿದರು. ನಮಗೆ ಇದ್ದಿದ್ದು ಕೇವಲ 18 ಸೀಟು. ಅದರಲ್ಲಿ ಒಬ್ಬರು ಈಗಾಗಲೇ ಕಾಲು ಹೊರಗೆ ಇಟ್ಟಿದ್ದಾರೆ.

ಹೀಗಾಗಿ ನಮ್ಮಲ್ಲಿ ಉಳಿದಿದ್ದು 17 ಶಾಸಕರು ಮಾತ್ರ ಹಾಗೂ ಬಿಜೆಪಿಯ ಹೆಚ್ಚುವರಿ 6 ಮತಗಳು ಬರಬಹುದು ಎನ್ನುವುದು ನಮಗಷ್ಟೇ ಅಲ್ಲ, ಎಲ್ಲರ ನಿರೀಕ್ಷೆಯೂ ಆಗಿತ್ತು. ಹೀಗೆಯೇ ಎಲ್ಲಾ ಸೇರಿ ಒಟ್ಟಾರೆ ನಮ್ಮ ಅಭ್ಯರ್ಥಿಗೆ 24 ಮತಗಳು ಬರಬಹುದು ಎಂಬ ಲೆಕ್ಕಾಚಾರ ಇಟ್ಟುಕೊಂಡಿದ್ದೆವು. ಆದರೆ, ಕೆಲ ಶಾಸಕರು ಪಕ್ಷದ ಜೊತೆ ಗಟ್ಟಿಯಾಗಿ ನಿಲ್ಲಲಿಲ್ಲ. ಅನುದಾನಕ್ಕಾಗಿ ಚಂಚಲರಾಗಿದ್ದಾರೆ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಕ್ಷ ಬಿಡುವವರು ಬಿಡಲಿ

ಜೆಡಿಎಸ್ ಶಾಸಕರ ಸಭೆಯಲ್ಲಿ ಕೆಲವು ವಿಷಯಗಳನ್ನು ನಾನು ಮುಕ್ತವಾಗಿ ಮಾತನಾಡಿದ್ದೇನೆ. ಅವರ ಭವಿಷ್ಯಕ್ಕೆ ತೊಂದರೆ ಕೊಡಲು ನಾನು ಬಯಸುವುದಿಲ್ಲ. ಬೇರೆ ಕಡೆ ಅನುಕೂಲವಾಗುತ್ತದೆ, ಹೋಗುತ್ತೇವೆ ಎಂದರೆ ನಾನು ತಡೆಯುವುದಕ್ಕೆ ಹೋಗುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಸಕರು ಬೇರೆ ಕಡೆಗೆ ಹೋಗಬೇಕು ಅಂದರೆ ಧೈರ್ಯವಾಗಿ ನನಗೆ ಹೇಳಿಯೇ ಹೋಗಿ ಅಂತ ಹೇಳಿದ್ದೇನೆ. ಅದನ್ನು ಬಿಟ್ಟು ಇಂತಹ ಕೆಲಸಗಳನ್ನು ಮಾಡಿ ಪಕ್ಷಕ್ಕೆ ಧಕ್ಕೆ ತರಬೇಡಿ ಎಂದು ಹೇಳಿದ್ದೇನೆ. ಶಾಸಕರ ಸಭೆಯಲ್ಲಿ ಒಬ್ಬರು ಬಿಟ್ಟರೆ ಉಳಿದ 17 ಮಂದಿ ಹಾಜರಿದ್ದರು. ಅವರೊಂದಿಗೆ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದೇನೆ ಎಂದು ತಿಳಿಸಿದರು.



> ಕೇವಲ ಈ ನೆಪ ಇಟ್ಟುಕೊಂಡು ನಮ್ಮ ನಡುವೆ ಬಿಕ್ಕಟು ಸೃಷ್ಟಿಸಬಹುದು ಎಂದು ಕಾಂಗ್ರೆಸ್ ಪಕ್ಷ ನಂಬಿದ್ದರೆ ಅವರಿಗೆ ನಿರಾಶೆ ಆಗುವುದು ಖಚಿತ. ಅವರ ಆಸೆ ಖಂಡಿತಾ ಕೈಗೂಡುವುದಿಲ್ಲ. ಪರಿಷತ್ ಚುನಾವಣೆ ಮುಂದಿನ ವಿಧಾನಸಭೆಗೆ ದಿಕ್ಸೂಚಿಯೂ ಅಲ್ಲ.
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಇಂದು ಹರಿಪ್ರಸಾದ್ ಪದಗ್ರಹಣ

◆**ಬೆಂಗಳೂರು:** ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಅವರು ಜೂ.21ರಂದು ಪದಗ್ರಹಣ ಮಾಡಲಿದ್ದು, ನಗರದ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯಲಿರುವ ಅಧಿಕಾರ ಹಸ್ತಾಂತರ ಸಮಾರಂಭಕ್ಕೆ ಭರ್ಜರಿ ಸಿದ್ಧತೆ ಕೈಗೊಳ್ಳಲಾಗಿದೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಮುಖಂಡರು ಭಾಗವಹಿಸುವ ನಿರೀಕ್ಷೆ ಇದೆ.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಬೆಳಗ್ಗೆ 11 ಗಂಟೆಗೆ ಪಕ್ಷದ ಧ್ವಜವನ್ನು ಬಿ.ಕೆ. ಹರಿಪ್ರಸಾದ್ ಅವರಿಗೆ ಹಸ್ತಾಂತರಿಸುವ ಮೂಲಕ ಅಧಿಕಾರ ವರ್ಗಾವಣೆ ನೆರವೇರಿಸಲಿದ್ದಾರೆ. ಸಮಾರಂಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಸೇರಿದಂತೆ ಸಚಿವರು, ಶಾಸಕರು ಮತ್ತು ಹಿರಿಯ ನಾಯಕರು ವೇದಿಕೆಯಲ್ಲಿ ಉಪಸ್ಥಿತರಿರುತ್ತಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಅವರು, ಕಾರ್ಯಕ್ರಮಕ್ಕೆ ಆಗಮಿಸುವ ಕಾರ್ಯಕರ್ತರ ಅನುಕೂಲಕ್ಕಾಗಿ 70 ಆಹಾರ ವಿತರಣಾ ಕೇಂದ್ರಗಳನ್ನು ತೆರೆಯಲಾಗಿದ್ದು, ಬೆಳಗ್ಗೆ 8 ಗಂಟೆಯಿಂದ ಉಪಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ. ಕುಡಿಯುವ ನೀರು ಮತ್ತು ಮಜ್ಜಿಗೆಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಸುಮಾರು 1,200 ಬಸ್‌ಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದ್ದು, ಸ್ಥಳದಲ್ಲಿ 6 ಆ್ಯಂಬುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ ಎಂದರು.

ನೀಟ್ ಮರುಪರೀಕ್ಷೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯಕರ್ತರು ಸಹಕರಿಸಬೇಕು ಎಂದು ಸೂಚನೆ ನೀಡಲಾಗಿದೆ.

ಪೊಲೀಸ್ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ವಿಶೇಷ ರೂಟ್‌ಮ್ಯಾಪ್ ಸಿದ್ಧಪಡಿಸಲಾಗಿದ್ದು, ಕಾರ್ಯಕ್ರಮದ ನಿರ್ವಹಣೆಗೆ ಎಂಟು ಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಟೌನ್‌ಶಿಪ್ ವಿರೋಧಿಸಿ ಜೆಡಿಎಸ್ ಪಾದಯಾತ್ರೆ

ಪುಟ ೩➡ ಅಂಚಿಪುರ, ಬನ್ನಿಗಿರಿ, ಗೊಲ್ಲಹಳ್ಳಿ ಸೇರಿದಂತೆ 8 ಗ್ರಾಮಗಳ ರೈತರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ. ಬಿಡದಿ ಟೌನ್‌ಶಿಪ್ ಯೋಜನೆಯಡಿ ಅಂಚಿಪುರ, ಬನ್ನಿಗಿರಿ, ಮರೇವೇಗೌಡನದೊಡ್ಡಿ, ಗುಂಡುತೋಪು, ಗೊಲ್ಲಹಳ್ಳಿ, ಕೋಡಿಪಾಳ್ಯ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ 518 ಎಕರೆ ಕೃಷಿ ಭೂಮಿಗೆ ಈಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಜೊತೆಗೆ ಹೆಚ್ಚುವರಿ 7,481 ಎಕರೆ ಭೂಸ್ವಾಧೀನಕ್ಕೆ ಸರ್ಕಾರ ಮುಂದಾಗಿದೆ. ಇದರಿಂದ 755 ರೈತ ಕುಟುಂಬಗಳು, ಮಾಸಿಕ 6 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಹೈನುಗಾರಿಕೆ, ರೇಷ್ಮೆ-ತೋಟಗಾರಿಕೆ ಹಾಗೂ 10 ಲಕ್ಷ ಹಸಿರು ವೃಕ್ಷಗಳಿಗೆ ಧಕ್ಕೆಯಾಗಲಿದೆ ಎಂದು ನಿಖಿಲ್ ಹೇಳಿದ್ದಾರೆ.

ಪಕ್ಷಾತೀತ ಹೋರಾಟ: 450 ದಿನಗಳಿಂದ ರೈತರು ನಿರಂತರ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಯೋಜನೆಯಿಂದ ರೈತರ ಬದುಕಿಗೆ ತೊಂದರೆಯಾಗಲಿದ್ದು, ನಮ್ಮ ಈ ಹೋರಾಟ ಪಕ್ಷಾತೀತವಾಗಿ ನಡೆಯಲಿದ್ದು, ಸರ್ಕಾರದ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಬೇಕು ಎಂದು ನಿಖಿಲ್ ಕುಮಾರಸ್ವಾಮಿ ಆಗ್ರಹಿಸಿದ್ದಾರೆ. ಪಾದಯಾತ್ರೆಗೆ ವಿವಿಧ ರೈತ ಸಂಘಟನೆಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಬೆಂಬಲ ಸೂಚಿಸಿದ್ದು, ನಮ್ಮ ಪಾದಯಾತ್ರೆಯಲ್ಲಿ ಭಾಗಿಯಾಗಿಯಾಗಲಿದ್ದಾರೆ ಎಂದರು.

ನಾನು ಹೇಳಿದ್ದೆಲ್ಲವೂ ದಾಖಲೆಯಲ್ಲಿದೆ

◆**ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ನಾನು ಹೇಳಿದ್ದೆಲ್ಲವೂ ದಾಖಲೆಗಳಲ್ಲಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಬಗ್ಗೆ ವಿಧಾನಸಭೆಯಲ್ಲಿ ಈ ಹಿಂದೆಯೇ ಚರ್ಚೆ ಆಗಿತ್ತು. ನನ್ನ ಕಾಲದಲ್ಲಿ ಐದು ಟೌನ್‌ಶಿಪ್ ಮಾಡುವ ವಿಚಾರದ ಬಗ್ಗೆ ವಿಸ್ತೃತ ಚರ್ಚೆ ನಡೆದಿತ್ತು. ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸತ್ಯಶೋಧನಾ ಸಮಿತಿ ಬೇರೆ ರಚಿಸಿತ್ತು. ಆ ಬಗ್ಗೆ ನಾನು ಅಂದಿನ ಮುಖ್ಯಮಂತ್ರಿ ಆಗಿ ಏನು ಹೇಳಿದ್ದೇನೆ ಎಂಬುದು ದಾಖಲೆಯಲ್ಲಿದೆ ಎಂದಿದ್ದಾರೆ. ಟೌನ್‌ಶಿಪ್‌ಗಾಗಿ ರೈತರ ಒಂದಿಂಚೂ ಫಲವತ್ತಾದ ಭೂಮಿ ಸ್ವಾಧೀನ ಮಾಡುವ ವಿಚಾರ ಇಲ್ಲ ಎಂದಿದ್ದೇನೆ. ಇನ್ನೆರಡು ದಿನಗಳಲ್ಲಿ ಸುದ್ದಿಗೋಷ್ಠಿ ನಡೆಸಿ ಎಲ್ಲವನ್ನೂ ಹೇಳುತ್ತೇನೆ. ಆಗ ನನ್ನ ಜತೆ ಇದ್ದು, ಈ ಯೋಜನೆಯನ್ನು ವಿರೋಧಿಸಿದವರು ಇವತ್ತು ಬೇರೆ ಪಕ್ಷದಲ್ಲಿದ್ದು ಮಾತು ಬದಲಿಸುತ್ತಿದ್ದಾರೆ ಎಂದು ಟೀಕಿಸಿದರು. ಭೂ ಮಾಲೀಕರಿಗೆ ಶಾಸಕ ಪರಿಹಾರದ ಚೆಕ್ ಕೊಟ್ಟ ಬಗ್ಗೆ ಲೇವಡಿ ಮಾಡಿದ ಕೇಂದ್ರ ಸಚಿವರು, ಭೂ ಸ್ವಾಧೀನ ಅಧಿಕಾರಿ ಎಂಬ ವ್ಯಕ್ತಿ ಇರುತ್ತಾನೆ. ಅಥವಾ ಆ ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳು ಇರುತ್ತಾರೆ, ಅವರು ಪರಿಹಾರದ ಚೆಕ್ ಕೊಡಬೇಕಾಗುತ್ತದೆ. ಕೆಲವರು ಚೆಕ್ ತೆಗೆದುಕೊಂಡಿದ್ದಾರೆ. ಆ ಹಣ ಎಷ್ಟು ದಿನ ಇರುತ್ತದೆ? 2 ಕೋಟಿ 30 ಲಕ್ಷದ ಚೆಕ್ ಕೊಟ್ಟು ರೈತರಿಗೆ ಆಸೆ ಹುಟ್ಟಿಸಿದ್ದಾರೆ. 20 ವರ್ಷಕ್ಕೆ 2 ಕೋಟಿ ಹಣವನ್ನು ಎಫ್‌ಡಿ ಇಟ್ಟರೆ ಹೆಚ್ಚೆಂದರೆ 40 ಲಕ್ಷ ಬಡ್ಡಿ ಸಿಗಬಹುದು. ಆದರೆ ಜಮೀನನ್ನ ಹಾಗೆ ಇಟ್ಟುಕೊಂಡರೆ 20 ಕೋಟಿ ಬೆಲೆ ಬಾಳುತ್ತದೆ ಎಂದು ಸಚಿವರು ಹೇಳಿದರು.

ರಾಜ್ಯಕ್ಕೆ ಕೇಂದ್ರದ ಯೋಜನೆ ತರಲು ಅಧಿಕಾರಿಗಳ ತಂಡ

ಪುಟ ೩➡ ಈಗಾಗಲೇ ದಿಲ್ಲಿಗೆ ತೆರಳಿ ಕರ್ನಾಟಕದ ಅಧಿಕಾರಿಗಳ ಸಭೆ ನಡೆಸಿ ಅವರ ಸಲಹೆ ಪಡೆದಿದ್ದೇನೆ. ನಮ್ಮ ಅಧಿಕಾರಿಗಳು ಹಲವಾರು ಸಲಹೆ ನೀಡಿದ್ದು, ಕರ್ನಾಟಕದ ಏಳಿಗೆಗೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ದಿಲ್ಲಿಯಲ್ಲಿರುವ ನಮ್ಮ ಅಧಿಕಾರಿಗಳು ತಂಡಗಳನ್ನು ರಚಿಸಿಕೊಂಡು ಇಲಾಖೆಗೆ ಅನುಗುಣವಾಗಿ ಸಲಹೆ ನೀಡಲು ಮುಂದೆ ಬಂದಿದ್ದಾರೆ. ಇವರ ಜೊತೆಗೆ ಹಿರಿಯ ಐಎಎಸ್, ಐಪಿಎಸ್ ಅಧಿಕಾರಿಗಳು ನಿವೃತ್ತ ಅಧಿಕಾರಿಗಳನ್ನು ಈ ತಂಡಕ್ಕೆ ನೇಮಕ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ವಿದ್ಯುತ್ ಸಂಪರ್ಕಕ್ಕೆ 15 ದಿನ ಕಾಲಾವಕಾಶ

ಪುಟ ೩➡ ಗ್ರಾಮೀಣ ಭಾಗದ ರೇಷ್ಮೆ ಸಾಕಾಣಿಕೆ ಮನೆ, ಹೈನುಗಾರಿಕೆ ಕೊಟ್ಟಿಗೆಗಳಿಗೆ ವಿನಾಯಿತಿ ನೀಡಲಾಗಿದೆ. ಹೊಸದಾಗಿ ನಿರ್ಮಾಣ ಮಾಡಿದರೆ ಅವಕಾಶವಿಲ್ಲ. ಇಂಧನ ಸಚಿವರು, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ ಸಚಿವರ ಬಳಿ ಇದರ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

224 ಕ್ಷೇತ್ರಗಳಲ್ಲೂ ಕಡ್ಡಾಯ ಸಭೆ

ಪುಟ ೩➡ ಸ್ಥಳೀಯ ಶಾಸಕರ ಜವಾಬ್ದಾರಿ ಏನೆಂಬುದನ್ನು ಮುಂದೆ ವಿವರಿಸಲಾಗುವುದು ಎಂದು ಸಿಎಂ ಡಿಕೆಶಿ ತಿಳಿಸಿದರು. ನಮಗೆ ಜನರ ಹಿತ ಮುಖ್ಯ. ಇಲ್ಲಿ ಯಾರೂ ಸರ್ವಜ್ಞರಲ್ಲ. ಸಕಾಲ, ಇ- ಆಡಳಿತ ಸೇರಿದಂತೆ ಎಲ್ಲವನ್ನು ಬಳಸಿ ಜನರ ಸಮಸ್ಯೆ ನಿವಾರಿಸಲಾಗುವುದು. ಮಾಧ್ಯಮದಲ್ಲಿ ಬಂದಂತಹ ವಿಚಾರಗಳನ್ನು ತಿಳಿದು ನಾವೂ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾಧ್ಯಮಗಳ ಗಮನಕ್ಕೆ ಬಂದಿದ್ದನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಚಿವರಾದ ಈಶ್ವರ ಖಂಡ್ರೆ, ಯು.ಟಿ.ಖಾದರ್, ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ಅವರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಕಾರ್ಯದರ್ಶಿ ರಾಜೇಂದ್ರ ಚೋಳನ್ ಮತ್ತಿತರರಿದ್ದರು.

ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಅನಿವಾರ್ಯ

◆**ಬೆಂಗಳೂರು:** ರಾಜ್ಯದಲ್ಲಿ ಬಸ್ ಪ್ರಯಾಣ ದರ ಏರಿಕೆಯನ್ನು ಜನರ ಹಿತದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಸ್ ಟಿಕೆಟ್ ದರ ಏರಿಕೆ ವಿಚಾರವಾಗಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಖಾಸಗಿ ಹಾಗೂ ನಿಗಮದ ಡಿಪೋಗಳಲ್ಲಿನ ಡೀಸೆಲ್ ಬೆಲೆ ವ್ಯತ್ಯಾಸ ದರ ಸುಮಾರು 40 ರೂ.ಗಳಷ್ಟಿದೆ. ಇದು ಗಾಬರಿಯಾಗುವ ಸಂಖ್ಯೆ. ಡೀಸೆಲ್ ಬೆಲೆ ಹೆಚ್ಚಾದರೆ ಟಿಕೆಟ್ ಬೆಲೆ ಹೆಚ್ಚಳ ಆಗಬೇಕು ಎಂದು ಈ ಹಿಂದೆ ತೀರ್ಮಾನ ಮಾಡಲಾಗಿತ್ತು. ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದರು. ಕೆಎಸ್ಆರ್‌ಟಿಸಿಯೂ ಉಳಿಬೇಕು, ಜನರಿಗೂ ಅನುಕೂವಾಗಬೇಕು. ಏಕೆಂದರೆ ಪ್ರಧಾನ ಮಂತ್ರಿಗಳೇ ಸಾರ್ವಜನಿಕ ಸಾರಿಗೆಗಳನ್ನು ಬಳಸಿ ಇಂಧನ ಉಳಿಸಿ ಎಂದು ಮಾರ್ಗದರ್ಶನ ನೀಡಿದ್ದಾರೆ. ಇದರ ಬಗ್ಗೆ ಜನರ ಹಿತ ದೃಷ್ಟಿಯಲ್ಲಿಟ್ಟುಕೊಂಡು ತೀರ್ಮಾನ ಮಾಡಲಾಗುವುದು. ಖಾಸಗಿಯವರು ಡಿಪೋಗಳ ಬದಲಾಗಿ ಸಾರ್ವಜನಿಕರಿಗೆ ಇರುವ ಬಂಕ್‌ಗಳಲ್ಲಿ ಡಿಸೇಲ್ ಖರೀದಿ ಮಾಡುತ್ತಿದ್ದಾರೆ. ಇದರ ಬಗ್ಗೆ ವರದಿ ಕೇಳಿದ್ದೇನೆ ಎಂದು ಹೇಳಿದರು.

ಇಂದು ನೀಟ್(ಯುಜಿ)

ಪುಟ ೩➡ ಅಭ್ಯರ್ಥಿಗಳು ಪೋಸ್ಟ್‌ಕಾರ್ಡ್ ಅಳತೆಯ ಭಾವಚಿತ್ರವಿರುವ ಹೊಸ ಪ್ರವೇಶ ಪತ್ರದ (ಅಡ್ಮಿಟ್ ಕಾರ್ಡ್) ಪ್ರಿಂಟ್ ಮಾಡಿದ ಕಲರ್ ಪ್ರತಿಯನ್ನು ತರಬೇಕು. ಮೂಲ ಸರ್ಕಾರಿ ಗುರುತಿನ ಚೀಟಿ, ಹೆಚ್ಚುವರಿ ಭಾವಚಿತ್ರಗಳು ಮತ್ತು ಪಾರದರ್ಶಕ ನೀರಿನ ಬಾಟಲಿ ತರಬೇಕು. ಹಗುರ ಉಡುಪುಗಳು ಮತ್ತು ಚಪ್ಪಲಿಗಳನ್ನು ಧರಿಸಬೇಕು. ಅಭ್ಯರ್ಥಿಗಳು ಪೂರ್ಣ ತೋಳಿನ ಬಟ್ಟೆ, ಶೂಗಳು ಅಥವಾ ಆಭರಣಗಳನ್ನು ಧರಿಸುವಂತಿಲ್ಲ. ಎಲೆಕ್ಟ್ರಾನಿಕ್ಸ್ ವಸ್ತುಗಳು, ಮೊಬೈಲ್ ಫೋನ್‌ಗಳು, ಸ್ಮಾರ್ಟ್‌ವಾಚ್‌ಗಳು, ಕ್ಯಾಲ್ಕುಲೇಟರ್‌ಗಳು, ವ್ಯಾಲೆಟ್‌ಗಳು ಮತ್ತು ಆಹಾರದ ಪ್ಯಾಕೆಟ್‌ಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಕೇಂದ್ರ ಸೂಪರಿಂಟೆಂಡೆಂಟ್‌ಗಳು ಮತ್ತು ಇನ್ವಿಜಿಲೇಟರ್‌ಗಳನ್ನು ನೇಮಿಸಲಾಗಿದೆ. ಮರು ಪರೀಕ್ಷೆ ಸುಗಮ ಮತ್ತು ನ್ಯಾಯಯುತವಾಗಿ ನಡೆಯುವುದನ್ನ ಖಚಿತಪಡಿಸಿಕೊಳ್ಳಲು ಪೊಲೀಸ್ ಮತ್ತು ಜಿಲ್ಲಾಡಳಿತ ಅಧಿಕಾರಿಗಳು ಸೇರಿದಂತೆ 2 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿದೆ ಎಂದು ಎನ್‌ಟಿಎ ತಿಳಿಸಿದೆ.

ಜನೌಷಧಿ ಕೇಂದ್ರದಲ್ಲಿ ಇತರೆ ವಸ್ತು ಮಾರಾಟ: ಪರಿಶೀಲನೆ

◆**ಬೆಂಗಳೂರು:** ಜನೌಷಧಿ ಕೇಂದ್ರಗಳಲ್ಲಿ ಔಷಧಿಗಳ ಹೊರತಾಗಿ ಇತರೆ ವಸ್ತುಗಳ ಮಾರಾಟ ನಡೆಯುತ್ತಿರುವ ಕುರಿತು ದೂರುಗಳು ಬಂದಿರುವ ಹಿನ್ನೆಲೆಯಲ್ಲಿ, ಅವುಗಳ ಕಾರ್ಯವೈಖರಿ ಹಾಗೂ ಸಮಸ್ಯೆಗಳ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲು ಆರೋಗ್ಯ ಇಲಾಖೆ ಅಧಿಕಾರಿಗಳ ತಂಡ ಮುಂದಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಜನೌಷಧಿ ಕೇಂದ್ರಗಳಲ್ಲಿ ಮಾರಾಟವಾಗುತ್ತಿರುವ ಔಷಧಿಗಳ ಗುಣಮಟ್ಟ, ಅವುಗಳಿಗೆ ಸರ್ಕಾರದ ದೃಢೀಕರಣ ಸೇರಿದಂತೆ ವಿವಿಧ ಅಂಶಗಳನ್ನು ಪರಿ ಶೀಲಿಸಲಾಗುವುದು ಎಂದರು. ಇದು ಯಾವುದೇ ರೀತಿಯ ದಾಳಿ ಅಲ್ಲ. ಕೇಂದ್ರಗಳ ಕಾರ್ಯನಿರ್ವಹಣೆ ಮತ್ತು ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಅಧಿಕಾರಿಗಳು ಭೇಟಿ ನೀಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದರು. ಮತ್ತೊಂದೆಡೆ ಸಮಯಕ್ಕೆ ಸರಿಯಾಗಿ ಔಷಧಿ ಸಂಗ್ರಹ ದೊರೆಯುತ್ತಿಲ್ಲ ಎಂಬ ಸಮಸ್ಯೆಯನ್ನು ಕೇಂದ್ರಗಳ ಮಾಲೀಕರು ತಮ್ಮ ಗಮನಕ್ಕೆ ತಂದಿದ್ದಾರೆ ಎಂದು ಸಚಿವರು ತಿಳಿಸಿದರು.

ಕಲಬುರಗಿಯಲ್ಲೇ ಅತಿ ಹೆಚ್ಚು ಕಟ್ಟಡ ದುರವಸ್ಥೆ | ಜೀವ ಭಯದ ನಡುವೆ ಪಾಠ ಕೇಳುವ ವಿದ್ಯಾರ್ಥಿಗಳು
ಶಿಥಿಲಾವಸ್ಥೆಯಲ್ಲಿ ಕಲ್ಯಾಣದ 16,727 ಸರ್ಕಾರಿ ಶಾಲಾ ಕೊಠಡಿಗಳು

▸ ರಾಚಪ್ಪಾ ಜಂಬಗಿ

ದಿಗಂತ ವಿಶೇಷ

◆**ಕಲಬುರಗಿ:** ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಕುರಿತು ಸರ್ಕಾರಗಳು ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿರುವಾಗಲೇ, ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳ ಮೂಲಸೌಕರ್ಯದ ದುಸ್ಥಿತಿ ಆತಂಕಕಾರಿ ಚಿತ್ರಣ ತೆರೆದಿಟ್ಟಿದೆ.

ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನ ಕಲಬುರಗಿ ಸೇರಿದಂತೆ ಭಾಗದ ಏಳು ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮೈನರ್, ಮೇಜರ್ ಸೇರಿ ಒಟ್ಟು 16,727 ಶಾಲಾ ಕೊಠಡಿಗಳು ಶಿಥಿಲಾವಸ್ಥೆಗೆ ತಲುಪಿದ್ದು, ಸಾವಿರಾರು ವಿದ್ಯಾರ್ಥಿಗಳು ಜೀವಭಯದ ನಡುವೆ ಪಾಠ ಕೇಳುವಂತಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ,ಬೀದರ್, ಯಾದಗಿರಿ, ರಾಯಚೂರು,ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಸೇರಿದಂತೆ ಏಳು ಜಿಲ್ಲೆಗಳಲ್ಲಿ 8,492 ಶಾಲಾ ಕೊಠಡಿಗಳು ದೊಡ್ಡ ಪ್ರಮಾಣದಲ್ಲಿ ರಿಪೇರಿ ಆಗತ್ಯವಿರುವ ಸ್ಥಿತಿಯಲ್ಲಿದ್ದರೆ, 8,235 ಕೊಠಡಿಗಳು ಸಣ್ಣ ಪ್ರಮಾಣದ ರಿಪೇರಿ ಆಗತ್ಯವಿರುವ ಸ್ಥಿತಿಯಲ್ಲಿವೆ.

ಮಳೆಗಾಲ ಆರಂಭವಾಗಿರುವ ಈ ಸಂದರ್ಭದಲ್ಲಿ ಶಾಲೆಗಳ ಮೇಲ್ಛಾವಣಿ ಸೋರುವುದು, ಗೋಡೆಗಳಲ್ಲಿ ಬಿರುಕು ಕಾಣಿಸಿಕೊಳ್ಳುವುದು, ಪ್ಲಾಸ್ಟರ್ ಉದುರುವುದು ಹಾಗೂ ಕೆಲವೆಡೆ ಕಟ್ಟಡಗಳು ಕುಸಿಯುವ ಭೀತಿ ಎದುರಾಗಿರುವುದು ಪೋಷಕರು ಮತ್ತು ಶಿಕ್ಷಕರಲ್ಲಿ ಆತಂಕ ಮೂಡಿಸಿದೆ.

ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತ ಕಚೇರಿ ಕಲಬುರಗಿ ವಿಭಾಗ ನೀಡಿದ ಮಾಹಿತಿಯಂತೆ ಜಿಲ್ಲಾವಾರು ಶಿಥಿಲ ಶಾಲಾ ಕೊಠಡಿಗಳ ಸಂಖ್ಯೆ ಗಮನಿಸಿದಾಗ ಕಲಬುರಗಿ-2,838 ಮೈನರ್, 2,039 ಮೇಜರ್ ಆಗಿ ಶಿಥಿಲಗೊಂಡಿವೆ. ಅದೇ ರೀತಿ ಬೀದರ್-1,192-1,097, ಯಾದಗಿರಿ-720-969, ಕೊಪ್ಪಳ-1,009-846, ರಾಯಚೂರ-978-1,342, ವಿಜಯನಗರ -819 -1,148, ಬಳ್ಳಾರಿ-679 -1,051 ಶಾಲಾ ಕೊಠಡಿಗಳು ಶಿಥಿಲಾವಸ್ಥೆಯಲ್ಲಿವೆ. ಈ ಪೈಕಿ ಕಲಬುರಗಿ ಜಿಲ್ಲೆಯಲ್ಲೇ ಅತಿ ಹೆಚ್ಚು ಶಿಥಿಲ ಶಾಲಾ ಕೊಠಡಿಗಳನ್ನು ಹೊಂದಿರುವ ಜಿಲ್ಲೆ ಎಂಬುದು ಅಂಕಿ-ಅಂಶಗಳಿಂದ ಸ್ಪಷ್ಟವಾಗಿದೆ.

ಕೋಟ್ಯಂತರ ಅನುದಾನ ಎಲ್ಲಿಗೆ? ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಪ್ರತಿ ವರ್ಷ ಸಾವಿರಾರು ಕೋಟಿ ರೂಪಾಯಿ ಮೀಸಲಿಡುತ್ತಿದ್ದರೂ, ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅಕ್ಷರ ಆವಿಷ್ಕಾರ ಯೋಜನೆಯಡಿ ಅನುದಾನದ ಶೇ.25% ಹಣ ಶಿಕ್ಷಣಕ್ಕಾಗಿ ಮೀಸಲಿಟ್ಟರೂ ಶಾಲಾ ಮೂಲಸೌಕರ್ಯಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಎಂಬುದು ಮೇಲಿನ ಅಂಕಿ ಅಂಶಗಳಿಂದಲೇ ಕಂಡುಬರುತ್ತಿದೆ.

ಜಿಲ್ಲೆಯಲ್ಲಿಯೇ ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಸ್ವಕ್ಷೇತ್ರವಾದ ಚಿತ್ತಾಪುರ ತಾಲೂಕಿನಲ್ಲಿ ಅತಿ ಹೆಚ್ಚು ಶಿಥಿಲ ಶಾಲಾ ಕೊಠಡಿಗಳು ಕಂಡುಬಂದಿದ್ದು, 764 ಮೈನರ್ ಹಾಗೂ 727 ಮೇಜರ್ ರಿಪೇರಿ ಅಗತ್ಯವಿರುವ ಕೊಠಡಿಗಳು ದಾಖಲಾಗಿವೆ.



ತಾಲೂಕು	ಸಣ್ಣ ಪ್ರಮಾಣ	ದೊಡ್ಡ ಪ್ರಮಾಣ
ಆಳಂದ	427	340
ಅಫಜಲಪುರ	506	210
ಚಿಂಚೋಳಿ	223	293
ಚಿತ್ತಾಪುರ	764	727
ಕಲಬುರಗಿ ದಕ್ಷಿಣ	150	158
ಜೇವರ್ಗಿ	275	317
ಸೇಡಂ	216	245
ಕಲಬುರಗಿ ಉತ್ತರ	135	209
ಒಟ್ಟು 2696 ಸಣ್ಣ ಪ್ರಮಾಣದಲ್ಲಿ, 2499 ದೊಡ್ಡ ಪ್ರಮಾಣದಲ್ಲಿ ಕೊಠಡಿ ಶಿಥಿಲಗೊಂಡಿವೆ		

> ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಸಮಗ್ರ ಸಮೀಕ್ಷೆ ನಡೆಸಿ ಅಪಾಯಕಾರಿ ಕಟ್ಟಡಗಳನ್ನು ತಕ್ಷಣ ತೆರವುಗೊಳಿಸುವುದು ಹಾಗೂ ಹೊಸ ಕೊಠಡಿಗಳ ನಿರ್ಮಾಣಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಮಕ್ಕಳ ಸುರಕ್ಷತೆ ಹಾಗೂ ಗುಣಮಟ್ಟದ ಶಿಕ್ಷಣಕ್ಕಾಗಿ ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡಬೇಕಿದೆ. ಮಕ್ಕಳ ಭವಿಷ್ಯ ರೂಪುಗೊಳ್ಳಬೇಕಾದ ಶಾಲೆಗಳು ಇಂದು ಶಿಥಿಲ ಕಟ್ಟಡಗಳ ನೆರಳಿನಲ್ಲಿ ನಿಂತಿರುವುದು ಶಿಕ್ಷಣ ವ್ಯವಸ್ಥೆಯ ಕಹಿ ವಾಸ್ತವವಾಗಿದೆ.
> ■ ಎಂ.ಎಸ್.ಪಾಟೀಲ ನರಿಬೋಳ, ಅಧ್ಯಕ್ಷ, ಕಲ್ಯಾಣ ಕರ್ನಾಟಕ ಪ್ರತ್ಯೇಕ ಹೋರಾಟ ಸಮಿತಿ

> ಕ.ಕ.ಭಾಗದಲ್ಲಿ ಒಟ್ಟು 8,235 ಶಾಲಾ ಕೊಠಡಿಗಳು ಮೈನರ್ ಆಗಿ ಹಾಗೂ 8492 ಕೊಠಡಿ ಮೇಜರ್ ಆಗಿ ಶಿಥಿಲಾವಸ್ಥೆಯಲ್ಲಿದ್ದು, ಎಲ್ಲಾ ಉಪ ನಿರ್ದೇಶಕರಿಂದ ಕ್ರಿಯಾ ಯೋಜನೆ ತರಿಸಿಕೊಂಡು ಸರ್ಕಾರಕ್ಕೆ ಹಾಗೂ ಸಂಬಂಧಪಟ್ಟ ಶಿಕ್ಷಣ ಇಲಾಖೆಗೆ ದುರಸ್ತಿ ಕಾರ್ಯಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಂತ ಹಂತಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ದುರಸ್ತಿ ಕಾರ್ಯ ನಡೆಯುತ್ತಿದೆ.
> ■ ಗಣಪತಿ ಬಾರಾಕಟ್ಟಿ, ಸಹ ನಿರ್ದೇಶಕ, ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಾರ್ಯಾಲಯ, ಕಲಬುರಗಿ ವಿಭಾಗ

ವಿಜಯಪುರದಲ್ಲಿ ಶಾಲಾ ಕಟ್ಟಡದ ಮೇಲ್ಛಾವಣಿ ಕುಸಿತ

◆**ವಿಜಯಪುರ:** ತಾಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ ಹೊಂದಿಕೊಂಡಿದ್ದ ಶಿಥಿಲಗೊಂಡಿದ್ದ ಕಟ್ಟಡದ ಕ್ಲಾಸ್ ರೂಮ್‌ನ ಮೇಲ್ಛಾವಣಿ ಶುಕ್ರವಾರ ರಾತ್ರಿ ಕುಸಿದು ಬಿದ್ದು ಗ್ರಾಮದಲ್ಲಿ ಆತಂಕ ಮೂಡಿಸುವಂತೆ ಮಾಡಿದೆ. ಈ ಕಟ್ಟಡದಲ್ಲಿ ಶಾಲಾ ತರಗತಿಗಳು ನಡೆಯುತ್ತಿರಲಿಲ್ಲ. ಈ ಕಟ್ಟಡದ ಮೇಲ್ಛಾವಣಿ ಏಕಾಏಕಿ ಕಿತ್ತು ಬಿದಿದ್ದು, ಯಾವುದೇ ರೀತಿಯ ಹಾನಿಯಾಗಿಲ್ಲ.

ಇಂದು ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಲೋಕಾರ್ಪಣೆ

ಬೆಳಗಾವಿ: ನಗರದ ಸಂಘ ಸದನ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಶ್ರೀ ಜಗನ್ನಾಥರಾವ್ ಜೋಶಿ ಸ್ಮಾರಕ ಭವನ ಭಾನುವಾರ ಅದ್ದೂರಿಯಾಗಿ ಲೋಕಾರ್ಪಣೆಗೊಳ್ಳಲಿದೆ.

ಕಾರ್ಯಕ್ರಮಕ್ಕೆ ಪ.ಪೂ. ಶ್ರೀ ಮ.ನಿ.ಪ್ರ.ಗುರುಸಿದ್ದ ಮಹಾಸ್ವಾಮಿಗಳು, ಕಾರಂಜಿಮಠದ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನೇತೃತ್ವದಲ್ಲಿ ಸ್ಮಾರಕ ಭವನವನ್ನು ಲೋಕಾರ್ಪಣೆಗೊಳಿಸಲಿದ್ದಾರೆ.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಂಘಚಾಲಕರಾದ ಬಸವರಾಜ ಡಂಬಳ ವಹಿಸಲಿದ್ದು, ಜನ ಕಲ್ಯಾಣ ಟ್ರಸ್ಟ್‌ನ ನಿರ್ವಾಹಕ ವಿಶ್ವಸ್ಥ ಅರವಿಂದರಾವ್ ದೇಶಪಾಂಡೆ ಅವರು ಸರ್ವ ಜನತೆಗೆ ಆತ್ಮೀಯ ಸ್ವಾಗತ ಕೋರಿದ್ದಾರೆ.

ಲೋಕಾರ್ಪಣೆ ಸಮಾರಂಭದ ಹಿನ್ನೆಲೆಯಲ್ಲಿ ಸ್ಮಾರಕ ಭವನವನ್ನು ಮಧುವಣಗಿತ್ತಿಯಂತೆ ಅಲಂಕರಿಸಲಾಗಿದ್ದು, ಇಡೀ ಪ್ರದೇಶ ಹಬ್ಬದ ವಾತಾವರಣವನ್ನು ಪಡೆದುಕೊಂಡಿದೆ. ಸಂಘ ಪರಿವಾರದ ಪದಾಧಿಕಾರಿಗಳು, ಬಿಜೆಪಿ ಮುಖಂಡರು, ಕಾರ್ಯಕರ್ತರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಜನರು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ನಗರದ ಪ್ರಮುಖ ಕಾರ್ಯಕ್ರಮವಾಗಿ ಗಮನ ಸೆಳೆದಿರುವ ಈ ಲೋಕಾರ್ಪಣೆ ಸಮಾರಂಭಕ್ಕೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗಿದೆ.



ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಮುಂಬೈನ ಪ್ರಸಿದ್ಧ ಸಿದ್ಧಿ ವಿನಾಯಕ ದೇಗುಲಕ್ಕೆ ಶನಿವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ತಿಂಗಳಲ್ಲಿ ಕಾಮಗಾರಿ ಮುಗಿಸಿ: ಖಂಡ್ರೆ

ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿ ಅಪೂರ್ಣವಾಗಿರುವ ಸಮುದಾಯ ಶೌಚಾಲಯಗಳ ಕಾಮಗಾರಿಯನ್ನು 1 ತಿಂಗಳಲ್ಲಿ ಪೂರ್ಣಗೊಳಿಸುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಕೆಆರ್‌ಐಡಿಎಲ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಶನಿವಾರ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಪ್ರಗತಿ ಪರಿಶೀಲನೆ ನಡೆಸಿದ ಅವರು, ಶೌಚಾಲಯ ನಿರ್ಮಾಣ ಕಾಮಗಾರಿಯಲ್ಲಿ ಅನಗತ್ಯ ವಿಳಂಬಕ್ಕೆ ಅವಕಾಶ ನೀಡದಂತೆ ಸೂಚಿಸಿದರು. ಕೆಆರ್‌ಐಡಿಎಲ್ ಕೈಗೊಳ್ಳುವ ಕಾರ್ಯದಲ್ಲಿ ಸೇವೆ, ನಿಷ್ಠೆ ಮತ್ತು ದಕ್ಷತೆಯನ್ನು ಕಾಪಾಡಿಕೊಳ್ಳಿ ಎಂದ ಅವರು, ವಿದ್ಯಾರ್ಥಿ ನಿಲಯ, ಸೇತುವೆ, ರಸ್ತೆ, ಚರಂಡಿ, ಸಮುದಾಯ ಭವನ, ಕ್ರೀಡಾಂಗಣ, ಬಸ್ ನಿಲ್ದಾಣ ಮೊದಲಾದ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು, ದೀರ್ಘಕಾಲ ಬಾಳಿಕೆ ಬರಬೇಕು. ಜನ ಮೆಚ್ಚುಗೆಗೆ ಪಾತ್ರವಾಗಬೇಕು ಎಂದರು.

ಅರ್ಧಕ್ಕೆ ನಿಂತ ಕಾಮಗಾರಿ ಪೂರ್ಣಗೊಳಿಸಲು ಸೂಚನೆ: ಈ ನಿಗಮದಿಂದ ಕೈಗೊಳ್ಳುವ ಯಾವುದೇ ಕಾಮಗಾರಿ ಅರ್ಧಕ್ಕೆ ನಿಲ್ಲುವಂತಾಗಬಾರದು, ಆ ಯೋಜನೆಗೆ ಅಗತ್ಯವಾದ ಹಣ, ಅನುಮತಿ ಎಲ್ಲವನ್ನೂ ಖಾತ್ರಿ ಪಡಿಸಿಕೊಂಡು ಕಾಮಗಾರಿ ಆರಂಭಿಸಬೇಕು ಎಂದು ತಿಳಿಸಿದ ಸಚಿವರು, ಇತರ ಇಲಾಖೆಗೆ ಸೇರಿದ ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದರೆ ಅವರಿಗೆ ಪತ್ರ ಬರೆದು, ಹಣ ಬಿಡುಗಡೆ ಮಾಡಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು. ಕೆಆರ್‌ಐಡಿಎಲ್‌ನಿಂದ ಕೈಗೊಳ್ಳುವ ಎಲ್ಲ ಕಾಮಗಾರಿಗಳ ಗುಣಮಟ್ಟವನ್ನು ಮೂರನೇ ವ್ಯಕ್ತಿಯಿಂದ ಮೌಲ್ಯಮಾಪನ ಮಾಡಿಸಬೇಕು ಎಂದು ತಿಳಿಸಿದರು.

ಖಾಲಿ ಹುದ್ದೆಗಳ ಭರ್ತಿಗೆ ಸೂಚನೆ

ಕೆಆರ್‌ಐಡಿಎಲ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆಯ ಅನುಮೋದನೆ ಪಡೆದು, ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಹಾಗೂ ಮೌಖಿಕ ಸಂದರ್ಶನ ಇರುವ ಹುದ್ದೆಗಳ ನೇಮಕಾತಿಯನ್ನು ಯುಪಿಎಸ್‌ಸಿಗೆ ವಹಿಸುವಂತೆ ಸೂಚಿಸಿದರು.

ಕಿರುಸುದ್ದಿ

ಮಹಿಳಾ ಮೀಸಲಾತಿ ಅಧಿವೇಶನದಲ್ಲಿ ಚರ್ಚೆ

ಚಿತ್ರದುರ್ಗ: ಮುಂಬರುವ ಸಂಸತ್ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯು ಅಧಿಕೃತವಾಗಿ ಅಂಗೀಕಾರಗೊಳ್ಳಲಿದೆ ಎಂದು ಸಂಸದ ಗೋವಿಂದ ಎಂ. ಕಾರಜೋಳ ಈ ವೇಳೆ ವಿಶ್ವಾಸ ವ್ಯಕ್ತಪಡಿಸಿದರು. ನಗರದ ಎಸ್‌ಜೆಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಸಿವಿಲ್ ವಿಭಾಗದ ಸರ್.ಎಂ.ವಿ. ಸೆಮಿನಾರ್ ಹಾಲ್‌ನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ಈ ಕ್ರಾಂತಿಕಾರಿ ಕಾಯ್ದೆಯಿಂದಾಗಿ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ದೊರೆಯಲಿದ್ದು, ಸಂಸತ್ತಿನಲ್ಲಿ ಅವರ ಪ್ರಾತಿನಿಧ್ಯವು ಹೆಚ್ಚೂಕಡಿಮೆ ಶೇ.50ರಷ್ಟಕ್ಕೆ ಏರಿಕೆಯಾಗಲಿದೆ. ಇದು ಲಿಂಗಭೇದದ ವಿರುದ್ಧ ಬಸವಣ್ಣನವರ ಕಾಲದಿಂದಲೂ ನಡೆದುಕೊಂಡು ಬಂದಿದ್ದ ಸುದೀರ್ಘ ಹೋರಾಟಕ್ಕೆ ಸಿಕ್ಕ ದೊಡ್ಡ ಜಯವಾಗಲಿದೆ ಎಂದು ಬಣ್ಣಿಸಿದರು.

ಲೈಂಗಿಕ ದೌರ್ಜನ್ಯ: ಶಿಕ್ಷಕರ ವಿರುದ್ಧ ದೂರು ದಾಖಲು

ಕಡೂರು: ಮೂವರು ಅಪ್ರಾಪ್ತ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದ ಮೇಲೆ ಶಾಲೆಯ ಶಿಕ್ಷಕರ ವಿರುದ್ಧ ತಾಲೂಕಿನ ಯಗಟಿ ಪೊಲೀಸ್ ಠಾಣೆ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ದೂರು ದಾಖಲಾಗಿದೆ. ಸಹ ಶಿಕ್ಷಕ ನಾಗರಾಜಪ್ಪ ಪ್ರಕರಣದ ಮೊದಲ ಆರೋಪಿಯಾಗಿದ್ದು, ಮುಖ್ಯ ಶಿಕ್ಷಕ ಲೋಕೇಶಪ್ಪ ಎರಡನೇ ಆರೋಪಿಯಾಗಿದ್ದಾರೆ. ಶಿಕ್ಷಕ ನಾಗರಾಜಪ್ಪ ಮೂವರು ವಿದ್ಯಾರ್ಥಿನಿಯರ ಬಳಿ ಅಸಭ್ಯವಾಗಿ ವರ್ತಿಸಿದ್ದಲ್ಲದೆ ವಿದ್ಯಾರ್ಥಿನಿಯರು ಶಾಲೆಗೆ ಮೊಬೈಲ್ ತರುವಂತೆ ಹೇಳಿ ಅವರ ಮೊಬೈಲ್‌ಗಳಿಗೆ ಅಶ್ಲೀಲ ವಿಡಿಯೋಗಳನ್ನು ಕಳುಹಿಸಿದ್ದಾನೆ. ಒಬ್ಬ ವಿದ್ಯಾರ್ಥಿನಿ ಬಳಿ ಅಶ್ಲೀಲದ ಮಾತುಗಳನ್ನಾಡಿದ್ದಾನೆ. ಈ ಬಗ್ಗೆ ವಿದ್ಯಾರ್ಥಿನಿ ಮುಜುಗರಕ್ಕೆ ಒಳಗಾದಾಗ ಈ ವಿಷಯವನ್ನು ಯಾರಿಗೂ ಹೇಳದಂತೆ ದೇವರ ಮೇಲೆ ಆಣೆ ಪ್ರಮಾಣ ಮಾಡಿಸಿಕೊಂಡಿದ್ದಾನೆ. ಈ ಘಟನೆಯಿಂದ ವಿದ್ಯಾರ್ಥಿನಿಯರು ಶಾಲೆಗೆ ಹೋಗಲು ಹಿಂದೇಟು ಹಾಕಿದ್ದಾರೆ. ಬಳಿಕ ಪೋಷಕರು ತಮ್ಮ ಮಕ್ಕಳು ಆತಂಕದಲ್ಲಿದ್ದ ಪರಿಸ್ಥಿತಿಯನ್ನು ಗಮನಿಸಿ ವಿಚಾರಿಸಿದಾಗ ಶಿಕ್ಷಕನ ಅನುಚಿತ ವರ್ತನೆಯ ವಿಷಯ ಬೆಳಕಿಗೆ ಬಂದಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ತಿಮ್ಮಯ್ಯ ಇಬ್ಬರ ವಿರುದ್ಧ ದೂರು ನೀಡಿದ್ದಾರೆ. ಠಾಣೆಯಲ್ಲಿ ಪ್ರಕರಣ ದಾಖಲುಗೊಂಡ ಹಿನ್ನೆಲೆಯಲ್ಲಿ ಶನಿವಾರ ಡಿವೈಎಸ್ಪಿ ಪರಶುರಾಮಪ್ಪ, ಯಗಟಿ ಪಿಎಸ್ಐ ಶಾಹಿದ್ ಅಫ್ರಿದಿ ಹಾಗೂ ಸಿಬ್ಬಂದಿ ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಮಹಜರು ಪ್ರಕ್ರಿಯೆ ನಡೆಸಿ ಇಬ್ಬರು ಆರೋಪಿತ ವ್ಯಕ್ತಿಗಳನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದರು.

ಕಾಂಗ್ರೆಸ್‌ನಿಂದ ರಾಜಕೀಯ ಭ್ರಷ್ಟಾಚಾರ: ಬೊಮ್ಮಾಯಿ

ಹಾವೇರಿ: ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಆಗಿರುವುದು ಅತ್ಯಂತ ಆಘಾತಕಾರಿ ಹಾಗೂ ದುರ್ದೈವದ ಸಂಗತಿ. ಕಾಂಗ್ರೆಸ್ ರಾಜಕೀಯ ಭ್ರಷ್ಟಾಚಾರ ನಡೆಸಿದ್ದು, ಬಹಳ ದೊಡ್ಡ ಪ್ರಮಾಣದ ಹಣ ಖರ್ಚು ಮಾಡಿದ್ದಾರೆ. ಹಣದ ಆಮಿಷಕ್ಕೆ ನಮ್ಮ ಕೆಲವು ಶಾಸಕರು ಬಲಿಯಾಗಿರುವುದು ನಿಜ. ಈ ಕುರಿತು ಪಕ್ಷದ ನೇಮಿಸಿರುವ ಸಮಿತಿ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗು ವುದು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಆಗಬಾರದಿತ್ತು. ಅಡ್ಡ ಮತದಾನದ ಕುರಿತು ತನಿಖೆ ನಡೆಸಿ ಅದರ ವರದಿಯನ್ನು ಹೈಕಮಾಂಡ್‌ಗೆ ಕಳಿಸುವುದಾಗಿ ವಿಪಕ್ಷ ನಾಯಕರು, ಹಾಗೂ ರಾಜ್ಯಾಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಆದರ ವರದಿ ಒಂದು ವಾರದಲ್ಲಿ ತರಿಸಿಕೊಂಡು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ತಗೆದುಕೊಳ್ಳಲಾಗುತ್ತದೆ ಎಂದು ಹೇಳಿದರು.

ಬಿಡದಿ ಪ್ರದೇಶ ರೆಡ್ ಜೋನ್ ಘೋಷಣೆ: ಶಿವಕುಮಾರ್ ತಿರುಗೇಟು

ಎಚ್ಡಿಕೆ ಟೌನ್‌ಶಿಪ್ ಜನಕ

ಬೆಂಗಳೂರು: ಬಿಡದಿಯ ರೈತರು ಒಳ್ಳೆಯವರು, ಅವರನ್ನು ದಾರಿ ತಪ್ಪಿಸಲಾಗುತ್ತಿದೆ. ಬಿಡದಿ ಟೌನ್‌ಶಿಪ್ ಯೋಜನೆಯ ಪಿತಾಮಹ ಕುಮಾರಸ್ವಾಮಿ ಅವರೇ ಅಲ್ಲವೇ? ಇದನ್ನು ಅವರೇ ಒಪ್ಪಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸಚಿವ ಸಂಪುಟ ಸಭೆಯ ಬಳಿಕ ಶನಿವಾರ ವಿಧಾನಸೌಧದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಪ್ರತಿಕ್ರಿಯೆ ನೀಡಿದರು. ಈ ಹಿಂದೆ ಕುಮಾರಸ್ವಾಮಿ ಅವರೇ ರೈತರಿಗೆ ಪರಿಹಾರವಾಗಿ ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಶೇ.40 ಕೊಡುತ್ತೇನೆಂದು ಹೇಳಿದ್ದರು. ನಾವು ಶೇ.50 ರಷ್ಟು ಭೂಮಿ ನೀಡುವು ದಾಗಿ ಹೇಳಿದ್ದೇವೆ. ರೈತರಿಗೆ ಒಂದು ಎಕರೆಗೆ 2.50 ಕೋಟಿ ರೂ. ಪರಿಹಾರ ನೀಡುವ ಕೆಲಸ ಶುಕ್ರವಾರ ಆರಂಭವಾಗಿದೆ ಎಂದು ತಿಳಿಸಿದರು.

ಕುಮಾರಸ್ವಾಮಿ ಅವರು ನೋಟಿಫಿಕೇಶನ್ ಮಾಡಿದ್ದರು. ಯಡಿಯೂರಪ್ಪ ಅವರು ಈ ಯೋಜನೆ ಮುಂದುವರೆಸಿದ್ದರು. ಅದನ್ನು ನಾವು ಇನ್ನಷ್ಟು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆಯೇ ಹೊರತು ಹೊಸದಾಗಿ ನಾವೇನೂ ಮಾಡುತ್ತಿಲ್ಲ.

ಬಿಡದಿ ಕೈಗಾರಿಕಾ ಪ್ರದೇಶಕ್ಕೆ ಭೂಸ್ವಾಧೀನ ಮಾಡಿ ದವರು ಯಾರು? ಈಗಿರುವ 9 ಸಾವಿರ ಎಕರೆಯಲ್ಲಿ 1 ಸಾವಿರ ಎಕರೆಯನ್ನು ಬಿಜೆಪಿಯ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಸ್ವಾಧೀನ ಮಾಡಿಕೊಡ ಲಿಲ್ಲವೇ? ಎಂದು ಪ್ರಶ್ನಿಸಿದರು.



ನಾನು ಜೈಲಿಗೆ ಹೋಗಲು ಸಿದ್ಧನಿಲ್ಲ: ಪ್ರತಿಪಕ್ಷದವರು ರಾಜಕೀಯಕ್ಕಾಗಿ ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧ ಮಾಡುತ್ತಿದ್ದಾರೆ. ಹೊಸ ಕೈಗಾರಿಕೆಗಳು ಬರಬೇಕು ಎಂದು ಹೇಳುತ್ತಾರೆ.

ಕೇಂದ್ರ ಬೃಹತ್ ಕೈಗಾರಿಕಾ ಸಚಿವರೇ ಎಲ್ಲಿಂದ ಜಮೀನು ತೆಗೆದುಕೊಡಲಿ ಎಂದು ಹೇಳಿದ್ದಾರೆ. ಹೀಗಿರುವಾಗ ಬಿಡದಿ ಜಮೀನನ್ನು ಡಿನೋಟಿಫಿಕೇಶನ್ ಮಾಡಿ ಜೈಲಿಗೆ ಹೋಗಲು ನಾನು ಸಿದ್ಧನಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು.

ಬಿಡದಿ ಪ್ರದೇಶವನ್ನು ರೆಡ್ ಜೋನ್ ಎಂದು ಕುಮಾರಸ್ವಾಮಿ ಅವರು ಏಕೆ ಘೋಷಣೆ ಮಾಡಿದರು ಎಂದು ಅವರು ಮೊದಲು ತಿಳಿಸಲಿ. ನೋಟಿಫಿಕೇಶನ್ ಏಕೆ ಮಾಡಿದರು ಎಂದು ಉತ್ತರಿಸಲಿ. ಯಡಿಯೂರಪ್ಪ ಅವರು ಏಕೆ ಮುಂದುವರೆಸಿದರು, ಅವರ ಕಾಲದಲ್ಲೇ ಡಿನೋಟಿಫಿಕೇಶನ್ ಮಾಡಲು ಅವರಿಗೆ ಅವಕಾಶವಿತ್ತಲ್ಲವೇ? ಯಾಕೆ ಮಾಡಲಿಲ್ಲ ಎಂದು ಕೇಳಿದರು.

ಪ್ರತಿಪಕ್ಷದವರು ರಾಜಕೀಯ ಮಾಡುತ್ತಿದ್ದಾರೆ. ಆದರೆ, ನಾನು ಇದಕ್ಕೆ ಬೇಸರ ಮಾಡಿಕೊಳ್ಳುವುದಿಲ್ಲ. ಶೇ. 80 ರಷ್ಟು ರೈತರು ಭೂಮಿ ನೀಡಲು ಮುಂದೆ ಬಂದಿದ್ದಾರೆ. ಬೇರೆಯವರು ಮುಂದೆ ಬರಲಿಲ್ಲ ಎಂದರೆ ನಾನು ಏನು ಮಾಡಲು ಸಾಧ್ಯವಿಲ್ಲ. ನಾವು ಕಾನೂನಿನ ಪ್ರಕಾರ ಹೋಗುತ್ತೇವೆ ಎಂದು ಸ್ಪಷ್ಟಪಡಿಸಿದರು.



> **ಕುಮಾರಸ್ವಾಮಿ ಅವರು ದೊಡ್ಡವರು. ಬೃಹತ್ ಕೈಗಾರಿಕಾ ಸಚಿವರು. ಅವರಿಗೆ ಕೈಗಾರಿಕೆಗಳನ್ನು ತರಬೇಕು ಎನ್ನುವ ಆಸೆಯಿದೆ. ಎಲ್ಲಿಗೆ ಕೈಗಾರಿಕೆಗಳನ್ನು ತರಬೇಕು, ಹೇಗೆ ತರಬೇಕು, ಯಾರ ಜಮೀನಿನಲ್ಲಿ ತರಬೇಕು ಎಂದು ಅವರೇ ಉತ್ತರ ಹೇಳಬೇಕು.**
> ■ ಡಿ.ಕೆ. ಶಿವಕುಮಾರ್, ಸಿಎಂ

ಸಂಸದ ಕೋಟ ಶ್ರೀನಿವಾಸ ಪೂಜಾರಿ ಆರೋಪ

ಕೇಂದ್ರ ಯೋಜನೆ ಜಾರಿಗೆ ತರಲು ಸರ್ಕಾರ ವಿಫಲ

ಉಡುಪಿ: ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿದೆಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಗಂಭೀರ ಆರೋಪ ಮಾಡಿದರು.



ಕಡಿಯಾಳಿಯ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಉಜ್ವಲ ಯೋಜನೆಯಡಿ 12 ಕೋಟಿಗೂ ಅಧಿಕ ಅಡುಗೆ ಮನೆಗಳಿಗೆ ಗ್ಯಾಸ್ ಸಂಪರ್ಕ, ಶೌಚಾಲಯ ನಿರ್ಮಾಣ ಹಾಗೂ ಗ್ರಾಮೀಣ ಭಾಗಕ್ಕೆ ಕುಡಿಯುವ ನೀರು ಕಲ್ಪಿಸುವ ಜಲಜೀವನ್ ಮಿಷನ್ ಯೋಜನೆಗೆ 75 ಸಾವಿರ ಕೋಟಿ ರೂಪಾಯಿ ವಿನಿಯೋಗಿಸಲಾಗಿದೆ ಎಂದರು. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ 12 ಕೋಟಿ ರೈತ ಕುಟುಂಬಗಳ ಖಾತೆಗೆ ವಾರ್ಷಿಕ 6 ಸಾವಿರ ರೂಪಾಯಿಯಂತೆ ಈಗಾಗಲೇ 23 ಕಂತುಗಳಲ್ಲಿ ಒಟ್ಟು 3 ಲಕ್ಷದ 44 ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಆದರೆ, ಈ ಹಿಂದೆ ರಾಜ್ಯ ಸರ್ಕಾರ ನೀಡುತ್ತಿದ್ದ 4 ಸಾವಿರ ರೂಪಾಯಿ ಪ್ರೋತ್ಸಾಹಧನವನ್ನು ಪ್ರಸ್ತುತ ಸಿದ್ದರಾಮಯ್ಯ ಸರ್ಕಾರ ನಿಲ್ಲಿಸುವ ಮೂಲಕ ರೈತರಿಗೆ ದ್ರೋಹ ಬಗೆದಿದೆ ಎಂದು ದೂರಿದರು.

ದೇಶದಲ್ಲಿ ಶೇ. 100 ರಷ್ಟು ರೈಲ್ವೇ ವಿದ್ಯುದೀಕರಣ ಹಾಗೂ ಪ್ರತಿದಿನ ಸರಾಸರಿ 22 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ದೇಶದ 81 ಕೋಟಿ ಜನರಿಗೆ ಹಾಗೂ ರಾಜ್ಯದ 4 ಕೋಟಿ ಜನರಿಗೆ ಪ್ರತಿ ತಿಂಗಳು 22 ಲಕ್ಷ ಕೆಜಿ ಅಕ್ಕಿಯನ್ನು ಕೇಂದ್ರವೇ ಉಚಿತವಾಗಿ ಸರಬರಾಜು ಮಾಡುತ್ತಿದೆ ಎಂದರು.

ದಸರಾದಲ್ಲಿ ಈ ಬಾರಿ ಕಂಬಳ: ಲಕ್ಷ್ಮಿಕಾಂತ ರೆಡ್ಡಿ

ಮೈಸೂರು: ಇದೇ ಮೊದಲ ಬಾರಿಗೆ ವಿಶ್ವವಿಖ್ಯಾತ ನಾಡ ಹಬ್ಬ ಮೈಸೂರು ದಸರಾ ಮಹೋತ್ಸವ-2026ರಲ್ಲಿ ಕಂಬಳ ಕಾರ್ಯಕ್ರಮವನ್ನು ವಿಶೇಷ ಆಕರ್ಷಣೆಯಾಗಿ ಆಯೋಜಿಸ ಲಾಗುವುದು ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಜಿ ತಿಳಿಸಿದರು.

ಸಿದ್ಧತಾ ಸಭೆ ನಡೆಸಿ ಮಾತನಾಡಿ, ಕಳೆದ ವರ್ಷವೇ ದಸರಾದಲ್ಲಿ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಆದರೆ ಸರಿಯಾದ ಸ್ಥಳ ದೊರಕದ ಹಿನ್ನೆಲೆಯಲ್ಲಿ ಸಾಧ್ಯವಾಗಲಿಲ್ಲ ಎಂದರು. ಈ ಬಾರಿ 3 ತಿಂಗಳ ಮೊದಲೇ ಕಂಬಳ ಆಯೋಜಿಸಲು ಮೈಸೂರು ನಗರದ ವಿಜಯನಗರ ಮೊದಲನೇ ಹಂತ, ವಿಜಯನಗರ ನಾಲ್ಕನೇ ಹಂತ ಹಾಗೂ ಸಾತಗಳ್ಳಿ ರಿಂಗ್ ರೋಡ್ ರಸ್ತೆಯಲ್ಲಿ ಮೂರು ಸ್ಥಳ ಗುರುತಿಸ ಲಾಗಿದ್ದು, ಒಂದು ಸ್ಥಳವನ್ನು ಆಯ್ಕೆ ಮಾಡುವುದು ಎಂದರು.

ಕಂಬಳ ಆಯೋಜನೆಗೆ ಕನಿಷ್ಠ ಏಳು ಎಕರೆ ಸ್ಥಳ ಬೇಕಿದ್ದು, ಸ್ಥಳ ಆಯ್ಕೆ ಮಾಡುವಾಗ ಪಾರ್ಕಿಂಗ್ ವ್ಯವಸ್ಥೆ, ವೀಕ್ಷಕರ ಗ್ಯಾಲರಿ, ಕೋಣಗಳು ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಿರುವ ಸ್ಥಳವನ್ನು ನೋಡಿ ಆಯ್ಕೆ ಮಾಡಿ ಎಂದರು.

ಅಂತಾರಾಷ್ಟ್ರೀಯ ಯೋಗ ದಿನ ಇಂದು

ಬೆಂಗಳೂರು: ರಾಜ್ಯಾದ್ಯಂತ ಈ ಬಾರಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಜೂ. 21 ರಂದು ಬೆಳಗ್ಗೆ 7 ಗಂಟೆಗೆ ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಆಯೋಜಿಸಲಾಗಿದ್ದು, ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.



ಶನಿವಾರ ನಗರದ ಆರೋಗ್ಯಸೌಧದ ಸಭಾಂಗಣದಲ್ಲಿ ಮಾತನಾಡಿ, ಸುಮಾರು 2 ಸಾವಿರ ಯೋಗಸಾಧಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, 40 ನಿಮಿಷಗಳ ಯೋಗಾಭ್ಯಾಸ ನಡೆಸಲಿದ್ದಾರೆ.

2016ರಿಂದ ಕೇಂದ್ರ ಸರ್ಕಾರದ 45 ನಿಮಿಷಗಳ ಯೋಗ ಶಿಷ್ಟಾಚಾರದಂತೆ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ಬಾರಿ ಯೋಗವನ್ನು ನಿತ್ಯ ಜೀವನದ ಭಾಗವನ್ನಾಗಿಸುವ ಉದ್ದೇಶದಿಂದ ನಿತ್ಯ ಯೋಗ ಕಾರ್ಯಕ್ರಮಕ್ಕೆ ವಿಶೇಷ ಒತ್ತು ನೀಡಲಾಗಿದೆ ಎಂದು ಖಾದರ್ ಹೇಳಿದರು.

ಗ್ರಾಮೀಣ ಪ್ರದೇಶದ ಜನರು, ಮಹಿಳೆಯರು, ಮಕ್ಕಳು ಹಾಗೂ ವೃದ್ಧರಿಗೆ ಪ್ರತಿದಿನ ಯೋಗಾಭ್ಯಾಸ ಮಾಡುವಂತೆ ಉತ್ತೇಜಿಸಲು ವಿಶೇಷ ಯೋಜನೆಗಳನ್ನು ರೂಪಿಸಲಾಗಿದ್ದು, ರಾಜ್ಯ, ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಯೋಗದತ್ತ ಯುವಕರ ಆಕರ್ಷಣೆ: ಈಗಾಗಲೇ 100 ದಿನಗಳ ಕ್ಷಣಗಣನೆ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಮೈಸೂರು ಸಹಯೋಗದಲ್ಲಿ 12 ರಾಷ್ಟ್ರೀಯ ಮಟ್ಟದ ಯೋಗ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 16 ರಾಜ್ಯಗಳ 100ಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದು, ಸಾಮಾಜಿಕ ಜಾಲತಾಣಗಳ ಮೂಲಕ ಯುವಜನರನ್ನು ಯೋಗದತ್ತ ಆಕರ್ಷಿಸುವಲ್ಲಿ ಯಶಸ್ಸು ಸಾಧಿಸಲಾಗಿದೆ ಎಂದು ಹೇಳಿದರು.

ಜುಲೈ ಮೊದಲ ವಾರದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನ ಯೋಗ ರಾಷ್ಟ್ರೀಯ ವಿಚಾರ ಸಂಕಿರಣ, ಎರಡನೇ ವಾರದಲ್ಲಿ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಕಾರ್ಡಿಯೋ ಯೋಗ ಹಾಗೂ ಮೂರನೇ ವಾರದಲ್ಲಿ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಕಾರ್ಸಿನೋ ಯೋಗ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಈ ವೇಳೆ ಆರೋಗ್ಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನ ಪಾಂಡೆ, ಆಯುಕ್ತ ಗುರುದತ್ತ ಹೆಗಡೆ, ಆಯುಷ್ ಇಲಾಖೆ ಆಯುಕ್ತ ಡಾ. ಸುನೀಲ್ ಪಂವಾರ್ ಸೇರಿದಂತೆ ಇತರರಿದ್ದರು.

> **ಸಾಮಾಜಿಕ ಜಾಲತಾಣಗಳಲ್ಲಿ ಆಯೋಜಿಸಿದ್ದ 12 ವಿಶೇಷ ರಾಷ್ಟ್ರೀಯ ಸ್ಪರ್ಧೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದು, ಸರ್ಕಾರಿ ಶಾಲೆಗಳ 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯೋಗ ಕ್ವಿಜ್, ರಂಗೋಲಿ, ಪ್ರಬಂಧ, ಚಿತ್ರಕಲೆ ಹಾಗೂ ಪತಂಜಲಿ ಯೋಗ ಸೂತ್ರ ಪಾರಾಯಣ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.**
> ■ ಯು.ಟಿ.ಖಾದರ್, ಆರೋಗ್ಯ ಸಚಿವ

ಆಲಮಟ್ಟಿ ಮಟ್ಟ ಕುಸಿತ



ಆಲಮಟ್ಟಿ: ಸದಾಕಾಲವೂ ನೀರಿನಿಂದ ತುಂಬಿ ತುಳುಕುತ್ತಿದ್ದ ಏಷ್ಯಾ ಖಂಡದಲ್ಲಿಯೇ ಎರಡನೇ ದೊಡ್ಡ ಅಣೆಕಟ್ಟೆ ಎಂದು ಹೆಗ್ಗಳಿಕೆ ಪಡೆದಿರುವ ಆಲಮಟ್ಟಿ ಲಾಲ ಬಹಾದ್ದೂರ್ ಶಾಸ್ತ್ರೀ ಸಾಗರಕ್ಕೆ ಮಳೆಗಾಲ ಪ್ರಾರಂಭವಾಗಿ ತಿಂಗಳು ಕಳೆಯುತ್ತಿದ್ದರೂ ನೀರಿನ ಕೊರತೆ ಕಾಣುತ್ತಿದ್ದು, ಜಲಾಶಯದ ಹಿಂಭಾಗದಲ್ಲಿ ಸ್ವಲ್ಪ ನೀರು ಕಂಡರೂ, ಜಲಾಶಯದ ಮುಂಭಾಗವಂತೂ ಖಾಲಿ-ಖಾಲಿ. 519.60 ಮೀ ಎತ್ತರದ ಜಲಾಶಯದಲ್ಲಿ ಶನಿವಾರ 508.10 ಮೀ.ದಲ್ಲಿ 21.783 ಟಿಎಂಸಿ ನೀರು ಸಂಗ್ರಹವಿದ್ದರೂ, ಅದರಲ್ಲಿ ಡೆಡ್ ಸ್ಟೋರೇಜ್ ನೀರು 17.62 ಟಿಎಂಸಿ ಇದನ್ನು ಬಿಟ್ಟು ಬಳಕೆಗೆ ಯೋಗ್ಯ ನೀರು 4.163 ಟಿಎಂಸಿ ಮಾತ್ರ ಇದೆ. ಕಳೆದ ವರ್ಷ ಇದೇ ದಿನದಂದು 515.55 ಮೀ 68.343 ಟಿಎಂಸಿ. ಒಳಹರಿವು 70,440 ಕ್ಯೂಸೆಕ್ ಇದ್ದರೆ ಹೊರಹರಿವು 70,440 ಕ್ಯೂಸೆಕ್ ಲಭ್ಯವಿತ್ತು ಎನ್ನುತ್ತವೆ ಕೆಬಿಜೆನ್ನೆಲ್ ಮೂಲಗಳು. ಹೀಗಾಗಿ ಜುಲೈ ಅಂತ್ಯದವರೆಗೂ ಕುಡಿಯುವ ನೀರಿಗೆ ಯಾವುದೇ ತೊಂದರೆಯಿಲ್ಲ ಎಂದರು.

ಗೋಲಗುಂಬಜ್ ಎಕ್ಸ್‌ಪ್ರೆಸ್ ಸಂಚಾರಕ್ಕೆ ರೈಲ್ವೆ ಮಂಡಳಿ ಅಸ್ತು

ಬೆಂಗಳೂರು: ಮೈಸೂರು- ಫಂಡರಾಪುರ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ರೈಲನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್‌ಗಳ ಮೂಲಕ ಓಡಿಸಲು ರೈಲ್ವೆ ಮಂಡಳಿ ಶುಕ್ರವಾರ ಒಪ್ಪಿಗೆ ನೀಡಿದ್ದು, ಇದರಿಂದ ವಿಜಯ ಪುರ, ಬಾಗಲಕೋಟೆ ಭಾಗದ ಜನರ ಬಹು ದಿನಗಳ ಬೇಡಿಕೆಗೆ ಮನ್ನಣೆ ಸಿಕ್ಕಂತಾಗಿದೆ ಎಂದು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹರ್ಷ ವ್ಯಕ್ತಪಡಿಸಿದ್ದಾರೆ.




ವಿಜಯಪುರ ಕಡೆಗೆ ಚಲಿಸುವ ರೈಲುಗಳನ್ನು ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕವೇ ಓಡಿಸಬೇಕೆಂದು ಹಲವು ಬಾರಿ ಪತ್ರ ಬರೆದು ಕೋರಿಕೆ ಸಲ್ಲಿಸಲಾಗಿತ್ತು. ಅದಕ್ಕೆ ರೈಲ್ವೆ ಮಂಡಳಿ, ಸಕಾರಾತ್ಮಕವಾಗಿ ಸ್ಪಂದಿಸಿದ್ದು ಹೆಚ್ಚಿನ ಅನುಕೂಲ ಆಗಲಿದೆ. ಇದಕ್ಕಾಗಿ ರೈಲ್ವೆ ಸಚಿವರಾದ ಅಶ್ವಿನ್ ವೈಷ್ಣವ್, ವಿ. ಸೋಮಣ್ಣ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಇದರಿಂದ ಎರಡೂ ನಗರಗಳ ನಡುವಿನ ಪ್ರಯಾಣಅವಧಿ 55 ನಿಮಿಷ ಕಡಿಮೆ ಆಗಲಿದೆ ಎಂದು ಹೇಳಿದ್ದಾರೆ. ಇದರ ಜತೆಗೆ ಸದ್ಯ ವಿಜಯಪುರ-ಬೆಂಗಳೂರು ನಡುವೆ ವಾರದಲ್ಲಿ 2 ದಿನ ಸಂಚರಿಸುತ್ತಿರುವ ವಿಶೇಷ ರೈಲನ್ನು ಕೂಡ ಕಾಯಂ ಮಾಡಬೇಕು ಎಂದು ಪಾಟೀಲ ಒತ್ತಾಯಿಸಿದ್ದಾರೆ.


ಬೈಪಾಸ್ ಮಾರ್ಗದಲ್ಲಿ ರೈಲು ಸಂಚರಿಸಲು ಶುರುವಾದ ಮೇಲೆ ಗೋಲಗುಂಬಜ್ ಎಕ್ಸ್‌ಪ್ರೆಸ್ ಇನ್ನು ಮುಂದೆ ಹುಬ್ಬಳ್ಳಿ, ಗದಗದಲ್ಲಿ ಊರೊಳಕ್ಕೆ ಹೋಗುವುದಿಲ್ಲ ಎಂದು ಹೇಳಿದರು.

ವೇಳಾಪಟ್ಟಿ ಬದಲು


ಮೈಸೂರು-ಫಂಡರಾಪುರ ನಡುವೆ ಸಂಚರಿಸುವ ಗೋಲಗುಂಬಜ್ ಎಕ್ಸ್‌ಪ್ರೆಸ್ ಬೈಪಾಸ್ ಮಾರ್ಗಗಳಲ್ಲಿ ಓಡಲು ಆರಂಭಿಸಿದ ಬಳಿಕ ಮೈಸೂರಿನಿಂದ ಮಧ್ಯಾಹ್ನ 3.50ಕ್ಕೆ ಹೊರಟು ಮರುದಿನ ಬೆಳಗ್ಗೆ 10.05ಕ್ಕೆ ಫಂಡರಾಪುರವನ್ನು ತಲುಪಲಿದೆ. ಹಾಗೆಯೇ ಫಂಡರಾಪುರದಿಂದ ಬೆಳಗ್ಗೆ ಮಧ್ಯಾಹ್ನ 1.15ಕ್ಕೆ ಹೊರಟು ಮರುದಿನ ಬೆಳಗ್ಗೆ 11.30ಕ್ಕೆ ಮೈಸೂರನ್ನು ತಲುಪಲಿದೆ. ಮೊದಲಿಗೆ ಹೋಲಿಸಿದರೆ ಪ್ರಯಾಣದಲ್ಲಿ 55 ನಿಮಿಷ ಉಳಿತಾಯವಾಗಲಿದೆ ಎಂದು ಸಚಿವರು ತಿಳಿಸಿದ್ದಾರೆ.




ವ್ಯಕ್ತಿತ್ವ ವಿಕಸನ ವಿಚಾರಧಾರೆ
ಯುವಜನಾಂಗದ ಪ್ರಗತಿಗಾಗಿ ಕೈಪಿಡಿ
ಲೇ: ಜಯಪ್ರಕಾಶ್ ಪುತ್ತೂರು
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಮೊದಲ ಮುದ್ರಣ: 2025
ಪುಟ: 252 ರೂ. 300
ಸಂಪರ್ಕ: 080-40114455




ತೇರು
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕಾದಂಬರಿ
ಲೇ: ರಾಘವೇಂದ್ರ ಪಾಟೀಲ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2003
ಪುಟ: 168 ರೂ. 250
ಸಂಪರ್ಕ: 9448110034



ಅವಿಶ್ರಾಂತ ಧ್ಯೇಯಜೀವಿ
ಮೈ.ಚ. ಜಯದೇವ: ಬದುಕು-ನೆನಪು
ಲೇ: ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಮೊದಲ ಮುದ್ರಣ: 2026
ಪುಟ: 262 ರೂ. 200
ಸಂಪರ್ಕ: 8904421965



ಹೇ... ರಾಮ್!
ಕವನಗಳು
ಲೇ: ಡಾ|| ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಮೊದಲ ಮುದ್ರಣ: 2026
ಪುಟ: 128 ರೂ. 180
ಸಂಪರ್ಕ: 0836-4252498/ 9448110034



ನೋವು ನಲಿವು
ಕವನ ಸಂಕಲನ
ಲೇ: ಮಹಾದೇವ ಮಾ. ಜಗತಾಪ
ಪ್ರ: ಶಶಿಕಲಾ ಪ್ರಕಾಶನ, ಗುಳೇದಗುಡ್ಡ
ಮೊದಲ ಮುದ್ರಣ: 2026
ಪುಟ: 60 ರೂ. 80
ಸಂಪರ್ಕ: 9341162918

ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಜೋಶಿ ಹೇಳಿಕೆ

ಪಡಿತರಕ್ಕೆ ಜಾತಿ ಪ್ರಮಾಣಪತ್ರ ಕಾನೂನು ಬಾಹಿರ

ಹೊಸದಿಲ್ಲಿ: ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರ ಲಿಂಕ್ ಮಾಡುವುದು ಕಾನೂನು ಬಾಹಿರ ವಾದ ಕ್ರಮವಾಗಿದ್ದು, ಈ ಬಗ್ಗೆ ಮಾಹಿತಿ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾಗಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.



ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಹಾರ ಭದ್ರತೆ ಒದಗಿಸುವಲ್ಲಿ ಯಾವುದೇ ಜಾತಿ ಲಿಂಕ್ ಮಾಡಲು ಸಾಧ್ಯವಿಲ್ಲ ಎಂದಿರುವ ಸಚಿವರು, ಕರ್ನಾಟಕ ಸರ್ಕಾರ ಪಡಿತರಕ್ಕೆ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವ ಬಗ್ಗೆ ಸರ್ಕಾರದಿಂದ ಸ್ಪಷ್ಟನೆ ಕೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿ ಪಡಿತರ ಪಡೆಯುವ ಫಲಾನುಭವಿಗಳಿಂದ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಕೇಳಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ ಕೇಂದ್ರ ಸಚಿವರೂ ಆಗಿರುವ ಜೋಶಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸುವಲ್ಲಿ ಬದ್ಧತೆ ತೋರಿದೆ. ಯಾವುದೇ ಜಾತಿ, ಜನಾಂಗವೆಂದೆಣಿಸುತ್ತಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪಡಿತರ ಪಡೆಯಲು ರಾಜ್ಯ ಸರ್ಕಾರ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿರುವುದು ನಿಜಕ್ಕೂ ದುರಂತವೇ ಸರಿ ಎಂದು ಸರ್ಕಾರದ ಕ್ರಮವನ್ನು ಖಂಡಿಸಿದ್ದಾರೆ.

ಸಲ್ಲದ ನೀತಿ-ನಿಯಮ ಹೇರುವುದರ ಉದ್ದೇಶವೇನು:? ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ಅವರ ಆರ್ಥಿಕ ಸ್ಥಿತಿ, ಅರ್ಹತೆ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಆಧಾರ್, ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಗಳ ಯಶಸ್ವಿ ಏಕೀಕರಣದ ಹೊರತಾಗಿಯೂ ಜಾತಿ ಪ್ರಮಾಣ ಪತ್ರ ಕಡ್ಡಾಯಗೊಳಿಸುವುದರ ಹಿಂದಿನ ಉದ್ದೇಶವೇನು? ಎಂದು ಪ್ರಶ್ನಿಸಿದ್ದಾರೆ.

ದೇಶದ ಯಾವುದೇ ಭಾಗದಲ್ಲಿ ಅರ್ಹ ಫಲಾನುಭವಿಗಳಿಗೆ ಸಬ್ಸಿಡಿ ಆಹಾರ ಧಾನ್ಯ ಸುಲಭ ವಾಗಿ ಲಭ್ಯವಾಗುವಂತೆ ಕೇಂದ್ರ ಈಗಾಗಲೇ ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಉಪಕ್ರಮವನ್ನು ಪರಿಚಯಿಸಿದೆ. ದೇಶವಾಸಿಗಳಿಗೆ, ಅರ್ಹ ಫಲಾನುಭವಿಗಳಿಗೆ ಯಾವುದೇ ಅಡೆತಡೆ ಇಲ್ಲದಂತೆ ಆಹಾರ ಭದ್ರತೆ ಪ್ರಯೋಜನ ಕಲ್ಪಿಸುವುದು ಎಂದರು.



ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ರಾಮನಿಗಿಂತಲೂ ಶೂರ ಯಾರು?

▸ಮನ್ಮಥನಿಂದ ಪೀಡಿತನಾಗಿದ್ದರೂ ನಿಶ್ಚಲನಾದ ವ್ಯಕ್ತಿ.

ರಾಮನಿಗಿಂತಲೂ ಶೂರ ಯಾರಾದರೂ ಇದ್ದಾರೆಯೇ ಎಂದು ಯಾರಾದರೂ ಕೇಳಿದರೆ ಉತ್ತರ 'ಇಲ್ಲ' ಎಂಬುದೇ. ಶೂರನು ಯಾರು? ಎಂದು ಕೇಳಿದಾಗ 'ರಾಮನೇ' ಎಂಬುದಾಗಿ ಉತ್ತರ ಸಾಮಾನ್ಯ ಚಿಕ್ಕ ಮಗುವಿಗೂ ತಿಳಿದಿರುವ ವಿಷಯ. ಹೀಗಿರುವಾಗ ರಾಮನಿಗಿಂತಲೂ ಶೂರ ಯಾರು? ಎಂಬ ಪ್ರಶ್ನೆಗೆ ಇಲ್ಲಿನ ಉತ್ತರ ಔಚಿತ್ಯಪೂರ್ಣವಾಗಿದೆ. ಒಬ್ಬ ಶೂರನಾಗಲು ಏನು ಬೇಕು? ಅಂದರೆ ಅವನು ರಾಮನಿಗಿಂತಲೂ ಶ್ರೇಷ್ಠನಾಗಬೇಕು ಅಂತಾದರೆ ಯಾವ ಗುಣ ಇರಬೇಕು? ಅವನು ರಾಮನಿಗಿಂತಲೂ ಶೂರ ಎಂದಾಗಬೇಕಾದರೆ ಅವನು ಯಾವುದೇ ಕಾರಣಕ್ಕೂ ಮನ್ಮಥನಿಂದ ಅಥವಾ ಕಾಮಪೀಡಿತನಾಗದೇ ಇದ್ದರೆ ಮಾತ್ರ ಸಾಧ್ಯ ಎಂಬುದಾಗಿ ಇಲ್ಲಿ ಉತ್ತರವಿದೆ. ಶೂರ ಎಂದರೇನು? ಶೂರನೇ ಆಗಬೇಕಾದರೆ ಅವನು ಹೇಗೆ ಕಾಮವನ್ನು ಅಥವಾ ಮನ್ಮಥನನ್ನು ಹೇಗೆ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು ಎಂಬುದನ್ನೂ ಕೂಡ ತಿಳಿದುಕೊಳ್ಳುವುದು ಅತ್ಯಂತ ಆವಶ್ಯಕ. ಪರಾಕ್ರಮ ಬಲ ಇತ್ಯಾದಿ ಗುಣಗಳು ಬರಬೇಕಾದರೆ ಅವನ ಬುದ್ಧಿಯು ನಿಯಂತ್ರಣದಲ್ಲಿ ಇರಬೇಕು. ಯಾರ ಬುದ್ಧಿ ಸನ್ಮಾರ್ಗದಲ್ಲಿ ಇರುತ್ತದೆಯೋ ಅವನೇ ನಿಜವಾದ ಧೀರ. ಹಾಗಾಗಿ ಅಂತಹ ಶೂರನಾಗಬಲ್ಲವು ತನ್ನ ನಿಯೋಜಿತಕಾರ್ಯವನ್ನು ಉಚಿತವಾಗಿ ಮಾಡಬಲ್ಲ ಸಾಮರ್ಥ್ಯವನ್ನು ಸಂಪಾದನೆ ಮಾಡಿರುತ್ತಾನೆ. ಹಾಗಿಲ್ಲದೆ ಕಾಮಪರವಶನಾಗಿ ಅಥವಾ ಮೋಹದಿಂದ ಕೂಡಿದ್ದರೆ ಅವನು ಧೀರನಾಗಲು ಸಾಧ್ಯವಿಲ್ಲ. ಅವನು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ ಎಂಬುದಾಗಿ ಒಂದು ಸುಭಾಷಿತ ಹೇಳುತ್ತದೆ– "ಪ್ರಾಯಃ ಸಮಾಪನ್ನವಿಪತ್ತಿಕಾಲೇ ಧಿಯೋಽಪಿ ಪುಂಸಾಂ ಮಲಿನೀಭವಂತಿ" ಅಂದರೆ ಧೀರರಾದವರೂ ಕೂಡ ವಿಪತ್ತಿನ ಕಾಲದಲ್ಲಿ ತನ್ನ ಬುದ್ಧಿಯ ಸ್ತಿಮಿತತೆಯನ್ನು ಕಳೆದುಕೊಳ್ಳುತ್ತಾರೆ ಎಂಬುದಾಗಿ. ಇಲ್ಲಿ ರಾಮನನ್ನೇ ಉದಾಹರಣೆಯಾಗಿ ಕೊಡಲಾಗಿದೆ. ಸೀತೆಯು ಮಾಯಾಜಿಂಕೆಯನ್ನು ಕಂಡು ಅದು ತನಗೆ ಬೇಕೆಂಬುದಾಗಿ ಹಠ ಮಾಡುತ್ತಾಳೆ. ಒಂದು ಕ್ಷಣ ಯೋಚಿಸಿ ಮತ್ತೆ ಆ ಸೀತೆಯ ಬಯಕೆಯನ್ನು ಈಡೇರಿಸಲು ಮಾಯಜಿಂಕೆಯ ಹಿಂದೆ ರಾಮ ಧಾವಿಸುತ್ತೇನೆ. ವಸ್ತುತಃ ಅದು ಮಾಯಾಜಿಂಕೆಯೇ ಆಗಿತ್ತು. ಆದರೆ ರಾಮನಂತಹ ರಾಮನು ಕೂಡ ಆ ಕ್ಷಣದಲ್ಲಿ ತನ್ನ ಬುದ್ಧಿಯನ್ನು ಸ್ತಿಮಿತವಾಗಿ ಇಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಯಾಕೆಂದರೆ ಸೀತೆ ಮೇಲಿನ ಮೋಹ. ಅವಳ ಬಯಕೆಯನ್ನು ಈಡೇರಿಸುವುದೇ ಅವನ ಇಚ್ಛೆಯಾಗಿತ್ತು. ಅವನು ಸೀತೆಯ ಕಾಮನೆಗೆ ಅನುಸಾರವಾಗಿ ಅವಳ ಪ್ರೀತಿಗೆ ಮನಸೋತು ಮಾಯಾಜಿಂಕೆಯ ಹಿಂದೆ ಓಡಿದನು. ಆದರಿಂದ ರಾಮನು ಧೀರನಾದರೂ ತನ್ನ ಮಡದಿಯನ್ನು ಕಳೆದುಕೊಳ್ಳುವ ಸಂದರ್ಭ ಒದಗಿತು. ರಾಮನಂತಹವರಿಗೆ ಇಂತಹ ಬುದ್ಧಿಯು ಮಂಕಾಗುವ ಸಂದರ್ಭವಿದೆ ಎಂದಾದರೆ ಸಾಮಾನ್ಯವ್ಯಕ್ತಿಯ ಮಾತೇನು! ಹಾಗಾಗಿ ಇಲ್ಲಿ ಹೇಳಿರುವುದು ರಾಮನುಗಿಂತಲೂ ಅವನು ಶೂರನಾಗಬೇಕು ಎಂದಾದರೆ ಆಶೆಯನ್ನು ಅಥವಾ ಮನ್ಮಥನಿಂದ ಪ್ರೇರಿತವಾದ ಕಾಮನೆಯನ್ನು ಅವನು ಬಿಡಬೇಕು. ಹಾಗೆ ಬಿಟ್ಟಾಗ ಮಾತ್ರ ಅವನು ತನ್ನ ಬುದ್ಧಿಯನ್ನು ಶುದ್ಧವಾಗಿ ಇಟ್ಟುಕೊಳ್ಳಲು ಸಾಧ್ಯ. ಯಾವಾಗ ಬುದ್ಧಿ ಶುದ್ಧವಾಗುತ್ತದೆಯೋ ಆಗ ಅದು ಕಾಮಧೇನುವಿನಂತೆ ಬೇಡಿದ್ದನ್ನು ಕೊಡಲು ಸಾಧ್ಯ. ಆದ್ದರಿಂದ ಕಾಮಪರವಶನಾಗದಿದ್ದರೆ ಅವನು ರಾಮನೇ ಎಂಬುದಾಗಿ ಇಲ್ಲಿ ಹೇಳಲಾಗಿದೆ.



ವ್ಯಾಸ ವೀಕ್ಷಿತ



◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಭೀಮ-ಸಹದೇವರ ದಿಗ್ವಿಜಯಗಳು

ಧರ್ಮರಾಜನ ಆಜ್ಞೆಗೆ ಅನುಸಾರವಾಗಿ ಮಹಾಪ್ರತಾಪಶಾಲಿಯಾದ ಶಿಶುಪಾಲನ ಬಳಿಗೆ ಭೀಮನು ಹೋದನು. ಭೀಮನು ಏನನ್ನು ಮಾಡಲಿರುವನೆಂಬುದನ್ನು ಕೇಳಿ ತಿಳಿದ ಚೇದಿರಾಜನಾದ ಶಿಶುಪಾಲನೂ ಸಹ ನಗರದಿಂದ ಹೊರಬಂದು ಭೀಮನನ್ನು ಎದುರ್ಗೊಂಡನು. ಕುರುಕುಲ ಶ್ರೇಷ್ಠನಾದ ಭೀಮನೂ ಚೇದಿಶ್ರೇಷ್ಠನಾದ ಶಿಶುಪಾಲನು ಕಲೆತು ಪರಸ್ಪರ ತಮ್ಮ ವಂಶಗಳ ಬಗ್ಗೆ ಕುಶಲಪ್ರಶ್ನೆಯನ್ನು ಮಾಡಿಕೊಂಡರು. ಆಗ ಶಿಶುಪಾಲನು ತನ್ನ ಚೇದಿರಾಜ್ಯವನ್ನು ಭೀಮನಿಗೊಪ್ಪಿಸಿ ನಗುತ್ತಾ, ಭೀಮನನ್ನು ನೀನಿದೇನು ಮಾಡಲಿರುವೆ? ಎಂಬುದಾಗಿ ಕೇಳಿದನು. ಆದಕ್ಕೆ ಭೀಮನೂ ಧರ್ಮರಾಜನು ಮಾಡಹೊರಟಿರುವ ಯಜ್ಞದ ವಿಷಯವನ್ನು ಹೇಳಿದನು. ಆತನೂ ಆ ಮಾತುಗಳನ್ನು ಹಾಗೆಯೇ ಸ್ವೀಕರಿಸಿ, ತದನುಸಾರಿಯಾಗಿಯೇ ವರ್ತಿಸಿದನು. ಆಮೇಲೆ ಭೀಮನು ಅಲ್ಲಿಯೇ ಹದಿಮೂರು ರಾತ್ರಿಗಳನ್ನು ಕಳೆದನು. ಸತ್ಕಾರವನ್ನು ಪಡೆದು ತನ್ನ ಸೈನ್ಯಸವಾರಿಗಳೊಂದಿಗೆ ಶಿಶುಪಾಲನ ಸ್ಥಾನವನ್ನು ಬಿಟ್ಟು ಹೊರಟನು. ಆ ಬಳಿಕ ಭೀಮನು ಕುಮಾರದೇಶದ ಶ್ರೇಣಿಮಂತನನ್ನು ಜಯಿಸಿದನು. ಆಮೇಲೆ ಕೋಸಲರಾಜನಾದ ಬೃಹದ್ಬಲನನ್ನು ಗೆದ್ದನು. ಹೆಚ್ಚು ಕಷ್ಟವೇ ಪಡದೆ ಅಯೋಧ್ಯಾಧಿಪತಿಯಾದ ಹಾಗೂ ಬಲಶಾಲಿಯೂ ಧರ್ಮಜ್ಞನೂ ಆದ ದೀರ್ಘಯಜ್ಞನನ್ನು ಜಯಿಸಿದನು.

ಆಮೇಲೆ ಉತ್ತರ ಕೋಸಲಾಧಿಪತಿ, ಮಲ್ಲರಾಷ್ಟ್ರಾಧಿಪತಿಗಳನ್ನೂ, ಶುಕ್ತಿಮಂತ ಪರ್ವತ, ಹಿಮಾಲಯಪರ್ವತಗಳ ತಪ್ಪಲಿನ ಪ್ರದೇಶಗಳನ್ನೂ, ಕಾಶಿರಾಜನಾದ ಸುಬಾಹು, ಸುಪಾರ್ಶ್ವ ಪರ್ವತದ ಬಳಿಯಿದ್ದ ಕ್ರಥನೆಂಬ ರಾಜ, ಮತ್ಸ್ಯದೇಶ– ಮಲದದೇಶ–ನೇಪಾಳದೇಶ–ವತ್ಸಭೂಮಿಗಳ ರಾಜರುಗಳು, ನಿಷಾದರ ರಾಜ, ವಿದೇಹ–ರಾಜನಾದ ಜನಕರನ್ನು ಇವರೆಲ್ಲರನ್ನೂ ಗೆದ್ದನು. ಶಕರನ್ನೂ ಬರ್ಬರರನ್ನೂ ಮೋಸದಿಂದ, ಗೆದ್ದುಕೊಂಡನು. ವಿದೇಹದೇಶದ ಸುತ್ತಲಿನ ಏಳು ಕಿರಾತಾಧಿಪತಿಗಳನ್ನು ಜಯಿಸಿದನು. ಬಳಿಕ ಸುಹ್ಮ ಪ್ರಸುಹ್ಮರಾಜರನ್ನು ಸೋಲಿಸಿದನು. ಜರಾಸಂಧಪುತ್ರನನ್ನು ಕರಸಮರ್ಪಕನನ್ನಾಗಿ ಮಾಡಿಕೊಂಡನು. ಹಾಗೆಯೇ ಕರ್ಣನೆಂಬ ಮತ್ತೊಬ್ಬ ರಾಜ, ಮೋದಾಗಿರಿಯ ರಾಜರನ್ನು ಸೋಲಿಸಿದನು. ಪೌಂಡ್ರಕ–ವಾಸುದೇವನನ್ನೂ ಜಯಿಸಿ ವಂಗದೇಶದ ಮೇಲೆ ಆಕ್ರಮಣ ಮಾಡಿದನು.ಸುತ್ತಲಿನ ಮ್ಲೇಚ್ಛ–ರಾಜರನ್ನೆಲ್ಲಾ ಬಗ್ಗುಬಡಿದನು. ಹೀಗೆ ಹಲವು ಅರಸರನ್ನು ಮೆಟ್ಟಿ ಅವರ ಐಶ್ವರ್ಯವನ್ನು ತೆಗೆದುಕೊಂಡು, ಮ್ಲೇಚ್ಛರಿಂದ ಕರವನ್ನೂ ನಾನಾರತ್ನಗಳನ್ನೂ ಚಂದನ–ಆಗರು–ವಸ್ತ್ರಗಳನ್ನೂ ಮಣಿ–ಮುತ್ತು–ಕಂಬಲಗಳನ್ನೂ ಕಾಂಚನ–ರಜತ–ವಿದ್ರುಮ(ಹವಳ)ಗಳನ್ನೂ ಕೋಟಿಸಂಖ್ಯೆಯಲ್ಲಿ ಪಡೆದನು. ಇಂದ್ರಪ್ರಸ್ಥಕ್ಕೆ ಹಿಂದಿರುಗಿ ಧರ್ಮರಾಜನಿಗೆ ಎಲ್ಲವನ್ನೂ ಒಪ್ಪಿಸಿದನು ಭೀಮ. ಇತ್ತ ಸಹದೇವನು ಧರ್ಮರಾಜನಿಂದ ಸಮ್ಮಾನಿತನಾಗಿ, ದೊಡ್ಡಸೈನ್ಯದೊಂದಿಗೆ ದಕ್ಷಿಣದಿಕ್ಕಿಗೆ ಹೊರಟನು. ಮೊಟ್ಟಮೊದಲು ಆತನು ಶೂರಸೇನರನ್ನು ಜಯಿಸಿದನು. ಆಮೇಲೆ ಮತ್ಸ್ಯರಾಜನನ್ನು, ಬಳಿಕ ಅಧಿರಾಜರಿಗೆ ಅಧಿಪತಿಯಾದ ದಂತವಕ್ತ್ರನನ್ನು ಸೋಲಿಸಿದನು. ಅವನಿಂದ ಕರವನ್ನು ಸ್ವೀಕರಿಸಿ ಅದೇ ರಾಜ್ಯದಲ್ಲೇ ಆತನನ್ನು ಪ್ರತಿಷ್ಠಾಪಿಸಿದನು. ಆಮೇಲೆ ಅಪರ–ಮತ್ಸ್ಯ, ನಿಷಾದದೇಶ, ಗೋಶೃಂಗಪರ್ವತ ಮುಂತಾದವನ್ನು ವಶಪಡಿಸಿಕೊಂಡನು.

ಸಹದೇವನು ಕುಂತಿಭೋಜನ ಮೇಲೆ ಸೆಣಸಲು ಹೋಗುತ್ತಿದ್ದಂತೆಯೇ, ಆತನೇ ಈತನನ್ನು ಪ್ರೀತಿಯಿಂದ ಸ್ವಾಗತಿಸಿ ಆತನ ಶಾಸನವನ್ನು ಒಪ್ಪಿಕೊಂಡನು. ಆಮೇಲೆ ಚರ್ಮಣ್ವತೀನದಿಯ ಬಳಿಯ ರಾಜಸೇಕ–ಅಪರಸೇಕರಾಜ್ಯಗಳ ರಾಜರು, ಮತ್ತೆ ಹಲವು ಅರಸರು, ಭೀಷ್ಮಕರಾಜ, ಪೂರ್ವಕೋಸಲದ ರಾಜ, ಇನ್ನಿತರ ನಾನಾರಾಜರುನ್ನು ಸೋಲಿಸಿ ಅವರಿಂದ ಕರಗ್ರಹಣವನ್ನು ಮಾಡಿದರು. ಪುಲಿಂದರನ್ನು ಜಯಿಸಿದನು. ಬಳಿಕ ಕಿಷ್ಕಿಂಧೆಗೂ ಹೋದನು. ವಾನರರಾಜರಾದ ಮೈಂದ–ದ್ವಿವಿದರೊಂದಿಗೆ ಏಳು ದಿನಗಳ ಯುದ್ಧವಾಯಿತು. ಅವರು ಸೋಲದಿದ್ದರೂ ಸಹದೇವನ ವಿಷಯದಲ್ಲಿ ಸಂತೋಷಪಟ್ಟು, ಹೀಗೆ ಹೇಳಿದರು: "ಪಾಂಡವಶ್ರೇಷ್ಠನಾದ ಸಹದೇವನೇ, ಇವೆಲ್ಲ ರತ್ನಗಳನ್ನೂ ಸಾಗಿಸು. ಧರ್ಮರಾಜನ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ."

ಪೇಷೆಂಟಿಗೆ ಅಟೆಂಡರಾಗುವುದೆಂದರೆ...

ವಕ್ರದೃಷ್ಟಿ



◆ ಎನ್. ರಾಮನಾಥ್
anakuramanath@gmail.com

ಸಿಲಿನು ಆಸ್ಪತ್ರೆಗೆ ಸೇರಿದ. ಅವನನ್ನು ನೋಡಿಕೊಳ್ಳುವ ರಾತ್ರಿಪಾಳಿ ನನ್ನದಾಯಿತು. ವಾರ್ಡ್‌ನ ಸುತ್ತಲೂ ಕಣ್ಣಾಡಿಸಿದೆ. ಕೆಲವು ಪೊಲೀಸ್ ಠಾಣೆಗಳಲ್ಲಿ ಇನ್‌ಸ್ಪೆಕ್ಟರ್‌ನ ಮೇಜಿನ ಮುಂದೆ ಕುರ್ಚಿಗಳು ಇರುವುದಿಲ್ಲ. "ಬಂದ ಕಳ್ರು ಕಾಕ್ರು ಎಲ್ರಿಗೂ ಕುರ್ಚಿ ಕೊಟ್ರೆ ತಲೆಮೇಲೆ ಕೂತ್ಕೋತಾರೆ. ಆ ಖೂಳರು ನಿಂತಿರೋದೇ ಸರಿ" ಎಂಬುದು ಅಲ್ಲಿನ ಅಭಿಪ್ರಾಯವಂತೆ. ಈ ವಾರ್ಡ್‌ನಲ್ಲಿಯೂ "ಪೇಷಂಟ್‌ನ ನೋಡಕ್ಬಂದವ್ರು ನಿಂತು ನೋಡಿ ಹೋಗ್ತಿರ್ಬೇಕಷ್ಟೆ" ಎಂಬ ಅಲಿಖಿತ ನಿಯಮ ಇದ್ದಂತಿತ್ತು.

"ನೋಡಕ್ಬಂದವ್ರಿಗೆ ಚೇರ್ ಬೇಡ ಬಿಡಿ. ಆದರೆ ರಾತ್ರಿಯ ಅಟೆಂಡರ್ ಮಲಗಕ್ಕೆ...?" ಎಂದೆ. "ಮಲಗ್ಬೇಕಾದ್ರೆ ಮನೇಲೇ ಇರಲಿ. ಇಲ್ಲಿ horizontal ಆದವರಿಗೆಲ್ಲ ನರ್ಸಿಂಗ್ ಹೋಂ ಚಾರ್ಜು ಅನ್ವಯ ಆಗತ್ತೆ. Vertical ಮಾತ್ರ ಫ್ರೀ" ಎಂದ ಆಸ್ಪತ್ರೆಯವ.

'ಒನ್ ಬೈ ಟೂ ವಾರ್ಡ್' ಆಗಿದ್ದ ಆ ಕೊಠಡಿಯಲ್ಲಿದ್ದ ಮತ್ತೊಬ್ಬ ರೋಗಿಯ ಅಟೆಂಡರ್ ಕುರ್ಚಿಯೊಂದರ ಮೇಲೆ ಕುಳಿತು ಮೊಬೈಲ್ ಪಠಣದಲ್ಲಿ ನಿರತರಾಗಿದ್ದರು. "ಈ ಕುರ್ಚಿ ಎಲ್ಸಿಕ್ತು ನಿಮ್ಗೆ?" ಎಂದೆ. ಋಷಿಮುನಿಗಳು ತಪಸ್ಸಿನಲ್ಲಿ ನಿರತರಾದಷ್ಟೇ ಗಾಢವಾಗಿ ಕರವಾಣಿ(ಮೊಬೈಲ್)ಪಠಣದಲ್ಲಿ ಮುಳುಗಿದ್ದ ಆತನಿಗೆ ನನ್ನ ಧ್ವನಿ ತಲುಪಲಿಲ್ಲವೆನಿಸುತ್ತದೆ.

ಪ್ರಶ್ನೆಯನ್ನು ರಿಪೀಟಿಸಿದೆ. ಅವನಿಂದ ನನಗಾದುದು ಶೂನ್ಯ ಸಂಪಾದನೆ ಅಷ್ಟೆ. ಅಟೆಂಡರ್ ಆಗಿ ಕುಳಿತ ಇವನ ಗಮನವನ್ನು ಸೆಳೆಯಬೇಕಾದರೆ ರೋಗಿಯು ಇವನಿಗೆ ಕರೆ ಮಾಡಬೇಕು ಅಥವಾ ಮೆಸೇಜ್ ಕಳಿಸಬೇಕಷ್ಟೆ ಎಂದುಕೊಳ್ಳುತ್ತಲೇ ವಾರ್ಡಿನಿಂದ ಹೊರಬಂದು ಅತ್ತಿತ್ತ ಕಣ್ಣಾಡಿಸಿದೆ. ರಿಸೆಪ್ಷನ್‌ನಲ್ಲಿ ಅವನು ಕುಳಿತ ಮಾದರಿಯ ಚೇರುಗಳಿದ್ದವು. ಸುತ್ತಲೂ ನೋಡಿದೆ. ಯಾರೆಂದರೆ ಯಾರೂ ಕಾಣಲಿಲ್ಲ. ವಾರಸುದಾರರು ಗೋಚರಿಸದಂತಹ ವಸ್ತುಗಳೆಲ್ಲವೂ ನನ್ನದೇ ಎಂಬ ಧೋರಣೆಯುಳ್ಳ ನಾನು ಎರಡು ಕುರ್ಚಿಗಳನ್ನು ಒಳಕ್ಕೆ ರವಾನಿಸಿಕೊಂಡು, ಒಂದರ ಮೇಲೆ ಕುಳಿತು ಇನ್ನೊಂದರ ಮೇಲೆ ಕಾಲು ಚಾಚಿಕೊಂಡು ಅರ್ಧಕೋನಾಸನದಲ್ಲಿ ಕತ್ತನ್ನು ತಿರುಗಿಸಿ ಸೀನುವನ್ನು ಗಮನಿಸತೊಡಗಿದೆ.

ಟ್ಯೂಬಾಭರಣಭೂಷಿತನಾದ ಸೀನುವನ್ನು ಶ್ರೀರಂಗಪಟ್ಟಣದ ರಂಗನಾಥಾಸನದಲ್ಲಿ ಮಲಗಿಸಿದ್ದರು. ಆ ರಿಕ್ಲೈನಾಸನವು ತನಗೆ ಮೆಚ್ಚಿಗೆಯಾಗಿದೆಯೆಂದು ಸೀನುವು ಗೊರಕೆಯ ಮೂಲಕ ತೋರ್ಪಡಿಸುತ್ತಿದ್ದ. ಕೊಂಚ ಸಮಯ ಕಳೆಯಿತು. ವಾರ್ಡಿನ ಪ್ರಶಾಂತತೆಯು ಮಂಪರು ಮೂಡಿಸುವಂತಿದ್ದು, ಅದರ ಪ್ರಭಾವ ನಾನು ತಲೆದೂಗುತ್ತಾ 'ಚಲಕಂಠಾಸನ'ದಲ್ಲಿ ಕುಳಿತೆ. ಕ್ರಮೇಣ ಚಲಕಂಠಾಸನವು 'ಮುಂದುಬೆಂಡಾಸನ'ಕ್ಕೆ ಎಡೆಮಾಡಿಕೊಟ್ಟು, ಕುಳಿತಲ್ಲೇ ತೂಕಡಿಸುವ 'ಆಫೀಸ್ ನಿದ್ರಾಸನ'ದತ್ತ ನನ್ನನ್ನು ಒಯ್ದಿತು.

ಆಸ್ಪತ್ರೆಯ ಪಕ್ಕದಲ್ಲಿ ಸಾ ಮಿಲ್ ಇದ್ದಿತೆನಿಸುತ್ತದೆ. ಯಾವುದೋ ಅರ್ಜೆಂಟ್ ಗಿರಾಕಿಗೆಂದು ಆ ಹೊತ್ತಿನಲ್ಲಿ ಮರ ಕೊಯ್ಯಲು ಆರಂಭಿಸಿದ್ದರು. ಆ ಗರಗಸದ ಸದ್ದಿಗೆ ನಿದ್ರಾಸನದಿಂದ ಥಟ್ಟನೆ 'ಹಿಂದುಬೆಂಡಾಸನ'ಕ್ಕೆ ತಲುಪಿ ನೇರಾಸನದಲ್ಲಿ ಕುರ್ಚಿಗೆ ಒರಗಿದೆ. ಬರಬರುತ್ತಾ ಹೆಚ್ಚಾದ ಸದ್ದಿಗೆ ಸೀನುವು ಎಚ್ಚರಗೊಳ್ಳುವನೇನೋ ಎಂದು ಕಳವಳಗೊಂಡು ಅವನತ್ತ ದೃಷ್ಟಿ ಬೀರಿದೆ. 'ರಂಗನಾಥಾಸನ'ದಿಂದ 'ಎಡಪಾರ್ಶ್ವಕೋನಾಸನ'ಕ್ಕೆ ಬದಲಾಗಿದ್ದ ಅವನ ತುಟಿಗಳು ಕಂಪನಾಸನಕ್ಕೆ ಒಳಗಾಗುತ್ತಿದ್ದವು; ಮೂಗಿನ ಹೊಳ್ಳೆಗಳು 'ಅರಳಾಸನ'ದಲ್ಲಿ ಹಿಗ್ಗಿದ್ದವು. ನಿಜಾರ್ಥದಲ್ಲಿ 'ಸೌಂಡ್ ಸ್ಲೀಪ್'ನಲ್ಲಿದ್ದ ಸೀನುವಿನಿಂದ ದೃಷ್ಟಿಯನ್ನು ಸಮಾನದುಃಖಿಯಾದ ಪಕ್ಕದ ಬೆಡ್ಡಿನ ಅಟೆಂಡರಿನತ್ತ ಹರಿಸಿದೆ.

ನನ್ನ ಎಣಿಕೆ ತಪ್ಪಾಗಿತ್ತು. ಅವನು ಸಮಾನದುಃಖಿಯಾಗಿರಲಿಲ್ಲ. ಗರಗಸದ ಸದ್ದನ್ನು ಹೊರಡಿಸುತ್ತಿದ್ದುದು ಅವನೇ!

ಕರವಾಣಿವೀಕ್ಷಣಾಸನದಿಂದ 'ಅರೆಸ್ಲಂಪಾಸನ'ಕ್ಕೆ ಕುಸಿದು ಪವಡಿಸಿದ್ದ ಅವನಿಂದ ಸಾ ಮಿಲ್ ಸದ್ದು ಹೊರಡುತ್ತಿತ್ತು. ನನ್ನ ಜೇಬಿನಿಂದ ಕರ್ಚೀಫನ್ನು ಹೊರತೆಗೆದು, ತುದಿಯನ್ನು ಚೂಪಾಗಿಸಿ, ಅವನ ಮೂಗಿನ ಹೊಳ್ಳೆಯೊಂದನ್ನು ಅದರಿಂದ ಚುಚ್ಚಿದೆ. ಸೈಲೆನ್ಸರ್ ಅಳವಡಿಸಿದ ಬೈಕಿನಂತೆ ಸಾ ಮಿಲ್‌ನ ಸದ್ದು ಜನರೇಟರ್‌ನ ಸದ್ದಿನ ಮಟ್ಟಕ್ಕೆ ಇಳಿಯಿತು.

ಯಥಾಸ್ಥಾನಕ್ಕೆ ಮರಳಿ ಪಾದಚಾಚಾಸನದಲ್ಲಿ ಕುಳಿತೆ. ಬೆನ್ನುಹುರಿಯ ಕೆಳಭಾಗಕ್ಕೆ ಗಾಂಧೀಜಿಯ ಬಗ್ಗೆ ತಿಳಿದಿತ್ತೆ? ಅದು ಸ್ವಾತಂತ್ರ್ಯಹೋರಾಟದ ಪಠ್ಯವನ್ನು ಮನನ ಮಾಡಿಕೊಂಡಿತ್ತೆ? ಹೌದೆನಿಸುತ್ತದೆ. ಏಕೆಂದರೆ ಆ ಕ್ಷಣದಲ್ಲಿ ಆ ಭಾಗವು 'ಅಸಹಕಾರ ಚಳುವಳಿ'ಯನ್ನು ಆರಂಭಿಸಿತ್ತು.

'ಈ ಖಾತೆ ಕೊಟ್ಟರೆ ರಾಜೀನಾಮೆ ನೀಡುವೆ. ಆ ಖಾತೆ ಕೊಟ್ಟರೆ ಜೊತೆಗಿರುವೆ' ಎಂದು ಎಲ್ಲಿ 'ಖೂಬ್ ಖಾನೇ ಕೇ ಲಿಯೇ' ಅವಕಾಶ ಸಿಗುವುದೋ ಆ ಖಾತೆಯನ್ನೇ ಕೇಳುವ ಸಚಿವರು ಪೊಸಿಷನ್ ಷಿಫ್ಟ್ ಆದಾಗ ತೃಪ್ತರಾಗುವ ರೀತಿಯಲ್ಲಿಯೇ ನಾನೂ ಪೊಸಿಷನ್ ಚೇಂಜ್ ಮಾಡಿದರೆ ಅಸಹಕಾರ ಚಳುವಳಿ ಬಂದ್ ಆದೀತೆಂದು 'ಎಡಪಾರ್ಶ್ವಾಸನ'ದಲ್ಲಿ ಕುಳಿತೆ. ಅಸಹಕಾರ ಕೊಂಚ ಕಡಿಮೆಯಾಯಿತು. ಸೀನುವಿನ ಲಯಬದ್ಧ 'ರಾಗಾಸನ' ಹಾಗೂ ಸಹಅಟೆಂಡರನ ಜನರೇಟರ್ ಸದ್ದಾಸನಗಳ ಜೋಡಿಮೇಳವು, ದೊಡ್ಡಂಗಡಿಯ ಯಂತ್ರಚಾಲಿತ ರೋಲಿಂಗ್ ಶಟರನ್ನು ನಿಧಾನವಾಗಿ ಕೆಳಗಿಳಿಸುವಂತೆ, ನನ್ನ ರೆಪ್ಪೆಗಳನ್ನು ಕೆಳಕ್ಕಿಳಿದವು. ಎಡಗೈಯನ್ನು ಕೆನ್ನೆಗಾನಿಸಿ 'ಹಸ್ತಾಧಾರಿತಕಪೋಲಾಸನ'ದಲ್ಲಿ ತಿರುಗಿ ಮಲಗಿದೆ. ಶವಾಸನದ ಭಂಗಿಗೆ ಬರುವಷ್ಟರಲ್ಲಿ ಆಸ್ಪತ್ರೆಯ ಎದುರಿನ ರೈಲ್ವೇಹಳಿಯ ಮೇಲೆ ಜೋಡಿ ಗೂಡ್ಸ್ ಟ್ರೈನ್ ಹೋದಂತಹ ಸದ್ದಿಗೆ ಬೆಚ್ಚಿ ಎದ್ದೆ.

ಯಾವುದೇ ಟ್ರೈನ್ ಒಂದು ಸ್ಥಳವನ್ನು ದಾಟಬೇಕಾದರೆ ಮೂರು ನಿಮಿಷಗಳು ಹಿಡಿದಾವು. ಐದು ನಿಮಿಷಗಳಾದರೂ ಈ ಟ್ರೈನ್‌ಗಳ ಸದ್ದು ಕೇಳಿಬರುತ್ತಲೇ ಇತ್ತು. 'ಎಷ್ಟು ದೊಡ್ಡ ಟ್ರೈನ್ ಇದು!' ಎಂದು ವಿಸ್ಮಿತನಾಗಿಯೇ ಅರೆನಿಮೀಲಿತ ಚಕ್ಷುರಾಸನದಲ್ಲಿ ಒರಗಿದೆ. ಸ್ಪೈನಲ್ ಕಾರ್ಡಿನ ಬುಡವು ತನ್ನ ಅಸಹಕಾರ ಚಳುವಳಿಯನ್ನು ಮತ್ತೆ ಆರಂಭಿಸಿತು.

ಎದ್ದು ಕಿಟಕಿಯ ಆಚೆಗೆ ದೃಷ್ಟಿ ಹಾಯಿಸಿದೆ. 'ಈ ಇಡೀ ಏರಿಯಾದಲ್ಲಿ ರೈಲ್ವೆ ಟ್ರ್ಯಾಕ್ ಇಲ್ಲ' ಎಂದು ನೆನಪಾಯಿತು. "ನಿಮ್ಮಲ್ಲೇ ಹುದುಗಿರುವುದನ್ನು ಹೊರಗೆಲ್ಲೋ ಹುಡುಕುತ್ತೀರಿ" ಎಂದು ನೆಮ್ಮದಿಯ ಬಗ್ಗೆ ಗುರುಗಳೊಬ್ಬರು ಹೇಳಿದ್ದರು. ನೆಮ್ಮದಿಗೆ ಅನ್ವಯವಾಗುವುದು ಸದ್ದಿಗೂ ಅನ್ವಯವಾದೀತೆಂದು ಕರವಾಣಿದಾಸನತ್ತ ದೃಷ್ಟಿ ಹಾಯಿಸಿದೆ. ಅವನ ಕಿವಿಯಿಂದ ಇಯರ್ ಫೋನ್ ಕಳಚಿದ್ದಿತ್ತು. ಆದರೆ ಜೋಡಿ ಗೂಡ್ಸ್ ಟ್ರೈನ್ ಸದ್ದು ಅಲ್ಲಿಂದಾಗಲಿ, ಅವನಿಂದಾಗಲಿ ಹೊಮ್ಮುತ್ತಿರಲಿಲ್ಲ. ಸೀನುವಿನತ್ತ ನೋಡಿದೆ. ಅವನದೇನಿದ್ದರೂ ಮಂದ್ರಸ್ಥಾಯಿಯೇ. ವಿವಾಹಿತ ಸೀನುವಿಗೆ ದಿನದಲ್ಲಿ ಗಟ್ಟಿಯಾಗಿ ಮಾತನಾಡಲು ಅನುಮತಿ ಇಲ್ಲ. ಅಂತೆಯೇ ನಿದ್ರೆಯಲ್ಲೂ ಗಟ್ಟಿಯಾಗಿ ಗೊರಕೆ ಹೊಡೆಯಲು ಅನುಮತಿ ಇಲ್ಲ!

ಅಟೆಂಡರನಿಂದ ಅಟೆಂಡೆಡ್ಡಿನತ್ತ ಗಮನ ಹರಿಸಿದೆ. ಸುದೀರ್ಘವಾಗಿ ಉಸಿರನ್ನು ಎಳೆದೆಳೆದು ಬಿಡುತ್ತಿದ್ದ ಅವನು ಉಸಿರೆಳೆದುಕೊಂಡಾಗ ಒಂದು ಗೂಡ್ಸ್ ಟ್ರೈನ್, ಉಸಿರು ಬಿಟ್ಟಾಗ ಇನ್ನೊಂದು ಗೂಡ್ಸ್ ಟ್ರೈನಿನ ಸದ್ದು ಹೊರಡುತ್ತಿದ್ದವು. ಅರೆಲಂಬಾಸನದಲ್ಲಿ ಮಲಗಿದ್ದ ಅವನ ಮಂಚದ ತಿರುಗಣೆಯನ್ನು ತಿರುಗಿಸಿ ಅವನನ್ನು ಸಮಕೋನಾಸನಕ್ಕೆ ಇಳಿಸಿದೆ. ಅಲುಗಾಟದ ಕಾರಣ ಗೂಡ್ಸ್ ಟ್ರೈನ್ ಸಪ್ಪಳವು ತನ್ನ ಲಾಸ್ಟ್ ಸ್ಟೇಷನ್ ತಲುಪಿತು.

ಮತ್ತೆ ಯಥಾಸ್ಥಾನಕ್ಕೆ ಮರಳಿ, ಈ ಬಾರಿ ಬಲಹಸ್ತಕಪೋಲಾಧಾರಾಸನದಲ್ಲಿ ಮಲಗಿದೆ. ಅದೇ ಸಮಯದಲ್ಲಿ ಸೀನುವು 'ಟ್ಯೂಬುಮುಕ್ತಾಸನ'ವನ್ನು ಹೊಂದಬೇಕೆಂದು ನಿರ್ಧರಿಸಿ ತನ್ನ ಟ್ಯೂಬನ್ನು ಕಿತ್ತುಕೊಳ್ಳಲು ಕೈ ಹಾಕಿದ. ಎದ್ದು ಅವನು ಕೈಬೆರಳುಗಳನ್ನು 'ಟ್ಯೂಬುಗ್ರಹಣಾಸನ'ದಿಂದ 'ಮುಕ್ತಾಸನ'ಕ್ಕೆ ತಂದೆ. ಸೀನು 'ಪ್ರೊಟೆಸ್ಟಾಸನ'ದಲ್ಲಿ ಕುಳಿತ. ಅವನ ಕಂಠದ ನರಗಳು 'ಉಬ್ಬಾಸನ'ದಲ್ಲಿ ತೊಡಗಿ ವಿರೋಧಕ್ಕೆ ಒತ್ತು ನೀಡಿದವು. ಸೀನುವನ್ನು 'ರಿಕ್ಲೈನಾಸನ'ದಿಂದ ಕ್ರಮೇಣ 'ಸಮಕೋನಾಸನ'ಕ್ಕೆ ತಂದು, ಸಡಿಲವಾಗಿದ್ದ ಟ್ಯೂಬನ್ನು ಭದ್ರಗೊಳಿಸಿ, ಅವನ ಉಸಿರಾಟವು ನಿದ್ರಾಂಗನೆಯನ್ನು ಆಲಿಂಗಿಸಿರುವುದನ್ನು ಸೂಚಿಸುವ ಮಟ್ಟಕ್ಕೆ ಲಯವನ್ನು ಹೊಂದಿದ ಮೇಲೆ ನನ್ನ ಕುರ್ಚಿಗೆ ಹಿಂತಿರುಗಿ, ಈ ಬಾರಿ ಮುಂದಿನ ಕುರ್ಚಿಯ ಆರ್ಮ್ ರೆಸ್ಟ್‌ಗಳ ಮೇಲೆ ಮೊಳಕೈಗಳನ್ನೂರಿ, ಬೊಗಸೆಗಳನ್ನು ಹೆಣೆದುಕೊಂಡು 'ಅಂಜಲೀಬದ್ಧಾಸನ'ದಲ್ಲಿ ಶಿರವಿರಿಸಿ ನಿದ್ರಾದೇವಿಗಾಗಿ ಕಾಯತೊಡಗಿದೆ. ಈ ಬಾರಿ ಗೂಡ್ಸ್ ಟ್ರೈನ್ ಬರಲಿಲ್ಲ. ಸಾ ಮಿಲ್‌ನ ಗರಗಸದ ಸದ್ದೂ ಇರಲಿಲ್ಲ. ಪ್ರಶಾಂತವಾದ ವಾತಾವರಣವಿರಲ್ ಬಾರದಿರ್ಪಳೇನ್ ನಿದ್ರಾದೇವಿ ಸಮೀಪಕೆ? ಬಂದಳು. ಅವಳ ವಶವಾದೆ.

ಇದ್ದಕ್ಕಿದ್ದಂತೆ ನನ್ನ ಮೂಗು ಮುಂದಿನ ಕುರ್ಚಿಯ ಮಧ್ಯಭಾಗಕ್ಕೆ ಬಡಿಯಿತು. ನಾನು ಕುಳಿತಿದ್ದ ಕುರ್ಚಿಯು ಲಘುಕೋನಾಸನಕ್ಕೆ ಬಾಗಿತು. ಸಂಭಾಳಿಸಿಕೊಳ್ಳಲುಯತ್ನಿಸಿದಾಗಮುಂದಿನಕುರ್ಚಿಯುವಿಶಾಲಕೋನಾಸನಕ್ಕೆ ಚಾಚಿಕೊಂಡಿತು. ನನ್ನ ಎಡಮೊಣಕೈ ಕುರ್ಚಿಯ ಹಿಡಿಯಿಂದ ಜಾರಿದುದೇ ಈ ಎಲ್ಲಕ್ಕೂ ಕಾರಣವಾಯಿತೆಂದು ಅಲ್ಲಿನ ಕಿತ್ತ ಚರ್ಮವು ಸಾಕ್ಷಿ ಹೇಳುತ್ತಿತ್ತು.

"ನಿದ್ರೆ ಮಾಡೋದಾದ್ರೆ ಇಲ್ಯಾಕ್ ಬಂದೆಯೋ?" ಎಂಬ ಸೀನುವಾಣಿಯು ನನ್ನನ್ನು ಪೂರ್ಣವಾಗಿ ಎಚ್ಚರಗೊಳಿಸಿತು. ಟೈಂ ನೋಡಿದೆ. ಸರಿರಾತ್ರಿ ಮೂರುಗಂಟೆ. ಮೊಬೈಲ್ ಆನ್ ಮಾಡಿ ವರ್ಡ್ ಗೇಮ್‌ನಲ್ಲಿ ನಿರತನಾದೆ. ಮಹಡಿಯ ಮೇಲೆ ಯಾವುದೋ ಸಾಮಾನುಗಳನ್ನು ಥರಥರಥರನೆ ಎಳೆಯುವ ಸದ್ದು ಕೇಳಿಸಿದಂತಾಯ್ತು. ಈ ಹೊತ್ತಿನಲ್ಲಿ ಇದೆಂತಹ ಉಪದ್ರವವೋ ಎಂದು ಮನದಲ್ಲೇ ಶಪಿಸುತ್ತಾ ಕಣ್ಬಿಟ್ಟೆ.

ಜ್ಞಾನೋದಯವಾಯಿತು. ಆ ಕಟ್ಟಡಕ್ಕೆ ಫಸ್ಟ್ ಫ್ಲೋರೇ ಇರಲಿಲ್ಲ.

ಎಚ್ಚರವಾಗಿದ್ದು ಗೊರಕೆಯ ಸದ್ದಿಗೆ. ನನ್ನದೇ ಗೊರಕೆಯ ಸದ್ದಿಗೆ!

ನಿದ್ರೆ–ಎಚ್ಚರಗಳು ಚಂದ್ರ–ಮೋಡದಂತೆ ಆಗಾಗ್ಗೆ ಇಣುಕುತ್ತಿದ್ದಂತೆಯೇ ಮುಂಜಾವಿನ ಕೋಳಿ ಕೂಗಿತು. ಬೆಳಗಿನ ಪಾಳಿಯ ಕಿಟ್ಟಿ ಕಾಫಿ ಫ್ಲಾಸ್ಕಿನೊಡನೆ ಪ್ರತ್ಯಕ್ಷನಾದ.

"ನಾಳೆ ರಾತ್ರಿ ಡ್ಯೂಟಿಗೆ ನೀನು ಬರಬೇಡ" ಎಂದ ಸೀನು. ಪಿಂಕ್ ಸ್ಲಿಪ್ ಪಡೆದ ಸಾಫ್ಟ್‌ವೇರ್ ಇಂಜಿನಿಯರ್‌ನಂತೆ ಮರುಮಾತಾಡದೆ ಅಲ್ಲಿಂದ ನಿರ್ಗಮಿಸಿದೆ.

ಮರಣಶಯ್ಯೆಯಲ್ಲೂ ಮೊಳಗಿದ ರಾಷ್ಟ್ರಧ್ವನಿ

▸ ಡಾ. ಶೇಖರ ದೊಡ್ಡಗೌಡರ

1940ರ ಜೂನ್ ತಿಂಗಳ ಆ ದಿನಗಳು ಭಾರತೀಯ ಇತಿಹಾಸದ ಅತ್ಯಂತ ಭಾವುಕ ಹಾಗೂ ನಿರ್ಣಾಯಕ ಕ್ಷಣಗಳಿಗೆ ಸಾಕ್ಷಿಯಾಗಿದ್ದವು. ಅತ್ತ ನಾಗಪುರದ ರೇಶಿಮ್‌ಭಾಗ್‌ನಲ್ಲಿ ನಡೆಯುತ್ತಿದ್ದ ಸಂಘ ಶಿಕ್ಷಾ ವರ್ಗದಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ಮೂಲೆ ಮೂಲೆಗಳಿಂದ ಬಂದ ನೂರಾರು ತರುಣರು ರಾಷ್ಟ್ರ ಸೇವೆಯ ದೀಕ್ಷೆ ಪಡೆಯುತ್ತಿದ್ದರು. ಅದೇ ಸಮಯದಲ್ಲಿ, ಆ ಮಹಾ ಸಂಘಟನೆಯ ಶಿಲ್ಪಿ, ಯುಗಪ್ರವರ್ತಕ ಡಾ. ಕೇಶವ ಬಲಿರಾಮ್ ಹೆಡ್ಗೇವಾರ್ (ಡಾಕ್ಟರ್‌ಜೀ) ಅವರು ತೀವ್ರ ಜ್ವರ ಮತ್ತು ಅಸಹನೀಯ ಬೆನ್ನುನೋವಿನಿಂದ ಮರಣಶಯ್ಯೆಯಲ್ಲಿದ್ದರು.

ಇಲ್ಲಿ ನಾವು 1920–30ರ ದಶಕದ ಭಾರತೀಯ ರಾಜಕೀಯ ಮುತ್ಸದ್ದಿ ಹಾಗೂ ಇತಿಹಾಸದ ದ್ರಷ್ಟಾರರಾಗಿದ್ದ ಡಾಕ್ಟರ್‌ಜೀ ಅವರ ವಿಶಿಷ್ಟ ಚಿಂತನೆಯನ್ನು ಆಳವಾಗಿ ಸ್ಮರಿಸಬೇಕಾಗುತ್ತದೆ. ಏಕೆಂದರೆ, ಅಂದಿನ ಕಾಲದ ಬಹುತೇಕ ನಾಯಕರು ಬ್ರಿಟಿಷರ ವಿರುದ್ಧ ಹೋರಾಡಲು ರಾಜಕೀಯ ಕಾನೂನುಗಳನ್ನು ಮತ್ತು ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವ ಕಡೆಗೆ ಮಾತ್ರ ಗಮನ ಹರಿಸಿದ್ದರು. ಆದರೆ ಡಾ. ಹೆಡ್ಗೇವಾರ್ ವ್ಯವಸ್ಥೆಗಿಂತ 'ವ್ಯಕ್ತಿ ಮುಖ್ಯ' ಎಂದು ದೃಢವಾಗಿ ನಂಬಿದ್ದರು. ಕೇವಲ ಕಾನೂನುಗಳನ್ನು ಬದಲಾಯಿಸುವುದರಿಂದ ಮಾತ್ರ ದೇಶಕ್ಕೆ ನಿಜವಾದ ಸ್ವಾತಂತ್ರ್ಯ ಸಿಗದು, ಬದಲಿಗೆ ದೇಶದ ಪ್ರತಿಯೊಬ್ಬ ನಾಗರಿಕನ ಚಾರಿತ್ರ್ಯ ನಿರ್ಮಾಣವಾಗಬೇಕು ಎಂಬುದು ಅವರ ಅಚಲ ನಿಲುವಾಗಿತ್ತು. ಈ ಕಾರಣಕ್ಕಾಗಿಯೇ, ದೇಹದ ಪ್ರತಿಯೊಂದು ಕಣವೂ ಅಸಹನೀಯ ವೇದನೆಯಿಂದ ಬಳಲುತ್ತಿದ್ದರೂ, ತಮ್ಮ ಕೊನೆಯ ಕ್ಷಣದವರೆಗೂ ಆ ಚಾರಿತ್ರ್ಯ ನಿರ್ಮಾಣದ ಮಹಾಯಜ್ಞದಲ್ಲೇ ತೊಡಗಿದ್ದ ಆ ಮಹಾ ಚೇತನ, ಜೂನ್ 9 ರಂದು ತನ್ನ ಅಂತಿಮ ಭಾಷಣದ ಮೂಲಕ ಮೊಳಗಿಸಿದ ರಾಷ್ಟ್ರಧ್ವನಿ ಇಂದಿಗೂ ಕೋಟ್ಯಂತರ ಸ್ವಯಂಸೇವಕರ ಎದೆಯಲ್ಲಿ ಜಾಗೃತ ಮಂತ್ರವಾಗಿ ಅನುರಣಿಸುತ್ತಿದೆ.

ಇತಿಹಾಸದ ಆ ಭಾವುಕ ಕ್ಷಣಗಳು

ದೈಹಿಕವಾಗಿ ಅನಾರೋಗ್ಯ ತೀವ್ರವಾಗಿದ್ದರೂ, ಡಾಕ್ಟರ್‌ಜೀ ಅವರ ಧೀಮಂತ ಮನಸ್ಸು ಮಾತ್ರ ಸದಾ ಶಿಬಿರದಲ್ಲಿದ್ದ ಸ್ವಯಂಸೇವಕರ ಶಿಸ್ತು ಮತ್ತು ಉತ್ಸಾಹದ ಕಡೆಗೇ ಇರುತ್ತಿತ್ತು. ವೈದ್ಯರು ಅವರಿಗೆ ಸಂಪೂರ್ಣ ವಿಶ್ರಾಂತಿ ಪಡೆಯಲು ಸೂಚಿಸಿ, ಯಾರನ್ನೂ ಭೇಟಿಯಾಗದಂತೆ ಕಠಿಣ ನಿರ್ಬಂಧ ಹೇರಿದ್ದರೂ ಅವರು ಅದಕ್ಕೆ ಒಪ್ಪಲಿಲ್ಲ. ತಮ್ಮ ಕೊನೆಯ ದಿನಗಳು ಹತ್ತಿರವಾಗುತ್ತಿವೆ ಎಂದು ಮನಗಂಡಿದ್ದ ಆ ಮಹಾಪುರುಷನಿಗೆ, ವೈಯಕ್ತಿಕ ಆರೋಗ್ಯಕ್ಕಿಂತ ದೇಶದ ತರುಣರನ್ನು ಪ್ರೇರೇಪಿಸುವುದೇ ಪರಮ ಕರ್ತವ್ಯವಾಗಿತ್ತು.

ಅಂತಿಮವಾಗಿ ಅವರು ಕಷ್ಟಪಟ್ಟು ಶಿಬಿರದ ಮೈದಾನಕ್ಕೆ ಆಗಮಿಸಿದಾಗ ಅಲ್ಲಿ ನೆರೆದಿದ್ದ ಸ್ವಯಂಸೇವಕರಲ್ಲಿ ಉಂಟಾದ ರೋಮಾಂಚನ ಮತ್ತು ಕರುಣಾಜನಕ ಸ್ಥಿತಿ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದಂತೆ ಉಳಿದಿದೆ. ಅದು ಕೇವಲ ಒಬ್ಬ ಸಂಘಟನಾ ಮುಖ್ಯಸ್ಥನ ಸಾಧಾರಣ ಭೇಟಿಯಾಗಿರಲಿಲ್ಲ; ಬದಲಿಗೆ ಇಡೀ ದೇಶದ ಭವಿಷ್ಯವನ್ನು ಕಣ್ಣಾರೆ ಕಂಡು ಹರಸಲು ಬಂದ ದ್ರಷ್ಟಾರನೊಬ್ಬನ ದಿವ್ಯ ಸನ್ನಿಧಿಯಾಗಿತ್ತು. ಈ ಸನ್ನಿಧಿಯಲ್ಲಿ ಮೂಡಿಬಂದದ್ದೇ ಸಂಘದ ಇತಿಹಾಸದ ಆ ಸುವರ್ಣ ಸಂದೇಶ.



ಅಂತಿಮ ಭಾಷಣದ ಮಹಾಸೂತ್ರ,

ಜೂನ್ 9, 1940ರಂದು ಡಾಕ್ಟರ್‌ಜೀ ಅವರು ಕುಳಿತ ಸ್ಥಿತಿಯಲ್ಲೇ ಮಾಡಿದ ಆ ಕೊನೆಯ ಭಾಷಣ ಕೇವಲ 10 ರಿಂದ 15 ನಿಮಿಷಗಳಷ್ಟು ಅಲ್ಪ ಅವಧಿಯದ್ದಾಗಿತ್ತು. ಆದರೆ ಆ ಮಾತುಗಳು ಕೇವಲ ಭಾಷಣವಾಗಿರದೆ, ಸಂಘದ ಅಸ್ತಿತ್ವದ ದಿಕ್ಸೂಚಿ ಮತ್ತು ಅವರ ಇಡೀ ಜೀವಿತಾವಧಿಯ ತಪಸ್ಸಿನ ಸಾರವಾಗಿತ್ತು. ಈ ಐತಿಹಾಸಿಕ ಸಂದೇಶದಲ್ಲಿ ಅವರು ಮುಖ್ಯವಾಗಿ ಮೂರು ಸೂತ್ರಗಳನ್ನು ಸಮಾಜದ ಮುಂದಿಟ್ಟರು:

ಮೊದಲನೆಯದಾಗಿ, ದೇಶದ ಮೂಲೆ ಮೂಲೆಗಳಿಂದ, ವಿಭಿನ್ನ ಪ್ರಾಂತ್ಯ, ಭಾಷೆ ಮತ್ತು ಜಾತಿಗಳಿಂದ ಬಂದಿದ್ದ ನೂರಾರು ತರುಣರು ಶಿಸ್ತಿನಿಂದ ಒಟ್ಟಿಗೆ ನಿಂತಿರುವುದನ್ನು ನೋಡಿ ಡಾಕ್ಟರ್‌ಜೀ ಅವರು ಭಾವಪರವಶರಾಗಿ, 'ನಾನು ಇಂದು ನನ್ನ ಕಣ್ಣಮುಂದೆ ಅಖಂಡ ಹಿಂದೂ ಸಮಾಜದ ಒಂದು ಸಣ್ಣ ರೂಪವನ್ನು ನೋಡುತ್ತಿದ್ದೇನೆ' ಎಂದರು. ಭಾಷೆ, ಪ್ರಾಂತ್ಯ ಅಥವಾ ಭೌಗೋಳಿಕ ವೈವಿಧ್ಯತೆಗಳು ರಾಷ್ಟ್ರೀಯತೆಯ ಒಂದೇ ದಾರದಡಿಯಲ್ಲಿ ಒಂದಾದಾಗ ಹೇಗೆ ಕರಗಿಹೋಗುತ್ತವೆ ಎಂಬುದನ್ನು ಅವರು ಮನದಟ್ಟು ಮಾಡಿಕೊಟ್ಟರು.

ಎರಡನೆಯದಾಗಿ, ಅವರು ಸ್ವಯಂಸೇವಕರಿಗೆ ಕಠಿಣವಾದ ಎಚ್ಚರಿಕೆಯ ಸಂದೇಶ ನೀಡುತ್ತಾ, 'ಸಂಘದ ಕಾರ್ಯವನ್ನು ಕೇವಲ ಯಾವುದೋ ಒಂದು ಹವ್ಯಾಸದಂತೆ ಭಾಗಶಃ ಮಾಡಬೇಡಿ. ಸಂಘದ ಹೊರಗೆ ನಾವು ಬೇರೆ, ಸಂಘದ ಒಳಗೆ ಬೇರೆ ಎಂಬಂತಿರಬಾರದು. ಇಲ್ಲಿ ಕಲಿತ ದೇಶಸೇವೆ ಮತ್ತು ಚಾರಿತ್ರ್ಯದ ಮೌಲ್ಯಗಳು ನಿಮ್ಮ ದೈನಂದಿನ ಬದುಕಿನ ಭಾಗವಾಗಬೇಕು ಹಾಗೂ ಇದು ಇಡೀ ಜೀವನದ ವ್ರತವಾಗಬೇಕು' ಎಂದು ಕರೆ ನೀಡಿದರು.

ಮೂರನೆಯದಾಗಿ, ಶಿಬಿರದ ಮೌಲ್ಯಗಳು, ಶಿಸ್ತು ಮತ್ತು ಒಗ್ಗಟ್ಟು ಕೇವಲ ಆ ಮೈದಾನದ ಗಡಿಯೊಳಗೆ ಅಥವಾ ಆ ದಿನಗಳಿಗೆ ಮಾತ್ರ ಸೀಮಿತವಾಗಿರಬಾರದು, ಈ ತರಬೇತಿಯನ್ನು ಮುಗಿಸಿ ತಮ್ಮ ತಮ್ಮ ಹಳ್ಳಿ, ಪಟ್ಟಣಗಳಿಗೆ ಮರಳಿದ ನಂತರವೂ ಪ್ರತಿಯೊಬ್ಬ ಸ್ವಯಂಸೇವಕನು ದೇಶದ ಜಾಗೃತ ಸೈನಿಕನಂತೆ ಕಾರ್ಯನಿರ್ವಹಿಸಬೇಕು ಮತ್ತು ಇಡೀ ಸಮಾಜವನ್ನು ಸಂಘಟಿಸುವ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ತೆಗೆದುಕೊಳ್ಳಬೇಕು ಎಂದು ಆಶಿಸಿದರು.

ಅವರ ಈ ಕೊನೆಯ ಮಾತುಗಳು ಕೇವಲ ಭಾಷಣವಾಗಿರದೆ, ಇಡೀ ಸಂಘಟನೆಯ ಬೆಳವಣಿಗೆಗೆ ದಿಕ್ಸೂಚಿಯಾದ ಅಮೃತ ಮಂತ್ರಗಳಾಗಿದ್ದವು. ಮರಣದ ಹತ್ತಿರದಲ್ಲೂ ಸ್ವಂತ ಸುಖವನ್ನು ಮರೆತು ಸಮಾಜದ ಹಿತವನ್ನೇ ಬಯಸಿದ ಅವರ ಈ ದೂರದರ್ಶಿತ್ವವು, ಮುಂದೆ ಸಂಘದ ನಾಯಕತ್ವದ ಹಸ್ತಾಂತರದಲ್ಲೂ ಅತ್ಯಂತ ಸ್ಪಷ್ಟವಾಗಿ ಗೋಚರಿಸಿತು.


ನಾಯಕತ್ವದ ಹಸ್ತಾಂತರ ಮತ್ತು ಅಖಂಡತೆಯ ಮಂತ್ರ ಡಾಕ್ಟರ್‌ಜೀ ಅವರ ಸಾಂಸ್ಥಿಕ ಶಿಸ್ತು ಮತ್ತು ದೂರದೃಷ್ಟಿ ಎಷ್ಟಿತ್ತೆಂದರೆ, ತಮಗೆ ಕಾಲ ಹತ್ತಿರ ಬಂದಾಗ ಸಂಘಟನೆಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ಮುನ್ನೆಚ್ಚರಿಕೆ ವಹಿಸಿದ್ದರು. ತಾವು ಸ್ವರ್ಗಸ್ಥರಾಗುವ ಒಂದು ದಿನ ಮುಂಚೆ, ಅಂದರೆ ಜೂನ್ 20ರಂದು ಪ್ರಜ್ಞೆ ತಪ್ಪುವ ಮುನ್ನವೇ ಹಿರಿಯ ಪ್ರಮುಖರ ಸಮ್ಮುಖದಲ್ಲಿ ಮಾಧವ ಸದಾಶಿವ ಗೋಳವಲ್ಕರ್ (ಶ್ರೀ ಗುರೂಜಿ) ಅವರನ್ನು ಹತ್ತಿರ ಕರೆದು, 'ಇನ್ನು ಮುಂದೆ ಸಂಘದ ಜವಾಬ್ದಾರಿಯನ್ನು ನೀವೇ ವಹಿಸಿಕೊಳ್ಳಬೇಕು' ಎಂದು ಅಧಿಕೃತವಾಗಿ ಆ ಮಹೋನ್ನತ ಹೊಣೆಗಾರಿಕೆಯನ್ನು ಹಸ್ತಾಂತರಿಸಿದರು. ಈ ಮೂಲಕ ವ್ಯಕ್ತಿಗಿಂತ ಸಂಘಟನೆ, ಸಂಘಟನೆಗಿಂತ ಸಿದ್ಧಾಂತ ದೊಡ್ಡದು ಎಂಬುದನ್ನು ಅವರು ಸ್ವತಃ ತಮ್ಮ ಜೀವನದ ಮೂಲಕವೇ ಸಾಬೀತುಪಡಿಸಿದರು. ಜಗತ್ತಿನ ಬಹುತೇಕ ದೊಡ್ಡ ಸಂಸ್ಥೆಗಳು ಸಂಸ್ಥಾಪಕರ ನಿಧನದ ನಂತರ ನಾಯಕತ್ವದ ಕಲಹದಿಂದ ಒಡೆದು ಹೋಗುತ್ತವೆ. ಆದರೆ ವ್ಯಕ್ತಿ ಪೂಜೆಗೆ ಆಸ್ಪದ ನೀಡದೆ, ತತ್ವ ಪೂಜೆಗೆ (ಭಗವಾಧ್ವಜ) ಮಹತ್ವ ನೀಡಿದ ಡಾಕ್ಟರ್‌ಜೀ ಅವರ ಈ ಸುಸೂತ್ರ ನಾಯಕತ್ವದ ಹಸ್ತಾಂತರವೇ ಸಂಘದ ಅಖಂಡತೆಗೆ ಮತ್ತು ಸತತ ಬೆಳವಣಿಗೆಗೆ ಭದ್ರ ಬುನಾದಿಯಾಯಿತು. ನಾಯಕರು ಬದಲಾಗಬಹುದು, ಆದರೆ ರಾಷ್ಟ್ರಕಾರ್ಯ ನಿರಂತರವಾಗಿ ಸಾಗಬೇಕು ಎಂಬ ಸತ್ಯವನ್ನು ಇದು ಇಡೀ ಜಗತ್ತಿಗೆ ಸಾರಿತು. ಈ ಭದ್ರ ಅಡಿಪಾಯದ ಮೇಲೆಯೇ ಇಂದು ಸಂಘ ತನ್ನ ನೂರು ವರ್ಷಗಳ ಯಶೋಗಾಥೆಯನ್ನು ಬರೆದಿದೆ.

ರಾಷ್ಟ್ರ ಧರ್ಮದ ಶತಮಾನ

ಹೀಗೆ 1925ರ ವಿಜಯದಶಮಿಯಂದು ಕೇವಲ 15–20 ಜನ ತರುಣರೊಂದಿಗೆ ಬಿತ್ತಿದ ಆ ಸಣ್ಣ ದೇಶಪ್ರೇಮದ ಬೀಜ, ಇಂದು ಶತಮಾನದ (100 ವರ್ಷಗಳ) ಹೊಸ್ತಿಲಲ್ಲಿ ನಿಂತು ಜಗತ್ತಿನ ಅತ್ಯಂತ ದೊಡ್ಡ ಸ್ವಯಂಸೇವಾ ಸಂಸ್ಥೆಯಾಗಿ ಹೆಮ್ಮರವಾಗಿದೆ. 1940ರಲ್ಲಿ ಮರಣಶಯ್ಯೆಯಲ್ಲಿದ್ದಾಗ ಆ ಮಹಾಪುರುಷ ಉದುರಿಸಿದ ಕಣ್ಣೀರಿನ ಹನಿಗಳು ಮತ್ತು ಆಡಿದ ಮಾತುಗಳು ವ್ಯರ್ಥವಾಗಲಿಲ್ಲ ಎಂಬುದಕ್ಕೆ ಇಂದಿನ ಸಂಘದ ಜಾಗತಿಕ ವಿಸ್ತಾರವೇ ಜೀವಂತ ಸಾಕ್ಷಿಯಾಗಿದೆ. ಇಂದು ದೇಶವು ಎದುರಿಸುತ್ತಿರುವ ಆಂತರಿಕ ಭದ್ರತೆಯ ಸವಾಲುಗಳು, ಸಾಂಸ್ಕೃತಿಕ ಆಕ್ರಮಣಗಳು ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ನಡುವೆ ಡಾಕ್ಟರ್ ಜೀ ಅವರು ಅಂದು ನೀಡಿದ 'ಸಾಮಾಜಿಕ ಒಗ್ಗಟ್ಟು, ವೈಯಕ್ತಿಕ ಶಿಸ್ತು ಮತ್ತು ರಾಷ್ಟ್ರೀಯ ಚಾರಿತ್ರ್ಯದ' ಸಂದೇಶ ಇಂದಿನ ಯುವ ಪೀಳಿಗೆಗೆ ಅತ್ಯಂತ ಅಗತ್ಯವಾಗಿದೆ. ಜಾತಿ–ಮತಗಳ ಭೇದ ಮರೆತು ರಾಷ್ಟ್ರಪ್ರೇಮದ ಅಡಿಯಲ್ಲಿ ಒಂದಾಗದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಎಂಬ ಅವರ ಎಚ್ಚರಿಕೆ ಇಂದಿಗೂ ಅಷ್ಟೇ ಪ್ರಸ್ತುತವಾಗಿದೆ ಮತ್ತು ಆ ದಾರಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸಬೇಕಾದ ನಿಜವಾದ ಗೌರವವಾಗಿದೆ.

ಅಂತಿಮವಾಗಿ ಜೂನ್ 21, 1940 ರಂದು ಡಾಕ್ಟರ್‌ಜೀ ಅವರು ಭೌತಿಕವಾಗಿ ನಮ್ಮನ್ನು ಅಗಲಿದರಾದರೂ, ಅವರು ಹಚ್ಚಿದ ರಾಷ್ಟ್ರಭಕ್ತಿಯ ಜ್ಯೋತಿ ಇಂದಿಗೂ ಕೋಟ್ಯಂತರ ಹೃದಯಗಳಲ್ಲಿ ನಿರಂತರವಾಗಿ ಬೆಳಗುತ್ತಿದೆ. ಆದ್ದರಿಂದ, ಅವರ ಪುಣ್ಯಸ್ಮರಣೆಯ ಈ ಪವಿತ್ರ ಸಂದರ್ಭದಲ್ಲಿ ನಾವು ಕೇವಲ ಭಾವನಾತ್ಮಕವಾಗಿ ಕಣ್ಣೀರು ಸುರಿಸುವುದಕ್ಕಿಂತ ಅಥವಾ ಕೇವಲ ಶಬ್ದಗಳ ಮೂಲಕ ಗೌರವ ಸಲ್ಲಿಸುವುದಕ್ಕಿಂತ, ಅವರು ನಮಗಾಗಿ ಬಿಟ್ಟುಹೋದ ತಪೋಮಯ ಸಂದೇಶವನ್ನು ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ದೇಶಕ್ಕಾಗಿ ಸ್ವಾರ್ಥರಹಿತವಾಗಿ, ನಿರಹಂಕಾರದಿಂದ ಸೇವೆ ಸಲ್ಲಿಸುವುದೇ ಆ ಮಹಾ ಚೇತನಕ್ಕೆ ನಾವು ಸಲ್ಲಿಸಬಹುದಾದ ಅತ್ಯುನ್ನತ ಮತ್ತು ನಿಜವಾದ 'ಕಾರ್ಯಾಂಜಲಿ'.

ಯೋಗ: ಆರೋಗ್ಯಕರ ಸಮಾಜದ ಅಡಿಪಾಯ



ವಿಶ್ವ ಯೋಗ ದಿನಾಚರಣೆ

▸ ಡಾ. ಮೈತ್ರಿ ಭಟ್, ವಿಟ್ಲ

ವೇಗವಾಗಿ ಬದಲಾಗುತ್ತಿರುವ ಆಧುನಿಕ ಜಗತ್ತಿನಲ್ಲಿ ಮನುಷ್ಯನ ಜೀವನಶೈಲಿ, ಆಲೋಚನಾ ಕ್ರಮ ಮತ್ತು ಮೌಲ್ಯಗಳು ಗಮನಾರ್ಹವಾಗಿ ಬದಲಾಗುತ್ತಿವೆ. ತಂತ್ರಜ್ಞಾನ, ನಗರೀಕರಣ ಮತ್ತು ಜಾಗತೀಕರಣವು ಮಾನವನಿಗೆ ಅನೇಕ ಸೌಲಭ್ಯಗಳನ್ನು ಒದಗಿಸಿವೆ. ಆದರೆ ಇದೇ ಸಂದರ್ಭದಲ್ಲಿ ಒತ್ತಡ, ಆತಂಕ, ಅಸಹನೆ, ಏಕಾಂಗಿತನ ಮತ್ತು ಆರೋಗ್ಯ ಸಮಸ್ಯೆಗಳೂ ಹೆಚ್ಚಾಗಿವೆ. ಜೀವನದ ಗುಣಮಟ್ಟಕ್ಕಿಂತ ಜೀವನದ ವೇಗಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಒಟ್ಟಿನಲ್ಲಿ, ಮನುಷ್ಯನ ಕೈಯಲ್ಲಿ ಎಲ್ಲ ಸೌಲಭ್ಯಗಳಿದ್ದರೂ ಮನಸ್ಸಿನಲ್ಲಿ ನೆಮ್ಮದಿ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಭಾರತೀಯ ಜ್ಞಾನಪರಂಪರೆಯ ಅಮೂಲ್ಯ ಕೊಡುಗೆಯಾದ ಯೋಗವು ಕೇವಲ ಆರೋಗ್ಯ ಸಾಧನವಲ್ಲ, ಬದುಕನ್ನು ಸಮಗ್ರವಾಗಿ ರೂಪಿಸುವ ಜೀವನದರ್ಶನವಾಗಿ ನಮ್ಮ ಮುಂದೆ ನಿಂತಿದೆ.

ಯೋಗದ ವ್ಯಾಪ್ತಿ ಬಹಳ ವಿಶಾಲವಾಗಿದೆ. ಯೋಗವೆಂದರೆ ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮಗಳ ನಡುವೆ ಸಮನ್ವಯ ಸಾಧಿಸುವ ಪ್ರಕ್ರಿಯೆ. ವ್ಯಕ್ತಿಯ ಒಳಜಗತ್ತು(ಅಂತರಂಗ) ಮತ್ತು ಹೊರಜಗತ್ತಿನ(ಬಹಿರಂಗ) ನಡುವೆ ಸಾಮರಸ್ಯವನ್ನು ನಿರ್ಮಿಸುವ ಮಾರ್ಗ.

ಮನುಷ್ಯನ ಜೀವನದಲ್ಲಿ ದೈಹಿಕ ಆರೋಗ್ಯ ಎಷ್ಟು ಮುಖ್ಯವೋ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವೂ ಅಷ್ಟೇ ಮುಖ್ಯ. ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸು ನೆಲೆಸುತ್ತದೆ ಎನ್ನುವುದು ಸತ್ಯ. ಆದರೆ ಮನಸ್ಸಿನ ನೆಮ್ಮದಿ ಇಲ್ಲದಿದ್ದರೆ ದೇಹದ ಆರೋಗ್ಯವೂ ದೀರ್ಘಕಾಲ ಉಳಿಯುವುದಿಲ್ಲ. ಆದ್ದರಿಂದ ಯೋಗವು ಕೇವಲ ದೇಹವನ್ನು ಬಲಪಡಿಸುವುದಲ್ಲ; ಮನಸ್ಸನ್ನು ಸ್ಥಿರಗೊಳಿಸುವುದನ್ನೂ ಕಲಿಸುತ್ತದೆ.

ಯೋಗಾಭ್ಯಾಸ ದೇಹದ ಪ್ರತಿಯೊಂದು ಅಂಗಕ್ಕೂ ಚೈತನ್ಯವನ್ನು ತುಂಬಿ ರಕ್ತಪರಿಚಲನೆಯನ್ನು ಸುಧಾರಿಸುತ್ತದೆ. ಉಸಿರಾಟ ವ್ಯವಸ್ಥೆ ಪರಿಣಾಮಕಾರಿಯಾಗಿ, ಸ್ನಾಯುಗಳು ಮತ್ತು ಕೀಲುಗಳು ಚುರುಕಾಗುತ್ತವೆ. ದೇಹದ ಸಮತೋಲನ ಮತ್ತು ಲವಲವಿಕೆ ಹೆಚ್ಚುತ್ತದೆ. ಇದರಿಂದ ವ್ಯಕ್ತಿಯಲ್ಲಿ ಉತ್ಸಾಹ, ಆತ್ಮವಿಶ್ವಾಸ ಮತ್ತು ಚೈತನ್ಯ ವೃದ್ಧಿಯಾಗುತ್ತದೆ.

ಇಂದಿನ ಸಮಾಜದಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ಪರೀಕ್ಷೆಯ ಒತ್ತಡದಿಂದ ಬಳಲುವ ವಿದ್ಯಾರ್ಥಿಗಳು, ಉದ್ಯೋಗದ ಅನಿಶ್ಚಿತತೆಯಿಂದ ಆತಂಕದಲ್ಲಿರುವ ಯುವಕರು, ಕೆಲಸದ ಒತ್ತಡದಲ್ಲಿ ಬದುಕುತ್ತಿರುವ ವೃತ್ತಿಪರರು ಮತ್ತು ಏಕಾಂಗಿತನದಿಂದ ನರಳುತ್ತಿರುವ ಹಿರಿಯರು ಎಲ್ಲಾ ವರ್ಗದ ಜನರ ಬದುಕಿನಲ್ಲೂ ಒತ್ತಡ ಪ್ರಮುಖ ಸಮಸ್ಯೆಯಾಗಿದೆ. ಇಂತಹ ಸಂದರ್ಭದಲ್ಲಿ ಯೋಗವು ಮನಸ್ಸಿಗೆ ವಿಶ್ರಾಂತಿಯನ್ನು ನೀಡುತ್ತದೆ. ಪ್ರಾಣಾಯಾಮ ಮತ್ತು ಧ್ಯಾನ ಮನಸ್ಸಿನ ಅಶಾಂತತೆಯನ್ನು ಶಮನಗೊಳಿಸಿ, ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಬೆಳೆಸುತ್ತವೆ.

ಯೋಗಾಭ್ಯಾಸ ಮಾಡುವವರು ಸಾಮಾನ್ಯವಾಗಿ ಹೆಚ್ಚು ಸಮಚಿತ್ತತೆ, ಸಹನೆ ಮತ್ತು ಧೈರ್ಯವನ್ನು ಹೊಂದಿರುತ್ತಾರೆ ಎಂಬುದು ಅನೇಕ ಅಧ್ಯಯನಗಳಿಂದಲೂ ತಿಳಿದುಬಂದಿದೆ. ಕೋಪ, ಆತಂಕ ಮತ್ತು ಭಯದಂತಹ ನಕಾರಾತ್ಮಕ ಭಾವನೆಗಳನ್ನು ನಿಯಂತ್ರಿಸಲು ಯೋಗವು ಸಹಕಾರಿಯಾಗಿದೆ.

ಯೋಗದ ಮಹತ್ವ ಅದರ ದೈಹಿಕ ಪ್ರಯೋಜನಗಳಲ್ಲಿ ಮಾತ್ರ ಸೀಮಿತವಾಗಿಲ್ಲ. ಅದು ಮೌಲ್ಯಯುತ ಬದುಕಿನತ್ತ ಕರೆದೊಯ್ಯುವ ಮಾರ್ಗವೂ ಆಗಿದೆ. ಪತಂಜಲಿಯ ಅಷ್ಟಾಂಗ ಯೋಗದಲ್ಲಿ ಯಮ ಮತ್ತು ನಿಯಮಗಳಿಗೆ ವಿಶೇಷ ಸ್ಥಾನವಿದೆ. ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂಬ ಯಮಗಳು ವ್ಯಕ್ತಿಯ ಸಾಮಾಜಿಕ ನಡವಳಿಕೆಯನ್ನು ಶುದ್ಧಗೊಳಿಸುತ್ತವೆ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ ಮತ್ತು ಈಶ್ವರಪ್ರಣಿಧಾನ ಎಂಬ ನಿಯಮಗಳು ವ್ಯಕ್ತಿಯ ಆಂತರಿಕ ಬೆಳವಣಿಗೆಗೆ ನೆರವಾಗುತ್ತವೆ. ಇವು ಕೇವಲ ಯೋಗಾಭ್ಯಾಸಿಗಳಿಗೆ ಮಾತ್ರವಲ್ಲ, ಪ್ರತಿಯೊಬ್ಬ ಮಾನವನಿಗೂ ಅಗತ್ಯವಾದ ಸಾರ್ವಕಾಲಿಕ ಜೀವನಮೌಲ್ಯಗಳಾಗಿವೆ. ಸಮಾಜದಲ್ಲಿ ಹೆಚ್ಚುತ್ತಿರುವ ಅಸಹನೆ, ಹಿಂಸೆ, ಭ್ರಷ್ಟಾಚಾರ ಮತ್ತು ಸ್ವಾರ್ಥದ ಮನೋಭಾವಗಳಿಗೆ ಪರಿಹಾರ ಹುಡುಕಬೇಕಾದರೆ ಈ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ.

ಜೀವನ ಎಂದಿಗೂ ಒಂದೇ ರೀತಿಯಲ್ಲಿರುವುದಿಲ್ಲ. ಸುಖ ಮತ್ತು ದುಃಖ, ಯಶಸ್ಸು ಮತ್ತು ವೈಫಲ್ಯ, ಲಾಭ ಮತ್ತು ನಷ್ಟಗಳು ಜೀವನದ ಅವಿಭಾಜ್ಯ ಭಾಗಗಳು. ಆದರೆ ಈ ಎಲ್ಲ ಸಂದರ್ಭಗಳನ್ನು ಸಮಭಾವದಿಂದ ಸ್ವೀಕರಿಸುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಯೋಗವು ವ್ಯಕ್ತಿಗೆ ಸಮಚಿತ್ತತೆಯನ್ನು ಕಲಿಸುತ್ತದೆ. ಪರಿಸ್ಥಿತಿ ಹೇಗೇ ಇದ್ದರೂ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಳ್ಳುವ ಶಕ್ತಿಯನ್ನು ನೀಡುತ್ತದೆ.

ಇಂದಿನ ಮಾಹಿತಿ ಯುಗದಲ್ಲಿ ಪ್ರತಿದಿನ ಸಾವಿರಾರು ಮಾಹಿತಿಗಳು ನಮ್ಮನ್ನು ತಲುಪುತ್ತಿವೆ. ಆದರೆ ಮಾಹಿತಿಯ ಹೆಚ್ಚಳವೇ ಜ್ಞಾನವಲ್ಲ. ನಿಜವಾದ ಜ್ಞಾನವು ಅನುಭವ ಮತ್ತು ಆತ್ಮಾವಲೋಕನದಿಂದ ರೂಪುಗೊಳ್ಳುತ್ತದೆ. ಯೋಗವು ಈ ಪ್ರಕ್ರಿಯೆಗೆ ನೆರವಾಗುತ್ತದೆ. ಅದು ವ್ಯಕ್ತಿಯ ಗಮನ, ಏಕಾಗ್ರತೆ ಮತ್ತು ಆತ್ಮಜಾಗೃತಿಯನ್ನು ಹೆಚ್ಚಿಸುತ್ತದೆ. ತನ್ನನ್ನು ತಾನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಅಂತಃದೃಷ್ಟಿ ಮತ್ತು ಪ್ರಜ್ಞೆ ಬೆಳೆಯುವಾಗ ಜೀವನದ ಕುರಿತು ಆಳವಾದ ಅರಿವು ಮೂಡುತ್ತದೆ. ಈ ಅರಿವೇ ವ್ಯಕ್ತಿಯನ್ನು ಹೆಚ್ಚು ಪ್ರಬುದ್ಧನನ್ನಾಗಿಸುತ್ತದೆ.

ಯೋಗದ ಪ್ರಯೋಜನಗಳು ಕೇವಲ ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗಿಲ್ಲ. ಆರೋಗ್ಯವಂತ ವ್ಯಕ್ತಿಗಳಿಂದ ಆರೋಗ್ಯವಂತ ಕುಟುಂಬಗಳು ನಿರ್ಮಾಣವಾಗುತ್ತವೆ. ಆರೋಗ್ಯವಂತ ಕುಟುಂಬಗಳಿಂದ ಸದೃಢ ಸಮಾಜ ರೂಪುಗೊಳ್ಳುತ್ತದೆ. ಯೋಗವನ್ನು ಜೀವನಶೈಲಿಯ ಭಾಗವನ್ನಾಗಿ ಮಾಡಿಕೊಂಡ ಸಮಾಜದಲ್ಲಿ ಶಿಸ್ತು, ಸಹಕಾರ, ಸಹಾನುಭೂತಿ ಮತ್ತು ಸಮತೋಲನ ಹೆಚ್ಚಾಗುತ್ತದೆ. ಮಾನಸಿಕ ಆರೋಗ್ಯ ಸುಧಾರಣೆಗೊಳ್ಳುತ್ತದೆ.

ಪ್ರತಿದಿನ ಸ್ವಲ್ಪ ಸಮಯವನ್ನು ಯೋಗಕ್ಕೆ ಮೀಸಲಿಟ್ಟರೆ ದೇಹ ಆರೋಗ್ಯಕರವಾಗುತ್ತದೆ, ಮನಸ್ಸು ಪ್ರಶಾಂತವಾಗುತ್ತದೆ ಮತ್ತು ಬದುಕು ಸಮತೋಲನದಿಂದ ಕೂಡಿರುತ್ತದೆ. ಯೋಗವು ಕೇವಲ ಆರೋಗ್ಯದ ಸಾಧನವಲ್ಲ; ಅದು ಸುಂದರ, ಸಾರ್ಥಕ ಮತ್ತು ಸಮೃದ್ಧ ಬದುಕಿನತ್ತ ಕರೆದೊಯ್ಯುವ ಸೋಪಾನ. ಯೋಗವನ್ನು ಒಂದು ದಿನದ ಆಚರಣೆಯಾಗಿ ಅಲ್ಲ, ಪ್ರತಿದಿನದ ಬದುಕಿನ ಭಾಗವಾಗಿ ಅಳವಡಿಸಿಕೊಂಡಾಗ ಮಾತ್ರ ಅದರ ನಿಜವಾದ ಅರ್ಥ ಮತ್ತು ಮಹತ್ವವನ್ನು ಅನುಭವಿಸಲು ಸಾಧ್ಯ.

ಕಿರುಸುದ್ದಿ

ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಮೊದಲ 'ಲಿಂಗ ದೃಢೀಕರಣ' ಶಸ್ತ್ರಚಿಕಿತ್ಸೆ

ಉಡುಪಿ: ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯು (ಕೆಎಂಸಿ) ಜೂನ್ 10ರಂದು ಟ್ರಾನ್ಸ್ ಜೆಂಡರ್ ಮಹಿಳೆಯೊಬ್ಬರಿಗೆ ತನ್ನ ಮೊದಲ 'ಲಿಂಗ ದೃಢೀಕರಣ ಜನನಾಂಗ ಶಸ್ತ್ರಚಿಕಿತ್ಸೆ'ಯನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದೆ. ರೋಗಿಯು ಪ್ರಸ್ತುತ ವೈದ್ಯಕೀಯ ತಂಡದ ಉಸ್ತುವಾರಿಯಲ್ಲಿ ಸುಧಾರಿಸಿಕೊಳ್ಳುತ್ತಿದ್ದಾರೆ. ಆಸ್ಪತ್ರೆಯ ಪ್ಲಾಸ್ಟಿಕ್ ಸರ್ಜರಿ ವಿಭಾಗವು ಈ ಹಿಂದೆ ಮುಖದ ಸ್ತ್ರೀಕರಣ ಮತ್ತು ಸ್ತನಗಳ ವರ್ಧನೆ ಚಿಕಿತ್ಸೆಗಳನ್ನು ನೀಡುತ್ತಿತ್ತು. ಆದರೆ, ಪ್ಲಾಸ್ಟಿಕ್ ಸರ್ಜರಿ ಮತ್ತು ಮೂತ್ರಶಾಸ್ತ್ರ (ಯೂರಾಲಜಿ) ವಿಭಾಗಗಳ ಜಂಟಿ ಸಹಯೋಗದೊಂದಿಗೆ ಸಂಪೂರ್ಣ ಜನನಾಂಗ ಶಸ್ತ್ರಚಿಕಿತ್ಸೆ ನಡೆಸಿರುವುದು ಆಸ್ಪತ್ರೆಯ ಇತಿಹಾಸದಲ್ಲೇ ಇದೇ ಮೊದಲಾಗಿದೆ. ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥ ಡಾ. ಜೋಸೆಫ್ ಥಾಮಸ್, ಡಾ. ಹರ್ಷವರ್ಧನ್ ಶೆಟ್ಟಿ ಹಾಗೂ ಮೂತ್ರಶಾಸ್ತ್ರ ವಿಭಾಗದ ಡಾ. ಮ್ ಚೌಧರಿ ಅವರ ನೇತೃತ್ವದ ತಂಡವು ಈ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಗೊಳಿಸಿದೆ. ಮಾಹೆ ಬೋಧನಾ ಆಸ್ಪತ್ರೆಗಳ ಸಿಇಒ ಡಾ. ಸುಧಾಕರ್ ಕಂಟಿಪುಡಿ ಮಾತನಾಡಿ, ಟ್ರಾನ್ಸ್‌ಜೆಂಡರ್ ಸಮುದಾಯದ ರೋಗಿಗಳಿಗೆ ಶಸ್ತ್ರಚಿಕಿತ್ಸೆಯ ಜೊತೆಗೆ ಗೌಪ್ಯತೆ, ಸುರಕ್ಷಿತ ವಾತಾವರಣ ಮತ್ತು ಗೌರವ ನೀಡುವುದು ಮುಖ್ಯ. ನಮ್ಮ ಸಿಬ್ಬಂದಿಗೆ ಈ ನಿಟ್ಟಿನಲ್ಲಿ ಸೂಕ್ತ ತರಬೇತಿ ನೀಡಲಾಗಿದೆ. ಕರಾವಳಿ ಭಾಗದ ಜನರು ಇಂತಹ ಚಿಕಿತ್ಸೆಗಳಿಗಾಗಿ ದೂರದ ಊರುಗಳಿಗೆ ಅಲೆಯುವ ಅಗತ್ಯವಿಲ್ಲದೇ, ಮನೆಯ ಸಮೀಪವೇ ಸುರಕ್ಷಿತವಾಗಿ ಚಿಕಿತ್ಸೆ ಪಡೆಯಲು ಇದು ಸಹಕಾರಿಯಾಗಿದೆ ಎಂದಿದ್ದಾರೆ. ಶಸ್ತ್ರಚಿಕಿತ್ಸೆಯ ನಂತರವೂ ನಿಯಮಿತ ಫಾಲೋ–ಅಪ್, ಫಿಸಿಯೋಥೆರಪಿ ಹಾಗೂ ಕೌನ್ಸೆಲಿಂಗ್ ಬೆಂಬಲವನ್ನು ಮುಂದುವರಿಸಲಾಗುವುದು ಎಂದು ಆಸ್ಪತ್ರೆ ತಿಳಿಸಿದೆ.

ರೈತ ವಿರೋಧಿ ನೀತಿಯನ್ನು ತಕ್ಷಣವೇ ಕೈ ಬಿಡುವಂತೆ ಉಡುಪಿ ಜಿಲ್ಲಾ ಜೆಡಿಎಸ್ ಆಗ್ರಹ

ಕಾಪು: ಬಿಡದಿ ಮತ್ತು ಹಾರೋಹಳ್ಳಿ ಹೋಬಳಿಯ ಅತ್ಯಂತ ಫಲವತ್ತಾದ ಕೃಷಿ ಭೂಮಿಯನ್ನು ಬಲವಂತವಾಗಿ ವಶಪಡಿಸಿಕೊಳ್ಳುತ್ತಿರುವ ಹಾಗೂ ಮುಂದಿನ ತಿಂಗಳು ಬೃಹತ್ ಪ್ರಮಾಣದಲ್ಲಿ ಭೂ ಸ್ವಾಧೀನ ವಿಸ್ತರಿಸಲು ಯೋಜಿಸಿರುವ ರಾಜ್ಯ ಸರಕಾರದ ರೈತ ವಿರೋಧಿ ನೀತಿಯನ್ನು ತಕ್ಷಣವೇ ಕೈ ಬಿಡುವಂತೆ ಉಡುಪಿ ಜಿಲ್ಲಾ ಜೆಡಿಎಸ್ ಅಧ್ಯಕ್ಷರಾದ ಯೋಗೀಶ್ ಶೆಟ್ಟಿ ತಿಳಿಸಿದ್ದು, ಇಲ್ಲವಾದಲ್ಲಿ ರೈತ ವಿರೋಧಿಹಾಗೂ ದಬದಾಳಿಕೆಯ ವಿರುದ್ಧ ಸೂಕ್ತ ರೀತಿಯ ಹೋರಾಟಕ್ಕೆ ಮುಂದಡಿ ಇರಿಸಲಾಗುತ್ತದೆ ಎಂದರು. ಕಾಪು ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಈ ಬಗ್ಗೆ ಮಾಹಿತಿಯನ್ನು ನೀಡಿದರು.

ಪ್ರಸ್ತುತ ಸರಕಾರವು ಜಾರಿಗೆ ತರುತ್ತಿರುವ ಈ ಯೋಜನೆಯು ಸಾರ್ವಜನಿಕ ಹಿತಾಸಕ್ತಿಯ ಮುಖವಾಡ ಧರಿಸಿದ್ದು, ಇದರ ಹಿಂದೆ ಬೃಹತ್ ರಿಯಲ್ ಎಸ್ಟೇಟ್ ದಂಧೆ ಅಡಗಿದೆ. ಸ್ಥಳೀಯ ಮಣ್ಣಿನ ಮಕ್ಕಳ ಹಾಗೂ ರೈತರ ಹಿತ ರಕ್ಷಣೆಯು ಪ್ರಾಮುಖ್ಯವಾಗಿದ್ದು, 7,500 ಎಕರೆಗೂ ಅಧಿಕ ಭೂಸ್ವಾಧೀನದ ಪ್ರಕ್ರಿಯೆಯನ್ನು ಆರಂಭದಲ್ಲಿಯೇ ಕೈ ಬಿಡಬೇಕು ಎಂದು ಆಗ್ರಹ ಪಡಿಸಿದರು. ಶೇ. 71 ಪಾಲು ರೈತರ ವಿರೋಧದ ನಡುವೆಯೇ ಯೋಜನೆ ಅನುಷ್ಠಾನಕ್ಕೆ ಮುಂದಾದಲ್ಲಿ ಪಾದಯಾತ್ರೆ ನಡೆಸುವ ಮೂಲಕ ವಿರೋಧದ ಹೋರಾಟ ಕೈಗೊಳ್ಳಲಾಗುತ್ತದೆ. ಕರಾಳ ಅಂತಿಮ ಅಧಿಸೂಚನೆಯನ್ನು ತಕ್ಷಣವೇ ರದ್ದುಗೊಳಿಸಬೇಕು. ಭೂ ಸ್ವಾಧೀನದ ವಿರುದ್ಧ ತೀವ್ರ ಪ್ರತಿರೋಧವನ್ನು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸುವ ಮೂಲಕ ಸರಕಾರಕ್ಕೆ ತಲುಪಿಸಲಾಗುವುದು ಎಂದು ತಿಳಿಸಿದರು. ಸುದ್ದಿ ಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ಕೆ. ವಾಸುದೇವ ರಾವ್, ಜಯರಾಮ ಆಚಾರ್ಯ, ದೇವರಾಜ್, ಅನಸೂಯ ಶೆಟ್ಟಿ, ಬಿರ್ತಿ ಗಂಗಾಧರ ಭಂಡಾರಿ, ಜಯ ಪೂಜಾರಿ, ಸುಧಾಕರ ಶೆಟ್ಟಿ ಹೆಜಮಾಡಿ, ಅಶ್ರಫ್, ವೆಂಕಟೇಶ್ ಇದ್ದರು.

ಜೂನ್ 30: ಮಹಿಳೆಯರಿಗೆ ಉದ್ಯಮಶೀಲತಾ ತಿಳುವಳಿಕೆ ಶಿಬಿರ

ಮಂಗಳೂರು: ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್), ಧಾರವಾಡ, ಸಿಡಾಕ್, ಮಂಗಳೂರು ಹಾಗೂ ಜಿಲ್ಲಾ ಕೌಶಲ್ಯ ಮಿಶನ್, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಸ್ವಂತ ಉದ್ಯೋಗವನ್ನು ಸ್ಥಾಪಿಸಲು ಇಚ್ಚಿಸುವವರಿಗಾಗಿ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಎಲ್ಲಾ ವರ್ಗದ ಮಹಿಳಾ ಅಭ್ಯರ್ಥಿಗಳಿಗೆ ಜೂನ್ 30 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಕುಳಾಯಿ ಮಹಿಳಾ ಮಂಡಳಿಯಲ್ಲಿ ಆಯೋಜಿಸಲಾಗಿದೆ. ಸ್ವಂತ ಉದ್ಯಮವನ್ನು ಸ್ಥಾಪಿಸಲು ಬಯಸುವ ಆಸಕ್ತ ಮಹಿಳೆಯರಿಗೆ ಪ್ರೇರೇಪಣೆ, ಸ್ವಂತ ಉದ್ಯಮ ಸ್ಥಾಪನೆಗೆ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು/ಪ್ರೋತ್ಸಾಹ, ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾಭಿವೃದ್ಧಿ ತರಬೇತಿ ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುತ್ತದೆ. ಕಾರ್ಯಕ್ರಮದಲ್ಲಿ 18 ರಿಂದ 50 ವರ್ಷ ವಯೋಮಿತಿಯ, ಓದಲು ಹಾಗೂ ಬರೆಯಲು ಬರುವ ಎಲ್ಲಾ ವರ್ಗದ ಮಹಿಳಾ ಸ್ವ ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಬಹುದು. ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು ಆಧಾರ್ ಕಾರ್ಡ್‌ನ ಪ್ರತಿಯನ್ನು ಕಚೇರಿಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಬಯಸುವವರು ಉರ್ವ ಮಾರ್ಕೆಟ್ ಕಟ್ಟಡದ 2 ನೇ ಮಹಡಿಯಲ್ಲಿರುವ ಸಿಡಾಕ್ ಉಪ ನಿರ್ದೇಶಕರ ಕಚೇರಿ (ದೂ.ಸಂ: 9448812974, 9886035251, 8546894517) ಸಂಪರ್ಕಿಸಬಹುದು ಎಂದು ಸಿಡಾಕ್ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್ ಡಿಕ್ಕಿ ಹೊಡೆದು ಗಾಯಗೊಂಡಿದ್ದ ವ್ಯಕ್ತಿ ಮೃತ್ಯು

ಕಾಸರಗೋಡು: ಬೈಕ್ ಡಿಕ್ಕಿ ಹೊಡೆದು ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮೊಗ್ರಾಲ್ ಪಕ್ವಾನಗರದ ನಿವಾಸಿ, ಮುಸ್ಲಿಂಲೀಗ್‌ನ ಸಕ್ರಿಯ ಕಾರ್ಯಕರ್ತರಾಗಿದ್ದ ಕೆ.ವಿ.ಅಬ್ದುಲ್ ಖಾದರ್ (78) ಮೃತಪಟ್ಟ ಘಟನೆ ನಡೆದಿದೆ.

ನಾಲ್ಕು ದಿನಗಳ ಹಿಂದೆ ಮೊಗ್ರಾಲ್‌ನಲ್ಲಿ ರಸ್ತೆ ಬದಿ ನಡೆದು ಹೋಗುತ್ತಿದ್ದ ವೇಳೆ ಬೈಕೊಂದು ಅವರಿಗೆ ಡಿಕ್ಕಿ ಹೊಡೆದಿತ್ತು. ಇದರಿಂದ ಗಂಭೀರ ಗಾಯಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ರಾತ್ರಿ ಅಸುನೀಗಿದರು. ಅವರು ಹಲವು ವರ್ಷಗಳ ಕಾಲ ಮಸ್ಕತ್‌ನಲ್ಲಿ ಉದ್ಯೋಗದಲ್ಲಿದ್ದರು. ಮೃತರು ಪತ್ನಿ ಮತ್ತು ನಾಲ್ಕು ಮಂದಿ ಮಕ್ಕಳನ್ನು ಅಗಲಿದ್ದಾರೆ.



ಕಾಪು ಮಂಡಲ ಬಿಜೆಪಿ, ರೈತ ಮೋರ್ಚಾ, ಮಜೂರು ಶಕ್ತಿ ಕೇಂದ್ರ ಹಾಗೂ 92ನೇ ಹೇರೂರು ಬೂತ್ ಸಮಿತಿ ವತಿಯಿಂದ ಸಸಿ ನೆಡುವ ಹಾಗೂ ಸಸಿ ವಿತರಣೆ ನಡೆಯಿತು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶಿಲ್ಪಾ ಜಿ. ಸುವರ್ಣ, ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯದರ್ಶಿ ಯತೀಶ್ ಹೇರೂರು, ಕಾಪು ಮಂಡಲ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಕೃಷ್ಣಮಜೂರು, ಪ್ರಮುಖರಾದ ಸಂದೀಪ್, ಪ್ರಸಾದ್ ಆಚಾರ್ಯ, ಅಭಿಷೇಕ್, ಅರುಣ್ ಶೆಟ್ಟಿ, ಪ್ರಸಾದ್ ಶೆಟ್ಟಿ, ಗಣೇಶ್ ಶೆಟ್ಟಿ ಹೇರೂರು, ಮಂಜುಳಾ ಮತ್ತಿತರರಿದ್ದರು.

ರಂಗಸಂಗಾತಿ ಹದಿನೆಂಟನೆಯ ವಾರ್ಷಿಕೋತ್ಸವ ರಂಗಭಾಸ್ಕರ ಪ್ರಶಸ್ತಿಗೆ ಪರಮಾನಂದ ಸಾಲ್ಯಾನ್ ಆಯ್ಕೆ

ಮಂಗಳೂರು: ಮಂಗಳೂರಿನ ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ವರ್ಷಂಪ್ರತಿ ಕೊಡಮಾಡುವ ರಂಗಭಾಸ್ಕರ ಪ್ರಶಸ್ತಿಯನ್ನು ಈ ಬಾರಿ ಪ್ರತಿಭಾನ್ವಿತ ಹಿರಿಯ ನಾಟಕಕಾರ, ತುಳು ಸಾಹಿತಿ, ಸಂಘಟಕ ಪರಮಾನಂದ ಸಾಲ್ಯಾನ್ ಅವರಿಗೆ ಘೋಷಿಸಲಾಗಿದೆ.



ಉಡುಪಿ ವಿಶ್ವನಾಥ ಶೆಣೈ ಪ್ರಾಯೋಜಿತ, ರಂಗಕರ್ಮಿ ದಿವಂಗತ ಭಾಸ್ಕರ ನೆಲ್ಲಿತೀರ್ಥ ನೆನಪಲ್ಲಿ ನೀಡಲಾಗುವ ಪ್ರಶಸ್ತಿಗೆ ಹಿರಿಯ ನಾಟಕಕಾರ, ತುಳು ಸಾಹಿತಿ, ಸಂಘಟಕ, ರಂಗ ಸುದರ್ಶನ ತಂಡದ ಸಂಸ್ಥಾಪಕ ಪರಮಾನಂದ ಸಾಲ್ಯಾನ್ ಅವರನ್ನು ಡಾ.ನಾ.ದಾಮೋದರ ಶೆಟ್ಟಿ, ಡಾ.ಮೀನಾಕ್ಷಿ ರಾಮಚಂದ್ರ ಮತ್ತು ಮೆಗಾಮ್ಯಾಜಿಕ್ ಸ್ಟಾರ್ ಕುದ್ರೋಳಿ ಗಣೇಶ್ ಅವರನ್ನು ಒಳಗೊಂಡ ಸಮಿತಿ ಆಯ್ಕೆ ಮಾಡಿದೆ.

ಪ್ರಶಸ್ತಿ ಸ್ಮರಣಿಕೆ, ನಗದು, ಸನ್ಮಾನ ಪತ್ರ ಒಳಗೊಂಡಿದ್ದು, ಜೂ.21ರಂದು ಪ್ರಶಸ್ತಿ ಪುರಸ್ಕೃತರ ಸ್ವಗೃಹದಲ್ಲಿ ಗಣ್ಯರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಸ್ಥೆಯ ಅಧ್ಯಕ್ಷ ಕೆ.ಗೋಪಾಲಕೃಷ್ಣ ಶೆಟ್ಟಿ ತಿಳಿಸಿದ್ದಾರೆ.


ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗರಿ ಎಂಟರ್‌ಪ್ರೈಸಸ್‌ನ ಆಗರಿ ರಾಘವೇಂದ್ರ ರಾವ್, ರಂಗಸಂಗಾತಿ ಕಲಾಪೋಷಕ ಉಡುಪಿ ವಿಶ್ವನಾಥ ಶೆಣೈ, ಬಂಟರ ಸಂಘದ ಕಾರ್ಯದರ್ಶಿ ಎಂ.ಕರುಣಾಕರ ಶೆಟ್ಟಿ, ಹಿರಿಯ ನಟ ನವೀನ್ ಡಿ. ಪಡೀಲ್, ಗೋಪಿನಾಥ್ ಭಟ್, ಸಂತೋಷ್ ಶೆಟ್ಟಿ, ಜಗನ್ನಾಥ ಕಲ್ಲಾಪು, ಮೈಮ್ ರಾಮದಾಸ್, ಕನ್ನಡ ಸಂಸ್ಕೃತಿ ಇಲಾಖೆಯ ರಾಜೇಶ್ ಬಿ. ಭಾಗವಹಿಸುವರು.

ಪರಮಾನಂದ ಸಾಲ್ಯಾನ್ ಅವರು ಮುಂಗಾರು ಮತ್ತು ಹೊಸದಿಗಂತ ದಿನಪತ್ರಿಕೆಯಲ್ಲಿ ಉಪ ಸಂಪಾದಕರಾಗಿ, ಬಿಲ್ಲವರ ವಿಶ್ವವಾಣಿ ಮತ್ತು ಯುವವಾಹಿನಿ ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ರಂಗ ಸುದರ್ಶನ, ಪರಮ ಪದ್ಮ ಕಲಾವಿದರು, ಸುದರ್ಶನ್ ಕ್ರಿಯೇಶನ್ಸ್ ಎಂಬ ಸಂಸ್ಥೆಗಳ ನಿರ್ದೇಶಕರಾಗಿ ದುಬೈ, ಅಬುದಾಬಿ ಮಾತ್ರವಲ್ಲದೆ ದೇಶದ ವಿವಿಧ ಕಡೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ನೂರಾರು ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕ, ಕಿರುನಾಟಕ, ಪ್ರಹಸನಗಳನ್ನು ಬರೆದು ನಿರ್ದೇಶನ ನೀಡಿದ್ದಾರೆ.

ಶ್ರೀ ಪಾಡಿ ಇಗ್ಗುತ್ತಪ್ಪ ಕ್ಷೇತ್ರದ ಬೆಟ್ಟದಲ್ಲಿ ಖಾಸಗಿ ವ್ಯಕ್ತಿಗಳಿಂದ ಕಾಮಗಾರಿ | ವ್ಯಾಪಕ ವಿರೋಧ | ಪ್ರತಿಭಟನೆಗೆ ಸಿದ್ಧತೆ

'ಮಲ್ಮ ಕುಂದ್' ರಕ್ಷಣೆಗೆ ಕೊಡವ ಸಮಾಜ

ಮಡಿಕೇರಿ : ಶ್ರೀ ಪಾಡಿ ಇಗ್ಗುತ್ತಪ್ಪ ಕ್ಷೇತ್ರದ ಮಲ್ಮ ಕುಂದ್ (ಬೆಟ್ಟ)ನ ರಕ್ಷಣೆಗೆ ಜಬ್ಬೂಮಿ ಚಾರಿಟೇಬಲ್ ಟ್ರಸ್ಟ್ ಬದ್ಧವಾಗಿದೆ. ಅಲ್ಲದೆ ಸ್ಥಳೀಯ ಗ್ರಾಮಸ್ಥರ ನೇತೃತ್ವದ ಯಾವುದೇ ಹೋರಾಟಕ್ಕೂ ಸಿದ್ಧವಾಗಿದೆ ಎಂದು ಟ್ರಸ್ಟ್‌ನ ಸಂಚಾಲಕ ಚೊಟ್ಟೆಕ್ ಮಾಡ ರಾಜೀವ್ ಬೋಪಯ್ಯ ಹಾಗೂ ಪದಾಧಿಕಾರಿಗಳು ತಿಳಿಸಿದ್ದಾರೆ.



ಮಲ್ಮ ಕುಂದ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗೆ ಪತ್ರಿಕಾ ಪ್ರಕಟಣೆಯ ಮೂಲಕ ತೀವ್ರ ವಿರೋಧ ವ್ಯಕ್ತಪಡಿಸಿರುವ ಅವರು ಶ್ರೀ ಪಾಡಿ ಇಗ್ಗುತ್ತಪ್ಪ ಕ್ಷೇತ್ರಕ್ಕೆ ಧಕ್ಕೆ ಬಂದರೆ ಇಡೀ ಕೊಡವ ಹಾಗೂ ಕೊಡವ ಭಾಷಿಕ ಜನಾಂಗಕ್ಕೆ ಧಕ್ಕೆ ಬಂದ ಹಾಗೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹೊರ ಜಿಲ್ಲೆಯಿಂದ ಆಗಮಿಸಿ ಭೂಮಿಯನ್ನು ಖರೀದಿಸಿ ಶ್ರೀಪಾಡಿ ಕ್ಷೇತ್ರದ ಮಲ್ಮ ಕುಂದ್ (ಬೆಟ್ಟ) ನಲ್ಲಿ ಜಾಗವನ್ನು ಸಮತಟ್ಟು ಮಾಡಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ಸಾರ್ವಜನಿಕವಾಗಿ ಈ ಕಾಮಗಾರಿಗೆ ತೀವ್ರ ವಿರೋಧ ವ್ಯಕ್ತವಾಗಿದ್ದು, ಶ್ರೀ ಪಾಡಿಗ್ಗುತ್ತಪ್ಪ ದೇವಸ್ಥಾನ ಸಮಿತಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ತೆಗೆದುಕೊಳ್ಳುವ ನಿರ್ಣಯಕ್ಕೆ ಮತ್ತು ಹೋರಾಟದ ನಿರ್ಧಾರಕ್ಕೆ ಜಬ್ಬೂಮಿ ಚಾರಿಟೇಬಲ್ ಟ್ರಸ್ಟ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಲಿದೆ. ಜೂ. 20ರಂದು ನಡೆಯುವ ವಿಶೇಷ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯಕ್ಕೂ ಟ್ರಸ್ಟ್ ಬೆಂಬಲ ನೀಡಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕೊಡಗು ಜಿಲ್ಲೆ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದೆ, ಈ ಬಗ್ಗೆ ಅರಿವಿದ್ದರೂ ಇಲ್ಲಿನ ಪರಿಸರದ ಮೇಲೆ ನಿರಂತರ ದಬ್ಬಾಳಿಕೆ ನಡೆಯುತ್ತಿದೆ. ಪರಿಸರ ರಕ್ಷಣೆಯ ನಿಯಮಗಳನ್ನು ಗಾಳಿಗೆ ತೂರಿ ಎಗ್ಗಿಲ್ಲದೆ ಭೂ ಪರಿವರ್ತನೆ ಮಾಡಿ ದೊಡ್ಡ ದೊಡ್ಡ ರೆಸಾರ್ಟ್‌ಗಳನ್ನು ಮತ್ತು ಲೇಔಟ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಜಿಲ್ಲೆಯ ಪರಿಸರಕ್ಕೆ ಹಾಗೂ ಸ್ಥಳೀಯ ಮೂಲ ನಿವಾಸಿಗಳಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದ ಕೊಡಗು ಮಾರಕ ಯೋಜನೆಗಳ ವಿರೋಧಿ ಹೋರಾಟ ವೇದಿಕೆಯ ಮೂಲಕ ನಿರಂತರ ಹೋರಾಟವನ್ನು ನಡೆಸುತ್ತಾ ಬರಲಾಗುತ್ತಿದೆ. ಆದರೆ ಯಾವುದೇ ಭಯವಿಲ್ಲದೆ ಬೆಟ್ಟಗುಡ್ಡಗಳಿಗೆ ಮತ್ತು ಸೂಕ್ಷ್ಮ ಪ್ರದೇಶಗಳಿಗೆ ಹಾನಿ ಮಾಡಲಾಗುತ್ತಿದೆ.

ಪ್ರಸ್ತುತ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದ ಅಸ್ತಿತ್ವಕ್ಕೆ ಧಕ್ಕೆ ತರುವ ರೀತಿಯಲ್ಲಿ ಮಲ್ಮ ಬೆಟ್ಟದ ಒಡಲಿನಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಯಿಂದ ಮುಂದೊಂದು ದಿನ ಈ ಭಾಗದಲ್ಲಿ ಭೂಕುಸಿತವಾಗುವ ಸಾಧ್ಯತೆಗಳಿದೆ. ಅಲ್ಲದೆ ಪರಿಸರ ಅಸಮತೋಲನ ಉಂಟಾಗಿ ಸಾಕಷ್ಟು ತೊಂದರೆಗಳು ಎದುರಾಗಬಹುದು. ಜಿಲ್ಲಾಡಳಿತ, ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಹಾಗೂ ಸರಕಾರ ತಕ್ಷಣ ಎಚ್ಚೆತ್ತುಕೊಂಡು ಸ್ಥಳೀಯ ಜನರ ಭಾವನೆಗೆ ಗೌರವ ನೀಡಿ ಕಾಮಗಾರಿಗೆ ನಿರ್ಬಂಧ ವಿಧಿಸಬೇಕು ಎಂದು ಆಗ್ರಹಿಸಿದ್ದಾರೆ.

> ಪರಿಸರ ರಕ್ಷಣೆಯ ನಿಯಮಗಳನ್ನು ಗಾಳಿಗೆ ತೂರಿ ಎಗ್ಗಿಲ್ಲದೆ ಭೂ ಪರಿವರ್ತನೆ ಮಾಡಿ ದೊಡ್ಡ ದೊಡ್ಡ ರೆಸಾರ್ಟ್‌ಗಳನ್ನು ಮತ್ತು ಲೇಔಟ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಕೊಡಗಿನಲ್ಲಿ ಭೂ ಪರಿವರ್ತನೆಗೆ ಸಾಕಷ್ಟು ನಿಬಂಧನೆ ಮತ್ತು ನಿರ್ಬಂಧಗಳಿವೆ. ಆದರೂ ಆಡಳಿತ ವ್ಯವಸ್ಥೆ ನಿರಂತರ ಭೂ ಪರಿವರ್ತನೆಗೆ ಯಾವ ಕಾನೂನಿನಡಿ ಅವಕಾಶ ನೀಡುತ್ತಿದೆ ಎನ್ನುವುದನ್ನು ಜಿಲ್ಲಾಡಳಿತ ಸ್ಪಷ್ಟಪಡಿಸಬೇಕು. ಒಂದು ವೇಳೆ ಅಧಿಕಾರಿಗಳು ಕಾನೂನನ್ನು ಉಲ್ಲಂಘಿಸಿ ಭೂ ಪರಿವರ್ತನೆ ಮಾಡಿದ್ದರೆ ತಪ್ಪಿತಸ್ಥ ಅಧಿಕಾರಿಗಳನ್ನು ತಕ್ಷಣ ಅಮಾನತಿನಲ್ಲಿಟ್ಟು ಅವರ ವಿರುದ್ಧ ತನಿಖೆ ನಡೆಸಬೇಕು.

ಜಿಲ್ಲೆಯಲ್ಲಿ ಇಲ್ಲಿಯವರೆಗೆ ನಡೆದಿರುವ ಭೂ ಪರಿವರ್ತನೆ ಕುರಿತು ವಿಶೇಷ ತನಿಖಾ ತಂಡದ ಮೂಲಕ ಪರಿಶೀಲಿಸಿ ವರದಿಯನ್ನು ಸರಕಾರ ಸಿದ್ಧಪಡಿಸಬೇಕು. ಆ ಮೂಲಕ ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಬೇಡಿಕೆಗಳನ್ನು ಸರಕಾರ ಪರಿಗಣನೆಗೆ ತೆಗೆದುಕೊಳ್ಳದೆ ಹೋದರೆ ಮುಂದಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ರಾಜೀವ್ ಬೋಪಯ್ಯ, ಉಪಾಧ್ಯಕ್ಷ ಅಚಾಂಡಿರ ಕುಶಾಲಪ್ಪ, ಕಾರ್ಯದರ್ಶಿ ಅಣ್ಣೀರ ಹರೀಶ್ ಮಾದಪ್ಪ, ಖಜಾಂಚಿ ಜಮ್ಮಡ ಗಣೇಶ್ ಅಯ್ಯಣ್ಣ, ಮಲ್ಲಮಾಡ ಪ್ರಭು ಪೊಣ್ಣಚ್ಚ, ಮಚ್ಚಮಾಡ ಅನಿಶ್ ಮಾದಪ್ಪ, ಮಾಳೇಟಿರ ಶ್ರೀನಿವಾಸ್, ಪುಚ್ಚಿಮಂಡ ಬಬ್ಲು, ನೆರವಂಡ ಅನೂಪ್, ಚೋಕಂಡ ಸೂರಜ್, ಚೆದಂಡ ಶಮ್ಮಿ ಮಾದಯ್ಯ, ಪಾಡೆಯಂಡ ದೀಪಕ್ ಹಾಗೂ ಉಳುವಂಗಡ ಲೋಹಿತ್ ಭೀಮಯ್ಯ ಎಚ್ಚರಿಕೆ ನೀಡಿದ್ದಾರೆ.

ನಾಪೋಕ್ಲು ಕೊಡವ ಸಮಾಜದಿಂದ ಹೋರಾಟಕ್ಕೆ ಬೆಂಬಲ

ಮಡಿಕೇರಿ: ಪಾಡಿ ಶ್ರೀ ಇಗ್ಗುತ್ತಪ್ಪ ದೇವರ ದೇವನೆಲೆಯಾದ ಮಲ್ಮ ಬೆಟ್ಟದಲ್ಲಿ ಖಾಸಗಿ ವ್ಯಕ್ತಿಗಳು ನಡೆಸುತ್ತಿರುವ ಕಾಮಗಾರಿಯ ವಿರುದ್ಧ ಸ್ಥಳೀಯರು ನಡೆಸುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ನಾಪೋಕ್ಲು ಕೊಡವ ಸಮಾಜ ತಿಳಿಸಿದೆ.

ಪತ್ರಿಕಾ ಪ್ರಕಟಣೆ ನೀಡಿರುವ ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಮಲ್ಮ ಬೆಟ್ಟ ವ್ಯಾಪ್ತಿಯಲ್ಲಿ ಜಾಗವನ್ನು ಖರೀದಿಸಿರುವ ಖಾಸಗಿ ವ್ಯಕ್ತಿಗಳು ಪರಿಸರಕ್ಕೆ ವಿರುದ್ಧವಾದ ಮತ್ತು ಶ್ರೀ ಇಗ್ಗುತ್ತಪ್ಪ ದೇವರ ದೇವನೆಲೆಯ ಪಾವಿತ್ರ್ಯತೆಗೆ ಧಕ್ಕೆ ಬರುವಂತೆ ಯಾವುದೇ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವುದನ್ನು ಜೂ. 19ರಂದು ನಡೆಸಿದ ಸಮಾಜದ ಆಡಳಿತ ಮಂಡಳಿಯ ಸಭೆಯಲ್ಲಿ ವಿರೋಧಿಸಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಈ ವಿಚಾರವಾಗಿ ಸಮಾಜವು ಊರಿನವರ ಹಾಗೂ ನಾಡಿನವರ ಬೆಂಬಲಕ್ಕೆ ಸದಾ ನಿಲ್ಲುತ್ತದೆ. ಅಲ್ಲದೆ ಹೋರಾಟಕ್ಕೂ ಸಂಪೂರ್ಣ ಬೆಂಬಲವನ್ನು ನೀಡುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಸರಕಾರಿ ಜಿಟಿಟಿಸಿ ಡಿಪ್ಲೋಮಾ ಕಾಲೇಜಿನಲ್ಲಿ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ

ಮಂಗಳೂರು: ಬೈಕಂಪಾಡಿಯಲ್ಲಿರುವ ಸರಕಾರಿ ಜಿಟಿಟಿಸಿ ಡಿಪ್ಲೋಮಾ ಕಾಲೇಜಿನಲ್ಲಿ 2026–27ನೇ ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಈಗಾಗಲೇ ನಡೆಯುತ್ತಿದೆ. ಇನ್ನೂ 50ಸೀಟುಗಳು ಖಾಲಿಯಿದ್ದು, ಅರ್ಹರು ಅರ್ಜಿ ಸಲ್ಲಿಸಬಹುದು ಎಂದು ಕಾಲೇಜಿನ ಪ್ರಾಂಶುಪಾಲ ಲಕ್ಷ್ಮೀನಾರಾಯಣ್ ಸಿ.ಆರ್. ತಿಳಿಸಿದರು.

ಮೆಕ್ಯಾನಿಕಲ್ ಇಂಜಿನಿಯರಿಂಗ್‌ಗೆ ಸಂಬಂಧಿಸಿದ ಡಿಪ್ಲೋಮಾ ಇನ್ ಟೂಲ್ ಆ್ಯಂಡ್ ಡೈ ಮೇಕಿಂಗ್, ಡಿಪ್ಲೋಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಹಾಗೂ ಕಂಪ್ಯೂಟರ್ ಸೈನ್ಸ್‌ಗೆ ಸಂಬಂಧಿಸಿದ ಡಿಪ್ಲೋಮಾ ಇನ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್ ಕೋರ್ಸ್‌ಗಳಲ್ಲಿ ಸುಮಾರು 50ರಷ್ಟು ಸೀಟುಗಳು ಖಾಲಿಯಿವೆ. ನೇರವಾಗಿ ಕಾಲೇಜಿಗೆ ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಸ್ಥಳದಲ್ಲೇ ಪ್ರವೇಶಾತಿ ನೀಡಲಾಗುವುದು. ಈ ಎಲ್ಲ

ಕೋರ್ಸ್‌ಗಳ ಅವಧಿ 4 ವರ್ಷಗಳಾಗಿದ್ದು, ವಿದ್ಯಾರ್ಥಿಗಳಿಗೆ ಅಂತಿಮ ವರ್ಷದ ಅವಧಿಯಲ್ಲಿ ಪ್ರತಿಷ್ಠಿತ ಕಂಪನಿಗಳಲ್ಲಿ ಒಂದು ವರ್ಷದ ಕಡ್ಡಾಯ ಇಂಟರ್ನ್‌ಶಿಪ್ ವ್ಯವಸ್ಥೆ ಕಲ್ಪಿಸಲಾಗುವುದು. ಈ ಅವಧಿಯಲ್ಲಿ ವಿದ್ಯಾರ್ಥಿಗಳು 18000–23000 ಸ್ಟೈಫಂಡ್ ಪಡೆಯುತ್ತಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸರಕಾರದಿಂದ ಸ್ಕಾಲರ್‌ಶಿಪ್ ಕೂಡಾ ಸಿಗಲಿದೆ. ಈ ಕೋರ್ಸ್ ಮಾಡಿದವರಿಗೆ ದೇಶ–ವಿದೇಶಗಳಲ್ಲಿ ಉದ್ಯೋಗ ಖಚಿತವಾಗಿದ್ದು, ಈಗಾಗಲೇ ಹಲವರು ವಿದೇಶದಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ.ಕೆಲವರು ತಮ್ಮದೇ ಕಂಪನಿ ಆರಂಭಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.0824–2408003ಗೆ ಸಂಪರ್ಕಿಸಬಹುದು ಎಂದರು.

ಉಪನ್ಯಾಸಕ ಗೌತಮ್ ಉಪಸ್ಥಿತರಿದ್ದರು.

> ಸರಕಾರಿ ಜಿಟಿಟಿಸಿ ಡಿಪ್ಲೋಮಾ ಕಾಲೇಜಿನಲ್ಲಿ ಶೇ. 70ರಷ್ಟು ಪ್ರಾಯೋಗಿಕ ಹಾಗೂ ಶೇ. 30ರಷ್ಟು ಪಠ್ಯ ಕಲಿಕೆ ಇರಲಿದೆ. ಕಳೆದ ವರ್ಷ ಶೇ 93ರಷ್ಟು ದಾಖಲಾತಿ ಆಗಿದ್ದು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ವ್ಯವಸ್ಥೆಯೂ ಇದೆ. ದೂರದ ಊರಿನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಯೂ ಕ್ಯಾಂಪಸ್ ಒಳಗೆ ಇದೆ. ಸದ್ಯ ಬೈಕಂಪಾಡಿಯ ಎರಡು ಎಕರೆ ಪ್ರದೇಶದಲ್ಲಿ ಕಾಲೇಜು ಕಾರ್ಯಾಚರಿಸುತ್ತಿದ್ದು, ಮುಂದೆ ಮುಡಿಪುವಿನಲ್ಲಿ 10 ಎಕರೆ ಪ್ರದೇಶದಲ್ಲಿ ಕಾಲೇಜು ವಿಸ್ತರಣೆಗೆ ಚರ್ಚೆ ನಡೆದಿದೆ.
>
> ■ ಲಕ್ಷ್ಮೀನಾರಾಯಣ್ ಸಿ.ಆರ್., ಪ್ರಾಂಶುಪಾಲರು ಜಿಟಿಟಿಸಿ

ಕೊಡವ ಕೌಟುಂಬಿಕ ಹಾಕಿ ಹಬ್ಬದ ಪೂರ್ವಭಾವಿ ಸಭೆ

ಮಡಿಕೇರಿ: ಮುಂದಿನ ಸಾಲಿನ ಏಪ್ರಿಲ್–ಮೇ ತಿಂಗಳಲ್ಲಿ ನಡೆಯಲಿರುವ ಕೊಡವ ಕೌಟುಂಬಿಕ ಹಾಕಿ ಹಬ್ಬದ ಪ್ರಾಯೋಜಕತ್ವವನ್ನು ಅಜ್ಜಿಕುಟ್ಟಿರ ಕುಟುಂಬದವರು ವಹಿಸುತ್ತಿದ್ದು, ಇದರ ಪೂರ್ವಭಾವಿ ಸಭೆ ಶನಿವಾರ ಗೋಣಿಕೊಪ್ಪಲುವಿನಲ್ಲಿ ನಡೆಯಿತು. ಅಜ್ಜಿಕುಟ್ಟಿರ ಕುಟುಂಬದ ಹಾಕಿ ನಮ್ಮೆ ಆಯೋಜನೆಯ ಅಧ್ಯಕ್ಷರು ಹಾಗೂ ಸಮಿತಿಯವರು ಭಾಗವಹಿಸಿದ್ದ ಈ ಸಭೆಯಲ್ಲಿ ಮಾತನಾಡಿದ ವೀರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು, ಮುಂದಿನ ಸಾಲಿನಲ್ಲಿ ವಿಜೃಂಭಣೆಯಿಂದ ಹಾಕಿ ನಮ್ಮೆ ನಡೆಸುವ ನಿಟ್ಟಿನಲ್ಲಿ ಹಲವು ಅಮೂಲ್ಯ ಸಲಹೆ ಹಾಗೂ ಸೂಚನೆಗಳನ್ನು ನೀಡಿದರು. ಅಜ್ಜಿಕುಟ್ಟಿರ ಕುಟುಂಬದ ಹಾಕಿ ನಮ್ಮೆಯ ಅಧ್ಯಕ್ಷ ಅಜ್ಜಿಕುಟ್ಟಿರ ನರೇನ್ ಕಾರ್ಯಪ್ಪ ಮಾತನಾಡಿ, ಹಾಕಿ ಪಂದ್ಯಾವಳಿಯನ್ನು ಅಭೂತಪೂರ್ವವಾಗಿ ನಡೆಸುವುದರೊಂದಿಗೆ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಂತೆ ಎಲ್ಲರೂ ಕಾರ್ಯ ನಿರ್ವಹಿಸಬೇಕೆಂದು ಕರೆ ನೀಡಿದರು. ಕೊಡವ ಹಾಕಿ ಅಕಾಡೆಮಿಯ ಸಹಭಾಗಿತ್ವದಲ್ಲಿ ಆಯೋಜನೆಗೊಂಡಿದ್ದ ಈ ಸಭೆಯಲ್ಲಿ ಪಂದ್ಯಾವಳಿಯ ಯಶಸ್ವಿಗೆ ಎಲ್ಲರ ಸಹಕಾರ ಬೇಕೆಂಬ ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು.

ಈ ಸಂದರ್ಭದಲ್ಲಿ ಅಜ್ಜಿಕುಟ್ಟಿರ ಕುಟುಂಬದ ಸದಸ್ಯರು, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ಅಕಾಡೆಮಿಯ ಸದಸ್ಯರು, ನಿರ್ದೇಶಕರು ಹಾಗೂ ಪ್ರಮುಖರು ಹಾಜರಿದ್ದರು.

'ಎ ಬಯೊಗ್ರಾಫಿಕಲ್ ಸ್ಕೆಚ್ ಆಫ್ ಮುದ್ದು ಮೂಡುಬೆಳ್ಳೆ' ಕೃತಿ ಬಿಡುಗಡೆ

ಮಂಗಳೂರು: ಡಾ.ಎಸ್.ಎನ್.ಡಿ. ಪೂಜಾರಿ ಅವರು ಬರೆದಿರುವ ಲೇಖಕ ಮುದ್ದು ಮೂಡುಬೆಳ್ಳೆ ಅವರ ಜೀವನ ಕಥನ 'ಎ ಬಯೊಗ್ರಾಫಿಕಲ್ ಸ್ಕೆಚ್ ಆಫ್ ಮುದ್ದು ಮೂಡುಬೆಳ್ಳೆ' ಎಂಬ ಆಂಗ್ಲ ಕೃತಿ ಮಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ಬಿಡುಗಡೆಗೊಂಡಿತು.



ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ವಿಶ್ರಾಂತ ಕುಲಪತಿ, ತುಳು ಕನ್ನಡ ವಿದ್ವಾಂಸ ಪ್ರೊ. ಬಿ.ಎ. ವಿವೇಕ ರೈ, ಮುದ್ದು ಮೂಡುಬೆಳ್ಳೆಯವರು ಕನ್ನಡ, ತುಳು, ಇಂಗ್ಲಿಷ್, ಕೊಂಕಣಿ ಭಾಷೆಯಲ್ಲಿ ಸಾಹಿತ್ಯ ಬರೆದಿದ್ದಾರೆ. ಕರಾವಳಿಯನ್ನು ಬಹುಭಾಷೆಯ ಆಡೊಂಬೋಲ ಎಂದು ಕರೆಯುತ್ತೇವೆ. ಬಹುತ್ವ ಎನ್ನುವುದು ಕೇವಲ ಪ್ರದರ್ಶನವಲ್ಲ. ಸಾಹಿತ್ಯದಲ್ಲಿಯೂ ಬಹುತ್ವವು ಬೆರೆತುಕೊಂಡಾಗ ಅದು ನಿಜವಾದ ಸಾಹಿತ್ಯದ ಸಮನ್ವಯವಾಗುತ್ತದೆ. ಅಂತಹ ಸಮನ್ವಯವನ್ನು ಯಾವುದೇ ದೊಡ್ಡ ಮಾತುಗಳಿಲ್ಲದೆ ಮುದ್ದು ಮೂಡುಬೆಳ್ಳೆ ಬರೆದಿದ್ದಾರೆ ಎಂದರು.

ಬರವಣಿಗೆಗೆ ಅಧ್ಯಯನದ ಜತೆಗೆ ಅನುಭವವೂ ಅಗತ್ಯ. ಬದುಕಿನ ಅನುಭವನ್ನು ಒಂದು ಕ್ಷಣವೂ ತಪ್ಪಿಸಿಕೊಳ್ಳದೆ ಅದನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಅವುಗಳ ಮೂಲಕ ಬದುಕು ಕಟ್ಟಿಕೊಂಡು ಆ ಮೂಲಕ ಬರೆಯುವಾತ ನಿಜವಾದ ಲೇಖಕನಾಗುತ್ತಾನೆ. ಮುದ್ದು ಮೂಡುಬೆಳ್ಳೆಯವರ ಜೀವನ ಚಿತ್ರಣದ ಈ ಪುಸ್ತಕ ಸಾಹಸ ಗಾಥೆಯಾಗಿ ಮೂಡಿ ಬಂದಿದೆ. ಅವರು ಮಾಡದ ಕೆಲಸವಿಲ್ಲ. ಕವನ, ಕಥೆ, ಕಾದಂಬರಿ, ವಿಮರ್ಶೆ, ಸಂಶೋಧನೆ, ನಾಟಕ ಇವುಗಳನ್ನೆಲ್ಲಾ ಅವರು ಬರೆಯಲು ಸಾಧ್ಯವಾಗಿದ್ದು, ತಮ್ಮ ಬದುಕಿನಲ್ಲಿ ಸಿಕ್ಕಿದ ಅನುಭವಗಳನ್ನು ಅವರು ದಕ್ಕಿಸಿಕೊಂಡ ಕಾರಣದಿಂದ. ನಿಜವಾದ ಲೇಖಕರ ಅನುಭವದ ಮೂಟೆ ಅವರ ಬೆನ್ನ ಹಿಂದೆ ಇರುತ್ತದೆ. ಮುದ್ದು ಮೂಡುಬೆಳ್ಳೆಯವರಲ್ಲಿ ಆ ತರಹದ ಅನುಭವ ಇದೆ ಎಂದು ವಿಶ್ಲೇಷಿಸಿದರು.

ಕಸಾಪ ಜಿಲ್ಲಾಧ್ಯಕ್ಷ ಡಾ.ಎಂ.ಪಿ. ಶ್ರೀನಾಥ್ ಶುಭ ಹಾರೈಸಿದರು. ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್. ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ಸಾಹಿತಿ ಚಂದ್ರಕಲಾ ನಂದಾವರ, ಭಾಸ್ಕರ ರೈ ಕುಕ್ಕುವಳ್ಳಿ, ಸುಖಾಲಾಕ್ಷಿ ವೈ. ಸುವರ್ಣ, ಲತೀಶ್ ಪಾಲ್ದನೆ, ಹೆನ್ರಿ ಎಂ. ಪೆರ್ನಾಲ್, ಗೀತಾ ಲಕ್ಷ್ಮೀಶ್ ಮೊದಲಾದವರು ಭಾಗವಹಿಸಿದ್ದರು.

ಲೇಖಕ ಮುದ್ದು ಮೂಡುಬೆಳ್ಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಕೃತಿ ಆಶಯ ಪಬ್ಲಿಕೇಶನ್ಸ್‌ನ ಕಲ್ಲೂರ ನಾಗೇಶ ಕಾರ್ಯಕ್ರಮ ನಿರೂಪಿಸಿದರು.

ವಾಚನಾ ಮಾಸಾಚರಣೆಯ ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆ

ಪಿ.ಎನ್.ಪಣಿಕ್ಕರ್ ಸಾಮಾಜಿಕ ಕ್ಷೇತ್ರದಲ್ಲಿ ಅದ್ಭುತ ಚಟುವಟಿಕೆ ಮುನ್ನಡೆಸಿದ ವಿಶಿಷ್ಟ ಪ್ರತಿಭೆ

ಕಾಸರಗೋಡು: ಗ್ರಂಥಾಲಯ ಚಳವಳಿಯ ಸಂಸ್ಥಾಪಕ ಪಿ.ಎನ್.ಪಣಿಕ್ಕರ್ ಅವರು ಕೇರಳದ ಸಾಮಾಜಿಕ ಕ್ಷೇತ್ರದಲ್ಲಿ ಅದ್ಭುತ ಚಟುವಟಿಕೆಗಳನ್ನು ಮುನ್ನಡೆಸಿದ ವಿಶಿಷ್ಟ ಪ್ರತಿಭೆ ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಹೇಳಿದ್ದಾರೆ.

ಚೆರ್ಕಳ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಶಿಹಾಬ್ ತಂಙಳ್ ಸ್ಮಾರಕ ಮಂಟಪದಲ್ಲಿ ಜಿಲ್ಲಾಡಳಿತ ಹಾಗೂ ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಮಾಹಿತಿ ಕಚೇರಿ ಶುಕ್ರವಾರ ಆಯೋಜಿಸಿದ್ದ ವಾಚನಾ ಮಾಸಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಓದುವ ದಿನದ ಸಂದೇಶ ನೀಡಿದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರು ಓದುವುದು ಜೀವನದ ಒಂದು ಭಾಗವಾಗಬೇಕಾದ ಅಂಶವಾಗಿದೆ. ಮಕ್ಕಳು ಪಠ್ಯಕ್ರಮದ ಜೊತೆಗೆ ಪಠ್ಯೇತರ ವಿಷಯಗಳಲ್ಲಿಯೂ ಉತ್ತಮರಾಗಿರಬೇಕು ಮತ್ತು ಓದುವುದರಿಂದ ಅವರ ಮಾತನಾಡುವ ಶೈಲಿ ಮತ್ತು ಸಂವಹನವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಹೇಳಿದರು.



ಚೆಂಗಳ ಗ್ರಾಮ ಪಂಚಾಯತ್ ಅಧ್ಯಕ್ಷ ವಸಂತ ಅಜಕ್ಕೋಡು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಬ್ಲಾಕ್ ಪಂಚಾಯತ್ ಅಧ್ಯಕ್ಷ ಅಬ್ದುಲ್ಲ ಕುಂಞಿ ಚೆರ್ಕಳ ಗೌರವ ಅತಿಥಿಯಾಗಿದ್ದರು.

ಸಮಾರಂಭದಲ್ಲಿ ಒಬ್ಬ ಶಿಕ್ಷಕ ಒಂದು ಪುಸ್ತಕ ಕಾರ್ಯಕ್ರಮದ ಮೂಲಕ ಸಂಗ್ರಹಿಸಲಾದ ಪುಸ್ತಕಗಳನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮಕ್ಕಳಿಗೆ ವಿತರಿಸಿದರು.

ಕಳೆದ ಐದು ವರ್ಷಗಳಿಂದ ಚೆರ್ಕಳ ಶಾಲೆಯಲ್ಲಿ ನಡೆಯುತ್ತಿರುವ ಮೆಗಾ ರಸಪ್ರಶ್ನೆಯ ಈ ವರ್ಷದ ಓದುವ ದಿನದ ಲೋಗೋ ವಿಜ್ಞಾನ ಜಲಕಂ 2026–27ನ್ನು ಜಿಲ್ಲಾಧಿಕಾರಿಗಳು ಬಿಡುಗಡೆಗೊಳಿಸಿದರು. ಜಿಲ್ಲಾ ಮಾಹಿತಿ ಕಚೇರಿಯಿಂದ ಶಾಲಾ ಗ್ರಂಥಾಲಯಕ್ಕೆ ಒದಗಿಸಲಾದ ಪುಸ್ತಕಗಳನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಶಾಲಾ ಮುಖ್ಯೋಪಾಧ್ಯಾಯಿನಿಗೆ ಹಸ್ತಾಂತರಿಸಿದರು.

> 1945ರಲ್ಲಿ ಗ್ರಂಥಾಲಯ ಹುಟ್ಟಿಕೊಂಡಾಗ ದೇಶವು ಜ್ಞಾನದಿಂದ ಮಾತ್ರ ಬೆಳೆಯಲು ಸಾಧ್ಯ ಎಂಬ ಕಲ್ಪನೆಯೊಂದಿಗೆ ಜ್ಞಾನ ಕೇಂದ್ರಗಳನ್ನು ರಚಿಸಿದ ವ್ಯಕ್ತಿ ಪಿ.ಎನ್.ಪಣಿಕ್ಕರ್ ಅವರಾಗಿದ್ದಾರೆ. ಓದುವ ಮೂಲಕ ಬೆಳೆಯಿರಿ, ಯೋಚಿಸಿ ಮತ್ತು ಬುದ್ಧಿವಂತಿಕೆಯನ್ನು ಪಡೆಯಿರಿ ಎಂಬ ತತ್ವದ ಮೇಲೆ ಕೇಂದ್ರೀಕರಿಸುವ ಮೂಲಕ ಅವರು ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗಳಿಗೆ ನಾಂದಿ ಹಾಡಿದರು ಎಂಬುದನ್ನು ಸಾಬು ಅಬ್ರಹಾಂ ನೆನಪಿಸಿದರು.

ಡಾ. ಸಂತೋಷ್ ಪನೆಯಾಲ್ ಸಾಂಸ್ಕೃತಿಕ ಉಪನ್ಯಾಸ ನೀಡಿದರು. ಪಿ.ಎನ್.ಪಣಿಕ್ಕರ್ ಫೌಂಡೇಶನ್ ಅಧ್ಯಕ್ಷ ಪ್ರೊ.ಕೆ.ಪಿ.ಜಯರಾಜನ್ ಅವರು ಪಿ.ಎನ್.ಪಣಿಕ್ಕರ್ ಸ್ಮರಣಾರ್ಥ ಉಪನ್ಯಾಸ ನೀಡಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಸಿ.ವಿ. ಸುಬೈದಾ ಓದುವ ದಿನದ ಪ್ರತಿಜ್ಞೆಯನ್ನು ಬೋಧಿಸಿದರು. ಜಿಲ್ಲಾ ಪಂಚಾಯತ್ ಸದಸ್ಯೆ ಜಸ್ನಾ ಮನಾಫ್, ಚೆಂಗಳ ಗ್ರಾಮ ಪಂಚಾಯತ್ ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಶುಕೂರ್ ಚೆರ್ಕಳ, ವಾರ್ಡ್ ಸದಸ್ಯೆ ಸಾಹಿರಾ ಮಜೀದ್, ತಾಲೂಕು ಗ್ರಂಥಾಲಯ ಮಂಡಳಿ ಕಾರ್ಯನಿರ್ವಾಹಕ ಸದಸ್ಯ ಪಿ.ವಿ.ರಾಜೇಶ್, ಎಸ್‌ಎಂಸಿ ಉಪಾಧ್ಯಕ್ಷ ಕಬೀರ್ ಚೆರ್ಕಳ, ಪಿಟಿಎ ಅಧ್ಯಕ್ಷ ಮುನೀರ್ ಪಿ. ಚೆರ್ಕಳ, ಎಂಪಿಟಿಎ ಅಧ್ಯಕ್ಷೆ ಸಮೀರಾ ಅಬ್ಬಾಸ್, ಪಿ.ಎನ್. ಪಣಿಕ್ಕರ್ ಫೌಂಡೇಶನ್ ಜಿಲ್ಲಾ ಕಾರ್ಯದರ್ಶಿ ಸಿ.ಸುಕುಮಾರನ್, ಶಿಕ್ಷಕ ಸಮೀರ್ ತೆಕ್ಕಿಲ್, ಶಿಕ್ಷಕ ರಕ್ಷಕ ಸಂಘದ ಪ್ರತಿನಿಧಿಗಳು, ಮಾತೃ ಪಿಟಿಎ ಪದಾಧಿಕಾರಿಗಳು, ಐಪಿಆರ್‌ಡಿ ಮಾಹಿತಿ ಕಚೇರಿ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಸ್ವಾಗತಿಸಿ, ಸಹಾಯಕ ಸಂಪಾದಕಿ ಎ.ಪಿ.ದಿಲ್ನಾ ವಂದಿಸಿದರು. ಪಿ.ಎನ್.ಪಣಿಕ್ಕರ್ ಅವರ ಪುಣ್ಯತಿಥಿಯಾದ ಜೂನ್ 19ರಂದು ಕೇರಳದಲ್ಲಿ ಓದುವ ದಿನವನ್ನು ಆಚರಿಸಲಾಗುತ್ತದೆ.

ತಂಬಾಕು ನಿಯಂತ್ರಣ ತನಿಖಾ ದಳದಿಂದ ದಾಳಿ : ದಂಡ ವಸೂಲಿ

ಉಡುಪಿ: ಕಾಪು ತಾಲೂಕಿನಲ್ಲಿ ಕೋಟ್ಪಾ 2003 ಕಾಯಿದೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಉಡುಪಿ ತಾಲೂಕು ಆರೋಗ್ಯಾಧಿಕಾರಿಯವರ ನೇತೃತ್ವದಲ್ಲಿ ಗುರುವಾರ ಪಡುಬಿದ್ರಿ ಪೇಟೆ ಹಾಗೂ ಬಸ್‌ಸ್ಟಾಂಡ್‌ಗಳಲ್ಲಿ ತಂಬಾಕು ಮಾರಾಟದ ಅಂಗಡಿಗಳು, ಹೊಟೇಲ್‌ಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ದಾಳಿ ನಡೆಸಿ ಒಟ್ಟು 44 ಪ್ರಕರಣಗಳನ್ನು ದಾಖಲಿಸಿ, ರೂ. 17,000 ದಂಡ ವಸೂಲಿ ಮಾಡಲಾಯಿತು. ಅಲ್ಲದೆ, ನಾಮ ಫಲಕಗಳನ್ನು ವಿತರಿಸಿ 2003 ರ ಕೋಟ್ಪಾ ಕಾಯಿದೆ ಬಗ್ಗೆ ಅರಿವು ಮೂಡಿಸಲಾಯಿತು.

ದಾಳಿಯಲ್ಲಿ ಉಡುಪಿ ತಾಲೂಕು ಆರೋಗ್ಯಾಧಿಕಾರಿ ಡಾ. ವಾಸುದೇವ ಉಪಾಧ್ಯಾಯ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಬಸವರಾಜ್ ಜಾಡರ್ ಮತ್ತು ಜಗದೀಶ್ ರಾವ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಕಲಾ, ತಾಲೂಕು ದೈಹಿಕ ಪರಿವೀಕ್ಷಣಾಧಿಕಾರಿ ರವೀಂದ್ರ ನಾಯ್ಕ್, ಪಡುಬಿದ್ರಿ ಪೊಲೀಸ್ ಠಾಣೆಯ ಶ್ರೀಧರ್ ಆರ್, ಕಾರ್ಮಿಕ ನಿರೀಕ್ಷಕ ಎನ್.ಪಿ.ಎಲ್. ಸಂಜಯ್, ಜಿಲ್ಲಾ ತಂಬಾಕು ನಿಯಂತ್ರಣ ಘಟಕದ ಸಂಯೋಜಕಿ ಮಂಜುಳಾ ಹಾಗೂ ಸೋಷಿಯಲ್ ವರ್ಕರ್ ಮಹೇಶ್ ಡಿ. ಭಂಡಾರಿ ಉಪಸ್ಥಿತರಿದ್ದರು.

ಪುರಸಭೆ ಕಾರ್ಯಾಲಯ, ಕಾಪು
ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಐ.ಎಫ್.ಟಿ. ಸಂ: ಪುಸಕಾ/ತಾಂತ್ರಿಕ/ಸಿ.ಆರ್./06/2026-27 ದಿನಾಂಕ : 19-06-2026

ಕಾಪು ಪುರಸಭೆಯ 2026-27ನೇ ಸಾಲಿನ ಪುರಸಭಾ ನಿಧಿಯಡಿ ನಿರ್ವಹಣೆ ಕಾಮಗಾರಿಯ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ 1999ರ ನಿಯಮಗಳು 2000 ರನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **Standard Tender Document KW-1**-ರಂತೆ ಇ-ಟೆಂಡರ್ ಆಹ್ವಾನಿಸಾಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 03-07-2026. ಆಸಕ್ತ ಗುತ್ತಿಗೆದಾರರು **https://kppp. karnataka.gov. in/kppp** ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರ ಮತ್ತು ಷರತ್ತುಗಳಿಗೆ ರಜಾ ದಿನಗಳನ್ನು ಹೊರತುಪಡಿಸಿ ಈ ಕಛೇರಿಯಲ್ಲಿ ಅಥವಾ **www.kauptown. mrc.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕ್ರ.ಸಂ.	ಇಂಡೆಂಟ್ ವಿವರ	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	DMA/2026-27/SE8067	17.35

ಸಹಿ/- ಮುಖ್ಯಾಧಿಕಾರಿ
ಪುರಸಭೆ, ಕಾಪು, ಉಡುಪಿ ಜಿಲ್ಲೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕನೀನಿನಿ,
ಘ.ಬ.ದಂ.ಕಾ.ನಿ ವಿಭಾಗ-4, ಚಿಕ್ಕೋಡಿ. ದೂರವಾಣಿ ಸಂಖ್ಯೆ: 08338-272485
ಇ-ಮೇಲ್: ee_knnlgrbc4ckd@rediffmail.com

ಸಂಖ್ಯೆ:ಕನೀನಿನಿ/ಘಬದಂಕಾನಿ-4/ಟೆಂಡರ್/2026-27/01 ದಿನಾಂಕ: 19-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ (https://kppp.karnataka.gov.in) 4701 ಅಡಿಯಲ್ಲಿನ 14 ಕಾಮಗಾರಿಗಳಿಗೆ ಮೇಲ್ಕಾಣಿಸಿದ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ.

ಇಂಡೆಂಟ್ ಸಂಖ್ಯೆ: ದ್ವಿ-ಲಕೋಟೆ ಪದ್ಧತಿ - ಸಾಮಾನ್ಯ - ಇಂಡೆಂಟ್ ಸಂಖ್ಯೆ **4560, 4569, 4571, 4553, 4555, 4568, 4557, 4556, 4554, 4570, 4552, 4558, 4559, ಪ್ರವರ್ಗ-II(ಎ) - ಇಂಡೆಂಟ್ ಸಂಖ್ಯೆ: 4561**, ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ: **ರೂ. 42.22 ಲಕ್ಷದಿಂದ ರೂ. 84.65 ಲಕ್ಷಗಳು**, ಇ.ಎಂ.ಡಿ ಮೊತ್ತ: **ರೂ. 84,700/- ರಿಂದ ರೂ. 1,69,600/-**, ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ ಮತ್ತು ಸಮಯ: **08-07-2026 ರಂದು 17.00 ಗಂಟೆವರೆಗೆ**, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **09-07-2026 ರಂದು 16.00 ಗಂಟೆವರೆಗೆ**, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **10-07-2026 ರಂದು 16.30 ಗಂಟೆಗೆ**, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **13-07-2026 ರಂದು 16.30 ಗಂಟೆಗೆ.**

ಕಾಮಗಾರಿಗಳ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರಿನ ನಿಯಮ / ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ, ಘಬದಂಕಾನಿ ವಿಭಾಗ-4, ಚಿಕ್ಕೋಡಿ.
ವಾಸಾಸಂಇ/ಬೆಳಗಾವಿ/470/ಅಡ್ವರ್ಟೈಸ್/2026-27

ಸಹಾಯಕ ನಿರ್ದೇಶಕರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ
ಗದಗ ರಸ್ತೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ
ದೂರವಾಣಿ :08539-230121 email :adysskoppal@gmail.com

ಸಂಖ್ಯೆ: ಸನಿ/ಯುಸಕ್ರೀಇ/ಕ್ರೀಊಪೂ/ಕೊ/ಸಿಆರ್-48(ಎ)/2026-27/1104 ದಿನಾಂಕ: 18.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಗದಗ ರಸ್ತೆ, ಕೊಪ್ಪಳ ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೆಳಕಾಣಿಸಿದ ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳ ದೈನಂದಿನ ಊಟೋಪಹಾರ ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕೆಪಿಪಿಪಿ ಪೋರ್ಟಲ್ ಮೂಲಕ ಕೆಳಕಾಣಿಸಿದ ಟೆಂಡರ್ ಆಹ್ವಾನಿಸಿದೆ.

ಟೆಂಡರ್‌ನ ವಿವರ : (1) ಕ್ರೀಡಾ ವಸತಿ ಶಾಲೆ/ನಿಲಯ, ಕೊಪ್ಪಳ ಕೊಪ್ಪಳ ಜಿಲ್ಲೆ. ಟೆಂಡರ್‌ಗಿಟ್ಟ ಮೊತ್ತ (ರೂ ಗಳಲ್ಲಿ) : **ರೂ.58,50,000=00** ಇ.ಎಂ.ಡಿ ಮೊತ್ತ (ರೂಗಳಲ್ಲಿ) : **ರೂ.1,17,000/-** (2) ಟೆಂಡರ್ ಆಹ್ವಾನಿಸುವ **ದಿನಾಂಕ: 19.06.2026 ಅಪರಾಹ್ನ 12.00** (3) ಟೆಂಡರ್ ಸಲ್ಲಿಸುವ ಅಂತಿಮ **ದಿನಾಂಕ: 08.07.2026 ಸಾಯಂಕಾಲ 4.00** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10.07.2026 ಬೆಳಿಗ್ಗೆ 11.00** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತದ ನಂತರ ತಿಳಿಸಲಾಗುವುದು.

ಕ್ರ ಸಂ	ವಿವರಗಳು	ಕ್ರೀಡಾಪಟುಗಳ ಸಂಖ್ಯೆ (ಅಂದಾಜು)	ಒಬ್ಬ ಕ್ರೀಡಾಪಟುವಿಗೆ ದಿನ ಒಂದಕ್ಕೆ ನಿಗಧಿಪಡಿಸಿದ ಗರಿಷ್ಠ ಮೊತ್ತ (ರೂಗಳಲ್ಲಿ)	ವಾರ್ಷಿಕ ಅಂದಾಜು 325 ದಿನಗಳಿಗೆ ಆಹಾರ ಪೂರೈಕೆಗೆ ತಗಲುವ ಒಟ್ಟು ವೆಚ್ಚ (ರೂಗಳಲ್ಲಿ)
1	5ನೇ ತರಗತಿಯಿಂದ 10ನೇ ತರಗತಿವರೆಗಿನ ಕ್ರೀಡಾಪಟುಗಳು	80	225/-	58,50,000=00
	ಒಟ್ಟು	80		58,50,000=00

ಆಸಕ್ತ ಟೆಂಡರ್‌ದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಹಾಗೂ ಟೆಂಡರ್ ದಾಖಲೆಗಳನ್ನು ಉಚಿತವಾಗಿ ಮೇಲ್ಕಂಡ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

ಸಹಿ/- ಸಹಾಯಕ ನಿರ್ದೇಶಕರು
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕೊಪ್ಪಳ ಜಿಲ್ಲೆ.
ವಾ.ಸಾ.ಸಂ.ಇ/ಕೊಪ್ಪಳ/181/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:05/2026-27 2ನೇ ಕರೆ ದಿನಾಂಕ:16.06.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ:5054-04-337-0-01-154 ಜಿಲ್ಲಾ ಮುಖ್ಯ ರಸ್ತೆಗಳು ಸುಧಾರಣೆಗಳಡಿ ಅನುಮೋದನೆಯಾಗಿರುವ ನಂ-2 ವಿಶೇಷ ಉಪವಿಭಾಗ, ಮೈಸೂರು ವ್ಯಾಪ್ತಿಯ 01 ಸಂಖ್ಯೆ ಮತ್ತು ಟಿ ನರಸೀಪುರ ಉಪವಿಭಾಗ, ಟಿ ನರಸೀಪುರ ವ್ಯಾಪ್ತಿಯ 01 ಸಂಖ್ಯೆ ಒಟ್ಟು 02 ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ "ಅರ್ಹ" ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಸದರಿ ಕಾಮಗಾರಿಗಳಿಗೆ: ದಿ:17.06.2026 ರಿಂದ 02.07.2026 ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ.143.19 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.15 ಲಕ್ಷಗಳು ಹಾಗೂ ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.199.31 ಲಕ್ಷಗಳು ಹಾಗೂ ಇ.ಎಂ.ಡಿ ರೂ.2.99 ಲಕ್ಷಗಳಾಗಿರುತ್ತದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ: 04 ತಿಂಗಳುಗಳು (ಮಳೆಗಾಲ ಸೇರಿದಂತೆ) ಸದರಿ ಕಾಮಗಾರಿಗಳ ಪೂರ್ವಭಾವಿ ಸಭೆಯನ್ನು ದಿ:25.06.2026 ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ: 1) ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. 2) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
DIPR/DDMYS/355/KSMCA/237/2026-27

ಪುತ್ತೂರು ಮಾರುಕಟ್ಟೆ ಧಾರಣೆ
20-06-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	420 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಠೋರ	335 - 385
ಹಳೆ ಪಠೋರ	335 - 385
ಹೊಸ ಉಳ್ಳಿ	140 - 285
ಹಳೆ ಉಳ್ಳಿ	130 - 285
ಹೊಸ ಕೋಕಾ	315 - 335
ಹಳೆ ಕೋಕಾ	315 - 335
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು : 450 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	269.00
ಆರ್‌ಎಸ್‌ಎಸ್ 2	224.00
ಸ್ಕ್ರಾಪ್ 1	155.00
ಸ್ಕ್ರಾಪ್ 2	145.00

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ಎಡಿಯೂರು-572 142, ಫೋ: 7338590199
ಇ-ಮೇಲ್: eeyediyur1@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ-08/2026-27 ದಿನಾಂಕ : 17.06..2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 02 ಕಾಮಗಾರಿಗಾಗಿ ಐಟಂವಾರು ದರದ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.386.79 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.386.50 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ 05 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 20.06.2026 ಮಧ್ಯಾಹ್ನ 1.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 29.06.2026 ಬೆಳಿಗ್ಗೆ 11:00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.06.2026 ಬೆಳಿಗ್ಗೆ 11:00 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka. gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾನೀನಿನಿ., ಎಡಿಯೂರು.
DIPR/TUM/117/KSMCA/2026-27

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಾರ್ಯಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಆಡಳಿತ ಭವನ ಕೊಠಡಿ ಸಂ;006 ಗದಗ
ದೂ.ಸಂ.08372-220711 ಈ ಮೇಲ್ : deputydirwcdgadag@gmail.com
ಸಂ.ಉನಿಗ/ಮಮಅಇ/ಕದ/ಸಕು/2026-27 ದಿನಾಂಕ : 19.06.2026

ಟೆಂಡರ್ ಪ್ರಕಟಣೆ

ಗದಗ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಛೇರಿಯ ಆಡಳಿತ ವಿಭಾಗ ಗ್ರೂಪ್-ಡಿ, ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯಡಿ ಕಂಪ್ಯೂಟರ್ ಆಪರೇಟರ್ ಹಾಗೂ ಮೆಸೆಂಜರ್ ಮತ್ತು ಗ್ರೂಪ್-ಡಿ, ಐ.ಸಿ.ಡಿ.ಎಸ್ ವಿಭಾಗದ ಕಂಪ್ಯೂಟರ್ ಆಪರೇಟರ್, ಗ್ರೂಪ್-ಡಿ, ಸ್ತ್ರೀಶಕ್ತಿ ವಿಭಾಗ ಕ್ಲರ್ಕ ಕಂ ಕಂಪ್ಯೂಟರ್ ಆಪರೇಟರ್, ರಕ್ಷಕರು, ಗ್ರೂಪ್-ಡಿ, ಸ್ವೀಕಾರ ಕೇಂದ್ರದ ಗೃಹಮಾತೆ, ಮಹಿಳಾ ರಕ್ಷಕಿ, ಅಡುಗೆಯವರು, ಕಛೇರಿ ಸೇವಕರು (ಮಹಿಳೆ) ಹಾಗೂ ಪರಿವೀಕ್ಷಣಾಧಿಕಾರಿಗಳು ಅಪರಾಧಿಗಳ ಪರಿವೀಕ್ಷಣಾಧಿನಿಯಮದಡಿ ಗ್ರೂಪ್-ಡಿ ಖಾಲಿ ಹುದ್ದೆಗಳಿಗೆ ಮಾನವ ಹೊರಗುತ್ತಿಗೆ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ

(ದ್ವಿ ಲಕೋಟೆ ಪದ್ಧತಿ)

ಟೆಂಡರ ಪ್ರಕಟಣೆ ಸಂಖ್ಯೆ DWCD/2026-27/SE0814 & ದಿನಾಂಕ : 19.06.2026 ಸಂ.ಉನಿಗ/ಮಮಅಇ/ ಬಾಮೂಸಿಸೇವ/ಇಪ್ರೋಟೆಂ/2026-27 ದಿನಾಂಕ : 19.06.2026 ಟೆಂಡರಗಿಟ್ಟ ರೂ. **38,00,000** ಲಕ್ಷ, ಇ.ಎಮ್.ಡಿ. ಮೊತ್ತ : ರೂ. **80000.00** e-portal https://kppp.karnataka.gov.in ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ ದಿನಾಂಕ : **19.06.2026** ರಿಂದ ದಿನಾಂಕ : **04.07.2026**ರ ಸಾಯಂಕಾಲ 5.30 ಗಂಟೆಯೊಳಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ ಸ್ಥಳ : **06.07.2026**ರ ಮುಂಜಾನೆ 11.30 ಗಂಟೆಗೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ **10.07.2026**ರ ಮುಂಜಾನೆ 11.30 ಗಂಟೆಗೆ (ಬದಲಾವಣೆಗೆ ಒಳಪಟ್ಟಿದೆ), ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ, ದೂರವಾಣಿ ಸಂಖ್ಯೆ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ ದೂರವಾಣಿ ಸಂ. **08372-220711**

ಸಹಿ/- ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಗದಗ
ವಾಸಾಸಂಇ/ಗದಗ/130/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ-1/ಟೆಂಡರ-08 / 2026-27/ 1285 ದಿನಾಂಕ : 18-06-2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರಕ್ಯೂರಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲೂ-3) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು.

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 29-06-2026 16.30 ಗಂಟೆ ವರೆಗೆ
(2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 30-06-2026 16.30 ಗಂಟೆ ವರೆಗೆ
(3) ಟೆಂಡರನ ತಾಂತ್ರಿಕ ಬಿಡ್ ತೆರೆಯುವ ದಿ: 01-07-2026 17.00 ಗಂಟೆ ವರೆಗೆ
(4) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 03-07-2026 17.00 ಗಂಟೆ ವರೆಗೆ

ಕಾಮಗಾರಿಯ ಹೆಸರು: ಲೆಕ್ಕಶೀಷಿಕೆ: **5054-MDR Road Improvements During 2022-23** ವರ್ಷ ಇಂಡೆಂಟ್ (1) **PWD/2026-27/ RD/WORK_INDENT36568** (2) **PWD/2026-27/ RD/WORK_INDENT36569**

(ಕೆಡಬ್ಲೂ-3) ರಲ್ಲಿನ ನಿಭಂದನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಭಂದನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ **https://kppp.karnataka.gov.in** ನೋಡಬಹುದು. ಹೆಚ್ಚಿನ ಮಾಹಿತಿಗಾಗಿ **help desk Bangalore (Phone No. 918025501216 & 918025501227)** ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿ ಗುತ್ತಿಗೆ ಷರತ್ತುಗಳು ಡಿ.ಟಿ.ಎಸ್‌ನಲ್ಲಿ ನೋಡಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ
DIPR/KWR/KSMCA/220/26-27 dt. 20.06.2026

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು,
ಉಪ ವಿಭಾಗ ಗದಗ ರವರ ಕಛೇರಿ, ಹುಬ್ಬಳ್ಳಿ ರಸ್ತೆ,
ಬಿಂಕದಕಟ್ಟಿ - 582 103, ತಾ॥ & ಜಿ॥ ಗದಗ.
ದೂರವಾಣಿ : 08372-200978, ಇ-ಮೇಲ್ : acfgadag@gmail.com

ಸಂಖ್ಯೆ : ಎ2/ಬಿ.ಜಿ.ಟಿ./ಟೆಂಡರ್/ಸಿಆರ್-1/2026-27
ದಿನಾಂಕ : 19-06-2026

ಕೆಪಿಪಿಪಿ ತಂತ್ರಾಂಶದಲ್ಲಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27 ನೇ ಸಾಲಿನಲ್ಲಿ ಡಿ.ಡಿ.ಎಫ್. ಯೋಜನೆಯಡಿ ಗದಗ ಅರಣ್ಯ ವಿಭಾಗದ ಮುಂಡರಗಿ ಮತ್ತು ಶಿರಹಟ್ಟಿ ವಲಯಗಳಲ್ಲಿ ಮಾನ್ಸೂನ್ ನೆಡುತೋಪು ನಿರ್ಮಾಣ, ಸಸಿಗಳನ್ನು ಬೆಳೆಸುವುದು ಹಾಗೂ ಸಸಿಗಳ ನಿರ್ವಹಣೆ ಕಾಮಗಾರಿ ಕೈಗೊಳ್ಳುವ ಕುರಿತು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ ಮತ್ತು ಕಾಯಿದೆಯಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ತಿಳುವಳಿಕೆಗೋಸ್ಕರ ಇ-ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ	ವಿವರ	ದಿನಾಂಕ
1	ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ	ರೂ. 41,20,000.00
2	ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ	ರೂ. 20,60,000.00
3	ಕೆಲಸಗಳ ಇಂಡೆಂಟ್‌ಗಳ ಸಂಖ್ಯೆ	04 (40228, 40230, 40231, 40238)
4	ಇ-ಟೆಂಡರ್ ಪ್ರಕಟಣೆ ದಿನಾಂಕ	19-06-2026
5	ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ. (ತಾಂತ್ರಿಕ)	29-06-2026 ಅಪರಾಹ್ನ 4.00 ಗಂಟೆವರೆಗೆ.
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಮಯ	01-07-2026 ಬೆಳಿಗ್ಗೆ 11.00 ಗಂಟೆವರೆಗೆ.
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಸಮಯ	03-07-2026 ಬೆಳಿಗ್ಗೆ 11.00 ಗಂಟೆಗೆ.

ಒಂದೊಮ್ಮೆ ಸದರಿ ದಿನಾಂಕದಂದು ಸದರಿ ಟೆಂಡರ್ ಯಶಸ್ವಿಯಾಗದಿದ್ದಲ್ಲಿ ಮರು ಟೆಂಡರ್ ಕರೆಯಲಾಗುವುದು. (ಮರು ಟೆಂಡರಿಗೆ ಪ್ರತ್ಯೇಕ ನೋಟಿಫಿಕೇಷನ್ ಹೊರಡಿಸಲಾಗುವುದಿಲ್ಲ.)

ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಇ-ಪೋರ್ಟಲ್ (https://kppp.karnataka.gov.in) ಮೂಲಕ ಪರಿಶೀಲಿಸತಕ್ಕದ್ದು. ಹಾಗೂ ಹೆಚ್ಚಿನ ಮಾಹಿತಿ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಗದಗ ಉಪ ವಿಭಾಗ, ಗದಗ.
ಡಿಐಪಿಆರ್/ಗದಗ/131/ಮನೆಹಾಲ್/2026-27

ವಿದ್ಯಾರ್ಥಿಗಳ ನಾಪತ್ತೆ

ಕಾಞಂಗಾಡು: ನೀಲೇಶ್ವರದಿಂದ ಇಬ್ಬರು ವಿದ್ಯಾರ್ಥಿಗಳು ನಾಪತ್ತೆಯಾಗಿರುವುದಾಗಿ ದೂರಲಾಗಿದೆ. ಕೋಟ್ಟಪುರ ಪರಿಸರದ ನಿವಾಸಿ ಕೋಟ್ಟಪುರ ಶಾಲಾ ವಿದ್ಯಾರ್ಥಿ ಅಲ್ ಅಮೀನ್ (13) ಮತ್ತು ಮುಹಮ್ಮದ್ ಅಮೀನ್ (13) ಎಂಬವರು ನಾಪತ್ತೆಯಾದವರು. ಅವರು 8ನೇ ತರಗತಿಯಲ್ಲಿ ಕಲಿಯುತ್ತಿದ್ದು, ಶುಕ್ರವಾರ ಸಂಜೆಯಿಂದ ಕಾಣೆಯಾಗಿದ್ದಾರೆ. ಈ ಬಗ್ಗೆ ಶೋಧ ಕಾರ್ಯ ಮುಂದುವರಿದಿದೆ.

IN THE COURT OF THE DEPUTY REGISTRAR OF CO-OPERATIVE SOCIETIES & CHITS MANGALORE DIVISION AT MANGALORE, D.K.
Dispute No. 10/2026-27

Between:
Makarajyothi Chits Pvt. Ltd.
...Disputant
And
Nithin Kumar & Others
...Respondent

COURT NOTICE

To,
R.3: Jayashree D Shetty
Door No. 4-1-218
Flat no. 107
Shakambari Apartment
Near KSRTC Bus Stand
Bejai, Mangalore-575004.

Please take notice that the above case filed against you now stands posted to **06.07.2026 at 11.00 A.M.** for your appearance before the Chit Registrar Nominee office, Near Chandika Parameshwari Temple, B.C. Road, Bantwala. If you fail to appear on the said date and time either in person or through a pleader, the matter will be decided by placing you ex-parte.

Given under my hand and the seal of the Forum, this 15th day of June 2026.

(By Order of the Forum)
Sd/- Usha Kumari
Advocate & Chit Registrar`s Nominee, B.C. Road, Bantwal
Sd/- Disputant

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕನನೀಸ ಮತ್ತು ಒ.ಚ.ಮಂಡಳಿ,
ವಿಭಾಗ ಕಛೇರಿ, ಧಾರವಾಡ, ಜಲಮಂಡಳಿ ಆವರಣ, ಸರ್.ಎಂ.ವಿಶ್ವೇಶ್ವರಯ್ಯ ರಸ್ತೆ,
ಧಾರವಾಡ-580 001 ದೂರವಾಣಿ : 0836-2213836 ಇ-ಮೇಲ್: eedwdm@gmail.com

ದರ ವಿಚಾರಣೆ ಅಧಿಸೂಚನೆ

ಧಾರವಾಡ ವಿಭಾಗದ ಕಣವಿಹೊನ್ನಾಪುರ ಜಲಶುದ್ಧಿಕರಣ ಘಟಕ ಮತ್ತು ಧುಮ್ಮವಾಡ ಗ್ರಾಮದ ನೀರಸಾಗರ ಜಲಾಶಯದ ಆವರಣದಲ್ಲಿ ಮಂಡಳಿಯಿಂದ ಬೆಳೆಸಿದ ಮಾವಿನ ಗಿಡಗಳ ಮಾವಿನ ಹಣ್ಣುಗಳ ಮಾರಾಟ ಮಾಡಲು ಈ ಕಛೇರಿಯ ದರ ವಿಚಾರಣೆ ಅಧಿಸೂಚನೆ ಸಂಖ್ಯೆ: 365 ದಿನಾಂಕ : **19/06/2026** ರಂತೆ **Sealed quotations** ಗಳನ್ನು ಕರೆಯಲಾಗಿದೆ.

Sl.No	Description	Qnty	Unit	Rate in Rs.	Rate in Words
1	Rate enquiry for mango hapus, Nati is invited by this office. Location: Kanavihonnapur village, Dhumwad village and Neersagar Dam premises. The minimum rates stated by the Department of agricultural marketing and Karnataka State agricultural marketing Board Dharwad are as below, (see table below) Participants advised to visit the site before quoting the rates and also advised to quote the rate in accordance with the rates of Karnataka State agricultural marketing Board Dharwad				
1.1	Mango hapus	Quintal	1		
1.2	Mango Nati	Quintal	1		

Sl no	Product	Minimum Rs/ Quintal	Maximum RS/ Quintal	Modal price Rs / Quintal
1	Hapus Mango	14000	16000	15000
2	Mango Nati	5000	8000	6000

(1) The rates quoted shall be inclusive of all taxes except GST. (2) The sealed envelopes containing quoted rates shall reach to this office on or before **25/06/2026** up to 5.30 PM. (3) Right to accept any quotation and to reject any or all the quotations rests with the Competent Authority

ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಛೇರಿಯನ್ನು ಸಂಪರ್ಕಿಸಬಹುದು.
ವಾಸಾಸಂಇ/ಧಾ/335/ಕೆಎಸ್‌ಎಂಸಿಎ/2026-27 ಸಹಿ/- ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚಮಂಡಳಿ ವಿಭಾಗ, ಧಾರವಾಡ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 14/2026-27 ದಿನಾಂಕ: 18.06.2026

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಕೆಪಿಪಿ ಪೋರ್ಟಲ್ ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ **www.kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.

1) ಪರಿಶಿಷ್ಟ ಜಾತಿ **(SC)** ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 59488 & 59456**
2) ಪರಿಶಿಷ್ಟ ಪಂಗಡ **(ST)** ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 59713**
3) ಪ್ರವರ್ಗ - 1 ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 58900**
4) ಪ್ರವರ್ಗ - **II (A)** ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು: **INDENT 58911, 58916 & 57347/CALL-2**
5) ಇತರೆ ಗುತ್ತಿಗೆದಾರರು ಭಾಗವಹಿಸಬೇಕಾದ ಕಾಮಗಾರಿಗಳು : **INDENT 59027,59195,59447,58498, 59426, 59678 & 59688**
6) ಕೆಪಿಪಿ ಪೋರ್ಟಲ್ ಮೂಲಕ ಇಂಡೆಂಟ್ ಸಂಖ್ಯೆ : **59488,59207, 59195, 58900, 59447, 58916, 59456, 58498, 59426, 59713, 59678, 59688 & 57347/CALL-2,** ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03.07.2026 (ಸಂಜೆ: 4.00 ಗಂಟೆಗೆ) ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:04.07.2026 (ಸಂಜೆ: 04.30 ಗಂಟೆಗೆ). ಇಂಡೆಂಟ್ ಸಂಖ್ಯೆ: **59488 &57347/CALL-2** ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಆರ್ಥಿಕ ಬಿಡ್ ತೆರೆಯುವ ದಿನಾಂಕ: 06.07.2026 (ಅಪರಾಹ್ನ: 12.00 ಗಂಟೆಗೆ)
7) ಕೆಪಿಪಿ ಪೋರ್ಟಲ್ ಮೂಲಕ ಇಂಡೆಂಟ್ ಸಂಖ್ಯೆ :58911 ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:25.06.2026 (ಸಂಜೆ: 4.00 ಗಂಟೆಗೆ) ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:29.06.2026 (ಅಪರಾಹ್ನ: 04.30 ಗಂಟೆಗೆ).
8) ಅನುದಾನ: 2026-27 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ ಹಾಗೂ ಪಾಲಿಕೆ ಉದ್ಯಮ ನಿಧಿ

ಸೂಚನೆ: ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ವಾ.ಸಾ.ಸಂ.ಇ./ಶಿ/ನಂ.92.06/ಝೇಂಕಾರ್/2026-27
ಸಹಿ/-
ಕಾರ್ಯಪಾಲಕ ಅಭಿಯಂತರರು ಮಹಾನಗರ ಪಾಲಿಕೆ, ಶಿವಮೊಗ್ಗ

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯಡಿಯೂರು ವಿಭಾಗ,
4ನೇ ಅಡ್ಡರಸ್ತೆ, ಜಯನಗರ 7ನೇ ಬ್ಲಾಕ್, ಬೆಂಗಳೂರು - 560 070.
ಇ-ಮೇಲ್:eeyediyurdivision@gmail.com

ಸಂಖ್ಯೆ:ಕಾಪಾಅ(ಯಡಿಯೂರು)/ಟೆಂಡರ್/03/2026-27 ದಿನಾಂಕ:18-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಟೆಂಡರ್ ದಾಖಲೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಡಿಯೂರು ವಿಭಾಗ, ಬೆಂ.ಪ.ನ.ಪಾ, ಇವರು ಆಯುಕ್ತರು, ಬೆಂ.ಪ.ನ.ಪಾ, ಬೆಂಗಳೂರು ಇವರ ಪರವಾಗಿ ಬೃಬೆಂ.ಮ.ಪಾ ಅಥವಾ ತತ್ಸಮಾನವಾಗಿ ಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ದಾಖಲೆಗಳು ಕೆಡಬ್ಲ್ಯೂ-2 & ಕೆಡಬ್ಲ್ಯೂ-3ರಂತೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ
1.	ವಾರ್ಡ್ ಸಂಖ್ಯೆ-167 ಯಡಿಯೂರು (ಹೊಸ ವಾರ್ಡ್ ಸಂ:105)ರ ಸೌತ್ ಎಂಡ್ ವೃತ್ತದ ವಿವಿಧೋದ್ದೇಶ ಕಟ್ಟಡ ಹೊಸ ಉದ್ಯಾನವನ ಮತ್ತು ಇತರೆ ಕಚೇರಿಗಳಿಗೆ ಭದ್ರತೆ ಮತ್ತು ನಿರ್ವಹಣೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.38.90 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ: ರೂ.32.94 ಲಕ್ಷಗಳು, ಇಎಂಡಿ ಮೊತ್ತ: ರೂ.65,880/-**
2.	ವಾರ್ಡ್ ಸಂಖ್ಯೆ-167 ಯಡಿಯೂರು (ಹೊಸ ವಾರ್ಡ್ ಸಂ:105)ರ ಯಡಿಯೂರು ಸಂಕೀರ್ಣ, ವಾಜಪೇಯಿ ಮೈದಾನ, ಡಯಾಲಿಸಿಸ್ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಬ್ಯಾಡ್ಮಿಂಟನ್ ಅಂಗಳ, ಅಂಬರ ಚುಂಬನ ಮಹಿಳಾ ಮಂಡಳಿ ಮತ್ತು ಹೊಲಿಗೆ ತರಬೇತಿ ಕೇಂದ್ರ ಇತ್ಯಾದಿಗಳಿಗೆ ಸ್ವಚ್ಛತೆ, ಭದ್ರತೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.46.97 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ: ರೂ.39.80 ಲಕ್ಷಗಳು, ಇಎಂಡಿ ಮೊತ್ತ: ರೂ.79,600/-**
3.	ವಾರ್ಡ್ ಸಂಖ್ಯೆ-167 ಯಡಿಯೂರಿನ (ಹೊಸ ವಾರ್ಡ್ ಸಂ:105) ಕ್ರೀಡಾಂಗಣ ಹೊಲಿಗೆ ತರಬೇತಿ ಕೇಂದ್ರ, ಮಾರುಕಟ್ಟೆ ಸಂಕೀರ್ಣಗಳಿಗೆ ಭದ್ರತೆ ಮತ್ತು ಸ್ವಚ್ಛತೆ ಸೇವೆಗಳನ್ನು ಒದಗಿಸುವುದು. (ಸಾಮಾನ್ಯರಿಗೆ) **ಅಂದಾಜು ಮೊತ್ತ: ರೂ.60.33 ಲಕ್ಷಗಳು, ಟೆಂಡರಿಗಿಟ್ಟ ಮೊತ್ತ: ರೂ.51.12 ಲಕ್ಷಗಳು, ಇಎಂಡಿ ಮೊತ್ತ: ರೂ.1,02,240/-**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ:**22-06-2026, 4:30 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ **03-07-2026**ರ ಸಂಜೆ **4:00 ಗಂಟೆಯವರೆಗೆ.** (3) ಕ್ರ.ಸಂ.1ಕ್ಕೆ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ:**25-06-2026**ರ ಬೆಳಿಗ್ಗೆ **11:30 ಗಂಟೆಗೆ** ನಡೆಸಲಾಗುವುದು. (4) ತಾಂತ್ರಿಕ ಬಿಡ್ಡನ್ನು ದಿನಾಂಕ:**04-07-2026**ರ ಸಂಜೆ **4:30 ಗಂಟೆಗೆ.** ತೆರೆಯಲಾಗುವುದು. (5) ಕ್ರ.ಸಂ.3ಕ್ಕೆ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ನಂತರ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. (6) ಕ್ರ.ಸಂ. 1 & 2ರ ಆರ್ಥಿಕ ಬಿಡ್ಡನ್ನು ದಿನಾಂಕ:**04-07-2026**ರ ಸಂಜೆ **4:30 ಗಂಟೆಗೆ** ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಯಡಿಯೂರು ವಿಭಾಗ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-758) ಡ್ರಾ ಜೂನ್ 20ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KM 142351 (KOLLAM)

Consolation Prize Rs.5,000/-
KA 142351 KB 142351 KC 142351 KD 142351
KE 142351 KF 142351 KG 142351 KH 142351
KJ 142351 KK 142351 KL 142351

2nd Prize Rs.25,00,000/- [25 Lakhs]
KB 641151 (ALAPPUZHA)

3rd Prize Rs.10,00,000/- [10 Lakhs]
KE 941806 (ADOOR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0059 0436 0662 0853 1417 2149 3327 5299 5336 5726 6019 6914 7654 7764 7843 7959 8620 8866 8934

5th Prize Rs.2,000/-
0031 1383 3343 4051 8581 8829

6th Prize Rs.1,000/-
0219 0571 1358 2141 2595 3333 3388 3469 3701 3991 4180 4186 5381 5430 5836 5963 6860 6995 7724 7942 8798 8867 8898 9097 9271

7th Prize Rs.500/-
0055 0125 0454 0549 0939 1202 1342 1399 1425 1698 1740 1928 1983 1994 2133 2528 2570 2592 2890 2894 2991 3054 3080 3126 3157 3274 3539 3968 3986 4201 4407 4612 5021 5078 5117 5281 5555 5599 5650 5961 6073 6188 6291 6330 6464 6642 6666 6760 6824 7011 7192 7404 7411 7450 7541 7557 7589 7593 7632 7799 7854 7906 7915 8115 8577 8595 8705 9104 9328 9661 9712 9803 9884 9956 9988 9996

8th Prize Rs.200/-
0244 0353 0462 0679 0772 0811 0902 0984 1052 1082 1255 1264 1341 1511 1654 1954 2174 2394 2408 2698 2989 3288 3326 3393 3396 3409 3671 3685 3698 3758 3951 3989 4231 4301 4321 4360 4399 4507 4617 4703 4729 4755 4784 4964 5004 5043 5364 5402 5486 5669 5704 5716 5732 5790 5980 6071 6141 6152 6163 6334 6424 6511 6529 6570 6624 6795 6946 7032 7038 7332 7336 7506 7511 7676 7763 7795 7913 8008 8031 8210 8324 8534 8633 8823 8858 8893 8924 9042 9355 9433 9568 9641

9th Prize Rs.100/-
0007 0146 0315 0339 0365 0413 0478 0579 0799 0826 0963 0971 1046 1077 1079 1093 1206 1216 1296 1315 1330 1388 1509 1581 1589 1619 1682 1690 1697 1720 1766 1830 1989 2113 2143 2185 2266 2481 2509 2558 2726 2756 2910 2965 3021 3086 3109 3237 3403 3472 3572 3606 3612 3648 3752 3753 3958 4006 4009 4034 4037 4071 4147 4148 4431 4471 4510 4518 4570 4634 4839 4848 4875 5260 5308 5326 5409 5493 5577 5685 5689 5709 5764 5794 5848 5885 5929 5996 6085 6132 6139 6331 6345 6370 6399 6526 6575 6583 6588 6800 6895 6927 7111 7247 7288 7309 7399 7400 7467 7565 7627 7695 7752 7757 7771 7813 7834 7894 8022 8059 8073 8216 8273 8283 8499 8590 8623 8653 8771 8848 8871 9024 9052 9102 9126 9209 9331 9368 9426 9464 9498 9511 9640 9859

ಕಳಪೆ ಕಾಮಗಾರಿ: ಎಇ ಅಮಾನತಿಗೆ ಆದೇಶ

ಬೆಂಗಳೂರು: ನಗರದ ಕಳಪೆ ರಸ್ತೆ ಕಾಮಗಾರಿಗಳ ವಿರುದ್ಧ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದ ಬೆನ್ನಲ್ಲೆ, ಅವರ ನಿರ್ದೇಶನದಂತೆ ಮೊದಲ ತಲೆದಂಡವಾಗಿದೆ. ಕಳಪೆ ಡಾಂಬರೀಕರಣ ಕಾಮಗಾರಿಗೆ ಹಿನ್ನೆಲೆ ಸಹಾಯಕ ಅಭಿಯಂತರರೊಬ್ಬರ ಅಮಾನತು ಗೊಳಿಸಿ ಆದೇಶ ನೀಡಲಾಗಿದೆ. ಜೊತೆಗೆ ಗುತ್ತಿಗೆದಾರ ಸಂಸ್ಥೆಯನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 110 ರ ಸಂಪಂಗಿರಾಮನಗರ ವ್ಯಾಪ್ತಿಯಲ್ಲಿ ನಡೆದ ಕಳಪೆ ಡಾಂಬರೀಕರಣ ಕಾಮಗಾರಿಗೆ ಸಂಬಂಧಿಸಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ಸಹಾಯಕ ಅಭಿಯಂತರ ಪೂಜಾರಪ್ಪ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ.

ನಿಯಮ ಗಾಳಿಗೆ ತೂರಿ ಕಾಮಗಾರಿ: ಇನ್ಫ್ರಾಸ್ಟ್ರಕ್ಚರ್ ಪ್ರೋಗ್ರಾಮ್ ಅಡಿಯಲ್ಲಿ ಸಂಪಂಗಿರಾಮನಗರ ವ್ಯಾಪ್ತಿಯ ಮುಖ್ಯ ಮತ್ತು ಉಪ-ಮುಖ್ಯ ರಸ್ತೆಗಳಲ್ಲಿ ಕೈಗೊಳ್ಳಲಾಗಿದ್ದ ಆಸ್ಫಾಲ್ಟಿಂಗ್ ಅಂದರೆ ಡಾಂಬರೀಕರಣ ಕಾಮಗಾರಿಗಳಲ್ಲಿ ಭಾರೀ ಪ್ರಮಾಣದ ಕಳಪೆ ನಿರ್ಮಾಣ ಮಾಡಿರುವುದು ತನಿಖೆಯ ವೇಳೆ ಪತ್ತೆಯಾಗಿತ್ತು. ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಸರಕಾರದ ಅಧಿಕೃತ ಕ್ರಿಯಾಯೋಜನೆಯನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ. ರಸ್ತೆಗೆ ಹಾಕಬೇಕಾಗಿದ್ದ ಡಾಂಬರಿನ ಸರಿಯಾದ ಪ್ರಮಾಣ ಹಾಗೂ ದಪ್ಪವನ್ನು ಕಾಯ್ದುಕೊಳ್ಳದೆ, ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಾಮಗಾರಿ ನಡೆಸಿ ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ತನಿಖೆ ವೇಳೆ ದೃಢಪಟ್ಟಿತ್ತು. ಜವಾಬ್ದಾರಿಯುತ ಅಧಿಕಾರಿಯಾಗಿ ಗುತ್ತಿಗೆದಾರರ ಜೊತೆ ಶಾಮೀಲಾಗಿ ಕರ್ತವ್ಯ ಲೋಪ ಎಸಗಿದ ಕಾರಣಕ್ಕೆ ಸಚಿವ ಕೃಷ್ಣ ಬೈರೇಗೌಡರ ಕಟ್ಟುನಿಟ್ಟಿನ ಆದೇಶದಂತೆ ಸಹಾಯಕ ಅಭಿಯಂತರ ಪೂಜಾರಪ್ಪ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ನಿಯಮದ ಪ್ರಕಾರ ಸೇವೆಯಿಂದ ತಕ್ಷಣದಿಂದಲೇ ಅಮಾನತುಗೊಳಿಸಿ ಆದೇಶಿಸಲಾಗಿದೆ.



ಗುತ್ತಿಗೆ ಕಂಪನಿ ಬ್ಲಾಕ್ ಲಿಸ್ಟ್‌ಗೆ

ಅಧಿಕಾರಿಯ ಅಮಾನತಿನ ಜೊತೆಗೆ, ಕಳಪೆ ಕಾಮಗಾರಿ ನಡೆಸಿ ಸಾರ್ವಜನಿಕರ ಸುರಕ್ಷತೆಯೊಂದಿಗೆ ಆಟವಾಡಿದ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ ಗುತ್ತಿಗೆದಾರ ಕಂಪನಿಯ ವಿರುದ್ಧವೂ ಸಚಿವರು ಕಠಿಣ ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಿದ್ದು, ಸದರಿ ಗುತ್ತಿಗೆದಾರ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿಸಲಾಗಿದ್ದು, ದಂಡ ವಿಧಿಸಲಾಗಿದೆ.

ಜಯನಗರ: ಟೋಯಿಂಗ್ ಕಾರ್ಯಾಚರಣೆಗೆ ಸೂಚನೆ

ಬೆಂಗಳೂರು: ಜಯನಗರ ವಲಯ ವ್ಯಾಪ್ತಿಯಲ್ಲಿ ಮುಂದಿನ ವಾರದಿಂದ ಟೋಯಿಂಗ್ ಕಾರ್ಯಾಚರಣೆ ನಡೆಸುವಂತೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ಸೂಚನೆ ನೀಡಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ ರಾವ್ ಹಾಗೂ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ. ಎನ್. ರಮೇಶ್ ಜಯನಗರ ವಲಯದ ವ್ಯಾಪ್ತಿಯಲ್ಲಿ ಕಾರ್ಯಾಚರಣೆಗೆ ಇಳಿಯಲಿರುವ ಟೋಯಿಂಗ್ ವಾಹನಗಳನ್ನು ಪರಿಶೀಲನೆ ನಡೆಸಿದರು.

ಬಳಿಕ ಮಾತನಾಡಿದ ಆಯುಕ್ತ ಕೆ. ಎನ್. ರಮೇಶ್, ಅನಧಿಕೃತ ವಾಹನ ಪಾರ್ಕಿಂಗ್ ನಿಂದ ವಾಹನ ಸವಾರರಿಗೆ ಹಾಗೂ ಪಾದಚಾರಿಗಳಿಗೆ ಉಂಟಾಗುತ್ತಿರುವ ಕಿರಿಕಿರಿಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಜಯನಗರ ವಲಯದ ವ್ಯಾಪ್ತಿಯಲ್ಲಿ ಮುಂದಿನ ವಾರದಿಂದ ಒಟ್ಟು ಮೂರು ಟೋಯಿಂಗ್ ವಾಹನಗಳ ಕಾರ್ಯಾಚರಣೆಗೆ ಇಳಿಯಲಿವೆ ಎಂದು ತಿಳಿಸಿದರು. ಜಯನಗರ ವಲಯದ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಅಸಮರ್ಪಕ ಪಾರ್ಕಿಂಗ್ ತಡೆಯಲು ದಕ್ಷಿಣ ಪಾಲಿಕೆ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಪಡೆದಿರುವ ಮೂರು ನೂತನ ಟೋಯಿಂಗ್ ವಾಹನಗಳು ಸಾರಿಗೆ ಇಲಾಖೆಯಿಂದ ಫಿಟ್ನೆಸ್ ಪ್ರಮಾಣ ಪತ್ರ ಪಡೆದಿವೆ. ಅಧಿಕೃತವಾಗಿ ಸಂಚಾರ ಪೊಲೀಸರಿಗೆ ಹಸ್ತಾಂತರಿಸಲಾಗುವುದು.

ಉದ್ಘಾಟನೆ



ಶನಿವಾರ ಮಲ್ಲೇಶ್ವರ ಬೀಗಲ್ಸ್ ಬಾಸ್ಕೆಟ್‌ಬಾಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾದ ಭಾರತೀಯ ಯಂತ್ರ ಕ್ರೀಡಾ ಮಹೋತ್ಸವ (ಬಿಕೆವೈಎಂ)- 2026 ನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ದೇಶದ ವಿವಿಧೆಡೆಯಿಂದ ಆಗಮಿಸಿದ್ದ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನ ಗಮನ ಸೆಳೆಯಿತು.

ಕಿರುಸುದ್ದಿ

ಸಿಎಂ ವಿರುದ್ಧ ಅಪಪ್ರಚಾರ: ಎಫ್‌ಐಆರ್ ದಾಖಲು

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ನಡೆಸಿದ ಆರೋಪದ ಮೇಲೆ ಕುಮಾರಸ್ವಾಮಿ ಫಾರ್ ಸಿಎಂ ಸೋಶಿಯಲ್ ಮೀಡಿಯಾ ಪೇಜ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ವಕೀಲ ದೀಪು ಸಿ.ಆರ್.ಅವರು ನೀಡಿದ ಅಧಿಕೃತ ದೂರಿನ ಮೇರೆಗೆ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜೆಡಿಎಸ್ ಪಕ್ಷದ ಅಧಿಕೃತ ಜಾಲತಾಣದ ಪುಟಗಳಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಶವವಾಗಿ ಚಿತ್ರಿಸುವ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಸಿದ್ಧಪಡಿಸಲಾದ ವಿಡಿಯೋವೊಂದನ್ನು ಪ್ರಸಾರ ಮಾಡಲಾಗಿತ್ತು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಸಿಎಂ ಡಿ.ಕೆ.ಶಿವಕುಮಾರ್ ಅವರ ತೇಜೋವಧೆ ಮಾಡಲು ಮತ್ತು ಅವರ ಘನತೆಗೆ ಧಕ್ಕೆ ತರಲು ಈ ವಿಡಿಯೋ ಬಳಸಲಾಗಿದೆ. ಸಮಾಜದಲ್ಲಿ ತಪ್ಪು ಸಂದೇಶ ರವಾನಿಸುವ ಮೂಲಕ ಸಾರ್ವಜನಿಕ ಶಾಂತಿ ಭಂಗಕ್ಕೆ ಯತ್ನಿಸಲಾಗಿದೆ ಎಂದು ದೂರದಾರರು ಆರೋಪಿಸಿದ್ದಾರೆ. ಸದ್ಯ ಸದಾಶಿವನಗರ ಪೊಲೀಸರು ಪ್ರಕರಣವನ್ನು ಕೈಗೆತ್ತಿಕೊಂಡಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ನೀಟ್ ಪರೀಕ್ಷೆ ಇಂದು: ಸುಗಮ ಸಂಚಾರಕ್ಕೆ ಕ್ರಮ

ಬೆಂಗಳೂರು: ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜೂ.21ರಂದು ನೀಟ್ ಪರೀಕ್ಷೆ ನಡೆಯಲಿದ್ದು, ಆದರಿಂದ ಸಾರ್ವಜನಿಕರ ಸುಗಮ ಸಂಚಾರ ದೃಷ್ಟಿಯಿಂದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಬೆಂಗಳೂರು ಸಂಚಾರ ಪೊಲೀಸರು ತಿಳಿಸಿದ್ದಾರೆ. ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ, ಮ್ಯಾರಥಾನ್ ಕಾರ್ಯಕ್ರಮ ಹಾಗೂ ರಾಜಕೀಯ ಪಕ್ಷದ ಪ್ರಮುಖ ಕಾರ್ಯಕ್ರಮಗಳು ಆಯೋಜನೆಗೊಂಡಿರುತ್ತವೆ. ಕಾರ್ಯಕ್ರಮಗಳು ಆಯೋಜನೆಗೊಂಡಿರುವ ಸ್ಥಳಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಬೆಂಗಳೂರು ಸಂಚಾರ ವಿಭಾಗದಿಂದ ಕೆಲವು ಸಂಚಾರ ನಿರ್ಬಂಧ/ಮಾರ್ಪಾಡುಗಳನ್ನು ಮಾಡಲಾಗಿರುತ್ತದೆ. ಇದರೊಂದಿಗೆ ನೀಟ್ ಪರೀಕ್ಷೆ ನಡೆಯಲಿದ್ದು, ಆದರಿಂದ ಸಾರ್ವಜನಿಕರ ಸುಗಮ ಸಂಚಾರ ದೃಷ್ಟಿಯಿಂದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬೆಂಗಳೂರು ನಗರದ ಕೇಂದ್ರಗಳಲ್ಲಿ ನೀಟ್ ಪರೀಕ್ಷೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು, ಸಂಚಾರ ವಿಭಾಗದಿಂದ ಪ್ರಕಟಿಸಲಾಗಿರುವ ಸಂಚಾರ ಸಲಹೆಗಳ ಬಗ್ಗೆ ಗಮನಹರಿಸಿ ಸಹಾಯಕ್ಕಾಗಿ ಸಂಚಾರ ನಿಯಂತ್ರಣ ಕೋಣೆಯ ದೂ.ಸಂಖ್ಯೆ: 22943131, 22943030 ಸಂಪರ್ಕಿಸಬಹುದಾಗಿದೆ.

ದಿನೇಶ್ ಕರ್ಕೇರಾ ನಿಧನ

ಮಂಗಳೂರು: ಇಲ್ಲಿನ ಬೋಳೂರು ನಿವಾಸಿ ಹಾಗೂ ಬಿಜೆಪಿಯ ಬೋಳೂರು ಶಕ್ತಿಕೇಂದ್ರದ ಅಧ್ಯಕ್ಷರೂ ಆಗಿದ್ದ ದಿನೇಶ್ ಕರ್ಕೇರಾ ಅವರು ಶನಿವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು. ಅವರಿಗೆ 60 ವರ್ಷ ಪ್ರಾಯವಾಗಿತ್ತು. ಅವರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ದೀನ್ ತಾರ್ ದಿನೇಶ್ ಎಂದೇ ಪರಿಚಿತರಾಗಿರುವ ದಿನೇಶ್ ಅವರು ಅನೇಕ ವರ್ಷಗಳಿಂದ ಸೌಂಡ್ಸ್ ಅಂಡ್ ಲೈಟ್ಸ್ ಸಿಸ್ಟಂನ ಸೇವೆಯನ್ನು ಒದಗಿಸುತ್ತಿದ್ದರು.ಅವರು ಸಂಘನಿಕೇತನದ ಕಾರ್ಯಕ್ರಮಗಳಲ್ಲಿ ಸಹಯೋಗ ನೀಡುತ್ತಿದ್ದರು. ಸಹೃದಯಿ ಆಗಿದ್ದ ಇವರ ಅಗಲಿಕೆ ಬಗ್ಗೆ ಬಿಜೆಪಿ ಮತ್ತು ಸಂಘಪರಿವಾರದ ಪ್ರಮುಖರು ಹಾಗೂ ಕಾರ್ಯಕರ್ತರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಸಚಿವ ಕೃಷ್ಣ ಬೈರೇಗೌಡ ಹೇಳಿಕೆ | ಜನರ ನಿರೀಕ್ಷೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ

ಸಾರಿಗೆ ವ್ಯವಸ್ಥೆ ಬಲವರ್ಧನೆಗೆ ಮೆಟ್ರೋಗೆ ವೇಗ

ಬೆಂಗಳೂರು: ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೊ ವಿಸ್ತರಣಾ ಕಾಮಗಾರಿಗೆ ವೇಗ ನೀಡುವುದು ನನ್ನ ಮೊದಲ ಆದ್ಯತೆಯಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್ (ಬಿಎಂಆರ್ ಸಿಎಲ್) ಅಧಿಕಾರಿಗಳೊಂದಿಗೆ ನಮ್ಮ ಮೆಟ್ರೊ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಮೆಟ್ರೊ ಮೇಲೆ ಜನರಿಗೆ ಬಹಳ ನಿರೀಕ್ಷೆ ಹಾಗೂ ಭಾವನೆಯನ್ನು ಹೊಂದಿರುತ್ತಾರೆ. ಅವರ ಭಾವನೆ ಹಾಗೂ ನಿರೀಕ್ಷೆಯನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಆದರಲ್ಲೂ ಬಿಎಂಆರ್‌ಸಿಎಲ್ ಸ್ವಾಯತ್ತದೊಂದಿಗೆ ಉತ್ತರದಾಯಿತ್ವ ಹೊಂದಿರಬೇಕು. ಇಲ್ಲದಿದ್ದರೆ ಅದು ಸ್ವೇಚ್ಛಾಚಾರವಾಗುತ್ತದೆ ಎಂದರು.

25 ವರ್ಷಗಳ ಹಿಂದೆ ಶಂಕುಸ್ಥಾಮನೆಗೊಂಡ ನಮ್ಮ ಮೆಟ್ರೊ ಯೋಜನೆಯ ಯಾವ ಕಾಮಗಾರಿಯೂ ಕಾಲಮಿತಿಯೊಳಗೆ ಪೂರ್ಣಗೊಳಿಸಿಲ್ಲ. ನಿಗದಿತ ಕಾಲಾವಧಿ ಯಾಕೆ ಕೆಲಸಗಳು ವಿಳಂಬ ಆಗುತ್ತಿದೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಬೇಕೆಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಹಾಗೇ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೊ ವಿಸ್ತರಣಾ ಕಾಮಗಾರಿಗೆ ವೇಗ ನೀಡುವುದು ಆದ್ಯತೆಯಾಗಿದೆ ಎಂದು ಹೇಳಿದ್ದಾರೆ.

ಜನರ ನಿರೀಕ್ಷೆ ಈಡೇರಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಾಗುವುದು. ಕೆಲಸ ಮಾಡುವ ಸ್ಥಳದಲ್ಲಿ ಅನಗತ್ಯವಾದ ಜಾಗವನ್ನು ಬಳಕೆ ಮಾಡುವುದರಿಂದ ಟ್ರಾಫಿಕ್ ಸಮಸ್ಯೆ ಆಗು ತ್ತಿದೆ. ಆದರಿಂದ ಅಗತ್ಯವಿರುವ ಜಾಗವನ್ನು ಮಾತ್ರ ತೆಗೆದುಕೊಳ್ಳ ಬೇಕು. ಜೊತೆಗೆ ಕಬ್ಬಿಣದ ತುಂಡು ಸೇರಿದಂತೆ ಇನ್ನಿತರ ಸಾಮಾಗ್ರಿಗಳನ್ನು ರಸ್ತೆಯಲ್ಲಿಯೇ ಉಳಿಸುವುದರಿಂದ ಜನರು ಅಲ್ಲಿಗೆ ಹೆಚ್ಚಿನ ಕಸವನ್ನು ಹಾಕುತ್ತಿದ್ದಾರೆ. ಇದರಿಂದ ಬೆಂಗಳೂರಿನ ಸೌಂದರ್ಯ ಕಡಿಮೆಯಾಗುತ್ತದೆ. ಆದರಿಂದ ವರ್ಕ್‌ಸೈಟ್ ಮ್ಯಾನೇಜ್‌ಮೆಂಟ್ ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ ಎಂದರು.

ಗುಲಾಬಿ ಬಣ್ಣದ 7.5 ಕಿಮೀ ಎತ್ತರದ ಮಾರ್ಗವು ಆ.15 ರೊಳಗೆ ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ, ಆದರೆ ತಾವರೆ ಕೆರೆಯಿಂದ ನಾಗವಾರವರೆಗಿನ 13.7 ಕಿಮೀ ಭೂಗತ ಮಾರ್ಗವು ಮಾರ್ಚ್ 2027 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದರು.



ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೊ ವಿಸ್ತರಣಾ ಕಾಮಗಾರಿಗೆ ವೇಗ ನೀಡುವುದು ಆದ್ಯತೆ

ಪ್ರಾಯೋಗಿಕ ಸಂಚಾರ ಆರಂಭಿಸಲು ಸೂಚನೆ

ಕೆ.ಆರ್.ಪುರದಿಂದ ಮಾರತ್ತಹಳ್ಳಿಯವರೆಗೆ ಮಾರತಹಳ್ಳಿಯಿಂದ ಎಚ್‌ಎಸ್‌ಆರ್ ಲೇಔಟ್ ಮಾರ್ಗದಲ್ಲಿ ಆಕ್ಟೋಬರ್ ವೇಳೆಗೆ ಪ್ರಾಯೋಗಿಕ ಸಂಚಾರವನ್ನು ಆರಂಭಿಸಲು ಸೂಚಿಸಲಾಗಿದೆ. ಮಾರತ್ತಹಳ್ಳಿ ಮತ್ತು ಸಿಲ್ಕ್ ಬೋರ್ಡ್ ನಿಲ್ದಾಣಗಳಲ್ಲಿ ನಿರ್ಮಾಣ ಕಾರ್ಯಗಳು ಇನ್ನೂ ಬಾಕಿ ಉಳಿದಿವೆ, ಆದರೆ ಅಕ್ಟೋಬರ್ ನಲ್ಲಿ ಪ್ರಾಯೋಗಿಕ ಸಂಚಾರ ಪ್ರಾರಂಭವಾಗುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ವಿಮಾನ ನಿಲ್ದಾಣ ಮಾರ್ಗದಲ್ಲಿ ರೈಲು ಸಂಚಾರ ಆರಂಭ

ಹೆಬ್ಬಾಳ- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವರೆಗಿನ ಮಾರ್ಗದಲ್ಲಿ ರೈಲು ಸಂಚಾರ ಜೂನ್ 2027ರ ವೇಳೆಗೆ ಕಾರ್ಯಾರಂಭ ಮಾಡುವ ಗುರಿಯನ್ನು ಹೊಂದಿದ್ದು, ಉಳಿದ ಹೆಬ್ಬಾಳ-ಕೆಆರ್ ಪುರ ಮಾರ್ಗವು ಡಿಸೆಂಬರ್ 2027 ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಪಕ್ಷಿಕೆರೆ ಶ್ರೀ ಶನೀಶ್ವರ ಭಕ್ತ ವೃಂದದ ಮುಂಬೈ ಯಕ್ಷ ಯಾನ

ಕಿನ್ನಿಗೋಳಿ : ದೇಶ ವಿದೇಶಗಳಲ್ಲಿ ಶ್ರೀ ಶನೀಶ್ವರ ಮಹಾತ್ಮೆ ಪೂಜಾ ಸಹಿತ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮಗಳನ್ನು ನೀಡುತ್ತಿರುವ ಕರಾವಳಿಯ ಪ್ರಸಿದ್ಧ ಪಕ್ಷಿಕೆರೆ ತಂಡವು ಮುಂಬೈ ಯಕ್ಷ ಯಾನಕ್ಕೆ ಸಜ್ಜಾಗಿದೆ.

ಕಳೆದ ಮೂರು ದಶಕಗಳಿಂದ ಪದ್ಮನಾಭ ಶೆಟ್ಟಿಗಾರ್ ಪಕ್ಷಿಕೆರೆ ಅವರ ನೇತೃತ್ವದ ಶನಿ ಪೂಜೆಯ ಮಂಡಳಿ ಕಾರ್ಯಕ್ರಮ ಸಂಯೋಜನೆ ಮಾಡುತ್ತಿದೆ. ಕಿನ್ನಿಗೋಳಿ, ಮೂಲ್ಕಿ ಪರಿಸರದಲ್ಲಿ ವರ್ಷದಲ್ಲಿ ಹತ್ತಾರು ಕಾರ್ಯಕ್ರಮ ನಡೆಯುತ್ತಿತ್ತು.

ಸುಸಜ್ಜಿತ ತಂಡವಾಗಿ ಕಾಣಿಸಿಕೊಂಡದ್ದು

ದುಬೈ, ಅಬುದಾಬಿ ಪ್ರವಾಸದ ಸಂದರ್ಭದಲ್ಲಿ, ಕದ್ರಿ ನವನೀತ ಶೆಟ್ಟಿ ಅವರು ತಂಡಕ್ಕೆ ಸೇರಿದ ನಂತರ ತಾಳ ಮದ್ದಳೆಯ ಸ್ವರೂಪ ಬದಲಾವಣೆಯಾಯಿತು.

ಮಂಗಳೂರಿನ ಎ.ಬಿ. ಶೆಟ್ಟಿ ಸಭಾಂಗಣದಲ್ಲಿ ವಿಜಯ ಬ್ಯಾಂಕ್ ಯೂನಿಯನ್ ನವರು ಮೂಲ್ಕಿ ಕರುಣಾಕರ ಶೆಟ್ಟಿ ಅವರ ಸಂಯೋಜನೆಯಲ್ಲಿ ನಡೆಸಿದ ಶನಿ ಪೂಜೆ ನಮ್ಮ ಕುಡ್ಲ ವಾಹಿನಿಯಲ್ಲಿ ನೇರ ಪ್ರಸಾರವಾಯಿತು. ತಂಡದ ಜನಪ್ರಿಯತೆ ಹೆಚ್ಚಿತು. ದುಬೈ, ಅಬುದಾಬಿ ಕಾರ್ಯಕ್ರಮ ಜೋಡಣೆ ಆಯಿತು. ಸಾಂಗ್ಲಿ, ಶಿರಸಿ ಕಾರ್ಯಕ್ರಮಗಳು ಮುಂಬೈ ಪ್ರವಾಸ ಮಾಡಲು ಸೂರ್ತಿ ನೀಡಿತು. 6 ಘಂಟೆಯ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮೂರುವರೆ ಘಂಟೆಗಳಲ್ಲಿ ನಿರ್ವಹಿಸುತ್ತಿರುವುದು, ತಂಡದ ಶಿಸ್ತು, ಕಲಾವಿದರ ಶ್ರದ್ಧೆ ಯಶಸ್ಸಿಗೆ ಕಾರಣವಾಗಿದೆ.

ಈ ವರ್ಷದ ಮುಂಬೈ ಯಕ್ಷಯಾನದಲ್ಲಿ ನವನೀತ ಶೆಟ್ಟಿ ಕದ್ರಿ ಹಾಗೂ ಗಣೇಶ್ ಶೆಟ್ಟಿ ಕನ್ನಡಿ ಕಟ್ಟೆ ಅವರ ವಿಕ್ರಮಾದಿತ್ಯ, ತಲಪಾಡಿ ಸದಾಶಿವ ಆಳ್ವ ಅವರ ಶನೀಶ್ವರ ಪಾತ್ರಗಳು ವಿಭಿನ್ನ ನಿರೂಪಣೆಯಿಂದ ಕೂಡಿದೆ. ವಿಜಯ ಕುಮಾರ್ ಶೆಟ್ಟಿ ಮೊಯಿಲೊಟ್ಟು ಅವರ ನಂದಿ ಶ್ರೇಷ್ಠಿ ಹಾಗೂ ಗಾಣಿಗನ ಪಾತ್ರದಲ್ಲಿ ಹಾಸ್ಯದ ಹೊನಲು ಹರಿಯಲಿದೆ. ಅತ್ತೂರು ಗುತ್ತು ಪ್ರಸನ್ನ ಶೆಟ್ಟಿ ಅವರ ಆಲೋಲಿಕೆಯ ಮಾತಿನ ಮೊನಚು, ರವಿ ಭಟ್ ಪಡುಬಿದ್ರಿ ಅವರ ರಾಜ ಹಾಸ್ಯದ ಕಾರವಾನ ಶನಿ, ರವಿಚಂದ್ರ ಕನ್ನಡಿ ಕಟ್ಟೆ ಅವರ ಭಾಗವತಿಕೆ, ಯುವ ಪ್ರತಿಭೆ ಕುಮಾರಿ ವಾರುಣಿ ನಾಗರಾಜ್ ಆಚಾರ್ಯ ಅವರ ಭಾವನಾತ್ಮಕ ಪ್ರಸ್ತುತಿಯ ಸುಶೀಲೆ ಪಾತ್ರವಿದೆ.

ಬಿರುವ ಜವಣೆರ್ ಮಸ್ಕತ್ ಮೂರೂ ಬಾರಿ ಈ ಒಂದೇ ತಂಡವನ್ನು ಮಸ್ಕತ್‌ಗೆ ತರಿಸಿ 'ಶನೀಶ್ವರ ಮಹಾತ್ಮೆ' ಅಲ್ಲದೆ 'ಸತ್ಯನಾರಾಯಣ ಮಹಾತ್ಮೆ', 'ಕೊರಗಜ್ಜ' ಪ್ರಸಂಗಗಳನ್ನು ಪ್ರದರ್ಶಿಸಿ ಜನ ಮೆಚ್ಚುಗೆ ಪಡೆದಿದ್ದಾರೆ. ಸಂಚಾಲಕ ಪದ್ಮನಾಭ ಶೆಟ್ಟಿಗಾರ್ ಪಕ್ಷಿಕೆರೆ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ 2024 ರಲ್ಲಿ ದೊರಕಿದೆ.

ವಿಜಯ ಕುಮಾರ್ ಶೆಟ್ಟಿ ಮೊಯ್ಲೊಟ್ಟು ಅವರು ಯಕ್ಷಗಾನ ಅಕಾಡೆಮಿ ಸದಸ್ಯರಾಗಿದ್ದಾರೆ.

ಈ ಮಂಡಳಿ ಕಳೆದ ವರ್ಷದಲ್ಲಿ ಸುಮಾರು 50 ಕಾರ್ಯಕ್ರಮಗಳನ್ನು ನೀಡಿದೆ.

ಇದೀಗ ಮುಂಬೈಯಲ್ಲಿ ಜುಲೈ 10 ರಿಂದ 19 ರವರೆಗೆ 6 ನೇ ವರ್ಷದ ಯಕ್ಷಯಾನ ನಡೆಸಲಿದೆ.

ಈ ಮಂಡಳಿಯ ಪೂಜಾ ಸಹಿತ ತಾಳಮದ್ದಳೆ ಹೊಸ ಯಕ್ಷಗಾನ ಪ್ರೇಕ್ಷಕರನ್ನು ಸೃಷ್ಟಿಸಿದೆ. ಭಕ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಸಜ್ಜನ ಪ್ರೇಕ್ಷಕರು ಶ್ರದ್ಧೆ, ಭಕ್ತಿ ಯಿಂದ ತಾಳಮದ್ದಳೆಯ ಸೊಗಡನ್ನು ಆಸ್ವಾದಿಸುತ್ತಿದ್ದಾರೆ. ಮಹಿಳೆಯರು ದೀಪಕ ಮಾಲಾ ಹಾಡಿನ ಸಂದರ್ಭದಲ್ಲಿ ದೀಪ ಬೆಳಗುವ ಸಂಭ್ರಮ ಇದೆ.

ಮುಂಬೈ ಯಕ್ಷಯಾನ - 10 ದಿನ 10 ಪ್ರದರ್ಶನ

ಜುಲೈ 10ರಿಂದ 19ರ ತನಕ 10 ದಿನ 10 ತಾಳಮದ್ದಳೆ ಕಾರ್ಯಕ್ರಮಗಳು ನಡೆಯಲಿದೆ.

10 ಜುಲೈ ಶುಕ್ರವಾರ ಅಂಬರ್ನಾತ್ ನಲ್ಲಿ ಯಕ್ಷಯಾನದ ಉದ್ಘಾಟನೆ ಹಾಗೂ 20 ರಂದು ವಿಕ್ರೋಳಿ (ಪ) ದಲ್ಲಿ ಅಯ್ಯಪ್ಪ ಸೇವಾ ಸಂಗಮದ ನೆರಳಲ್ಲಿ ಸಮಾರೋಪ ಜರಗಲಿದೆ. ಥಾನಾ, ಮಿರರೋಡ್, ಪೂನಾ, ಡೊಂಬಿವಲಿ, ಘಂನ್ಸೋಲಿ, ಮುಲುಂಡ್, ನಾಲಾ ಸೊಪರ್ ಪ್ರದೇಶಗಳಲ್ಲಿ ಪ್ರದರ್ಶನ ಇದೆ.

ಅವಧಿ ಪೂರ್ವ ನವಜಾತ ಶಿಶುವಿಗೆ ಇಂಡಿಯಾನಾ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ

ಮಂಗಳೂರು: ನಗರದ ಇಂಡಿಯಾನಾ ಆಸ್ಪತ್ರೆ ಮತ್ತು ಹೃದಯ ಸಂಸ್ಥೆಯ ವೈದ್ಯರು, ಕೇವಲ 27 ವಾರಗಳ ಗರ್ಭಾವಸ್ಥೆಯಲ್ಲಿ ಜನಿಸಿದ ಅತ್ಯಂತ ದುರ್ಬಲವಾದ ಸೂಕ್ಷ್ಮ-ಅವಧಿ ಪೂರ್ವ ಶಿಶುವಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಿದ್ದಾರೆ.

ಇದು ನವಜಾತ ಶಿಶುಗಳ ತೀವ್ರ ನಿಗಾದಲ್ಲಿ ಅತ್ಯಂತ ಸವಾಲಿನ ಸಾಧನೆಗಳಲ್ಲಿ ಒಂದಾಗಿದೆ. ಅವಧಿಗೆ ಸುಮಾರು ಮೂರು ತಿಂಗಳ ಮೊದಲು ಜನಿಸಿದ ಮಗುವನ್ನು, ಮೂರು ವಾರಗಳಲ್ಲಿ ಇಂಡಿಯಾನಾ ಆಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ ವರ್ಗಾಯಿಸಲಾಯಿತು. ಆಸ್ಪತ್ರೆಗೆ ಸೇರಿಸಿದಾಗ, ಶಿಶುವಿಗೆ ರಕ್ತಚಲನಶಾಸ್ತ್ರೀಯವಾಗಿ ಮಹತ್ವದ, ದೊಡ್ಡ ಪೇಟೆಂಟ್ ಡಕ್ಟಸ್ ಆರ್ಟೆರಿಯೊಸಸ್ ಇರುವುದು ಕಂಡುಬಂದಿದೆ. ಇದು ಜನ್ಮಜಾತ ಹೃದಯ ಸ್ಥಿತಿಯಾಗಿದ್ದು, ಇದರಲ್ಲಿ ಸಾಮಾನ್ಯವಾಗಿ ಜನನದ ನಂತರ ಮುಚ್ಚುವ ರಕ್ತನಾಳವು ತೆರೆದಿರುತ್ತದೆ. ಇದು ಶಿಶುವಿನ ಹೃದಯ ರಕ್ತನಾಳದ ಸ್ಥಿರತೆ ಮತ್ತು ಶ್ವಾಸಕೋಶದ ಕಾರ್ಯವನ್ನು ತೀವ್ರವಾಗಿ ದುರ್ಬಲಗೊಳಿಸುತ್ತದೆ.

ಮಗುವಿನ ಈ ಕ್ಲಿಷ್ಟ ಪರಿಸ್ಥಿತಿಯ ಹೊರತಾಗಿಯೂ, ಕ್ಲಿನಿಕಲ್ ತಂಡವು ನಿಖರವಾದ, ಪುರಾವೆ ಆಧಾರಿತ ವಿಧಾನವನ್ನು ಅಳವಡಿಸಿಕೊಂಡಿತು. ಆರಂಭದಲ್ಲಿ, ಶಸ್ತ್ರಚಿಕಿತ್ಸೆ ತಪ್ಪಿಸುವ ಗುರಿಯೊಂದಿಗೆ, ತೀವ್ರವಾದ ವೈದ್ಯಕೀಯ ನಿರ್ವಹಣೆ ಮತ್ತು ವಿಶೇಷ ಔಷಧಗಳ ಮೂಲಕ ಪಿಡಿಎಯ ಸ್ವಯಂಪ್ರೇರಿತ ಮುಚ್ಚುವಿಕೆಯನ್ನು ಸುಗಮಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಯಿತು. ಆದರೂ ಶಿಶುವನ್ನು ಸ್ಥಿರಗೊಳಿಸಲು ಸಾಧ್ಯವಾಗದಿದ್ದಾಗ , ತಂಡವು ನಿರ್ಣಾಯಕವಾಗಿ ಹೆಚ್ಚು ಸಂಕೀರ್ಣವಾದ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಿ, ಪಿಡಿಎ ಮುಚ್ಚುವಿಕೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಇದು ಶಿಶುವಿನ ಚೇತರಿಕೆಯಲ್ಲಿ ನಿರ್ಣಾಯಕ ತಿರುವು ನೀಡಿತು. ಶಸ್ತ್ರಚಿಕಿತ್ಸೆಯ ನಂತರ, ಮಗುವಿನ ಸ್ಥಿತಿ ಸ್ಥಿರವಾಗಿ ಸುಧಾರಿಸಿತು. ಸುಮಾರು 30 ದಿನಗಳ ಎನ್‌ಐಸಿಯು ವಾಸ್ತವ್ಯದ ನಂತರ ಮಗುವನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಇಂಡಿಯಾನಾ ಆಸ್ಪತ್ರೆಯ ಅಧ್ಯಕ್ಷ ಮತ್ತು ಹಿರಿಯ ಸಲಹೆಗಾರರಾದ ಪ್ರೊ. ಡಾ. ಅಲಿ ಕುಂಬ್ಳೆ ಅವರ ನೇತೃತ್ವದಲ್ಲಿ, ಹಿರಿಯ ಸಲಹೆಗಾರರಾದ ನವಜಾತ ಶಿಶುವೈದ್ಯಶಾಸ್ತ್ರಜ್ಞ ಡಾ. ಅಭಿಷೇಕ್ ಕೆ. ಫಡ್ಕೆ, ಸಲಹೆಗಾರರಾದ ಮಕ್ಕಳ ಹೃದ್ರೋಗ ತಜ್ಞ ಡಾ. ಸತೀಶ್ ಕುಮಾರ್ ಬಿ.ಎಸ್., ಸಲಹೆಗಾರರಾದ ಕಾರ್ಡಿಯೋಥೊರಾಸಿಕ್ ಮತ್ತು ನಾಳೀಯ ಶಸ್ತ್ರ ಚಿಕಿತ್ಸಕ (ಸಿಟಿವಿಎಸ್) ಡಾ. ಪ್ರತೀಕ್ ವಾಸ್ವಾನಿ ಮತ್ತು ಅರಿವಳಿಕೆ ತಜ್ಞ ಡಾ. ಟಿ.ವಿ. ಶೆಣೈ, ನವಜಾತ ಶಿಶುಗಳ ದಾದಿಯರ ಸಮರ್ಪಿತ ತಂಡ ಈ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಗೊಳಿಸಿತು.



ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ತಪ್ಪಿ ಹೋಗದಂತೆ ನಿಗಾ ವಹಿಸಿ : ಕುತ್ಯಾರು ನವೀನ್ ಶೆಟ್ಟಿ

ಉಡುಪಿ: ಎಸ್.ಐ.ಆರ್. ಪ್ರಕ್ರಿಯೆಯ ಸಂದರ್ಭದಲ್ಲಿ ಪಕ್ಷದ ಪ್ರಮುಖರು, ಎಲ್ಲಾ ಸ್ತರದ ಪದಾಧಿಕಾರಿಗಳು, ಶಕ್ತಿಕೇಂದ್ರ ಮತ್ತು ಬೂತ್ ಮಟ್ಟದ ಜವಾಬ್ದಾರಿಯುತ ಪದಾಧಿಕಾರಿಗಳು ಹಾಗೂ ಕಾರ್ಯಕರ್ತ ಬಂಧುಗಳು ಬಹಳ ಜಾಗರೂಕರಾಗಿದ್ದು ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ತಪ್ಪಿ ಹೋಗದಂತೆ ಎಚ್ಚರ ವಹಿಸಬೇಕು. ಮಾಹಿತಿಯ ಕೊರತೆ ಇದ್ದವರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಿ ಪ್ರತಿಯೊಬ್ಬ ಅರ್ಹ ಮತದಾರರೂ ಎಸ್ .ಐ.ಆರ್. ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನಿಗಾ ವಹಿಸುವ ಜೊತೆಗೆ ಸದೃಢ ಪಕ್ಷ ಸಂಘಟನೆಗೆ ಒತ್ತು ನೀಡಬೇಕು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಕರೆ ನೀಡಿದರು.

ಅವರು ಬಿಜೆಪಿ ಕಾಪು ಮಂಡಲ ವ್ಯಾಪ್ತಿಯ ಕುತ್ಯಾರು ಶಕ್ತಿ ಕೇಂದ್ರದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.



ಎಸ್.ಐ.ಆರ್. ಕಾಪು ಮಂಡಲ ಉಸ್ತುವಾರಿ ಸುಲೋಚನಾ ಭಟ್ ಅವರು ಎಸ್.ಐ.ಆರ್. ಅಭಿಯಾನದ ಕುರಿತು ಸಮಗ್ರ ಮಾಹಿತಿ ನೀಡಿದರು.

ಕಾಪು ಮಂಡಲಾಧ್ಯಕ್ಷ ಜಿತೇಂದ್ರ ಶೆಟ್ಟಿ ಉದ್ಯಾವರ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ 'ವಿಶ್ವಾಸ, ವಿಕಾಸ ಮತ್ತು 12 ವರ್ಷಗಳ ಜನ ಕಲ್ಯಾಣ'ದ ಅಭಿಯಾನದ ಅಂಗವಾಗಿ ಪಕ್ಷದ ಹಿರಿಯ ಕಾರ್ಯಕರ್ತರು ಹಾಗೂ ಕಾಪು ತಾಲೂಕು ವ್ಯಾಪ್ತಿಯ ಕುತ್ಯಾರಿನ ಮೊದಲ ಬಿಜೆಪಿ ಗ್ರಾಮ ಪಂಚಾಯತ್ ಸದಸ್ಯರಾದ ಲೀಲಾ ಭಂಡಾರಿ ಮತ್ತು ಭಾಸ್ಕರ್ ಪೂಜಾರಿ ಅವರನ್ನು ಸನ್ಮಾನಿಸಲಾಯಿತು. ಕುತ್ಯಾರು ಶಕ್ತಿ ಕೇಂದ್ರದ ನೂತನ ಅಧ್ಯಕ್ಷ ಶುಶಾಂತ್ ಶೆಟ್ಟಿ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕಾಪು ಮಂಡಲ ಉಪಾಧ್ಯಕ್ಷೆ ಲತಾ ಆಚಾರ್ಯ, ಮಂಡಲ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ರಾವ್ ಮಟ್ಟು, ಪ್ರಮುಖರಾದ ಸಂದೀಪ್ ರಾವ್ ಮಜೂರು, ಪ್ರವೀಣ್ ಗುರ್ಮೆ, ಶಿರ್ವ ಸಿ.ಎ. ಬ್ಯಾಂಕ್ ಅಧ್ಯಕ್ಷ ಕುತ್ಯಾರು ಪ್ರಸಾದ್ ಶೆಟ್ಟಿ, ಬೂತ್ ಅಧ್ಯಕ್ಷ ಪ್ರಭಾಕರ ಶೆಟ್ಟಿ, ದೀರಜ್ ಕುಲಾಲ್, ದೇವರಾಜು ಬಿ., ಕುತ್ಯಾರು ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಅಗ್ನೇಸ್ ಮಾತಾಯಸ್, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷ ಜನಾರ್ಧನ ಆಚಾರ್ಯ, ಧೀರಜ್ ಶೆಟ್ಟಿ, ಬಿ.ಎಲ್.ಒ-2 ಗಳಾದ ಗಣೇಶ್ ಶೆಟ್ಟಿ ಪಯ್ಯರ್, ಅಶೋಕ್ ನಾಯ್ಕ್, ಸಂಪತ್ ಪೂಜಾರಿ ಮಾಜಿ ಪಂಚಾಯತ್ ಸದಸ್ಯ ಎವಾಜಿನ್ ತಾವರೋ ಮುಂತಾದವರು ಉಪಸ್ಥಿತರಿದ್ದರು.

ಶ್ರೀ ಇಗ್ಗುತ್ತಪ್ಪ ಮೂಲಕ್ಕೆ ದಕ್ಕೆ ಅಕ್ಷಮ್ಯ : ಶ್ರೀ ಸೋಮನಾಥಾನಂದಪುರಿ ಆಕ್ರೋಶ

ಮಡಿಕೇರಿ : ಕೊಡಗು ಜಿಲ್ಲೆಯ ಮಳೆ -ಬೆಳೆಯ ಆದಿ ದೇವ ಎಂಬ ನಂಬಿಕೆಯ ಶ್ರೀ ಇಗ್ಗುತ್ತಪ್ಪ ದೇವರ ಮೂಲಸ್ಥಾನ ಮಲ್ಮಕುಂದ್ ವ್ಯಾಪ್ತಿಯಲ್ಲಿ ಅನಧಿಕೃತ ಕಾಮಗಾರಿಯೊಂದಿಗೆ ದೈವಿಕ ಶಕ್ತಿಯ ಪರಿಸರಕ್ಕೆ ಯಾವುದೇ ರೀತಿಯ ಧಕ್ಕೆ ಉಂಟು ಮಾಡುವುದು ಅಕ್ಷಮ್ಯ ಎಂದು ಶ್ರೀ ಸೋಮನಾಥಾನಂದಪುರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಐತಿಹಾಸಿಕ ಹಿನ್ನೆಲೆ ಹೊಂದಿರುವ ಮಲ್ಮಕುಂದ್ ಪರಿಸರದಲ್ಲಿ ಸ್ಥಳೀಯರೂ ಸೇರಿದಂತೆ ಶ್ರೀ ಇಗ್ಗುತ್ತಪ್ಪ ದೇವರ ಕಾರ್ಯಕ್ರಮ ಅಥವಾ ಪರಂಪರೆಯ ಕಟ್ಟುಪಾಡು ಹೊರತು ಬೇರೆ ಯಾವುದೇ ರೀತಿಯ ಚಟುವಟಿಕೆಗಳು ನಡೆಯದಂತೆ ಸರ್ಕಾರ ಮತ್ತು ಜಿಲ್ಲಾ ಆಡಳಿತ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಈ ದಿಸೆಯಲ್ಲಿ ಕರ್ನಾಟಕ ಧಾರ್ಮಿಕ ದತ್ತಿ ಇಲಾಖೆಯ ಅಧೀನ ಇರುವ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನ ಹಾಗೂ ನೆಲಜಿ ಶ್ರೀ ಇಗ್ಗುತ್ತಪ್ಪ ಮತ್ತು ಪೇರೂರು ದೇವ ಸನ್ನಿಧಿಗಳಿಗೆ ಅವಿನಾಭಾವ ಸಂಬಂಧ ಇದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ನೆನಪಿಸಿದ್ದಾರೆ.

ಶ್ರೀ ಇಗ್ಗುತ್ತಪ್ಪ ದೇವರ ಮೂಲಕ್ಕೆ ಯಾರಿಂದಲೂ ಹಾನಿ ಉಂಟಾದರೂ ಸಹಿಸಲು ಸಾಧ್ಯ ಇಲ್ಲ ಎಂದಿರುವ ಶ್ರೀಸೋಮನಾಥಾನಂದಪುರಿ ಅವರು, ಈ ಸಂದರ್ಭದಲ್ಲಿ ರಾಜಕೀಯ ಮತ್ತು ಜಾತಿ ಭೇದ ಮರೆತು ಕೊಡಗು ಜಿಲ್ಲೆಯ ಜನರು ಒಗ್ಗಟ್ಟಿನ ಹೋರಾಟ ನಡೆಸುವುದು ಅನಿವಾರ್ಯ ಎಂದು ಕರೆ ನೀಡಿದ್ದಾರೆ. ದೈವಿಕ ಭಾವನೆಗಳಿಗೆ ಭಂಗತರಲು ಹವಣಿಸುವ ಭೂಮಾಫಿಯಾ ಹಾಗೂ ಧನದಾಹಿಗಳ ಹಿಂದೆ ಪಟ್ಟಭದ್ರ ಹಿತಾಸಕ್ತಿ ಕಾರ್ಯಾಚರಣೆ ನಡೆಸುತ್ತಿರುವ ಶಂಕೆ ಇದ್ದು ಕೊಡಗು ಜಿಲ್ಲಾಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ತನಿಖೆ ನಡೆಸಬೇಕು. ಭವಿಷ್ಯದಲ್ಲಿ ಅಸಮಾಧಾನ ತೀವ್ರ ಸ್ವರೂಪ ಪಡೆಯುವ ಮೊದಲು ಜಾಗೃತರಾಗಬೇಕು ಎಂದು ಕಳಕಳಿಯಿಂದ ಆಗ್ರಹಿಸಿದ್ದಾರೆ.

ಆಕ್ಷೇಪ ಬೆನ್ನಲ್ಲೇ ಎನ್‌ಟಿಎ ಸ್ಪಷ್ಟನೆ

ಅಬುದಾಬಿ ಆಯ್ಕೆ ವಿದ್ಯಾರ್ಥಿಯದ್ದೇ



• **ನಾಗ್ಪುರ:** ನೀಟ್-ಯುಜಿ ಮರುಪರೀಕ್ಷೆಗೆ ಇಲ್ಲಿನ ವಿದ್ಯಾರ್ಥಿಯೊಬ್ಬರಿಗೆ ಯುಎಇಯ ಅಬುಧಾಬಿಯಲ್ಲಿ ಪರೀಕ್ಷಾ ಕೇಂದ್ರ ನೀಡಲಾಗಿದೆ ಎಂಬ ಸುದ್ದಿ ತಿರುವು ಪಡೆದಿದ್ದು, ಈ ಪರೀಕ್ಷಾ ಕೇಂದ್ರವನ್ನು ಸ್ವತಃ ವಿದ್ಯಾರ್ಥಿಯೇ ಆಯ್ಕೆ ಮಾಡಿಕೊಂಡಿದ್ದಾನೆ ಎಂದು ಎನ್‌ಟಿಎ ಬಹಿರಂಗಪಡಿಸಿದೆ.

ಶನಿವಾರ ಬೆಳಗ್ಗೆ ಈ ಸಂಬಂಧ ವಿದ್ಯಾರ್ಥಿಯ ಕುಟುಂಬಸ್ಥರು ಆಕ್ಷೇಪವೆತ್ತಿದ್ದರು. ಬಳಿಕ ತಾಂತ್ರಿಕ ದೋಷದಿಂದ ಹೀಗಾಗಿರಬೇಕು ಎಂದು ಎನ್‌ಟಿಎ ಸಂಪಡಿಸಿ, ನಾಗ್ಪುರಕ್ಕೇ ಬದಲು ಮಾಡಿತ್ತು. ಜತೆಗೆ, ತಾಂತ್ರಿಕ ದೋಷ ಎಲ್ಲಿ ಆಗಿರಬಹುದು ಎಂಬ ಶೋಧಕ್ಕಿಳಿದಾಗ ಸ್ವತಃ ವಿದ್ಯಾರ್ಥಿ ಆಯ್ಕೆ ಮಾಡಿಕೊಂಡಿರುವುದು ಗೊತ್ತಾಗಿದೆ.

ಈ ಮೊದಲು ಪ್ರತಿಕ್ರಿಯೆ ನೀಡಿದ್ದ ವಿದ್ಯಾರ್ಥಿಯತಂದೆ ಡಾ. ಮೊಹಮ್ಮದ್ ತಾಲಿಬ್, ಪ್ರವೇಶಪತ್ರದಲ್ಲಿ ಅಬುಧಾಬಿ ಕೇಂದ್ರ ಕಂಡು ತೀವ್ರ ಆತಂಕಕ್ಕೊಳಗಾಗಿದ್ದೆವು. ಇದೀಗ ಕೇಂದ್ರ ಬದಲಾಯಿಸಿರುವುದರಿಂದ ನೆಮ್ಮದಿ ದೊರೆತಿದೆ. ಆದರೆ ಈ ಗೊಂದಲದಿಂದ ಮಗ ಒತ್ತಡಕ್ಕೆ ಒಳಗಾಗಿದ್ದು, ಪರೀಕ್ಷೆಗೆ ಹಾಜರಾಗಲು ಹಿಂದೇಟು ಹಾಕುತ್ತಿದ್ದಾನೆ ಎಂದಿದ್ದರು.

ಅಭ್ಯರ್ಥಿಯ ಖಾತೆಯಿಂದಲೇ ಬದಲಾವಣೆ: ಸಂಸ್ಥೆ: ವಿದ್ಯಾರ್ಥಿಯ ನೋಂದಾಯಿತ ಖಾತೆಯ ಮೂಲಕವೇ ಪರೀಕ್ಷಾ ನಗರವನ್ನು ಅಬುಧಾಬಿಗೆ ಬದಲಾಯಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸ್ಪಷ್ಟಪಡಿಸಿದೆ. ತಿದ್ದುಪಡಿ ಅವಧಿಯಲ್ಲಿ ಅಭ್ಯರ್ಥಿಯ ಖಾತೆಯಿಂದ ವಿನಂತಿಯಾದ ಬಳಿಕ ದಾಖಲಾಗಿದ್ದು, ಅಬುಧಾಬಿ ಕೇಂದ್ರವನ್ನು ಆಯ್ಕೆ ಮಾಡಲಾಗಿದೆ. ಬಳಿಕ ಎರಡು ಬಾರಿ ಪ್ರವೇಶಪತ್ರದ ಪೂರ್ವವೀಕ್ಷಣೆಯನ್ನೂ ಮಾಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ಪರೀಕ್ಷೆಗೆ ಕೇವಲ 48 ಗಂಟೆಗಳು ಬಾಕಿ ಇದ್ದಾಗ ಜೂ.19ರ ಸಂಜೆ ಕೇಂದ್ರವನ್ನು ನಾಗ್ಪುರಕ್ಕೆ ಬದಲಿಸುವಂತೆ ಅನೌಪಚಾರಿಕ ಮನವಿ ಬಂದಿತ್ತು. ಅಭ್ಯರ್ಥಿಯ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಂಡು, ಕುಟುಂಬವನ್ನು ಸಂಪರ್ಕಿಸಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ ಎಂದು ಸಂಸ್ಥೆ ಹೇಳಿದೆ.

ವಿದ್ಯಾರ್ಥಿಯೇ ಮೊದಲ ಆದ್ಯತೆ: ಆಡಳಿತಾತ್ಮಕ ಗೊಂದಲದಿಂದ ಯಾವುದೇ ಅರ್ಹ ಅಭ್ಯರ್ಥಿ ಪರೀಕ್ಷೆಯಿಂದ ವಂಚಿತರಾಗಬಾರದು ಎಂಬುದು ಸಂಸ್ಥೆಯ ಆದ್ಯತೆಯಾಗಿದೆ. ಇದೇ ಕಾರಣಕ್ಕೆ ಅಭ್ಯರ್ಥಿಯ ಮನವಿಯಂತೆ ಕೊನೆಯ ಕ್ಷಣದಲ್ಲೂ ಕೇಂದ್ರವನ್ನು ಬದಲಾಯಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹೇಳಿದೆ.

ದೇಶದೆಲ್ಲೆಡೆ ನೀಟ್ ಮಾಕ್ ಡ್ರಿಲ್ ಯಶಸ್ವಿ: ನೀಟ್(ಯುಜಿ) 2026 ಮರುಪರೀಕ್ಷೆ ಹಿನ್ನೆಲೆ ಎನ್‌ಟಿಎ ದೇಶದೆಲ್ಲೆಡೆ ನೀಟ್ ಮರುಪರೀಕ್ಷೆಯ ಪೂರ್ವಾಭ್ಯಾಸ(ಮಾಕ್ ಡ್ರಿಲ್) ಅನ್ನು ಶನಿವಾರ ಆಯೋಜಿಸಿತು. ನೀಟ್ ಮರುಪರೀಕ್ಷೆಗೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ನಡೆಸಲಾಗಿದ್ದು, ಸುರಕ್ಷತಾ ವ್ಯವಸ್ಥೆಯಲ್ಲಿ ಲೋಪವಾಗದಿರಲಿ ಎಂಬ ಉದ್ದೇಶದಿಂದ ಮಾಕ್ ಡ್ರಿಲ್ ನಡೆಸಲಾಗಿದೆ.

ಮಾಕ್ ಡ್ರಿಲ್ ವೇಳೆ ಪ್ರಶ್ನೆಪತ್ರಿಕೆ ಸಾಗಣೆ, ಪರೀಕ್ಷಾರ್ಥಿಗಳ ತಪಾಸಣೆ, ಸಿಸಿಟಿವಿ ಮತ್ತು ಕಣ್ಗಾವಲು ವ್ಯವಸ್ಥೆ, ಸುರಕ್ಷತೆ, ಮರುಪರೀಕ್ಷೆಗೆ ಪರೀಕ್ಷಾ ಕೇಂದ್ರಗಳ ಸನ್ನದ್ಧತೆ ಇತ್ಯಾದಿ ಪರಿಶೀಲನೆಗಳನ್ನು ನಡೆಸಲಾಯಿತು. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷೆಗೆ ಕುಳಿತುಕೊಳ್ಳುವ ಸ್ಥಳ, ದಾಖಲೆಗಳ ತಪಾಸಣೆ ಪ್ರಕ್ರಿಯೆ ಮತ್ತು ಸುರಕ್ಷತಾ ವ್ಯವಸ್ಥೆಗಳ ಪರಿಶೀಲನೆ ನಡೆಸಲಾಯಿತು. ಎನ್‌ಟಿಎ ಅಧಿಕಾರಿಗಳು, ಜಿಲ್ಲಾಡಳಿತ, ಪೊಲೀಸರು ಹಾಗೂ ಸಿಎಸ್‌ಐಆರ್ ಸಿಬ್ಬಂದಿ ನಡುವಿನ ಸಮನ್ವಯ ಪರಿಶೀಲಿಸಲಾಯಿತು.

ಶ್ರೀರಾಮನ ಪ್ರತಿಮೆ ಅಪವಿತ್ರ ಢಾಕಾದಲ್ಲಿ ತೀವ್ರ ಪ್ರತಿಭಟನೆ

• **ಢಾಕಾ:** ಬಾಂಗ್ಲಾದೇಶದಲ್ಲಿ ಭಗವಾನ್ ಶ್ರೀ ರಾಮನ ಮೂರ್ತಿಯನ್ನು ಅಪವಿತ್ರಗೊಳಿಸಿದ ಘಟನೆ ಸಂಭವಿಸಿದ್ದು, ಹಿಂದು ಸಮುದಾಯದವರು ರಾಜಧಾನಿ ಢಾಕಾದಲ್ಲಿ ಭಾರಿ ಪ್ರತಿಭಟನೆ ನಡೆಸಿದ್ದಾರೆ. ಅದೇ ರೀತಿ ಗೈಬಂಧ ಜಿಲ್ಲೆಯಲ್ಲಿ 81 ಅಡಿ ಎತ್ತರದ ಶ್ರೀ ರಾಮನ ಪ್ರತಿಮೆ ನಿರ್ಮಾಣ ಯೋಜನೆಯನ್ನು ಸ್ಥಗಿತಗೊಳಿಸಿರುವುದನ್ನು ವಿರೋಧಿಸಿ ಹಿಂದು ಸಂಘಟನೆಗಳು ರಾಜಧಾನಿ ಹಾಗೂ ದೇಶದ ವಿವಿಧೆಡೆ ಬೃಹತ್ ಪ್ರತಿಭಟನೆ ನಡೆಸಿದೆ.

ಸ್ಥಗಿತಗೊಂಡ ಪ್ರತಿಮೆ ಯೋಜನೆ: ಉತ್ತರ ಗೈಬಂಧ ಜಿಲ್ಲೆಯ ಪಲಾಶ್‌ಬಾರಿಯಲ್ಲಿ ನಿರ್ಮಾಣವಾಗುತ್ತಿರುವ ಪ್ರತಿಮೆಯ ಸುತ್ತ ಈ ವಿವಾದ ಕೇಂದ್ರೀಕೃತವಾಗಿದೆ. ಈ ಯೋಜನೆ, ಶ್ರೀಕೃಷ್ಣ ಮತ್ತು ಶಿವನ ಪ್ರತಿಮೆಗಳನ್ನು ಒಳಗೊಂಡಿರುವ ದೇವಾಲಯದ ಸಂಕೀರ್ಣದ ಭಾಗವಾಗಿದೆ. ಶೇ.80 ಕಾಮಗಾರಿ ಪೂರ್ಣಗೊಂಡಿದ್ದರೂ, ಇಸ್ಲಾಮಿಕ್ ಸಂಘಟನೆಗಳಿಂದ ಬೆದರಿಕೆ ಬಂದ ಹಿನ್ನೆಲೆಯಲ್ಲಿ ದೇವಾಲಯದ ಅಧಿಕಾರಿಗಳು ನಿರ್ಮಾಣವನ್ನು ಸ್ಥಗಿತಗೊಳಿಸಿದ್ದಾರೆ.

ಜಾಗತಿಕ ಸ್ವಾಸ್ಥ್ಯದ ಕಡೆಗೆ ಹೆಜ್ಜೆ

ಅಂತಾರಾಷ್ಟ್ರೀಯ ಯೋಗ ದಿನವನ್ನು ಇಂದು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಈ ಪ್ರಾಚೀನ ಭಾರತೀಯ ಪದ್ಧತಿಯನ್ನು ಸಂಭ್ರಮಿಸಲು ಲಕ್ಷಾಂತರ ಜನರು ಒಂದಾಗಲಿದ್ದಾರೆ. ಯೋಗದ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಜನರು ತಮ್ಮ ದೈನಂದಿನ ಜೀವನದಲ್ಲಿ ಇದನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು ಈ ವಾರ್ಷಿಕ ಆಚರಣೆಯ ಮುಖ್ಯ ಉದ್ದೇಶ. ಜಗತ್ತಿನಲ್ಲಿ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಆರೋಗ್ಯ ಸವಾಲುಗಳನ್ನು ಎದುರಿಸಲು ಯೋಗ ಒಂದು ಪ್ರಮುಖ ಸಾಧನ ಎಂದು ಸಾಬೀತಾಗುತ್ತಲೇ ಬಂದಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿಕ್ರಿಯೆ

ಈ ಆಚರಣೆಗೆ ಜಾಗತಿಕ ಮಟ್ಟದಲ್ಲಿ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಯೋಗ ದಿನಾಚರಣೆ ವಿವಿಧ ಖಂಡಗಳು ಮತ್ತು ದೇಶಗಳಾದ್ಯಂತ ವಿಸ್ತರಿಸಿದೆ. ನಿಯಮಿತ ದೈಹಿಕ-ಮಾನಸಿಕ ವ್ಯಾಯಾಮದ ಜಂಟಿ ಗುರಿಯಡಿಯಲ್ಲಿ ಅಂತಾರಾಷ್ಟ್ರೀಯ ಸಮುದಾಯಗಳನ್ನು ಒಂದುಗೂಡಿಸಲು ಸುಮಾರು 175 ದೇಶಗಳಲ್ಲಿ ಏಕಕಾಲಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ (ಐಸಿಸಿಆರ್) ಸಂಘಟಿತ ಕಾರ್ಯಾಚರಣೆಗಳ ಮೂಲಕ, ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು ವ್ಯಾಪಕ ಯೋಗ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿವೆ. ಈ ಪ್ರಯತ್ನಗಳ ಫಲವಾಗಿ ಜಗತ್ತಿನಾದ್ಯಂತ ಸುಮಾರು 2,500 ಸ್ಥಳಗಳಲ್ಲಿ ಸಕ್ರಿಯ ಆಚರಣೆಗಳು ನಡೆಯುತ್ತಿವೆ. ಈ ವ್ಯಾಪಕ ಅಂತಾರಾಷ್ಟ್ರೀಯ ಸ್ಪಂದನೆ, ಭಾರತದ ಐತಿಹಾಸಿಕ ಜ್ಞಾನದಲ್ಲಿ ಬೇರೂರಿರುವ ಪದ್ಧತಿಯೊಂದು ದೈನಂದಿನ ರೋಗ ತಡೆಗಟ್ಟುವಿಕೆ ಮತ್ತು ಸ್ವಾಸ್ಥ್ಯಕ್ಕಾಗಿ ಅತ್ಯಂತ ಪ್ರಾಯೋಗಿಕ ಜಾಗತಿಕ ಚಳುವಳಿಯಾಗಿ ಹೇಗೆ ರೂಪುಗೊಂಡಿದೆ ಎಂಬುದನ್ನು ತೋರಿಸುತ್ತದೆ.



ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಆರೋಗ್ಯಕರ ವೃದ್ಧಾಪ್ಯದ ಧ್ಯೇಯವಾಕ್ಯ

2026ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಧಿಕೃತ ಧ್ಯೇಯವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ (ಯೋಗ ಫಾರ್ ಹೆಲ್ತಿ ಏಜಿಂಗ್). ಜಗತ್ತಿನಾದ್ಯಂತ ವಯಸ್ಸಾದವರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಅವರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ಜಾಗತಿಕ ಅಗತ್ಯವನ್ನು ಈ ಧ್ಯೇಯವಾಕ್ಯ ತಿಳಿಸುತ್ತದೆ. ದೀರ್ಘಾಯುಷ್ಯ, ಚಟುವಟಿಕೆ, ದೃಢತೆ, ಮತ್ತು ರೋಗನಿರೋಧಕ ಆರೋಗ್ಯ ರಕ್ಷಣೆಯನ್ನು ಹೆಚ್ಚಿಸುವಲ್ಲಿ ಯೋಗದ ಪಾತ್ರದ ಬಗ್ಗೆ ಜಾಗೃತಿ ಮೂಡಿಸಲು ಈ ಸಲದ ಆಚರಣೆ ಪ್ರಯತ್ನಿಸಲಿದೆ.

ಸಾಮರಸ್ಯ, ಆರೋಗ್ಯ

ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಉದ್ಭವಿಸಿದ ಯೋಗ, ಮಾನವನ ಮನಸ್ಸು ಮತ್ತು ದೇಹದ ನಡುವೆ ಸಂಪೂರ್ಣ ಸಾಮರಸ್ಯವನ್ನು ಸೃಷ್ಟಿಸಲು ವಿನ್ಯಾಸಗೊಳಿಸಲಾದ ಸಮಗ್ರ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಈ ಅಭ್ಯಾಸ, ದೈಹಿಕ ಭಂಗಿಗಳು, ಉಸಿರಾಟದ ವ್ಯಾಯಾಮಗಳು, ಧ್ಯಾನ ಮತ್ತು ನಿಖರವಾದ ಜಾಗೃತಿಯ ತಂತ್ರಗಳನ್ನು ರಚನಾತ್ಮಕವಾಗಿ ಸಂಯೋಜಿಸುತ್ತದೆ. ದೇಹದ ಉತ್ತಮ ಸಮತೋಲನ ಮತ್ತು ಸುಧಾರಿತ ಏಕಾಗ್ರತೆ ಸೇರಿದಂತೆ ದಾಖಲಿತ ದೈಹಿಕ ಪ್ರಯೋಜನಗಳ ಬಗ್ಗೆ ಜನರಿಗೆ ಶಿಕ್ಷಣ ನೀಡಲು ಈ ಜಾಗತಿಕ ವೇದಿಕೆ ಸಹಾಯ ಮಾಡುತ್ತದೆ. ಮೇಲಾಗಿ, ನಿಯಮಿತ ಅಭ್ಯಾಸ ದೈನಂದಿನ ಒತ್ತಡ ನಿರ್ವಹಣೆಗೆ ಹಲವು ರೀತಿಯ ಪರಿಹಾರಗಳನ್ನು ಒದಗಿಸುತ್ತದೆ, ವ್ಯಕ್ತಿಗಳು ರೋಗ ಬಂದ ನಂತರ ಚಿಕಿತ್ಸೆ ಪಡೆಯುವ ಬದಲಿಗೆ ರೋಗನಿರೋಧಕ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಲು ಸಹಾಯ ಮಾಡುತ್ತದೆ.

ಜಾಗತಿಕ ಆಚರಣೆಗಳ ವಿಸ್ತರಣೆ

ಇಂದು ಜಗತ್ತಿನಾದ್ಯಂತ ಸಾಮೂಹಿಕ ಯೋಗ ಅವಧಿಗಳು, ಶೈಕ್ಷಣಿಕ ಕಾರ್ಯಾಗಾರಗಳು, ಸಮುದಾಯ ಅಭಿಯಾನಗಳು ಮತ್ತು ಸ್ವಾಸ್ಥ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸರ್ಕಾರಿ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಆರೋಗ್ಯ ಸಂಸ್ಥೆಗಳು ಮತ್ತು ಸ್ವತಂತ್ರ ಯೋಗ ತರಬೇತುದಾರರು ಸಕ್ರಿಯ ಜೀವನದ ಮೌಲ್ಯವನ್ನು ಉತ್ತೇಜಿಸಲು ಕೈಜೋಡಿಸಿದ್ದಾರೆ. ಎಲ್ಲಾ ವಯೋಮಾನದ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಸಾರ್ವಜನಿಕ ಸ್ಥಳಗಳು, ಶಾಲೆಗಳು, ಕಚೇರಿಗಳು ಮತ್ತು ಉದ್ಯಾನವನಗಳಲ್ಲಿ ಮುಕ್ತ ಯೋಗ ಅವಧಿಗಳನ್ನು ಆಯೋಜಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳು ಯೋಗದ ವ್ಯಾಪಕ ಸಾಂಸ್ಕೃತಿಕ ಸ್ವೀಕಾರ ಮತ್ತು ಬೆಳೆಯುತ್ತಿರುವ ಅಂತಾರಾಷ್ಟ್ರೀಯ ಆಕರ್ಷಣೆಯನ್ನು ತೋರಿಸುತ್ತದೆ.

ಯೋಗದ ಹಬ್ಬ

12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಇಂದು ದೇಶಾದ್ಯಂತ "ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ" ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಡೆಹ್ರಾಡೂನ್‌ನಲ್ಲಿ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೋಲ್ಕತ್ತಾದ ರೆಡ್ ರೋಡ್‌ನಲ್ಲಿ ರಾಷ್ಟ್ರೀಯ ಕಾರ್ಯಕ್ರಮಕ್ಕೆ ನೇತೃತ್ವ ವಹಿಸಲಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಲಡಾಖ್‌ನಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಆಯುಷ್ ಸಚಿವಾಲಯ, ಶಾಲೆಗಳು, ಕಾಲೇಜುಗಳು, ಸರ್ಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಾಮೂಹಿಕ ಯೋಗಾಭ್ಯಾಸ ನಡೆಸುವಂತೆ ಸೂಚಿಸಿದೆ.

ಇತಿಹಾಸ ಮತ್ತು ಮೂಲ

ಯೋಗಕ್ಕಾಗಿ ಪ್ರತ್ಯೇಕ ಜಾಗತಿಕ ದಿನವನ್ನು ಮೀಸಲಿಡುವ ಕಲ್ಪನೆ ಸೆಪ್ಟೆಂಬರ್ 2014ರಲ್ಲಿ ಪ್ರಾರಂಭವಾಯಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಈ ಪರಿಕಲ್ಪನೆಯನ್ನು ಅಧಿಕೃತವಾಗಿ ಪ್ರಸ್ತಾಪಿಸಿದರು. ಈ ಪ್ರಸ್ತಾವಕ್ಕೆ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಿಂದ ತಕ್ಷಣದ ಮತ್ತು ಅಭೂತಪೂರ್ವ ಬೆಂಬಲ ದೊರೆಯಿತು. ಈ ಒಮ್ಮತದ ಫಲವಾಗಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಡಿಸೆಂಬರ್ 2014ರಲ್ಲಿ ಅಧಿಕೃತ ನಿರ್ಣಯವನ್ನು ಅಂಗೀಕರಿಸಿ, ಜೂನ್ 21 ರನ್ನು ಅಂತರರಾಷ್ಟ್ರೀಯ ಯೋಗ ದಿನ ಎಂದು ಘೋಷಿಸಿತು. ಆಯ್ದ ದಿನಾಂಕ ಸಾಂಸ್ಕೃತಿಕ ಮಹತ್ವ ಹೊಂದಿದೆ, ಏಕೆಂದರೆ ಇದು ಉತ್ತರ ಗೋಳಾರ್ಧದಲ್ಲಿ ಬೇಸಿಗೆ ಆಯನ ಸಂಕ್ರಾಂತಿಯೊಂದಿಗೆ ಹೊಂದಿಕೆಯಾಗುತ್ತದೆ. ಇದು ಕ್ಯಾಲೆಂಡರ್ ವರ್ಷದ ಅತಿ ಉದ್ದದ ದಿನವೂ ಹೌದು. ಈ ನಿರ್ಣಯದ ನಂತರ, ಉದ್ಘಾಟನಾ ಅಂತಾರಾಷ್ಟ್ರೀಯ ಯೋಗ ದಿನವನ್ನು ಜೂನ್ 21, 2015 ರಂದು ಆಚರಿಸಲಾಯಿತು. ಇದು ಪ್ರಪಂಚದಾದ್ಯಂತ ಏಕಕಾಲೀನ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಆ ಮೊದಲ ಸಾಮೂಹಿಕ ಆಚರಣೆಯ ನಂತರ, ವಾರ್ಷಿಕ ಆಚರಣೆ ಜಗತ್ತಿನ ಅತಿ ದೊಡ್ಡ ಸ್ವಾಸ್ಥ್ಯ ಯೋಜನೆಗಳಲ್ಲಿ ಒಂದಾಗಿ ಅಪೂರ್ವ ಯಶಸ್ಸು ಕಂಡಿದೆ.



ಮಾನಸಿಕ ಸ್ವಾಸ್ಥ್ಯ

ಕೇವಲ ದೈಹಿಕ ಸಾಮರ್ಥ್ಯವನ್ನು ಮೀರಿ, ಯೋಗ ಭಾವನಾತ್ಮಕ ಮತ್ತು ಮಾನಸಿಕ ಸ್ಥಿರತೆಗೆ ಅತ್ಯಗತ್ಯ ಸಾಧನ ವಾಗಿ ಕಾರ್ಯ ನಿರ್ವಹಿಸುತ್ತದೆ. ಆಧುನಿಕ ಸಾಮಾಜಿಕ ಒತ್ತಡಗಳ ನಡುವೆ ದೈನಂದಿನ ಒತ್ತಡವನ್ನು ಕಡಿಮೆ ಮಾಡಲು, ಆಂತರಿಕ ಸ್ವಯಂ ಜಾಗೃತಿಯನ್ನು ಹೆಚ್ಚಿಸಲು ಮತ್ತು ಆಂತರಿಕ ಭಾವನಾತ್ಮಕ ಸಮತೋಲ ನವನ್ನು ಕಾಯ್ದು ಕೊಳ್ಳಲು ಯೋಗಾಭ್ಯಾಸಿಗಳು ಈ ತಂತ್ರವನ್ನು ಬಳಸುತ್ತಾರೆ.


ಕಿರುಸುದ್ದಿ

ಕಾಂಗ್ರೆಸ್‌ನಲ್ಲೇ ರಾಗಾಗೆ ಬೆಂಬಲ ಕುಸಿತ

• **ಹೊಸದಿಲ್ಲಿ:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸ್ವಪಕ್ಷದಲ್ಲೇ ಬೆಂಬಲ ಕ್ಷೀಣಿಸುತ್ತಿದೆ ಎಂದು ಬಿಜೆಪಿ ಶನಿವಾರ ಆರೋಪಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಕಾರ್ಯವೈಖರಿಯನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಶ್ಲಾಘಿಸಿದ್ದಾರೆ ಎನ್ನಲಾದ ಹೇಳಿಕೆಯನ್ನು ಉಲ್ಲೇಖಿಸಿ ಬಿಜೆಪಿ ರಾಹುಲ್ ವಿರುದ್ಧ ವಾಗ್ದಾಳಿ ನಡೆಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ನಾವಿಕರ ವಿಚಾರವನ್ನು ಪ್ರಧಾನಿ ಮೋದಿ ಪ್ರಬಲವಾಗಿ ಪ್ರಸ್ತಾಪಿಸಿದ್ದು, ಭಾರತದ ನಿಲುವನ್ನು ಪರಿಣಾಮಕಾರಿಯಾಗಿ ಮನವರಿಕೆ ಮಾಡಿದ್ದಾರೆ ಎಂಬ ತರೂರ್ ಹೇಳಿಕೆ ರಾಹುಲ್ ಗಾಂಧಿ ಅವರ ನಿಲುವಿಗೆ ವಿರುದ್ಧವಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ. ಶುಕ್ರವಾರ ರಾಹುಲ್ ಗಾಂಧಿ ಅವರ ಜನ್ಮದಿನವಾಗಿತ್ತು. ಆದರೆ ಅವರಿಗೆ ಯಾವುದೇ ಉಡುಗೊರೆ ಸಿಗಲಿಲ್ಲ. ಬದಲಾಗಿ, ಅದೇ ವಿಚಾರದಲ್ಲಿ ಶಶಿ ತರೂರ್ ಅವರ ನಿಲುವನ್ನೇ ಅಲ್ಲಗಳೆದಿದ್ದಾರೆ ಎಂದು ಪೂನಾವಾಲಾ ವಿಡಿಯೊ ಹೇಳಿಕೆಯಲ್ಲಿ ವ್ಯಂಗ್ಯವಾಡಿದರು. ಪ್ರಧಾನಿ ಮೋದಿ ಅವರ ದೂರದೃಷ್ಟಿ, ನಾಯಕತ್ವ, ಮಾತುಗಾರಿಕೆ ಮತ್ತು ಕ್ರಿಯಾಶೀಲತೆಯನ್ನು ತರೂರ್ ಹಲವು ಬಾರಿ ಪ್ರಶಂಸಿಸಿದ್ದಾರೆ. ಮೋದಿ ಅವರು ಭಾರತೀಯರ ಬದುಕಿನ ಮೇಲೆ ತಮ್ಮದೇ ಛಾಪು ಮೂಡಿಸಿದ್ದಾರೆ ಎಂದೂ ತರೂರ್ ಹೇಳಿದ್ದಾರೆ ಎಂದು ಪೂನಾವಾಲಾ ಬೊಟ್ಟು ಮಾಡಿದರು.

ಪಾಕ್‌ನಲ್ಲಿ ಮಾಧ್ಯಮಗಳಿಗೆ ಸ್ವತಂತ್ರವಿಲ್ಲ: ಜೆ.ಡಿ ವ್ಯಾನ್ಸ್

• **ವಾಷಿಂಗ್ಟನ್:** ಪಾಕಿಸ್ತಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಇಲ್ಲ. ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಿತ ಪಾಕ್ ನೀತಿ ನಿಯಮಗಳು ಸರಿಯಿಲ್ಲ. ಅಮೆರಿಕ-ಇರಾನ್ ಶಾಂತಿ ಒಪ್ಪಂದದ ಪ್ರಮುಖಾಂಶಗಳ ಬಿಡುಗಡೆ ವಿಳಂಬವಾಗಲು ಇದು ಕೂಡ ಪ್ರಮುಖ ಕಾರಣವೆಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಪೋಡ್‌ಕಾಸ್ಟ್‌ನಲ್ಲಿ ಟೀಕಿಸಿದ್ದಾರೆ. ಈ ಮೂಲಕ ಪಾಕಿಸ್ತಾನ ಮಾಧ್ಯಮವನ್ನು ಎಷ್ಟರ ಮಟ್ಟಿಗೆ ಹಿಡಿತದಲ್ಲಿಟ್ಟುಕೊಂಡಿದೆ ಎಂಬುದನ್ನು ಬಹಿರಂಗಪಡಿಸಿದ್ದಾರೆ.ಮಧ್ಯಂತರ ಶಾಂತಿ ಒಪ್ಪಂದದ ಮುಖ್ಯಾಂಶಗಳು ಬಿಡುಗಡೆಯಾಗಬೇಕೆಂದು ನಾವು ಬಯಸಿದ್ದೇವೆ. ಆದರೆ ಪಾಕ್ ಮತ್ತು ಖತಾರಿ ವ್ಯವಸ್ಥೆಗಳಲ್ಲಿ ಪ್ರಥಮ ತಿದ್ದುಪಡಿ (ಫಸ್ಟ್ ಅಮೆಂಡ್‌ಮೆಂಟ್)ಮತ್ತು ಪತ್ರಿಕಾ ಸ್ವಾತಂತ್ರ್ಯಗಳಿಲ್ಲ. ಒಪ್ಪಂದದ ಮುಖ್ಯಾಂಶ ಬಿಡುಗಡೆ ವಿಳಂಬವಾಗಲು ಇದು ಕೂಡ ಕಾರಣವೆಂದು ವಾನ್ಸ್ ಆರೋಪಿಸಿದ್ದಾರೆ.



ನಿಂಬಾಳ್ಕರ್ ಕೊಲೆ ಕೇಸ್: ಆರೋಪಿಗಳ ಖುಲಾಸೆ

• **ಮುಂಬೈ:** 2006ರಲ್ಲಿ ನಡೆದ ಮಹಾರಾಷ್ಟ್ರ ಕಾಂಗ್ರೆಸ್ ನಾಯಕ ಪವನರಾಜೆ ನಿಂಬಾಳ್ಕರ್ ಕೊಲೆ ಪ್ರಕರಣದ ಎಲ್ಲಾ ಆರೋಪಿಗಳನ್ನು 20 ವರ್ಷಗಳ ಬಳಿಕ ಮುಂಬೈನ ವಿಶೇಷ ನ್ಯಾಯಾಲಯವು ಶನಿವಾರ ದೋಷಮುಕ್ತಗೊಳಿಸಿದೆ.

2006ರ ಜೂ.3ರಂದು ನಿಂಬಾಳ್ಕರ್(41) ಮತ್ತು ಚಾಲಕ ಸಮದ್ ಕಾಜಿ ಮುಂಬೈನಿಂದ ಒಸ್ಮಾನಾಬಾದ್ (ಈಗಿನ ಧಾರಾಶಿವ್) ನತ್ತ ಪ್ರಯಾಣಿಸುತ್ತಿದ್ದರು. ನವಿಮುಂಬೈನ ಕಲಂಬೊಲಿ ತಲುಪಿದಾಗ ಇಬ್ಬರು ಶೂಟರ್‌ಗಳು ಕಾರು ಅಡ್ಡಗಟ್ಟಿದ್ದರು. ಬಳಿಕ ಗುಂಡಿನ ದಾಳಿ ನಡೆಸಿದ್ದು, ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು.

20 ವರ್ಷಗಳ ಬಳಿಕ ತೀರ್ಪು ಪ್ರಕಟ

ನಿಂಬಾಳ್ಕರ್ ಸೋದರಸಂಬಂಧಿ ಮತ್ತು ಎನ್‌ಸಿಪಿ ಮಾಜಿ ಸಂಸದ ಈಗ 86 ವರ್ಷದವರಾದ ಪದ್ಮಸಿಂಹ ಪಾಟೀಲ್, ಉದ್ಯಮಿ ಸತೀಶ್ ಮಂದಾಡೆ, ಮಾಜಿ ಬಿಜೆಪಿ ಕಾರ್ಪೊರೇಟರ್ ಮತ್ತು ನಿವೃತ್ತ ಅಬಕಾರಿ ಇನ್ಸ್‌ಪೆಕ್ಟರ್ ಮೋಹನ್ ಶುಕ್ಲಾ, ಪರಸ್ಮಾಲ್ ಜೈನ್, ಮಾಜಿ ಅಬಕಾರಿ ಇನ್ಸ್‌ಪೆಕ್ಟರ್ ಶಶಿಕಾಂತ್ ಕುಲಕರ್ಣಿ, ಬಿಎಸ್‌ಪಿ ಕಾರ್ಯಕರ್ತ ಕೈಲಾಶ್ ಯಾದವ್ ಹಾಗೂ ಶೂಟರ್‌ಗಳಾದ ದಿನೇಶ್ ತಿವಾರಿ, ಪಿಂಟು ಸಿಂಗ್ ಮತ್ತು ಚೋಟೆ ಪಾಂಡೆ ವಿಚಾರಣೆ ಎದುರಿಸಿದ್ದರು.

ಹೈಕೋರ್ಟ್‌ಗೆ ಸಿಬಿಐ: 2009ರಲ್ಲಿ ಸಿಬಿಐ ದೋಷಾರೋಪ ಪಟ್ಟಿ ಸಲ್ಲಿಸಿದ್ದು, 2011ರಲ್ಲಿ ವಿಚಾರಣೆ ಆರಂಭವಾಗಿತ್ತು. ಪಾಟೀಲರಿಂದ ಜೀವ ಬೆದರಿಕೆ ಪಡೆದಿದ್ದ ಅಣ್ಣಾ ಹಜಾರೆ ಸೇರಿ 128 ಸಾಕ್ಷಿದಾರರನ್ನು ಸಿಬಿಐ ಪ್ರಸ್ತುತಪಡಿಸಿತ್ತು. ಇದೀಗ ತೀರ್ಪನ್ನು ಪ್ರಶ್ನಿಸಿ ಸಿಬಿಐ ಹೈಕೋರ್ಟ್ ಮೆಟ್ಟಿಲೇರಲಿದೆ.

ಶೀಘ್ರ ಪ್ರಗತಿ ಪ್ರಕ್ರಿಯೆ ಪರಿವರ್ತನೆಗಳಿಗೆ ಸಾಕ್ಷಿ

• **ಹೂಗ್ಲಿ (ಪ.ಬಂಗಾಳ):** ಪ್ರಜಾತಾಂತ್ರಿಕ ಪ್ರಕ್ರಿಯೆಗಳ ಶಕ್ತಿ ಏನೆಂಬುದನ್ನು ಪ.ಬಂಗಾಳದಲ್ಲಿನ ತ್ವರಿತಗತಿಯ ಪ್ರಗತಿ-ಪರಿವರ್ತನೆಗಳು ಸಾಕ್ಷೀಕರಿಸಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಬಂಗಾಳದ ಜನರ ಹಣ ಸುಲಿಗೆ ಮಾಡಿದವರನ್ನು ಜೈಲಿಗೆ ಕಳುಹಿಸಲಾಗುವುದು ಎಂದು ಪ್ರಧಾನಿ ಗುಡುಗಿದರು. ಬಂಗಾಳದ ಜನತೆಯ ದುಡ್ಡನ್ನು ಯಾರೆಲ್ಲ ಸುಲಿಗೆ ಮಾಡಿದ್ದಾರೋ ಅವರೀಗ ದುಡ್ಡು ವಾಪಸ್ ನೀಡೋದು ಕಡ್ಡಾಯವಾಗಿದೆ. ಮಾಡಿರುವ ತಪ್ಪಿಗೆ ಆಪಾದಿತರು ಜೈಲು ಶಿಕ್ಷೆ ಕೂಡ ಅನುಭವಿಸಲೇಬೇಕು ಎಂದವರು ಹೂಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ ,ಪಶ್ಚಿಮ ಬಂಗಾಳ ದಿನಾಚರಣೆ ಕಾರ್ಯಕ್ರಮದಲ್ಲಿ ಹಿಂದಿನ ಸರಕಾರಗಳನ್ನು ತೀವ್ರವಾಗಿ ತರಾಟೆಗೆತ್ತಿಕೊಂಡರು.

ರಾಜ್ಯದಲ್ಲಿನ ಹಿಂದಿನ ಸರಕಾರಗಳು ಅಭಿವೃದ್ಧಿಯನ್ನು ಕಡೆಗಣಿಸುವ ಮುಖೇನ, ಜನರು ಅವಕಾಶಗಳ ಅರಸಿ ಬೇರೆ ರಾಜ್ಯಗಳಿಗೆ ವಲಸೆ ಹೋಗುವಂತಹ ದಯನೀಯ ಸನ್ನಿವೇಶ ಸೃಜಿಸಿದ್ದವು. ಹಿಂದಿನ ಸರಕಾರಗಳ ಕಾರ್ಯ ವೈಖರಿಗೆ ನಾವು ಸಾಕ್ಷಿಯಾಗಿದ್ದೇವೆ. ಅವರುಗಳು ಬಂಗಾಳವನ್ನು ತೀರಾ ಹಿಂದುಳಿದ ಹೀನಾಯ ಸ್ಥಿತಿಗೆ ದೂಡಿ, ನಾಡನ್ನು ಸಾಮೂಹಿಕ ನಿರ್ಗಮನ ಭೂಮಿಯಾಗಿ ಪರಿವರ್ತಿಸಿದರು. ಇದೀಗ ಪ್ರಸಕ್ತ ಸರಕಾರದ ಆಳ್ವಿಕೆಯಲ್ಲಿ ಅಭಿವೃದ್ಧಿ ಪ್ರಯತ್ನಗಳಿಗೆ ಹೊಸ ಆಯಾಮ ದೊರೆತಿದೆ ಮತ್ತು ಪ.ಬಂಗಾಳವು ಆಶಾವಾದದ ನವ ಅನುಭವಕ್ಕೆ ಸಾಕ್ಷಿಯಾಗುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಗಡಿಗೆ ತಂತಿಬೇಲಿ ನಿರ್ಮಿಸಲು ಅಗತ್ಯ ಭೂಮಿ ಹಸ್ತಾಂತರಕ್ಕೆ ಹಿಂದಿನ ಸರಕಾರ ತಡೆಯೊಡ್ಡಿತ್ತು ಎಂದು ಆರೋಪಿದ್ದಾರೆ.

ಯುದ್ಧದಿಂದ ದೂರ ಉಳಿದ ನಾಯಕ ಮೋದಿ

• **ವಾಷಿಂಗ್ಟನ್:** ಭಾರತದ ಪ್ರಧಾನಿ ನರೇಂದ್ರ ಮೋದಿ ಮಹಾನ್ ನಾಯಕ, ಯುದ್ಧಗಳಿಂದ ದೂರ ಉಳಿಯುವುದು ಭಾರತದ ಬುದ್ಧಿವಂತಿಕೆಯ ನಿರ್ಧಾರ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಂಡಾಡಿದ್ದಾರೆ. ಶುಕ್ರವಾರ ತಡರಾತ್ರಿ ನೀಡಿದ ಸಂದರ್ಶನದಲ್ಲಿ ಭಾರತದೊಂದಿಗಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತ ಪ್ರಶ್ನೆಗೆ ಉತ್ತರಿಸಿದ ಅಧ್ಯಕ್ಷ ಟ್ರಂಪ್, ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ತಾವು ಹೆಚ್ಚು ಮೆಚ್ಚಿಕೊಳ್ಳುವ ವಿಶ್ವ ನಾಯಕರೆಂದು ಹೇಳಿದ್ದಾರೆ. ತಮ್ಮ ಪ್ರಭಾವಶಾಲಿ ನಾಯಕತ್ವದ ಗುಣ, ಸಾಮರ್ಥ್ಯ ಮತ್ತು ಫಲಿತಾಂಶಗಳಿಂದ ಈ ನಾಯಕರು ವಿಶೇಷ ಸ್ಥಾನ ಪಡೆದಿದ್ದಾರೆ.



ಮೋದಿ ಮಹಾನ್ ನಾಯಕ, ಅವರ ನೇತೃತ್ವದಲ್ಲಿ ಭಾರತ ಒಳ್ಳೆಯ ಬೆಳವಣಿಗೆಗಳನ್ನು ಕಾಣುತ್ತಿದೆ. ಯುದ್ಧಗಳಿಂದ ದೂರ ಉಳಿಯುವುದು ಅವರ ಬುದ್ಧಿವಂತಿಕೆಯ ನಡೆ. ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಇರುವ ಭಾರತವನ್ನು ಮುನ್ನಡೆಸುವ ಮೋದಿ ನಿಜಕ್ಕೂ ಅದ್ಭುತ ನಾಯಕ ಎಂದು ಟ್ರಂಪ್ ಶ್ಲಾಘಿಸಿದ್ದಾರೆ.

ಭಾರತದೊಂದಿಗೆ ನಾವು ಸಾಕಷ್ಟು ವ್ಯಾಪಾರ ಮಾಡುತ್ತೇವೆ. ಈಗ ಭಾರತದೊಂದಿಗೆ ನ್ಯಾಯಯುತ ವ್ಯಾಪಾರ ಮಾಡುತ್ತಿದ್ದೇವೆ. ಈ ಹಿಂದೆ ಭಾರತದವರು ನಮ್ಮೊಂದಿಗೆ ಹೆಚ್ಚು ಲಾಭದಾಯಕ ವ್ಯಾಪಾರ ಮಾಡುತ್ತಿದ್ದರು. ಅದಕ್ಕಾಗಿ ನಾನು ಭಾರತೀಯರನ್ನು ದೂರುವುದಿಲ್ಲ. ನಮ್ಮ ದೇಶದಲ್ಲಿದ್ದ ಮೂರ್ಖ ರಾಜಕಾರಣಿಗಳು ನಷ್ಟದ ವ್ಯಾಪಾರಕ್ಕೆ ಅನುಮತಿ ನೀಡಿದ್ದರು. ನಾವೀಗ ಉತ್ತಮ ವ್ಯಾಪಾರ ಮಾಡುತ್ತಿದ್ದೇವೆ. ಮೋದಿ ಒಬ್ಬ ಮಹಾನ್ ನಾಯಕ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ.

ದೇಗುಲದ ಛಾವಣಿ ಕುಸಿತ: ಏಳು ಸಾವು

• **ಪರಭಣಿ:** ಮಹಾರಾಷ್ಟ್ರದಲ್ಲಿ ಧಾರ್ಮಿಕ ಸಭೆಯ ಸಂದರ್ಭದಲ್ಲಿ ನಿರ್ಮಾಣ ಹಂತದಲ್ಲಿದ್ದ ಹನುಮಾನ್ ದೇವಸ್ಥಾನದ ಮೇಲ್ಛಾವಣಿ ಕುಸಿದು ಬಿದ್ದ ಪರಿಣಾಮ ಏಳು ಜನರು ಮೃತಪಟ್ಟಿದ್ದು, ಸುಮಾರು 30 ಜನರು ಗಾಯಗೊಂಡಿದ್ದಾರೆ. ಮಾನವತ್ ತಾಲೂಕಿನ ಯಶ್ವಡಿ ಗ್ರಾಮದಲ್ಲಿ ಭಕ್ತರು ಆಧ್ಯಾತ್ಮಿಕ ಕಾರ್ಯಕ್ರಮಕ್ಕಾಗಿ ಜಮಾಯಿಸಿದ್ದಾಗ ಈ ಘಟನೆ ಸಂಭವಿಸಿದೆ. ಸ್ಥಳೀಯ ನಿವಾಸಿಗಳು, ಪೊಲೀಸ್ ಸಿಬ್ಬಂದಿ ಮತ್ತು ತುರ್ತು ಸೇವಾ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದವು. ಭಗ್ನಾವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದ ಜನರನ್ನು ಹೊರತೆಗೆಯಲು ರಕ್ಷಣಾ ಸಿಬ್ಬಂದಿ ಭಾರೀ ಯಂತ್ರೋಪಕರಣಗಳನ್ನು ಬಳಸಬೇಕಾಯಿತು.

ಗೃಹ ಸಚಿವ ಅಮಿತ್ ಶಾ ಬಣ್ಣನೆ | ಅಸಾಧ್ಯವೆನಿಸಿದ್ದ ಕಾರ್ಯಗಳು ಸಾಕಾರ

12 ವರ್ಷ ಸುವರ್ಣಾಕ್ಷರಗಳಲ್ಲಿ ದಾಖಲು

• **ಕೊಲ್ಹಾಪುರ:** ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತವು ಸ್ವತಂತ್ರ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶನಿವಾರ ಅಂಬಾಬಾಯಿ ಮಹಾಲಕ್ಷ್ಮೀ ದೇವಸ್ಥಾನ ಕಾರಿಡಾರ್ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮೋದಿ ನೇತೃತ್ವದಲ್ಲಿ ಭಾರತವು ಪುನರುತ್ಥಾನಗೊಂಡಿದ್ದು, ಜಾಗತಿಕ ಮಟ್ಟದಲ್ಲಿ ದೇಶದ ಗೌರವ ಹೆಚ್ಚಾಗಿದೆ ಎಂದರು.

ಸ್ವತಂತ್ರ ಭಾರತದ ಇತಿಹಾಸ ಬರೆಯುವಾಗ, ಬಲಿಷ್ಠ ಹಾಗೂ ಪುನರುತ್ಥಾನಗೊಂಡ ಭಾರತ ನಿರ್ಮಾಣ ಮತ್ತು ವಿಶ್ವದಾದ್ಯಂತ ದೇಶದ ಪ್ರತಿಷ್ಠೆ ಹೆಚ್ಚಿಸಿದ ಮೋದಿ ಆಡಳಿತದ 12 ವರ್ಷಗಳ ಅಧ್ಯಾಯವು ಸುವರ್ಣಾಕ್ಷರಗಳಲ್ಲಿ ದಾಖಲಾಗಲಿದೆ ಎಂದು ಶಾ ಹೇಳಿದರು.

ಕಳೆದ 12 ವರ್ಷಗಳಲ್ಲಿ ಅಸಾಧ್ಯವೆಂದು ಪರಿಗಣಿಸಲಾಗಿದ್ದ ಹಲವು ಕಾರ್ಯಗಳನ್ನು ಮೋದಿ ಸರಕಾರ ಸಾಕಾರಗೊಳಿಸಿದೆ. ಆಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ಕಾರಿಡಾರ್ ಅಭಿವೃದ್ಧಿ, ಕೇದಾರನಾಥ, ಬದರಿನಾಥ, ಸೋಮನಾಥ ಮತ್ತು ಕಾಮಾಖ್ಯಾ ದೇವಾಲಯಗಳ ಅಭಿವೃದ್ಧಿ ಇದಕ್ಕೆ ನಿದರ್ಶನ ಎಂದು ತಿಳಿಸಿದರು.

ದೇಶದಲ್ಲಿ ಸಾಂಸ್ಕೃತಿಕ ಪುನರುತ್ಥಾನ: ಅಂಬಾಬಾಯಿ ದೇವಸ್ಥಾನ ಕಾರಿಡಾರ್ ಯೋಜನೆಯೂ ಭಾರತದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಶಾ ಹೇಳಿದರು. ಸುಮಾರು 500 ಕೋಟಿ ರೂ. ವೆಚ್ಚದ ಈ ಯೋಜನೆಯನ್ನು 28,058 ಚದರ ಮೀಟರ್ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ. ಏಳನೇ ಶತಮಾನದ ಐತಿಹಾಸಿಕ ದೇವಾಲಯವನ್ನು ಆಧುನಿಕ ಯಾತ್ರಾಕ್ಷೇತ್ರವಾಗಿ ಅಭಿವೃದ್ಧಿಪಡಿಸಲಾಗುವುದು. ಕೃತಕ ಬುದ್ಧಿಮತ್ತೆ ಆಧಾರಿತ ಭದ್ರತಾ ವ್ಯವಸ್ಥೆ, ವಿದ್ಯುತ್ ದೀಪಾಲಂಕಾರ, ಪರಂಪರೆ ಗ್ಯಾಲರಿಗಳು, ಬೆಳಕು ಮತ್ತು ಧ್ವನಿ ಪ್ರದರ್ಶನ ಹಾಗೂ ಬಹುಉದ್ದೇಶಿತ ಸಭಾಂಗಣ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ.

ಮಹಾಲಕ್ಷ್ಮೀ ದೇವಸ್ಥಾನದ ಸುತ್ತಮುತ್ತಲಿನ 41 ದೇವಾಲಯಗಳನ್ನು ಪುರಾತತ್ವ ಇಲಾಖೆಯ ಸಲಹೆಯಂತೆ ಸಂರಕ್ಷಿಸಲಾಗುವುದು ಎಂದು ಅವರು ತಿಳಿಸಿದರು.

ಭಾರತ ಧರ್ಮಶಾಲೆ ಅಲ್ಲ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಬೆಂಬಲಿಸಿದ ಜನರಿಗೆ ಕೃತಜ್ಞತೆ ಸಲ್ಲಿಸಿದ ಶಾ, ದೇಶದಲ್ಲಿರುವ ಪ್ರತಿಯೊಬ್ಬ ಅಕ್ರಮ ನುಸುಳುಕೋರನನ್ನೂ ಗುರುತಿಸಿ ಹೊರದಬ್ಬಲಾಗುವುದು ಎಂದು ಘೋಷಿಸಿದರು. ನುಸುಳುಕೋರರನ್ನು ಮತಬ್ಯಾಂಕ್ ಆಗಿ ಪರಿವರ್ತಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.'ಭಾರತ ಧರ್ಮಛತ್ರವಲ್ಲ. ಈ ದೇಶಕ್ಕೆ ಸೇರಿದವರು ಮಾತ್ರ ಇಲ್ಲಿ ವಾಸಿಸುತ್ತಾರೆ. ಪ್ರತಿಯೊಬ್ಬ ನುಸುಳುಕೋರನನ್ನೂ ಗುರುತಿಸಿ ದೇಶದಿಂದ ಹೊರಹಾಕಲಾಗುವುದು ಎಂದು ಎಚ್ಚರಿಸಿದರು.

ಹಿಂದುಗಳು ಬಹುಸಂಖ್ಯಾತರಲ್ಲ: ಮೌಲಾನ

ಹಿಂದು ವಿಭಜನೆಗೆ ಕುತಂತ್ರ

• **ಲಖನೌ:** ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಲ್ಲವಂತೆ! ಹೀಗೆಂದು ಹೇಳಿಕೆ ನೀಡಿ ಉತ್ತರಪ್ರದೇಶದ ಮೌಲಾನ ಖಲೀಲುರ್ ರಹಮಾನ್ ಸಜ್ಜದ್ ನೊಮಾನಿ ಹೊಸ ವಿವಾದ ಸೃಷ್ಟಿಸಿದ್ದಾನೆ. ಮೌಲಾನನದ್ದು ವಿಷಪೂರಿತ ಜಿಹಾದಿ ಮನಸ್ಥಿತಿ, ಇದು ಜಾತ್ಯಾತೀತತೆ ಸೋಗಿನಲ್ಲಿ ಹಿಂದುಗಳನ್ನು ವಿಭಜಿಸುವ ಪ್ರಯತ್ನವೆಂದು ಬಿಜೆಪಿ ಕಿಡಿಕಾರಿದೆ.

ಇತ್ತೀಚೆಗೆ ನಡೆದ ಇಸ್ಲಾಮಿಕ್ ಸಮ್ಮೇಳನವೊಂದರಲ್ಲಿ ಅಖಿಲ ಭಾರತ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಸದಸ್ಯ ಮೌಲಾನ ಸಜ್ಜದ್ ಮಾತನಾಡಿದ್ದು, ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಲ್ಲ ಎಂಬುದನ್ನು ಹಜರ್-ಎ-ಅಸ್ವದ್(ಬ್ಲ್ಯಾಕ್ ಸ್ಟೋನ್) ಮತ್ತು ಕಿಸ್ವಾ(ಕಾಬಾ ಬಟ್ಟೆ) ಮೇಲೆ ಕೈ ಇಟ್ಟು ಬೇಕಿದ್ದರೆ ಹೇಳಬಲ್ಲೆ ಎಂದು ಸವಾಲೊಡ್ಡಿದ್ದಾನೆ.

ಹಲವು ಸಮುದಾಯಗಳನ್ನು ಹಿಂದುಗಳಲ್ಲಿ ಸೇರಿಸಿಕೊಂಡು ಜನರ ದಾರಿ ತಪ್ಪಿಸುತ್ತಿದ್ದಾರೆ. ಸಿಖ್ಖರು, ಕ್ರಿಶ್ಚಿಯನ್ನರು, ಬೌದ್ಧರು, ಪರಿಶಿಷ್ಟ ಜಾತಿ(ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡ(ಎಸ್‌ಟಿ), ಜಾಟ್, ತಮಿಳರು ಮತ್ತು ಲಿಂಗಾಯತರು ಹಿಂದುಗಳಲ್ಲ ಎಂಬ ಮಾತುಗಳನ್ನಾಡಿ ಮೌಲಾನಾ ಹಿಂದು ಜನಸಂಖ್ಯಾ ವಿಚಾರದಲ್ಲಿ ಅನಾವಶ್ಯಕ ಮೂಗು ತೂರಿಸಿದ್ದಾನೆ.

ವೋಟ್ ಬ್ಯಾಂಕ್ ರಾಜಕೀಯ: ಮೌಲಾನಾ ಸಜ್ಜದ್ ನೊಮಾನಿ ತನ್ನದು ವಿಷಪೂರಿತ ಜಿಹಾದಿ ಮನಸ್ಥಿತಿಯನ್ನು ತೋರಿಸಿದ್ದಾರೆ. ಕಳೆದ ವಿಧಾನಸಭೆ ಚುನಾವಣೆ ವೇಳೆ ಮಹಾ ವಿಕಾಸ್ ಅಘಾಡಿ(ಎಂವಿಎ)ಗೆ ಮತ ಚಲಾಯಿಸಲು ಮುಸ್ಲಿಮರಿಗೆ ಕರೆ ನೀಡಿದ್ದ ಮೌಲಾನಾ, ಹಿಂದುಗಳು ಸಂಪೂರ್ಣ ಒಡೆದುಹೋಗಿದ್ದಾರೆ. ಜಾತ್ಯಾತೀತತೆ ಸೋಗಿನಲ್ಲಿ ಹಿಂದುಗಳ ಒಗ್ಗಟ್ಟು ಒಡೆದು ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ಮೌಲಾನಾ ವಿವಾದ ಸೃಷ್ಟಿಸಿದ್ದಾರೆ ಎಂದು ಬಿಜೆಪಿ ನಾಯಕ ಶೆಹಜಾದ್ ಪೂನಾವಾಲಾ ಆರೋಪಿಸಿದ್ದಾರೆ.

ಭಾನುವಾರದ ಪಂದ್ಯಗಳು

- ಎಕ್ವಡಾರ್-ಕುರಾಕಾವೊ, (ಬೆಳಗ್ಗೆ 5:30)
- ಟ್ಯೂನೇಷ್ಯಾ-ಜಪಾನ್, (ಬೆಳಗ್ಗೆ 9:30)
- ಸ್ಪೇನ್-ಸೌದಿ ಅರೇಬಿಯಾ, (ರಾತ್ರಿ 9:30)
- ಬೆಲ್ಜಿಯಂ-ಇರಾನ್, (ಮಧ್ಯರಾತ್ರಿ 12:30)
- ಉರುಗ್ವೆ-ಕೇಪ್ ವರ್ಡೆ, (ಮಧ್ಯರಾತ್ರಿ 3:30)

ಕಿರುಸುದ್ದಿ

ಶೂಟಿಂಗ್: ಭಾರತಕ್ಕೆ 5 ಪದಕ

ಸೂಹ್ಲ್(ಜರ್ಮನಿ): ಜೂನಿಯರ್ ಶೂಟಿಂಗ್ ವಿಶ್ವ ಚಾಂಪಿಯನ್‌ಶಿಪ್ ಕೂಟದಲ್ಲಿ ಭಾರತೀಯರು 5 ಪದಕಗಳನ್ನು ಗೆದ್ದರು. 25 ಮೀ. ರ್‍ಯಾಪಿಡ್ ಫೈಯರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ರೋಹಿತ್ ಕನ್ಯಾನ್ ಕೂಡ ಚಿನ್ನದ ಪದಕ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಪ್ರಾಚಿ ಗಾಯಕ್ವಾಡ್ 50 ಮೀ. ರೈಫಲ್ 3 ಪೊಸಿಷನ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಪುರುಷರ 50 ಮೀ. ರೈಫಲ್ 3 ಪೊಸಿಷನ್ಸ್ ವಿಭಾಗದಲ್ಲಿ ರೋಹಿತ್, ವೇದಾಂತ್ ಮತ್ತು ಹಿತೇಶ್ ಕಂಚಿನ ಪದಕ ಮುಡಿಗೇರಿಸಿಕೊಂಡರು. 25 ಮೀ. ರ್‍ಯಾಪಿಡ್ ಫೈಯರ್ ಪಿಸ್ತೂಲ್ ವಿಭಾಗದಲ್ಲಿ ಸಮೀರ್, ಅಭಿನವ್ ಮತ್ತು ಸಾಹಿಲ್ ಮತ್ತೊಂದು ಕಂಚಿನ ಪದಕ ಗಿಟ್ಟಿಸಿಕೊಂಡರು.

ಅಶ್ಮಿತಾಗೆ ಸೋಲು

ಹೊಸದಿಲ್ಲಿ: ಭರವಸೆಯ ಆಟಗಾರ್ತಿ ಅಶ್ಮಿತಾ ಚಲಿಹಾ ಅವರ ಸೆಮಿಫೈನಲ್ ಸೋಲಿನೊಂದಿಗೆ ಪ್ರತಿಷ್ಠಿತ ಮಕಾವು ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಅಭಿಯಾನ ಅಂತ್ಯಗೊಂಡಿದೆ. ಶನಿವಾರದ ಸೆಮಿಫೈನಲ್ ಪಂದ್ಯದಲ್ಲಿ ಕೊರಿಯಾದ ಪಾರ್ಕ್ ಗಾ ಅವರೊಂದಿಗೆ ಆಡಿದ ಅವರು, 17-21, 9-21ರಿಂದ ಸೋತರು.


ಆಸ್ಟ್ರೇಲಿಯಾ ವಿರುದ್ಧ ಆತಿಥೇಯರಿಗೆ ಭರ್ಜರಿ ಗೆಲುವು

32ರ ಸುತ್ತಿಗೆ ಅಮೆರಿಕ

ಸಿಯಾಟಲ್: ಸ್ಟಾರ್ ಆಟಗಾರ ಕ್ರಿಶ್ಚಿಯನ್ ಪುಲಿಸಿಕ್ ಗಾಯದ ಕಾರಣದಿಂದ ಪಂದ್ಯದಿಂದ ಹೊರಗುಳಿದರೂ, ಆತಿಥೇಯ ಅಮೆರಿಕ ತಂಡ ಆಸ್ಟ್ರೇಲಿಯಾವನ್ನು 2-0 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ.

ಮೊದಲ ಎರಡು ಪಂದ್ಯಗಳಲ್ಲೇ ನಾಕೌಟ್ ಸ್ಥಾನ ಖಚಿತಪಡಿಸಿಕೊಂಡ ಅಮೆರಿಕ, ತನ್ನ ಅಭಿಯಾನವನ್ನು ಅತ್ಯಂತ ಯಶಸ್ವಿಯಾಗಿ ಮುಂದುವರಿಸಿದೆ. ಅಮೆರಿಕ ಪಂದ್ಯದ 11ನೇ ನಿಮಿಷದಲ್ಲೇ ಮುನ್ನಡೆ ಸಾಧಿಸಿತು. ಫೋಲರಿನ್ ಬಾಲೋಗುನ್ ಎಡಭಾಗದಿಂದ ನೀಡಿದ ಪಾಸ್‌ನ್ನು ತಡೆಯಲು ಯತ್ನಿಸಿದ ಆಸ್ಟ್ರೇಲಿಯಾ ರಕ್ಷಣಾಪಟು ಕ್ಯಾಮೆರೂನ್ ಬರ್ಗೆಸ್ ತಪ್ಪಾಗಿ ಚೆಂಡನ್ನು ತನ್ನದೇ ಗೋಲ್‌ಪೋಸ್ಟ್‌ಗೆ ತಳ್ಳಿದರು. ಇದರಿಂದ ಅಮೆರಿಕ 1-0 ಮುನ್ನಡೆ ಪಡೆಯಿತು.

ಆಸ್ಟ್ರೇಲಿಯಾಗೆ ಶಾಕ್: 43ನೇ ನಿಮಿಷದಲ್ಲಿ ಅಮೆರಿಕ ತನ್ನ ಮುನ್ನಡೆಯನ್ನು ದ್ವಿಗುಣಗೊಳಿಸಿತು. ಸೆಟ್‌ಪೀಸ್ ಸಂದರ್ಭದಲ್ಲಿನ ಸರ್ಜಿನೊ ಡೆಸ್ಟ್ ಅವರ ಶಾಟ್ ಡಿಫ್ಲೆಕ್ಟ್ ಆದ ನಂತರ, 21 ವರ್ಷದ ಅಲೆಕ್ಸ್ ಫ್ರೀಮನ್ ಹೆಡರ್ ಮೂಲಕ ಗೋಲು ದಾಖಲಿಸಿದರು. ವಿಡಿಯೋ ಪರಿಶೀಲನೆಯ ಬಳಿಕ ಗೋಲು ಮಾನ್ಯಗೊಂಡಿತು. ದ್ವಿತೀಯಾರ್ಧದಲ್ಲಿ ಆಸ್ಟ್ರೇಲಿಯಾ ಹೋರಾಟ ನಡೆಸಿದರೂ ಅಮೆರಿಕದ ರಕ್ಷಣಾ ವಿಭಾಗವನ್ನು ಭೇದಿಸಲು ವಿಫಲವಾಯಿತು. ಪರಿಣಾಮ ಅಮೆರಿಕ 2-0 ಅಂತರದ ಸುಲಭ ಜಯ ದಾಖಲಿಸಿತು.



- 11ನೇ ನಿಮಿಷ ಕ್ಯಾಮೆರೂನ್ ಬರ್ಗೆಸ್ ಆತ್ಮಘಾತಿ ಗೋಲು (ಅಮೆರಿಕ 1-0)
- 43ನೇ ನಿಮಿಷ ಅಲೆಕ್ಸ್ ಫ್ರೀಮನ್ ಹೆಡರ್ ಗೋಲು (ಅಮೆರಿಕ 2-0)
- ಕ್ರಿಶ್ಚಿಯನ್ ಪುಲಿಸಿಕ್ ಗಾಯದ ಕಾರಣ ಪಂದ್ಯದಿಂದ ಹೊರಗುಳಿದರೂ ಅಮೆರಿಕದ ಪ್ರದರ್ಶನಕ್ಕೆ ಧಕ್ಕೆಯಾಗಲಿಲ್ಲ.
- ಸತತ ಎರಡನೇ ಜಯದೊಂದಿಗೆ ನಾಕೌಟ್ ಹಂತಕ್ಕೆ ಅಮೆರಿಕ

ಅಮೆರಿಕ 2-0 ಆಸ್ಟ್ರೇಲಿಯಾ

ಅಂಕಿಅಂಶ
- ಆತ್ಮಘಾತಿ ಗೋಲು: ಕ್ಯಾಮೆರೂನ್ ಬರ್ಗೆಸ್ (11ನೇ ನಿಮಿಷ)
- ಅಲೆಕ್ಸ್ ಫ್ರೀಮನ್ (43ನೇ ನಿಮಿಷ)

ನಾಕೌಟ್ ಹಂತದಿಂದ ಹೈಟಿ ಹೊರಕ್ಕೆ

ಬ್ರೆಜಿಲ್‌ಗೆ ಗೆಲುವು

ಫಿಲಡೆಲ್ಫಿಯಾ: ಸ್ಟಾರ್ ಆಟಗಾರ ವಿನಿಸಿಯಸ್ ಜೂನಿಯರ್ ಅವರ ಗೋಲು ಹಾಗೂ ಅಸಿಸ್ಟ್ ಮಥೆಯಸ್ ಕುನ್ಹಾ ಗಳಿಸಿದ ಎರಡು ಗೋಲುಗಳ ಬಲದಿಂದ 5 ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್ ತಂಡ ಹೈಟಿ ಯನ್ನು 3-0 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್ ನಲ್ಲಿ ತನ್ನ ಮೊದಲ ಗೆಲುವು ದಾಖಲಿಸಿತು. ಈ ಸೋಲಿನೊಂದಿಗೆ 1974ರ ನಂತರ ಮೊದಲ ಬಾರಿಗೆ ವಿಶ್ವಕಪ್‌ಗೆ ಅರ್ಹತೆ ಪಡೆದ ಹೈಟಿ, ನಾಕೌಟ್ ಹಂತದ ಸ್ಪರ್ಧೆಯಿಂದ ಹೊರಬಿದ್ದ ಮೊದಲ ತಂಡ ಎನಿಸಿತು.

ಬ್ರೆಜಿಲ್, ಈ ಬಾರಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿತು.

ಅಂಕಿ-ಅಂಶ
- 28: ಮಥೆಯಸ್ (ಬ್ರೆಜಿಲ್)
- 42: ಮಥೆಯಸ್ (ಬ್ರೆಜಿಲ್)

ಪಂದ್ಯ ಆರಂಭದಲ್ಲೇ ರಫಿನ್ಹಾ ಗೋಲು ಗಳಿಸಿದ್ದರೂ ಆಫ್‌ಸೈಡ್ ಕಾರಣದಿಂದ ಅದು ತಿರಸ್ಕೃತವಾಯಿತು.

ಆದರೆ 28ನೇ ನಿಮಿಷದಲ್ಲಿ ಮಥೆಯಸ್ ಕುನ್ಹಾ ರೀಬೌಂಡ್ ಚೆಂಡನ್ನು ಗೋಲಾಗಿ ಪರಿವರ್ತಿಸಿ ಬ್ರೆಜಿಲ್‌ಗೆ ಮುನ್ನಡೆ ತಂದುಕೊಟ್ಟರು. ಬಳಿಕ 42ನೇ ನಿಮಿಷದಲ್ಲಿ ಎಡ ಕಾಲಿನ ಅದ್ಭುತ ಶಾಟ್ ಮೂಲಕ ಮತ್ತೊಂದು ಗೋಲು ದಾಖಲಿಸಿ ತಂಡದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಬ್ರೆಜಿಲ್ ಸುಲಭ ಜಯ ದಾಖಲಿಸಿತು.

ಸ್ಕಾಟ್ಲೆಂಡ್ ಮಣಿಸಿದ ಮೊರಾಕೊ

ಫಾಕ್ಸ್‌ಬರೋ (ಮ್ಯಾಸಚೂಸೆಟ್ಸ್): ಪಂದ್ಯ ಆರಂಭವಾಗಿ ಕೇವಲ 72 ಸೆಕೆಂಡುಗಳಲ್ಲೇ ಇಸ್ಮಾಯೆಲ್ ಸೈಬಾರಿ ಗಳಿಸಿದ ಅದ್ಭುತ ಗೋಲಿನ ನೆರವಿನಿಂದ ಮೊರಾಕೊ ತಂಡ ಸ್ಕಾಟ್ಲೆಂಡ್ ವಿರುದ್ಧ 1-0 ಅಂತರದ ಮಹತ್ವದ ಗೆಲುವು ದಾಖಲಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಕತಾರ್ ವಿಶ್ವಕಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದ ಮೊರಾಕೊ, ಮೊದಲ ಪಂದ್ಯದಲ್ಲಿ ಬ್ರೆಜಿಲ್ ವಿರುದ್ಧ

- ಮೊರಾಕೊ 1-0 ಸ್ಕಾಟ್ಲೆಂಡ್
- ಗೋಲು: ಇಸ್ಮಾಯೆಲ್ ಸೈಬಾರಿ (2ನೇ ನಿಮಿಷ)

1-1 ಸಮಬಲ ಸಾಧಿಸಿತ್ತು. ಪಂದ್ಯದ ಎರಡನೇ ನಿಮಿಷದಲ್ಲೇ ಬ್ರಹಿಮ್ ಡಿಯಾಸ್ ನೀಡಿದ ಅದ್ಭುತ ಪಾಸ್‌ನ್ನು ಸದುಪಯೋಗಪಡಿಸಿಕೊಂಡ ಸೈಬಾರಿ, ಗೋಲು ಬಾರಿಸಿದರು. ಮತ್ತೊಂದು ಪಂದ್ಯದಲ್ಲಿ ಪರಾಗ್ವೆ ಜಯ ಸಾಧಿಸಿತು.

ಬೆಂಗಳೂರು ಬ್ಲಾಸರ್ಸ್ ಶುಭಾರಂಭ

ಮೈಸೂರು: ಒಟ್ಟು ಸಾಂಘಿಕ ಪ್ರದರ್ಶನದೊಂದಿಗೆ ಮಿಂಚಿರುವ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಶನಿವಾರ ಶುರುವಾದ ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಗೆಲುವಿನಾರಂಭ ಮಾಡಿತು.

ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲಿತ ಪ್ರದರ್ಶನ ನೀಡಿದ ಬೆಂಗಳೂರು 200+ ಸ್ಕೋರ್ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿದೆ. ಇಲ್ಲಿನ ಶ್ರೀಕಂಠದತ್ತ ಒಡಿಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 201 ರನ್ ಗಳಿಸಿತು. ಪ್ರಖರ್ 38 ಬಾಲ್‌ಗಳಲ್ಲಿ 64 ರನ್ ಗಳಿಸಿದರು. ಆರವ್



ಮಹೇಶ್ 41 ಬಾಲ್‌ಗಳಲ್ಲಿ 63 ರನ್ ಗಳಿಸಿದರು. ಶುಭಾಂಗ್ ಹೆಗ್ಡೆ ಮತ್ತು ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಬೆಂಗಳೂರು 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿತು. ಆರಂಭಿಕ ಭುವನ್ 56 ರನ್‌ಗಳಿಸಿದರು. ರೋಹನ್ ಪಾಟೀಲ್ 31, ಕೃಷ್ಣನ್ 22 ರನ್ ಗಳಿಸಿದರು. ಶುಭಾಂಗ್ 36 ರನ್ ಗಳಿಸಿದರೆ, ಪ್ರವೀಣ್ ದುಬೆ 32 ರನ್ ಗಳಿಸಿ ಪಂದ್ಯ ಮುಗಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಶಿವಮೊಗ್ಗ ಹಾಗೂ ಮೈಸೂರು ತಂಡಗಳು ಎದುರಾಗಿದ್ದವು. ಉತ್ತಮ ಬ್ಯಾಟಿಂಗ್ ಮಾಡಿದ ಶಿವಮೊಗ್ಗ 190 ರನ್ ಗಳಿಸಿತು. ಭಾನುವಾರದಂದು ಕೋಸ್ಟಲ್ ಕಿಂಗ್ಸ್ ಮಂಗಳೂರು ಮತ್ತು ಹುಬ್ಬಳ್ಳಿ ಟೈಗರ್ಸ್ ಎದುರಾಗಲಿದ್ದರೆ, ಎರಡನೇ ಪಂದ್ಯದಲ್ಲಿ ಬೆಂಗಳೂರು ಮತ್ತು ಶಿವಮೊಗ್ಗ ತಂಡಗಳು ಮುಖಾಮುಖಿಯಾಗಲಿವೆ.

ಕ್ಲೀನ್‌ಸ್ವೀಪ್ ಗುರಿ ಯಶಸ್ವಿ

ಚೆನ್ನೈ: ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಶತಕ, ರೋಹಿತ್ ಶರ್ಮ ಅವರ ಕರಾರುವಾಕ್ ಬ್ಯಾಟಿಂಗ್ ಮತ್ತು ಪ್ರಸಿದ್ಧ ಕೃಷ್ಣ ಅವರ ಫೈಥರ್ ಬಲದೊಂದಿಗೆ ಭಾರತ ತಂಡವು ಪ್ರವಾಸಿ ಅಫ್ಘಾನಿಸ್ತಾನ ತಂಡದ ಮೇಲೆ ಸ್ಪಷ್ಟ ಪ್ರಾಬಲ್ಯ ಸಾಧಿಸಿ ಸರಣಿ ಕ್ಲೀನ್‌ಸ್ವೀಪ್ ಮಾಡಿತು.

ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಆಯ್ದುಕೊಂಡಿದ್ದ ಅಫ್ಘಾನಿಸ್ತಾನ ತಂಡವನ್ನು 218 ರನ್‌ಗಳಿಗೆ ಆಲೌಟ್ ಮಾಡಿತು. ನಾಯಕ ಹಶ್ಮತ್ತುಲ್ಲಾ ಶತಕ ಬಾರಿಸಿದರು. ಅಜ್ಮತ್ತುಲ್ಲಾ ಓಮರ್ಝೈ ಅರ್ಧಶತಕ ಬಾರಿಸಿದರು. ಇನ್ನುಳಿದ ಬ್ಯಾಟಿಗರು 10ರ ಗಡಿಯೇ ದಾಟಲಿಲ್ಲ.

ಗುರಿ ಬೆನ್ನತ್ತುವಾಗ ಯಾವುದೇ ಅಡೆತಡೆಗಳನ್ನು ಎದುರಿಸಿದ ಭಾರತ 28.4 ಓವರ್‌ಗಳಲ್ಲೇ ಪಂದ್ಯವನ್ನು ಮುಗಿಸಿತು. ಯಶಸ್ವಿ ಜೈಸ್ವಾಲ್ ತಮ್ಮ ಮೊದಲ ಏಕದಿನ ಶತಕ ಬಾರಿಸಿದರು. ಅತ್ತ ರೋಹಿತ್ ಶರ್ಮ ಕಂಬ್ಯಾಕ್ ಮಾಡಿದ್ದು 79 ರನ್ ಗಳಿಸಿದರು. ಪಂದ್ಯ ಗೆಲ್ಲುವುದಕ್ಕೆ ಉಳಿದ ಬ್ಯಾಟಿಗರ ಕೊಡುಗೆ ಅವಶ್ಯಕತೆಯೇ ಬೀಳಲಿಲ್ಲ.

ಜೈಸ್ವಾಲ್ ಆರ್ಭಟ: ಗುರಿ ಬೆನ್ನತ್ತುವಾಗ ಜೈಸ್ವಾಲ್ ಮತ್ತು ರೋಹಿತ್ ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡುತ್ತಾ ಕಸಿದುಕೊಂಡರು. 38 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಯಶಸ್ವಿ 83 ಬಾಲ್‌ಗಳಲ್ಲಿ ಶತಕ ಪೂರೈಸಿದರು. ಅವರ ಇನ್ನಿಂಗ್ಸ್ ನಲ್ಲಿ 14 ಬೌಂಡರಿ, 3 ಸಿಕ್ಸರ್‌ಗಳು ಸೇರಿವೆ.ಅತ್ತ ರೋಹಿತ್ ಕೂಡ ಅರ್ಧಶತಕ ಬಾರಿಸಿದರು. 79 ರನ್‌ಗೆ ರೋಹಿತ್ ವಿಕೆಟ್ ಒಪ್ಪಿಸಿದರು.

ಆಫ್ಘನ್‌ಗೆ 5 ರನ್ ಪೆನಾಲ್ಟಿ

ಅಫ್ಘಾನಿಸ್ತಾನ ತಂಡಕ್ಕೆ 5 ರನ್‌ಗಳ ಪೆನಾಲ್ಟಿ ನೀಡಿದ ಅಪರೂಪದ ಸಂಗತಿ ನಡೆಯಿತು. ಆಫ್ಘನ್ ತಂಡದ ನಾಯಕ ಹಶ್ಮತ್ತುಲ್ಲಾ ಬ್ಯಾಟಿಂಗ್ ಮಾಡುವ ವೇಳೆ ಪಿಚ್‌ನ ಪ್ರೊಟೆಕ್ಟೆಡ್ ಪ್ರದೇಶದಲ್ಲಿ ಎರಡು ಬಾರಿ ಓಡಿದರು. ಪರಿಣಾಮ ಮೊದಲಿಗೆ ಒಂದು ಬಾರಿ ಎಚ್ಚರಿಕೆ ಕೊಟ್ಟ ನಿರ್ಣಾಯಕರು ಎರಡನೇ ಬಾರಿ ಮಾಡಿದಾಗ 5 ರನ್ ಪೆನಾಲ್ಟಿ ಕೊಟ್ಟರು. ಪರಿಣಾಮ ಭಾರತ 5 ರನ್‌ಗಳೊಂದಿಗೆ ಬ್ಯಾಟಿಂಗ್ ಶುರು ಮಾಡಿತು.

ಸಂಕ್ಷಿಪ್ತ ಸ್ಕೋರ್

ಅಫ್ಘಾನಿಸ್ತಾನ 44.2 ಓವರ್‌ಗಳಲ್ಲಿ 218: ಹಶ್ಮತ್ತುಲ್ಲಾ 102, ಓಮರ್ಝೈ 50; ಪ್ರಸಿದ್ಧ ಕೃಷ್ಣ 23/5

ಭಾರತ 28.4 ಓವರ್‌ಗಳಲ್ಲಿ 224/1: ಜೈಸ್ವಾಲ್ 110★, ರೋಹಿತ್ 79

ಇಂದು ಭಾರತ-ಆಫ್ರಿಕಾ ಪಂದ್ಯ

ಮ್ಯಾಂಚೆಸ್ಟರ್: ಸತತ ಎರಡು ಪಂದ್ಯಗಳಲ್ಲಿ ಜಯ ಸಾಧಿಸಿರುವ ಭಾರತ ಮಹಿಳಾ ತಂಡವು ಹ್ಯಾಟ್ರಿಕ್ ಗೆಲುವಿನ ಕನಸಿನೊಂದಿಗೆ ಮೂರನೇ ಪಂದ್ಯವಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಬಲಿಷ್ಠ ದ.ಆಫ್ರಿಕಾ ತಂಡವನ್ನು ಎದುರಿಸಬೇಕಿರುವುದರಿಂದ ಭಾರತ ಕಠಿಣ ಅಭ್ಯಾಸವನ್ನು ಕಳೆದ ಎರಡು ದಿನಗಳಿಂದಲೂ ನಡೆಸಿತು. ಮಂಧಾನ ಅವರ ಬ್ಯಾಟಿಂಗ್ ಬಲ ಮತ್ತು ಬೌಲರುಗಳ ಸಾಂಘಿಕ ಆಟದೊಂದಿಗೆ ಭಾರತ ಮೊದಲಿಗೆ ಪಾಕಿಸ್ತಾನ ನಂತರ ನೆದರ್ಲೆಂಡ್ಸ್ ತಂಡಗಳನ್ನು ಸೋಲಿಸಿ ಅಜೇಯವಾಗಿದೆ. ಏಕದಿನ ವಿಶ್ವಕಪ್ ಗೆದ್ದ ನಂತರ ಭಾರತದ ಪಾರುಪತ್ಯ ಅಚಲವಾಗಿದ್ದು ಮೂರನೇ ಗೆಲುವಿನೊಂದಿಗೆ ಸೂಪರ್ 8ಗೆ ಲಗ್ಗೆ ಹಾಕಲು ಮುಂಚೂಣಿಯಲ್ಲಿದೆ.

ಬ್ಯಾಟಿಂಗ್‌ನಲ್ಲಿ ಸ್ಮೃತಿ ಮಂಧಾನ ಎರಡು ಪಂದ್ಯಗಳಲ್ಲಿ 142 ರನ್ ಗಳಿಸಿ ಲಯದಲ್ಲಿದ್ದಾರೆ. ಶೆಫಾಲಿ ವರ್ಮಾ ಕೂಡ ಕಳೆದ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಹರ್ಮನ್ ಪ್ರೀತ್ ಕೌರ್ ಅವರು ಜವಾಬ್ದಾರಿಯುತ ಬ್ಯಾಟಿಂಗ್ ಮಾಡುತ್ತಿದ್ದಾರೆ. ಫಿನಿಶಿಂಗ್ ವೇಳೆ ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್ ಮಾಡುತ್ತಿರುವುದು ತಂಡದ ಬಲ ಹೆಚ್ಚಿಸಿದೆ. ಶ್ರೀ ಚಾರಣಿ ಬೌಲಿಂಗ್ ಭಾರತ ತಂಡದ ದೊಡ್ಡ ಬಲ. ದೀಪ್ತಿ ಶರ್ಮ ಅವರ ಅನುಭವ ಕೂಡ ಪಂದ್ಯ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅತ್ತ ದ.ಆಫ್ರಿಕಾ ಕೂಡ ಗೆಲುವಿನ ನಾಗಾಲೋಟದ ಮೇಲೆ ಕಣ್ಣಿಟ್ಟಿದೆ.

ಪಂದ್ಯದ ವಿವರ:
ಯಾವಾಗ: ಭಾನುವಾರ
ಎಲ್ಲಿ: ಮ್ಯಾಂಚೆಸ್ಟರ್
ಸಮಯ: ಸಂಜೆ 7:00

ಖಾತೆ ತೆರೆದ ಕಿವೀಸ್

ಲೀಡ್ಸ್: ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ಪಂದ್ಯದಲ್ಲಿ ಮೊದಲ ಗೆಲುವು ಸಾಧಿಸಿದೆ. ಚೊಚ್ಚಲ ಪಂದ್ಯದಲ್ಲಿ ಸೋತಿದ್ದ ಕಿವೀಸ್ ಎರಡನೇ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಿತ್ತು.


ಶುಕ್ರವಾರ ತಡರಾತ್ರಿಯ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 40 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 140 ರನ್ ಗಳಿಸಿದರು. ಮೆಲ್ಲಿ ಕೇರ್ 30, ಬ್ರೋಕ್ 34 ಮತ್ತು ಇಝಿ ಶಾರ್ಪ್ 36 ರನ್ ಗಳಿಸಿದರು. ಐರ್ಲೆಂಡ್ ಪರ ಓರ್ಲಾ, ಕಾರಾ 2, ಕೆಲ್ಲಿ , ಐಮಿ 1 ವಿಕೆಟ್ ಕಿತ್ತರು.

ಗುರಿ ಬೆನ್ನತ್ತಿದ ಐರ್ಲೆಂಡ್ 136 ರನ್ ಗಳಿಸಿತು. 4 ವಿಕೆಟ್ ಮಾತ್ರ ಕಳೆದುಕೊಂಡರೂ ಐರ್ಲೆಂಡ್ ಡಾಟ್ ಮಾಡಿ ತತ್ತರಿಸಿತು. ಗ್ಯಾಬಿ 58, ಓರ್ಲಾ 59 ರನ್ ಗಳಿಸಿದರು. ಕಿವೀಸ್ ಪರ ಕೆರ್ 2, ಇಲ್ಲಿಂಗ್, ಮೈರ್ 1 ವಿಕೆಟ್ ಕಿತ್ತರು. ಶನಿವಾರದ ಪಂದ್ಯದಲ್ಲಿ 216 ರನ್ ಗಳಿಸಿದ್ದ ಆಸ್ಟ್ರೇಲಿಯಾ ನೆದರ್ಲೆಂಡ್ಸ್ ತಂಡವನ್ನು 123 ರನ್‌ಗಳಿಗೆ ಕಟ್ಟಿಹಾಕಿ ಜಯ ಸಾಧಿಸಿದೆ. ಆ ಮೂಲಕ ಬಹುತೇಕ ಸೂಪರ್ 8ಕ್ಕೆ ಲಗ್ಗೆ ಹಾಕಿದೆ. ಭಾನುವಾರ ಶ್ರೀಲಂಕಾ ಹಾಗೂ ವಿಂಡೀಸ್ ತಂಡಗಳು ಮುಖಾಮುಖಿಯಾಗಲಿವೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

6021



ಎಡದಿಂದ ಬಲಕ್ಕೆ
1.ಮರದ ನಡುವೆ ರತ್ನಪಡಿ ವ್ಯಾಪಾರಿಯಿದ್ದಾನೆ (4)
3.ಮದವನ್ನೊಳಗೊಂಡ ಸಮದರ್ಶಿ (4)
5.ಉಲ್ಟಾ ಚಲಿಸುವ ಎಂಬರ್ಥದ ಶಬ್ದ (3)
6.ಜಾವ-ನತ ಒಳಗೊಂಡ ಇದೀಗ ತಾನೆ ಜನಿಸಿದ್ದು (4)
8.ಪಾಳಿ-ಅನುಕ್ರಮದ ಸಮಾನಪದ (3)
9.ಕಾಡು, ಒಂದು ಚಲನಚಿತ್ರವಾಗಿ ಬಂದಿದೆ (3)
11.ವಿಘ್ನನಿವಾರಕ-ಶಿವಪುತ್ರ (4)
13.ಸೌಂದರ್ಯ ಬಣ್ಣಿಸಲು ಬಳಸುವ ಶಬ್ದ (3)
14.ರುಚಿಕರ,ನಾಲಿಗೆಗೆ ಹಿತವೆನಿಸುವ ಭೋಜನ (4)
15.ಇದ್ದುದ್ದನ್ನು ಕಳೆದುಕೊಂಡವನು-ನಿರ್ಭಾಗ್ಯ (4)

ಮೇಲಿನಿಂದ ಕೆಳಕ್ಕೆ
1.ಮನದ ನಡುವೆ ಸ್ನಾನವಡಗಿದೆ (3)
2.ಇಲ್ಲದ-ಮುಕ್ತವಾದ ಎಂಬರ್ಥದ ಶಬ್ದ(3)
3.ಮುಖ ಸಣ್ಣಗೆ ಮಾಡಿಕೊಂಡಿರುವ ಗೆಳೆಯ (2)
4.ದರದ ನಡುವೆ ಸಂಯುಕ್ತಾಕ್ಷರವಿದೆ (4)
7.ಕುವೆಂಪು ಅವರ ಪ್ರಸಿದ್ಧ ಸಾಮಾಜಿಕ ನಾಟಕ (4)
8.ಪವಿತ್ರಮನ, ಗೌರವದಿಂದ ಇನ್ನೊಬ್ಬರಿಗೆ ನೀಡುವುದು (4)
10.ಹೊಂದಾಣಿಕೆ ಎಂಬರ್ಥದ ಶಬ್ದ (4)
11.ಭಾರತದ ರಾಷ್ಟ್ರಧ್ವಜ ತಯಾರಿಸುವ ಅಧಿಕೃತ ಕೇಂದ್ರ (3)
12.ಮೂರು ಮೂಲೆಗಳುಳ್ಳ ಆಕೃತಿ (3)
13.ತೆರಿಗೆ-ಕರದ ಸಮಾನಪದ (2)

6020 ಉತ್ತರ

ಎಡದಿಂದ ಬಲಕ್ಕೆ:
1.ಸಹಿತ 5.ಕರುಣಾಳು
6.ಗಿರಿಧರ 7.ರಮಣಿ
9.ಬೇಡಿ 10.ಧರೆ
11.ಪಾರಜ
13.ದಂಡಪಿಂಡ
14.ಪರಿಣತಿ 15.ರಜತ

ಮೇಲಿನಿಂದ ಕೆಳಕ್ಕೆ :
1.ಸಮಾಚಾರ 2.ತರಂಗಿಣಿ
3.ಶಂಕರ 4.ಕಾಳುಕಡಿ
8.ಮದಿರೆ 9.ಬೇಸರ
10.ಧನಪತಿ 11.ಜಡಧರ
13.ಪಾರಂಗತ 13.ದಂತಿನಿ

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ: ಬದುಕಿನ ದಿನಗಳಿಗೆ ಸಾರ್ಥಕತೆಯ ಸ್ಪರ್ಶ

ಸಿ.ಪಿ. ರಾಧಾಕೃಷ್ಣನ್



ಬಹಳ ಹಿಂದಿನಿಂದಲೂ, ಇಡೀ ಪ್ರಪಂಚವನ್ನು ಒಂದು ದೊಡ್ಡ ಕುಟುಂಬ ಎಂದು ಭಾವಿಸುವ ಮತ್ತು ಎಲ್ಲಾ ಜೀವಿಗಳನ್ನು ಒಂದೇ ಎಂದು ಕಾಣುವ ವಸುಧೈವ ಕುಟುಂಬಕಂ ಎಂಬ ಉದಾತ್ತ ಆಲೋಚನೆಯೇ ಭಾರತದ ಹೆಮ್ಮೆಯ ಗುರುತಾಗಿದೆ. ಭಾರತದ ಆಧ್ಯಾತ್ಮಿಕ ಜ್ಞಾನದಿಂದ ಬಂದಿರುವ ಯೋಗವು ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಒಂದಕ್ಕೊಂದು ಜೋಡಿಸುವ ಪ್ರಾಚೀನ ಪದ್ಧತಿಯಾಗಿದೆ. ಯೋಗದ ಮುಖ್ಯ ಭಾಗಗಳೆಂದರೆ ಆಸನಗಳು (ದೈಹಿಕ ಕಸರತ್ತುಗಳು), ಪ್ರಾಣಾಯಾಮ (ಉಸಿರಾಟದ ಕ್ರಿಯೆಗಳು) ಮತ್ತು ಧ್ಯಾನ. ಇವೆಲ್ಲವೂ ಸೇರಿದಾಗ ನಮ್ಮ ದೇಹಕ್ಕೆ ಗಟ್ಟಿಮುಟ್ಟಾದ ಶಕ್ತಿ, ಮನಸ್ಸಿಗೆ ಸ್ಪಷ್ಟತೆ ಮತ್ತು ಭಾವನೆಗಳ ಮೇಲೆ ಹತೋಟಿ ಸಿಗುತ್ತದೆ.

ನಮ್ಮ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಅವರು 2014ರ ಸೆಪ್ಟೆಂಬರ್ 27ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಇಡೀ ಜಗತ್ತು ಚೆನ್ನಾಗಿರಲು ಮತ್ತು ಬದುಕಲು ಯೋಗ್ಯವಾಗಲು ಜನರ ಜೀವನಶೈಲಿ ಬದಲಾಗಬೇಕು ಎಂದು ಒತ್ತಿ ಹೇಳಿದರು. ಯೋಗವು ಮನಸ್ಸು ಮತ್ತು ದೇಹವನ್ನು ಒಂದು ಮಾಡುತ್ತದೆ; ಆಲೋಚನೆ ಮತ್ತು ಕೆಲಸವನ್ನು ಜೋಡಿಸುತ್ತದೆ; ಹತೋಟಿ ಮತ್ತು ಪರಿಪೂರ್ಣತೆಯನ್ನು ತರಲು ನೆರವಾಗುತ್ತದೆ; ಮನುಷ್ಯ ಮತ್ತು ಪ್ರಕೃತಿಯ ನಡುವೆ ಒಳ್ಳೆಯ ಸಂಬಂಧವನ್ನು ಬೆಳೆಸುತ್ತದೆ; ಹಾಗೂ ಆರೋಗ್ಯವಾಗಿರಲು ಒಂದು ಉತ್ತಮ ಮಾರ್ಗವಾಗಿದೆ ಎಂದು ಅವರು ತಿಳಿಸಿದರು. ಪ್ರಧಾನಮಂತ್ರಿಯವರ ಮನವಿಯ ಮೇರೆಗೆ, ವಿಶ್ವಸಂಸ್ಥೆಯು 2014ರ ಡಿಸೆಂಬರ್ 11ರಂದು, ದಾಖಲೆಯ 174ಕ್ಕೂ ಹೆಚ್ಚು ದೇಶಗಳು ಬೆಂಬಲಿಸಿದ ಪ್ರಸ್ತಾವನೆಯನ್ನು ಒಪ್ಪಿಕೊಂಡು, ಜೂನ್ 21 ಅನ್ನು ಅಂತಾರಾಷ್ಟ್ರೀಯ ಯೋಗ ದಿನ ಎಂದು ಘೋಷಿಸಿತು. 2015ರಿಂದ, ಪ್ರಪಂಚದಾದ್ಯಂತ ಲಕ್ಷಾಂತರ ಜನರು ಒಟ್ಟಿಗೆ ಯೋಗ ಮಾಡಲು ಸಾರ್ವಜನಿಕ ಜಾಗಗಳಲ್ಲಿ ಸೇರುತ್ತಿದ್ದಾರೆ. ಇದರಿಂದಾಗಿ ನಮ್ಮ ಪ್ರಾಚೀನ ಜ್ಞಾನವು ಇಂದು ಜಗತ್ತಿನಾದ್ಯಂತ ದೊಡ್ಡ ಆಂದೋಲನವಾಗಿ ಬದಲಾಗಿದೆ.

ಈ ವರ್ಷದ ಜೂನ್ 21ರಂದು ಪ್ರಧಾನಿ ನರೇಂದ್ರ ಮೋದಿ ಅವರು ಕೋಲ್ಕತ್ತಾದಲ್ಲಿ ಯೋಗ ದಿನದ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದರೆ, ನಾನು ಅದೇ ಸಂಭ್ರಮದಲ್ಲಿ ಭಾಗವಹಿಸಲು ಲಡಾಖ್‌ಗೆ ಹೋಗುತ್ತಿದ್ದೇನೆ. ನನಗೆ ವೈಯಕ್ತಿಕವಾಗಿ, ಹಲವು ವರ್ಷಗಳಿಂದ ಯೋಗ ಮತ್ತು ಪಂಚಕರ್ಮದಿಂದ ತುಂಬಾ ಅನುಕೂಲಗಳಾಗಿವೆ. ಇವೆರಡನ್ನೂ ಒಂದಕ್ಕೊಂದು ಸಂಬಂಧವಿರುವ 'ಸಹೋದರಿ ವಿಜ್ಞಾನಗಳು'(sister sciences) ಎಂದು ಕರೆಯುತ್ತಾರೆ. ಯೋಗದಿಂದ ಮನುಷ್ಯನ ಆರೋಗ್ಯಕ್ಕೆ ಎಷ್ಟು ಒಳ್ಳೆಯದಾಗುತ್ತದೆ ಎಂಬ ಬಗ್ಗೆ ನನ್ನ ಆಲೋಚನೆಗಳನ್ನು ಬರೆಯಲು ನನ್ನ ಈ ಸ್ವಂತ ಅನುಭವಗಳೇ ಕಾರಣ.

ಯೋಗ: ಭಾರತದ ಕಾಲಾತೀತ ಪರಂಪರೆ

ನಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಆರೋಗ್ಯವಾಗಿಡುವ ಯೋಗವು ನಮ್ಮ ಸಂಸ್ಕೃತಿಯ ಆರಂಭದಲ್ಲೇ ಶುರುವಾಯಿತು ಎಂದು ನಂಬಲಾಗಿದೆ. ಪುರಾಣ ಕಥೆಗಳಲ್ಲಿ ಶಿವನನ್ನು ಮೊದಲ ಯೋಗಿ ಅಥವಾ 'ಆದಿ ಯೋಗಿ' ಮತ್ತು ಮೊದಲ ಗುರು ಅಥವಾ 'ಆದಿ ಗುರು' ಎಂದು ಕರೆಯಲಾಗುತ್ತದೆ. ಇನ್ನು ಮಹರ್ಷಿ ಪತಂಜಲಿ ಅವರು ಯೋಗದ ನಿಯಮಗಳನ್ನು ಅಚ್ಚುಕಟ್ಟಾಗಿ ಜೋಡಿಸಿಕೊಟ್ಟಿದ್ದರಿಂದ ಅವರನ್ನು ಯೋಗದ ಪಿತಾಮಹ ಎಂದು ಗೌರವಿಸಲಾಗುತ್ತದೆ. ಮಹರ್ಷಿ ಪತಂಜಲಿ ಅವರಿಗೂ ತಮಿಳುನಾಡಿಗೂ ಆಳವಾದ ಆಧ್ಯಾತ್ಮಿಕ ಸಂಬಂಧವಿದೆ. ಅವರ ಭೌತಿಕ ಜೀವ ಸಮಾಧಿಯು ತಿರುಪತ್ತೂರಿನಲ್ಲಿದೆ ಎಂದು ನಂಬಲಾಗಿದೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ

ಪ್ರತಿ ವರ್ಷ ಅಂತಾರಾಷ್ಟ್ರೀಯ ಯೋಗ ದಿನವನ್ನು ನಮ್ಮ ದೇಶದಲ್ಲಿ ಒಂದು ಒಳ್ಳೆಯ ಸಂದೇಶದೊಂದಿಗೆ ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಈ ವರ್ಷದ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ವಿಷಯವು ತುಂಬಾ ಮುಖ್ಯವಾದುದಾಗಿದೆ. ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಸೌಲಭ್ಯಗಳು ಉತ್ತಮಗೊಂಡಿರುವುದರಿಂದ ಮತ್ತು ಸಾವಿನ ಪ್ರಮಾಣ ಕಡಿಮೆ ಆಗಿರುವುದರಿಂದ, ಜಗತ್ತಿನಾದ್ಯಂತ ಜನರ ಜೀವಿತಾವಧಿ (ಬದುಕುವ ವಯಸ್ಸು) ಹೆಚ್ಚಾಗಿದೆ. ಭಾರತದಲ್ಲೂ ಈ ದೊಡ್ಡ ಬದಲಾವಣೆ ಕಾಣಿಸುತ್ತಿದೆ. ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿ (UNFPA) ನೀಡಿದ 'ಇಂಡಿಯಾ ಏಜಿಂಗ್ ರಿಪೋರ್ಟ್ 2023' ರ ಪ್ರಕಾರ, 2050ರ ವೇಳೆಗೆ ಭಾರತದಲ್ಲಿ ಪ್ರತಿ ಐದು ಜನರಲ್ಲಿ ಒಬ್ಬರು 60 ವರ್ಷ ದಾಟಿದ ಹಿರಿಯರಿರುತ್ತಾರೆ.

ಹೆಚ್ಚು ಕಾಲ ಬದುಕುವುದು ಒಂದು ಅದ್ಭುತ ಕೊಡುಗೆ. ಆದರೆ, ಬದುಕಿನ ವರ್ಷಗಳು ಹೆಚ್ಚಾಗುವುದರ ಜೊತೆಗೆ, ಆ ದಿನಗಳು ನೆಮ್ಮದಿಯಿಂದ ಮತ್ತು ಸಾರ್ಥಕತೆಯಿಂದ ಕಳೆಯುವಂತೆ ನೋಡಿಕೊಳ್ಳುವ ದೊಡ್ಡ ಜವಾಬ್ದಾರಿ ನಮ್ಮ ಸಮಾಜದ ಮೇಲಿದೆ. ಈ ಕಾರಣಕ್ಕಾಗಿಯೇ, 2026ರ ಅಂತಾರಾಷ್ಟ್ರೀಯ ಯೋಗ ದಿನದ ವಿಷಯವಾದ "ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ" ಎಂಬುದು ಈಗಿನ ಕಾಲಕ್ಕೆ ತಕ್ಕ ಸೂಕ್ತ ಸಂದೇಶವಾಗಿದೆ.

ಹಿರಿಯರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಭಾರತದಲ್ಲಿ ಹಿರಿಯ ನಾಗರಿಕರ ಆರೋಗ್ಯ ಮತ್ತು ಅವರ ಅಗತ್ಯ ವಸ್ತುಗಳಿಗೆ ಸಂಬಂಧಿಸಿದ 'ಸಿಲ್ವರ್ ಎಕಾನಮಿ' (ಬೆಳ್ಳಿ ಆರ್ಥಿಕತೆ) ಮಾರುಕಟ್ಟೆ ದೊಡ್ಡದಾಗುತ್ತಿದೆ. ತಜ್ಞರ ಪ್ರಕಾರ, ಈಗಲೇ ಈ ಮಾರುಕಟ್ಟೆಯ ಮೌಲ್ಯ ಸುಮಾರು 73,000 ಕೋಟಿ ರೂಪಾಯಿಗಳಷ್ಟಿದೆ. ಮುಂಬರುವ ದಿನಗಳಲ್ಲಿ ಇದು ಇನ್ನೂ ದೊಡ್ಡದಾಗಿ ಬೆಳೆಯುವ ನಿರೀಕ್ಷೆಯಿದೆ.

ಜನರಿಗೆ ಚಿಕ್ಕ ವಯಸ್ಸಿನಲ್ಲೇ ಯೋಗವನ್ನು ಕಲಿಸುವುದು ಇವತ್ತಿನ ಅಗತ್ಯವಾಗಿದೆ. ಎಷ್ಟು ಬೇಗ ಯೋಗ ಮಾಡಲು ಶುರು ಮಾಡುತ್ತಾರೋ, ಅದರ ಲಾಭ ಇಡೀ ಜೀವನದುದ್ದಕ್ಕೂ ಅಷ್ಟೇ ಹೆಚ್ಚಾಗಿ ಸಿಗುತ್ತಾ ಹೋಗುತ್ತದೆ. ನಮ್ಮ 'ರಾಷ್ಟ್ರೀಯ ಶಿಕ್ಷಣ ನೀತಿ 2020' ಯೋಗಕ್ಕೆ ಆರೋಗ್ಯ ಮತ್ತು ಮೌಲ್ಯದ ಶಿಕ್ಷಣದ ಮುಖ್ಯ ಭಾಗವಾಗಿ ಒಳ್ಳೆಯ ಸ್ಥಾನ ಕೊಟ್ಟಿದೆ ಎಂದು ಹೇಳಲು ನನಗೆ ಖುಷಿಯಾಗುತ್ತದೆ. ಯುವಜನರಿಗೆ ಯೋಗವನ್ನು ಪರಿಚಯಿಸಲು ಇದು ಒಂದು ಒಳ್ಳೆಯ ಹೆಜ್ಜೆ. ಇದು ವಿದ್ಯಾರ್ಥಿಗಳಲ್ಲಿ ಶಿಸ್ತು, ಏಕಾಗ್ರತೆ, ಮನಸ್ಸಿನ ಹತೋಟಿ ಮತ್ತು ಒಳ್ಳೆಯ ಜೀವನಶೈಲಿಯನ್ನು ಬೆಳೆಸಲು ಖಂಡಿತ ನೆರವಾಗುತ್ತದೆ.

ಹಾಗಾಗಿ, ಜಗತ್ತಿನಾದ್ಯಂತ ವಯಸ್ಸಾಗುತ್ತಿರುವ ಜನರ ಸಂಖ್ಯೆಯನ್ನು ಸರಿಯಾಗಿ ನಿಭಾಯಿಸಲು ಭಾರತವು ಇಡೀ ಪ್ರಪಂಚಕ್ಕೆ ಒಂದು ಅಪರೂಪದ ಮಾದರಿಯನ್ನು ತೋರಿಸಿಕೊಡುತ್ತಿದೆ. ಅದುವೇನಮ್ಮ ಹಳೆಯ ಕಾಲದ ಜ್ಞಾನವನ್ನು ಇಂದಿನ ವಿಜ್ಞಾನದ ಒಪ್ಪಿಗೆಯೊಂದಿಗೆ ಜೋಡಿಸುವ ಯೋಗ.

ಯೋಗ - ಇಂದಿನ ಕಾಲದ ವಯಸ್ಸಾದವರಿಗೆ ಒಂದು ಪರಿಹಾರ

ನಿಯಮಿತ ಜೀವನ, ಯೋಗ ಮತ್ತು ಧ್ಯಾನದ ಮೂಲಕ ನಮ್ಮ ಋಷಿಮುನಿಗಳು ಹೇಗೆ ದೀರ್ಘಕಾಲ ಬದುಕಿದರು, ಶಕ್ತಿಶಾಲಿಯಾಗಿದ್ದರು ಮತ್ತು ಚುರುಕಾಗಿದ್ದರು ಎಂಬುದನ್ನು ಇಂದಿನ ವಿಜ್ಞಾನವೂ ಒಪ್ಪಿಕೊಳ್ಳುತ್ತಿದೆ. ಯೋಗದಿಂದ ಕಾಯಿಲೆಗಳನ್ನು ಗುಣಪಡಿಸುವ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ಲೋಕದಲ್ಲಿ ಆಸಕ್ತಿ ತುಂಬಾ ಹೆಚ್ಚಾಗಿದೆ.

'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್', 'ಹಾರ್ವರ್ಡ್ ಮೆಡಿಕಲ್ ಸ್ಕೂಲ್' ಮತ್ತು 'ಲ್ಯಾನ್ಸೆಟ್' ನಂತಹ ದೊಡ್ಡ ಸಂಸ್ಥೆಗಳ ಸಂಶೋಧನೆಗಳ ಪ್ರಕಾರ, ದಿನವೂ ಯೋಗ ಮಾಡುವುದರಿಂದ ಹಿರಿಯರಲ್ಲಿ ದೇಹದ ಸಮತೋಲನ, ನರಗಳ ಸಡಿಲತೆ ಮತ್ತು ನಡಿಗೆ ಸುಲಭವಾಗುತ್ತದೆ. ಇದರಿಂದ ಅವರು ಆಯತಪ್ಪಿ ಬೀಳುವ ಭಯ ಮತ್ತು ಅಪಾಯ ತುಂಬಾ ಕಡಿಮೆಯಾಗುತ್ತದೆ. ಮೂಳೆಗಳನ್ನು ಬಲಪಡಿಸಲು, ಕೀಲು ನೋವು ಕಡಿಮೆ ಮಾಡಲು, ಉಸಿರಾಟ ಸುಲಭವಾಗಿಸಲು, ರಕ್ತದೊತ್ತಡವನ್ನು ಹತೋಟಿಯಲ್ಲಿಡಲು ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿಡಲು ಯೋಗ ಸಹಾಯ ಮಾಡುತ್ತದೆ ಎಂದು ಸಂಶೋಧನೆಗಳು ಸಾಬೀತುಪಡಿಸಿವೆ. ಅಷ್ಟೇ ಅಲ್ಲದೆ, ಧ್ಯಾನ ಮತ್ತು ಉಸಿರಾಟದ ಕ್ರಿಯೆಗಳು ವಯಸ್ಸಾದವರಲ್ಲಿ ಒಳ್ಳೆಯ ನಿದ್ರೆ, ಮಾನಸಿಕ ಧೈರ್ಯ ಮತ್ತು ನೆನಪಿನ ಶಕ್ತಿಯನ್ನು ಹೆಚ್ಚು ಮಾಡುತ್ತವೆ ಎಂದು ತಿಳಿದುಬಂದಿದೆ.

ಹಾಗೆಯೇ ಮನೆಯಲ್ಲಿರುವ ವಯಸ್ಸಾದವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತಿರುವ ಕುಟುಂಬದ ಸದಸ್ಯರಿಗೆ ಆ ದೈಹಿಕ ಮತ್ತು ಮಾನಸಿಕ ಹೊರೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಯೋಗ ನೀಡುತ್ತದೆ. ಈ ಎಲ್ಲಾ ಲಾಭಗಳನ್ನು ನೋಡಿ, ನಮ್ಮ ಆಯುಷ್ ಸಚಿವಾಲಯವು ಕೆಲವು ಕಾಯಿಲೆಗಳು ಮತ್ತು ಹಿರಿಯ ನಾಗರಿಕರಿಗಾಗಿ ವಿಶೇಷವಾದ 10 ಯೋಗ ನಿಯಮಗಳನ್ನು ತಂದಿದೆ. ಇದರಲ್ಲಿ ವಯಸ್ಸಾದವರ ಆರೋಗ್ಯಕ್ಕೆಂದೇ ಸಂಶೋಧನೆ ಮಾಡಿ ಸಿದ್ಧಪಡಿಸಿದ ಯೋಗದ ಭಾಗವೂ ಇದೆ. ಅಷ್ಟೇ ಅಲ್ಲದೆ, ವರ್ಷದ 365 ದಿನಗಳೂ ಉಚಿತವಾಗಿ 100 ದಿನಗಳ ಆನ್‌ಲೈನ್ ಯೋಗ ತರಬೇತಿ ನೀಡುವ 'ಯೋಗ 365' ಎಂಬ ದೇಶಾದ್ಯಂತದ ಅಭಿಯಾನವನ್ನು ಶುರು ಮಾಡಲಾಗಿದೆ. ಇದು ಎಲ್ಲಾ ವಯಸ್ಸಿನವರಿಗೂ ಯೋಗ ಸುಲಭವಾಗಿ ಸಿಗುವಂತೆ ಮತ್ತು ಅವರ ದೈನಂದಿನ ಸಂಗಾತಿಯಾಗುವಂತೆ ಮಾಡಲು ಸಹಾಯ ಮಾಡುತ್ತದೆ.

ಎರಡು ಸಾವಿರ ವರ್ಷಗಳಿಗಿಂತಲೂ ಮುಂಚೆ, ತಮಿಳಿನ ಪ್ರಸಿದ್ಧ ಸಂತ ಮತ್ತು ವಿದ್ವಾಂಸ ತಿರುವಳ್ಳುವರ್ ಅವರು ತಮ್ಮ ಕುರಲ್ (949) ನಲ್ಲಿ ಹೀಗೆ ಹೇಳಿದ್ದರು: ಚಿಕಿತ್ಸೆ ಕೊಡುವ ಮೊದಲು ರೋಗಿಯ ಪರಿಸ್ಥಿತಿ, ರೋಗದ ರೀತಿ ಮತ್ತು ಸರಿಯಾದ ಸಮಯವನ್ನು ಯೋಚಿಸಬೇಕು.

ಈ ಹಳೆಯ ಮಾತು ಇಂದಿನ ಆರೋಗ್ಯಕರ ವೃದ್ಧಾಪ್ಯದ ಯೋಗದ ನಿಯಮಗಳಿಗೂ ಹೊಂದಿಕೆಯಾಗುತ್ತದೆ. ಇಲ್ಲಿ ಯೋಗದ ಅಭ್ಯಾಸಗಳನ್ನು ವ್ಯಕ್ತಿಯ ವಯಸ್ಸು, ಆರೋಗ್ಯ ಮತ್ತು ಅವರ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲಾಗುತ್ತದೆ. ಇದರಿಂದ ಹಿರಿಯರು ತಮ್ಮ ವಯಸ್ಸಾದ ಕಾಲದಲ್ಲೂ ಹೆಚ್ಚು ಆರೋಗ್ಯವಾಗಿ, ಸಕ್ರಿಯವಾಗಿ ಮತ್ತು ಗೌರವದ ಬದುಕು ನಡೆಸಲು ಸಾಧ್ಯವಾಗುತ್ತದೆ.

ನಾವು 2026ರ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸುತ್ತಿರುವ ಈ ಸಮಯದಲ್ಲಿ, ಪ್ರತಿಯೊಬ್ಬ ನಾಗರಿಕರು, ಶಾಲೆ-ಕಾಲೇಜುಗಳು, ಸಂಘ-ಸಂಸ್ಥೆಗಳು, ವೈದ್ಯರು ಮತ್ತು ಸಮಾಜದ ಮುಖಂಡರು ಯೋಗವನ್ನು ಬರೀ ಅಪರೂಪಕ್ಕೆ ಮಾಡುವ ಕಸರತ್ತು ಎಂದು ತಿಳಿಯದೆ, ಇಡೀ ಜೀವನದ ಒಳ್ಳೆಯ ಹವ್ಯಾಸವನ್ನಾಗಿ ಮಾಡಿಕೊಳ್ಳಬೇಕು ಎಂದು ನಾನು ವಿನಂತಿಸುತ್ತೇನೆ. ಒಂದು ಸಮಾಜವು ತನ್ನ ಹಿರಿಯರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದರ ಮೇಲೆಯೇ ಆ ಸಮಾಜದ ಯೋಗ್ಯತೆ ತಿಳಿಯುತ್ತದೆ. ಆದ್ದರಿಂದ, ನಮ್ಮ ಹಿರಿಯ ನಾಗರಿಕರು ಯಾವುದೇ ಭಯ, ಬೇರೆಯವರ ಮೇಲಿನ ಅವಲಂಬನೆ ಅಥವಾ ಒಂಟಿತನವಿಲ್ಲದೆ ಗೌರವ, ಉತ್ಸಾಹ, ನೆಮ್ಮದಿಯಿಂದ ಬದುಕುವಂತಹ ವಾತಾವರಣವನ್ನು ನಿರ್ಮಿಸಲು ನಾವೆಲ್ಲರೂ ಶ್ರಮಿಸೋಣ. ಯೋಗವನ್ನು ನಮ್ಮ ದಿನನಿತ್ಯದ ಬದುಕಿನ ಭಾಗವಾಗಿಸಿಕೊಳ್ಳುವ ಮೂಲಕ, ನಮ್ಮ ಹಿರಿಯರ ಜೀವನದ ಕೊನೆಯ ದಿನಗಳು ನಿಜವಾಗಿಯೂ ಆರೋಗ್ಯ, ಶಾಂತಿ ಮತ್ತು ತೃಪ್ತಿಯ ದಿನಗಳಾಗುವಂತೆ ನಾವೆಲ್ಲರೂ ಒಟ್ಟಾಗಿ ನೋಡಿಕೊಳ್ಳೋಣ!

(ಭಾರತದ ಉಪರಾಷ್ಟ್ರಪತಿ)

ಕಿರುಸುದ್ದಿ

ಧರ್ಮಸ್ಥಳದಲ್ಲಿ ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಉಜಿರೆ: ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಕಾಲೇಜಿನ ಆಶ್ರಯದಲ್ಲಿ ಭಾನುವಾರ ಪೂರ್ವಾಹ್ನ ಏಳು ಗಂಟೆಯಿಂದ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ಹನ್ನೆರಡನೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ನಡೆಯುತ್ತದೆ. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭವನ್ನು ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ. ಉಪಕುಲಪತಿ ಡಾ. ಭಗವಾನ್, ಬಿ.ಸಿ. ಉದ್ಘಾಟಿಸುವರು. ಮಾಜಿ ಸಚಿವ ಕೆ. ಅಭಯಚಂದ್ರ ಜೈನ್, ಶಾಸಕರುಗಳಾದ ಹರೀಶ್ ಪೂಂಜ ಮತ್ತು ಕೆ. ಪ್ರತಾಪಸಿಂಹ ನಾಯಕ್ ಮುಖ್ಯ ಅತಿಥಿಗಳಾಗಿ ಶುಭಾಶಂಸನೆ ಮಾಡುವರು.

ಬಸ್ ಡಿಕ್ಕಿ: ವೃದ್ಧೆ ಸಾವು

ಉಡುಪಿ: ರಾಷ್ಟ್ರೀಯ ಹೆದ್ದಾರಿ 66ರ ಪಾಂಗಾಳದ ಜನಾರ್ದನ ದೇವಸ್ಥಾನದ ಎದುರು ರಸ್ತೆ ದಾಟುತ್ತಿದ್ದ ವೃದ್ಧೆಗೆ ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟ ಘಟನೆ ಶುಕ್ರವಾರ ರಾತ್ರಿ ನಡೆದಿದೆ. ಪಾಂಗಾಳ ಗ್ರಾಮದ ನಿವಾಸಿ ಶ್ರೀಮತಿ (73) ಮೃತಪಟ್ಟ ದುರ್ದೈವಿ. ದೇವಸ್ಥಾನಕ್ಕೆ ಬಂದಿದ್ದ ಶ್ರೀಮತಿ ಅವರು, ರಸ್ತೆ ಪಕ್ಕದ ಅಂಗಡಿಯಿಂದ ಹಾಲು ಖರೀದಿಸಿ ವಾಪಸ್ ರಸ್ತೆ ದಾಟುತ್ತಿದ್ದಾಗ ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ಅತಿ ವೇಗವಾಗಿ ಬಂದ ಎಕ್ಸ್‌ಪ್ರೆಸ್ ಬಸ್ ಡಿಕ್ಕಿ ಹೊಡೆದಿದೆ. ತಲೆಗೆ ಗಂಭೀರ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಉಡುಪಿ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದರಾದರೂ, ಅವರು ಆದಾಗಲೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ನಾಗೇಶ್ ಭಂಡಾರಿ ನೀಡಿದ ದೂರಿನಂತೆ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್‌ನಿಂದ ರಸ್ತೆಗೆ ಬಿದ್ದು ಮಹಿಳೆ ಮೃತ್ಯು

ಕುಂಬಳೆ: ಪುತ್ರ ಚಲಾಯಿಸುತ್ತಿದ್ದ ಸ್ಕೂಟರ್‌ನಿಂದ ರಸ್ತೆಗೆಸೆಯಲ್ಪಟ್ಟು ತಾಯಿ ಮೃತಪಟ್ಟ ದಾರುಣ ಘಟನೆ ಸಂಭವಿಸಿದೆ. ಕುಂಬಳೆ ಸುನಾಮಿ ಕಾಲನಿಯ ಮೊಯ್ದೀನ್ ಕುಂಞಿಯವರ ಪತ್ನಿ ಹಾಶಿಕ (48) ಮೃತಪಟ್ಟ ದುರ್ದೈವಿ. ಸ್ಕೂಟರ್ ಚಲಾಯಿಸುತ್ತಿದ್ದ ಪುತ್ರ ಮುಬಾರಕ್ (19) ಸಣ್ಣಪುಟ್ಟ ಗಾಯಗೊಂಡಿದ್ದಾರೆ. ಶುಕ್ರವಾರ ರಾತ್ರಿ 7.30ರ ವೇಳೆಗೆ ರಾಷ್ಟ್ರೀಯ ಹೆದ್ದಾರಿ ಕುಂಬಳೆ ದೇವಿನಗರ ಸರ್ವೀಸ್ ರಸ್ತೆಯಲ್ಲಿ ಅಪಘಾತ ನಡೆದಿದೆ. ಗಂಭೀರ ಗಾಯಗೊಂಡ ಹಾಶಿಕರನ್ನು ಆಸ್ಪತ್ರೆಗೆ ಸಾಗಿಸಿದರೂ ಜೀವ ರಕ್ಷಿಸಲಾಗಲಿಲ್ಲ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಕುಂಬಳೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಕಟ್ಟಡದಿಂದ ಬಿದ್ದು ಕಾರ್ಮಿಕ ಮೃತ್ಯು

ಕುಂಬಳೆ: ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಕಟ್ಟಡದಿಂದ ಬಿದ್ದು ಕಾರ್ಮಿಕನೋರ್ವ ಸಾವಿಗೀಡಾದ ಘಟನೆ ನಡೆದಿದೆ. ಬೇಳ ವಳಾಂಬ ಹೌಸ್‌ನ ಫ್ರಾನ್ಸಿಸ್ ಪ್ರವೀಣ್ ಡಿಸೋಜಾ (47) ಮೃತಪಟ್ಟ ದುರ್ದೈವಿ. ಶುಕ್ರವಾರ ಸಂಜೆ 6 ಗಂಟೆ ಸುಮಾರಿಗೆ ಮುಜುಂಗಾವಿನಲ್ಲಿ ಈ ದುರ್ಘಟನೆ ಸಂಭವಿಸಿದೆ. ಮುಜುಂಗಾವು ಪರಿಸರದ ಮನೆಯೊಂದರ ನಿರ್ಮಾಣ ಕೆಲಸ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಫ್ರಾನ್ಸಿಸ್ ಪ್ರವೀಣ್ ಡಿಸೋಜಾ ಅವರು ಮೇಸ್ತ್ರಿಯ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಈ ಸಂದರ್ಭ ಆಯತಪ್ಪಿ ಕೆಳಗೆ ಬಿದ್ದ ಅವರನ್ನು ಆಸ್ಪತ್ರೆಗೆ ಕೊಂಡೊಯ್ದರೂ ಜೀವ ರಕ್ಷಿಸಲಾಗಲಿಲ್ಲ. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೃತರು ಬಂಧು ಬಳಗವನ್ನು ಅಗಲಿದ್ದಾರೆ.

ತಂದೆಯ ಕಿಡ್ನಿ ವೈಫಲ್ಯಕ್ಕೆ ಮನನೊಂದು ಯುವಕ ಆತ್ಮಹತ್ಯೆ

ಉಡುಪಿ: ತಂದೆಯ ಅನಾರೋಗ್ಯದ ವಿಚಾರದಿಂದ ತೀವ್ರ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ದೀಕ್ಷಿತ್ (31) ಎಂಬ ಯುವಕ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಹಿರಿಯಡ್ಕ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೃತರ ತಂದೆ ಕಿಡ್ನಿ ವೈಫಲ್ಯದಿಂದ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇದರಿಂದ ನೊಂದ ದೀಕ್ಷಿತ್, ಜೂನ್ 19ರ ಬೆಳಿಗ್ಗೆ ಮನೆಯ ಅಡುಗೆ ಕೋಣೆಯಲ್ಲಿ ಚಾಕುವಿನಿಂದ ಕೈ ಹಾಗೂ ತಲೆಗೆ ಕೊಯ್ದುಕೊಂಡು, ಬಳಿಕ ಕಬ್ಬಿಣದ ಕೊಂಡಿಗೆ ಹಗ್ಗ ಕಟ್ಟಿ ನೇಣಿಗೆ ಶರಣಾಗಿದ್ದಾನೆ. ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಯುಡಿಆರ್ ದಾಖಲಾಗಿದೆ.

ಅಭ್ಯರ್ಥಿಗಳಿಗೆ ಉಚಿತ ವಸತಿ | ವಿಶೇಷ ಬಸ್ ವ್ಯವಸ್ಥೆ | ಪ್ರತಿಷ್ಠಿತ ಕಂಪೆನಿಗಳು ಭಾಗಿ | ಡಾ. ಆಳ್ವ ಮಾಹಿತಿ

ಆ.7, 8ರಂದು ಆಳ್ವಾಸ್ ಉದ್ಯೋಗ ಮೇಳ

ಮಂಗಳೂರು: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ 16ನೇ ಆವೃತ್ತಿಯ ಉದ್ಯೋಗ ಮೇಳ ಆಗಸ್ಟ್ 7 ಮತ್ತು 8ರಂದು ಮೂಡುಬಿದಿರೆಯ ವಿದ್ಯಾಗಿರಿ ಆವರಣದಲ್ಲಿ ನಡೆಯಲಿದ್ದು, ಮೇಳದ ಪೂರ್ವಭಾವಿ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಎಲ್ಲ ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್ ನೋಂದಣಿ ಮಾಡಿಕೊಳ್ಳಬೇಕು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ತಿಳಿಸಿದರು.

ಗ್ರಾಮೀಣ ಪ್ರತಿಭೆಗಳಿಗೆ ಗುಣಮಟ್ಟದ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಆರಂಭಗೊಂಡ ಆಳ್ವಾಸ್ ಪ್ರಗತಿ ಉದ್ಯೋಗ ಮೇಳವು ಕರ್ನಾಟಕ ಸೇರಿದಂತೆ ನಾಲ್ಕು ರಾಜ್ಯಗಳ ಅಭ್ಯರ್ಥಿಗಳಿಗೆ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಉದ್ಯೋಗಾವಕಾಶಗಳನ್ನು ಒದಗಿಸುವ ವೇದಿಕೆಯಾಗಿದೆ. ಪ್ರತಿಷ್ಠಾನದ ಸಿಎಸ್‌ಆರ್ ಚಟುವಟಿಕೆಯ ಭಾಗವಾಗಿ ನಡೆಯುವ ಈ ಉದ್ಯೋಗ ಮೇಳ ಸಂಪೂರ್ಣ ಉಚಿತ. ಇದುವರೆಗೆ ಪ್ರತಿಷ್ಠಾನದಿಂದ ನಡೆದಿರುವ ಉದ್ಯೋಗ ಮೇಳಗಳಲ್ಲಿ 250ಕ್ಕೂ ಅಧಿಕ ಪ್ರತಿಷ್ಠಿತ ಕಂಪನಿಗಳು ಭಾಗವಹಿಸುತ್ತಿದ್ದು, ಇಲ್ಲಿಯವರೆಗೆ 66,432 ಅಭ್ಯರ್ಥಿಗಳು ಶಾರ್ಟ್‌ಲಿಸ್ಟ್ ಗೊಂಡು 40848 ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ಉದ್ಯೋಗದ ಆಫರ್ ದೊರಕಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ಈ ಬಾರಿಯ ಉದ್ಯೋಗ ಮೇಳದಲ್ಲಿ 300ಕ್ಕೂ ಅಧಿಕ ಕಂಪನಿಗಳು, 20 ಸಾವಿರ ಮಂದಿ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಬ್ಯಾಂಕಿಂಗ್ ಹಾಗೂ ಹಣಕಾಸು, ಮಾಹಿತಿ ತಂತ್ರಜ್ಞಾನ, ಉತ್ಪಾದನೆ, ಔಷಧೋದ್ಯಮ, ಮಾರಾಟ ಮತ್ತು ಚಿಲ್ಲರೆ ವ್ಯಾಪಾರ, ಆತಿಥ್ಯ, ದೂರಸಂಪರ್ಕ, ಆರೋಗ್ಯ, ಮಾಧ್ಯಮ, ನಿರ್ಮಾಣ, ಇಲೆಕ್ಟ್ರಾನಿಕ್ಸ್, ಶಿಕ್ಷಣ ಹಾಗೂ ಎನ್‌ಜಿಒ ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖ ಸಂಸ್ಥೆಗಳು ನೇಮಕಾತಿ ನಡೆಸಲಿವೆ. ವೈದ್ಯಕೀಯ ಮತ್ತು ಪ್ಯಾರಾ ಮೆಡಿಕಲ್, ಇಂಜಿನಿಯರಿಂಗ್, ಕಲಾ, ವಾಣಿಜ್ಯ, ನಿರ್ವಹಣೆ, ವಿಜ್ಞಾನ, ನರ್ಸಿಂಗ್, ಐಟಿಐ, ಡಿಪ್ಲೊಮಾ, ಕೌಶಲ್ಯಾಧಾರಿತ ವೃತ್ತಿಗಳು, ಪಿಯುಸಿ, ಎಸ್‌ಎಸ್‌ಎಲ್‌ಸಿ ಹಾಗೂ ಇತರ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳು ಲಭ್ಯವಾಗಲಿವೆ ಎಂದು ಅವರು ಹೇಳಿದರು.

ಈ ಬಾರಿಯ ಉದ್ಯೋಗ ಮೇಳದಲ್ಲಿ 300ಕ್ಕೂ ಅಧಿಕ ಕಂಪನಿಗಳು, 20 ಸಾವಿರ ಮಂದಿ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ.

ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಆಗಮಿಸುವ ಅಭ್ಯರ್ಥಿಗಳಿಗೆ ಆಗಸ್ಟ್ 6ರಿಂದ ಉಚಿತ ವಸತಿ ವ್ಯವಸ್ಥೆ ಮಾಡಲಾಗುವುದು. ಐಟಿಐ ಅಭ್ಯರ್ಥಿಗಳಿಗೆ ವಿಶೇಷ ಬಸ್ ವ್ಯವಸ್ಥೆ ಮಾಡಲಾಗುವುದು. ಅಭ್ಯರ್ಥಿಗಳು ಆ. 7ರಂದು ಬೆಳಗ್ಗೆ 8 ಗಂಟೆಗೆ ಮೂಡಬಿದಿರೆಯ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಹಾಜರಿರಬೇಕು. 10 ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ನವೀಕರಿಸಿದ ಬಯೋಡೇಟಾ, ಅಂಕಪಟ್ಟಿಗಳ ದೃಢೀಕೃತ ಜೆರಾಕ್ಸ್ ಪ್ರತಿಗಳು, ಆನ್‌ಲೈನ್ ನೋಂದಣಿ ಸಂಖ್ಯೆಯನ್ನು ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು 9741440490, 9611750531 ಸಂಪರ್ಕಿಸಬಹುದು. ಕಂಪನಿಗಳು ನೋಂದಣಿಗಾಗಿ 9731953123 ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಡಾ. ಮೋಹನ್ ಆಳ್ವ ಮಾಹಿತಿ ನೀಡಿದರು.

ಪ್ರತಿಷ್ಠಾನದ ಆಡಳಿತ ಟ್ರಸ್ಟಿ ವಿವೇಕ್ ಆಳ್ವ, ನೇಮಕಾತಿ ವಿಭಾಗದ ಮುಖ್ಯಸ್ಥೆ ರಂಜಿತಾ ಆಚಾರ್ಯ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಉಪಸ್ಥಿತರಿದ್ದರು.

ಆನ್‌ಲೈನ್ ನೋಂದಣಿ ಕಡ್ಡಾಯ

ಭಾಗವಹಿಸುವ ಕಂಪನಿಗಳ ವಿವರಗಳನ್ನು www.alvaspragati.com ವೆಬ್‌ಸೈಟ್‌ನಲ್ಲಿ ನಿರಂತರವಾಗಿ ನವೀಕರಿಸಲಾಗುವುದು. ಅಭ್ಯರ್ಥಿಗಳು ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಉದ್ಯೋಗಾಕಾಂಕ್ಷಿಗಳಿಗೆ ಆನ್‌ಲೈನ್ ನೋಂದಣಿ ಕಡ್ಡಾಯವಾಗಿದೆ. www.alvaspragati.com/candidate-registrationನಲ್ಲಿ ಉಚಿತವಾಗಿ ನೋಂದಣಿ ಮಾಡಬಹುದು. ಅಭ್ಯರ್ಥಿಗಳಿಗೆ ವಿವಿಧ ಹುದ್ದೆಗಳ ವಿವರ, ಅರ್ಹತೆ ಹಾಗೂ ವೃತ್ತಿ ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡುವ ಸಲುವಾಗಿ ಆಳ್ವಾಸ್ ತಜ್ಞರ ತಂಡ ಅವಿಭಜಿತ ದ.ಕ. ಜಿಲ್ಲೆಯ ವಿವಿಧ ತಾಲೂಕು ಕೇಂದ್ರಗಳಲ್ಲಿ ವಿಶೇಷ ಓರಿಯಂಟೇಶನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡು ಅಗತ್ಯ ಮಾಹಿತಿ ಪಡೆದುಕೊಳ್ಳಬೇಕು ಎಂದು ಡಾ. ಮೋಹನ್ ಆಳ್ವ ಮನವಿ ಮಾಡಿದರು.

ಪ್ರಸಿದ್ಧ ಪುಣ್ಯ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಶ್ರೀ ದೇವರ ನಿತ್ಯೋತ್ಸವ ಸಂಪನ್ನ

ಸುಬ್ರಹ್ಮಣ್ಯ: ಪ್ರಸಿದ್ಧ ಪುಣ್ಯ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಶ್ರೀದೇವರ ಹೊರಾಂಗಣ ಉತ್ಸವಾದಿಗಳು ಶನಿವಾರ ತೆರೆ ಕಂಡಿತು. ದೇವರು ಒಳಾಂಗಣ ಪ್ರವೇಶಿಸುವುದರೊಂದಿಗೆ ಶ್ರೀ ದೇವರ ನಿತ್ಯೋತ್ಸವ ಸಂಪನ್ನವಾಯಿತು. ಶುದ್ಧ ಷಷ್ಠಿಯ ದಿನ ಹೊರಾಂಗಣದಲ್ಲಿ ಪಾಲಕಿ ಮತ್ತು ಬೆಳ್ಳಿ ರಥೋತ್ಸವ ನೆರವೇರಿದ ಬಳಿಕ ಶ್ರೀ ದೇವರು ಒಳಾಂಗಣ ಪ್ರವೇಶಿಸುವುದರೊಂದಿಗೆ ಕ್ಷೇತ್ರದಲ್ಲಿ ಉತ್ಸವಗಳು ಕೊನೆಯಾಯಿತು. ದೇವಳದ ಅರ್ಚಕ ವೇದಮೂರ್ತಿ ರಾಜೇಶ್ ನಡ್ಯಂತಿಲ್ಲಾಯ ಉತ್ಸವದ ವಿದಿವಿಧಾನ ನೆರವೇರಿಸಿದರು.

ಜೇಷ್ಠಶುದ್ಧಷಷ್ಠಿಯ ದಿನ ರಾತ್ರಿ ಮಹಾಪೂಜೆಯ ಬಳಿಕ ಹೊರಾಂಗಣದಲ್ಲಿ ಬೆಳ್ಳಿ ರಥೋತ್ಸವ ಮತ್ತು ಪಾಲಕಿ ಉತ್ಸವಗಳು ನೆರವೇರಿತು. ಆನೆ, ಬಿರುದಾವಳಿ, ಬ್ಯಾಂಡ್, ನಾದಸ್ವರ, ಸ್ಯಾಕ್ಸೋಫೋನ್ ಗಳನ್ನೊಳಗೊಂಡ ಹೊರಾಂಗಣ ಉತ್ಸವ ನಡೆಯಿತು. ಈ ನಂತರ ದೇವಾಲಯ ನಗರದಲ್ಲಿ ದೇವರು ಗರ್ಭಗೃಹ ಪ್ರವೇಶಿಸುವುದರೊಂದಿಗೆ ನಿತ್ಯೋತ್ಸವಕ್ಕೆ ತೆರೆಯಾಯಿತು. ಸಹಸ್ರಾರು ಊರ ಮತ್ತು ಪರವೂರ ಭಕ್ತಾದಿಗಳು ಈ ಸಂದರ್ಭದಲ್ಲಿ ಶ್ರೀ ದೇವರ ಉತ್ಸವಾದಿಗಳನ್ನು ಶ್ರದ್ಧಾಭಕ್ತಿಯಿಂದ ವೀಕ್ಷಿಸಿದರು.

ಪಂಚಾಂಗ ಶ್ರವಣ

ದೇವರು ಒಳಗಾದ ನಂತರ ಒಳಾಂಗಣದ ಕಟ್ಟೆಯಲ್ಲಿ ಪೂಜೆ ಮತ್ತು ವಸಂತ ಪೂಜೆ ನೆರವೇರಿತು. ಆ ಬಳಿಕ ಪಂಚಾಂಗಶ್ರವಣ ನಡೆಯಿತು. ತದನಂತರ ಫಲವಸ್ತುಗಳನ್ನು ಪ್ರಸಾದ ರೂಪದಲ್ಲಿ ಭಕ್ತಾದಿಗಳಿಗೆ ವಿತರಿಸಲಾಯಿತು.

ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಎಸ್. ಇಂಜಾಡಿ, ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ, ಸಹಾಯಕ ಕಾರ್ಯನಿರ್ವಹಣಾಧಿಕಾರಿ ಯೇಸುರಾಜು, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಅಶೋಕ್ ನೆಕ್ರಾಜೆ, ಡಾ.ರಘು, ಸೌಮ್ಯಾ ಭರತ್, ಲೀಲಾ ಮನಮೋಹನ್, ಪ್ರವೀಣ ರೈ ಮರುವಂಜ, ಅಜಿತ್ ಪಾಲೇರಿ ಸೇರಿದಂತೆ ಭಕ್ತರು ಉಪಸ್ಥಿತರಿದ್ದರು.

ಸೇವೆಗಳು ಎಂದಿನಂತೆ

ಹರಕೆ ಉತ್ಸವಗಳು ಮಾತ್ರ ದೇವಳದಲ್ಲಿ ದೀಪಾವಳಿ ಅಮವಾಸ್ಯೆಯ ತನಕ ನಡೆಯುವುದಿಲ್ಲ. ಆದರೆ ದಿನನಿತ್ಯ ನಡೆಯುವ ಹರಕೆ ಸೇವೆಗಳಾದ ಸರ್ಪಸಂಸ್ಕಾರ, ಆಶ್ಲೇಷ ಬಲಿ, ನಾಗಪ್ರತಿಷ್ಠೆ, ತುಲಾಭಾರ, ಪಂಚಾಮೃತ ಮಹಾಭಿಷೇಕ, ಶೇಷಸೇವೆ, ಕಾರ್ತಿಕ ಪೂಜೆ ಇತ್ಯಾದಿ ಸೇವೆಗಳು ಏಕಾದಶಿ ಮತ್ತಿತರ ಉಪವಾಸ ದಿನಗಳನ್ನು ಹೊರತು ಪಡಿಸಿ ಉಳಿದೆಲ್ಲಾ ದಿನಗಳಲ್ಲಿ ಎಂದಿನಂತೆ ಜರುಗುತ್ತದೆ.



ಜಾತ್ರೆಗೆ ರಥೋತ್ಸವ ಆರಂಭ


ಮುಂದಿನ ದೀಪಾವಳಿ ಅಮವಾಸ್ಯೆಯಂದು ಮತ್ತೆ ಶ್ರೀ ದೇವರು ಹೊರಾಂಗಣ ಪ್ರವೇಶಿಸುವುದರ ಮೂಲಕ ಉತ್ಸವಾದಿಗಳು ಮತ್ತು ಹರಕೆ ಉತ್ಸವಗಳು ಆರಂಭವಾಗುತ್ತದೆ. ಆದರೆ ರಥಬೀದಿಯಲ್ಲಿ ರಥೋತ್ಸವವು ಜಾತ್ರಾ ಸಮಯದಲ್ಲಿ ಆರಂಭವಾಗಲಿದ್ದು, ಆ ಬಳಿಕ ಹರಕೆಯ ರಥೋತ್ಸವಗಳು ನೆರವೇರಲಿದೆ.

ಅದ್ಯಪಾಡಿ ದೇವಸ್ಥಾನ ಸಮೀಪ ಉರುಳಿ ಬಿದ್ದ ಬೃಹತ್ ಮುರಕಲ್ಲು

ಕೈಕಂಬ: 2025ರ ಮಾರ್ಚ್ ತಿಂಗಳಲ್ಲಿ ಬ್ರಹ್ಮಕಲಶೋತ್ಸವ ನಡೆದಿದ್ದ ಆದ್ಯಪಾಡಿಯ ಶ್ರೀ ಆದಿನಾಥೇಶ್ವರ ದೇವಸ್ಥಾನಪ್ರವೇಶಿಸುವರಾಜಗೋಪುರ ಬಳಿ ಹೊರಾಂಗಣಕ್ಕೆ ಋಷಿವನದ ಮೇಲ್ಭಾಗದ ಬೃಹತ್ ಮುರಕಲ್ಲು (ಕೆಂಪು ಕಲ್ಲು) ಕುಸಿದು ಬಿದ್ದ ಘಟನೆ ಶುಕ್ರವಾರ ಬೆಳಿಗ್ಗೆ ಸಂಭವಿಸಿದೆ.

ದೇವಸ್ಥಾನಕ್ಕೆ ಹೊಂದಿಕೊಂಡಿದ್ದ ಈ ಕಲ್ಲಿನಲ್ಲಿ ಬಿರುಕು ಉಂಟಾಗಿದ್ದು, ಹತ್ತಿರದಲ್ಲಿರುವ ಮರಗಳ ಬೇರುಗಳಿಂದ ಕಲ್ಲು ಮತ್ತಷ್ಟು ಸಡಿಲಗೊಂಡಿತ್ತು. ಇದು ಮೇಲ್ನೋಟಕ್ಕೆ ಕಂಡು ಬಾರದ ಕಾರಣ ಕಲ್ಲು ಕುಸಿದು ಬಿದ್ದಿದೆ. ಬೆಳಗ್ಗಿನ ಹೊತ್ತು ದೇವಸ್ಥಾನದ ಒಳಗೆ ಭಕ್ತರು ಇಲ್ಲದ್ದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಏತಮೊಗರು ದೊಡ್ಡಮನೆ ಹರೀಶ್ ಶೆಟ್ಟಿ ಅವರು ತಿಳಿಸಿದ್ದಾರೆ.

ದೇವಸ್ಥಾನದ ಗರ್ಭಗುಡಿಯ ಹೊರಾಂಗಣಕ್ಕೆ ಬಿದ್ದಿದ್ದ ಕಲ್ಲನ್ನು ಕಂಪ್ರೆಸರ್ ಯಂತ್ರದ ಮೂಲಕ ಪುಡಿ ಮಾಡಿ ತೆರವು ಮಾಡಲಾಗುತ್ತಿದೆ. ಕಲ್ಲು ತೆರವುಗೊಳಿಸಲು ಭಕ್ತರು ಶ್ರಮಿಸಿದ್ದಾರೆ. ಭಾನುವಾರ ಕಲ್ಲಿನ ಉಳಿದ ಭಾಗ ತೆರವುಗೊಳಿಸಲಾಗುವುದು. ದೇವರ ದಯೆಯಿಂದ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಸಮಿತಿಯ ಸದಸ್ಯ ಜೀವನ್ ಮಲ್ಲಿ ಆದ್ಯಪಾಡಿ ಹೇಳಿದರು.



ಬೀರಮೂಲೆಯಲ್ಲಿ ಕಾಡುಕೋಣಗಳ ಹಿಂಡು ಪ್ರತ್ಯಕ್ಷ: ಕೃಷಿಕರಲ್ಲಿ ಆತಂಕ

ಮುಳ್ಳೇರಿಯ: ಬೆಳ್ಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಳದಪಾರೆ ಸಮೀಪದ ಬೀರಮೂಲೆ ಪ್ರದೇಶದಲ್ಲಿ ಹತ್ತಕ್ಕೂ ಹೆಚ್ಚು ಕಾಡುಕೋಣಗಳ ಹಿಂಡು ಪ್ರತ್ಯಕ್ಷವಾಗಿದ್ದು, ಇದರಿಂದಾಗಿ ಸ್ಥಳೀಯ ಕೃಷಿಕರಲ್ಲಿ ಆತಂಕ ಮೂಡಿದೆ. ಬೀರಮೂಲೆಯ ಕೃಷಿಕ ಸೂರ್ಯನಾರಾಯಣ ಭಟ್ ಅವರ ತೆಂಗಿನ ತೋಟದಲ್ಲಿ ಈ ಕಾಡುಕೋಣಗಳ ಹಿಂಡು ಕಂಡುಬಂದಿದೆ.

ಮಾತ್ರವಲ್ಲದೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಳದಪಾರೆ, ಈಂದುಮೂಲೆ ಮೊದಲಾದ ಅರಣ್ಯ ಗಡಿಪ್ರದೇಶಗಳಲ್ಲಿ ಪದೇ ಪದೇ ಕಾಡುಕೋಣಗಳು ಕಾಣಿಸಿಕೊಳ್ಳುತ್ತಿವೆ. ಆದರೆ ದೊಡ್ಡ ಮಟ್ಟಿಗೆ ಕೃಷಿ ಬೆಳೆಗಳಿಗೆ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಆದರೂ ಪರಿಸರದ ಕೃಷಿಕರು ಭೀತರಾಗಿದ್ದಾರೆ.

ಅರಣ್ಯ ಗಡಿಪ್ರದೇಶದಿಂದ ಕೃಷಿಭೂಮಿಗೆ ಕಾಡುಪ್ರಾಣಿಗಳು ದಾಳಿಯಿಡುವುದನ್ನು ವೈಜ್ಞಾನಿಕವಾಗಿ ತಡೆಯುವ ನಿಟ್ಟಿನಲ್ಲಿ ಬೃಹತ್ ಯೋಜನೆಯನ್ನು ರೂಪಿಸಲಾಗಿತ್ತು. ಅದರಂತೆ ಕೃಷಿ ಇಲಾಖೆಯ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ) ಅಧೀನದಲ್ಲಿ 37 ಲಕ್ಷ ರೂ. ಹಾಗೂ ಬೆಳ್ಳೂರು ಗ್ರಾಮ ಪಂಚಾಯತ್‌ನ 1.88 ಲಕ್ಷ ರೂ. ಆರ್ಥಿಕ ನೆರವಿನೊಂದಿಗೆ ಸೌರಬೇಲಿ ನಿರ್ಮಿಸುವ ಯೋಜನೆಯನ್ನು ಕಾರ್ಯಗತಗೊಳಿಸಲಾಗಿತ್ತು.



37 ಲಕ್ಷ ರೂ. ಹಾಗೂ ಬೆಳ್ಳೂರು ಗ್ರಾ. ಪಂ.ನ 1.88 ಲಕ್ಷ ರೂ. ಆರ್ಥಿಕ ನೆರವಿನೊಂದಿಗೆ ಸೌರಬೇಲಿ ನಿರ್ಮಿಸುವ ಯೋಜನೆಯನ್ನು ಕಾರ್ಯಗತಗೊಳಿಸಲಾಗಿತ್ತು.

ಗ್ರಾ.ಪಂ., ಕೃಷಿ ಇಲಾಖೆ ಮತ್ತು ಅರಣ್ಯ ಇಲಾಖೆಯ ಜಂಟಿ ಸಮನ್ವಯತೆ ಯಲ್ಲಿ ಬೆಳ್ಳೂರು ಗ್ರಾ.ಪಂ.ನ ಅತ್ತಿಕೂಡ್ಲುವಿನಿಂದ ಎಣ್ಮಕಜೆ ಗ್ರಾ.ಪಂ.ನ ದೇಶಮೂಲೆ ತನಕ ಸುಮಾರು 9 ಕಿ.ಮೀ. ವ್ಯಾಪ್ತಿಯಲ್ಲಿ ಸೌರ ವಿದ್ಯುತ್ ಬೇಲಿ (ಸೋಲಾರ್ ಫೆನ್ಸಿಂಗ್) ಅಳವಡಿಸಲಾಗಿತ್ತು.

ಆದರೆ ಈ ಸೌರ ಬೇಲಿಯನ್ನೇ ಸಂಪೂರ್ಣವಾಗಿ ನಾಶಪಡಿಸಿರುವ ಕಾಡುಕೋಣಗಳ ಹಿಂಡು ನೇರವಾಗಿ ಕೃಷಿಭೂಮಿಗೆ ಲಗ್ಗೆಯಿಡುತ್ತಿರುವುದು ಸ್ಥಳೀಯಾಡಳಿತ ಸಂಸ್ಥೆ ಮತ್ತು ರೈತರಿಗೆ ತಲೆನೋವಾಗಿ ಪರಿಣಮಿಸಿದೆ. ಲಕ್ಷಾಂತರ ರೂ. ವೆಚ್ಚದ ಸೌರ ಬೇಲಿ ನಿರ್ಮಿಸಿದ್ದರೂ ಕಾಡುಪ್ರಾಣಿಗಳನ್ನು ತಡೆಯಲು ಸಾಧ್ಯವಾಗುತ್ತಿಲ್ಲವೆಂದು ಕೃಷಿಕರು ಮತ್ತು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಕ್ಷಣವೇ ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾಡುಕೋಣಗಳನ್ನು ನಾಡಿನಿಂದ ಕಾಡಿಗೆ ಅಟ್ಟಲು ಮತ್ತು ಕೃಷಿಭೂಮಿಯ ಸಂರಕ್ಷಣೆಗೆ ಕಟ್ಟುನಿಟ್ಟಿನ ವ್ಯವಸ್ಥಾ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದಲ್ಲಿ ದುರಂತ

ಕೆರೆಗೆ ಬಿದ್ದು ಅವಳಿ ಜವಳಿ ಮಕ್ಕಳು ಮೃತ್ಯು

ಸುಳ್ಯ: ಸುಳ್ಯ ತಾಲೂಕಿನ ಮುರುಳ್ಯ ಗ್ರಾಮದ ಕಡೀರ ಎಂಬಲ್ಲಿ ಅವಳಿ ಜವಳಿ ಮಕ್ಕಳಿಬ್ಬರು ಕೆರೆಗೆ ಬಿದ್ದು ಮೃತಪಟ್ಟ ಘಟನೆ ಶನಿವಾರ ಸಂಜೆ ನಡೆದಿದೆ.

ವಸಂತ–ದಿವ್ಯ ದಂಪತಿಯ ಮಕ್ಕಳಾದ ಯಸ್ವಿನ್ ಮತ್ತು ಜಸ್ವಿನ್(5) ಮೃತಪಟ್ಟ ಪುಟಾಣಿಗಳು.

ಪೋಷಕರು ಕೆಲಸಕ್ಕೆ ತೆರಳಿದ್ದ ವೇಳೆಯಲ್ಲಿ ಸಂಜೆ ಸುಮಾರು 5.30 ರಿಂದ 5.45 ರ ವೇಳೆಗೆ ಶಾಲೆಯಿಂದ ಮರಳಿ ಮನೆಗೆ ಬಂದಿದ್ದ ಮಕ್ಕಳು ಕೆರೆಯ ಬಳಿಗೆ ತೆರಳಿದ್ದು ಈ ವೇಳೆಯಲ್ಲಿ ಈ ಅವಘಡ ನಡೆದಿದೆ ಎಂದು ಶಂಕಿಸಲಾಗಿದೆ.



ಮೃತದೇಹವನ್ನು ಸಂಜೆ ಸುಮಾರು 7.45ರ ವೇಳೆಗೆ ಸುಳ್ಯ ಅಗ್ನಿಶಾಮಕ ದಳ ಸಿಬ್ಬಂದಿಗಳು ಹೊರತೆಗೆದಿದ್ದು ಮರಣೋತ್ತರ ಪರೀಕ್ಷೆಗಾಗಿ ಸಾಗಿಸಲಾಗಿದೆ. ಈ ಕುರಿತು ಪ್ರಕರಣ ದಾಖಲಾಗಿದೆ.

ಸುದ್ದಿ ತಿಳಿದು ಪರಿಸರದಲ್ಲಿ ಜನರು ಭಾರೀ ಸಂಖ್ಯೆಯಲ್ಲಿ ಸೇರಿದ್ದರು. ಕಂದಮ್ಮಗಳನ್ನು ಕಳೆದುಕೊಂಡ ಕುಟುಂಬಸ್ಥರ ರೋಧನ ಮುಗಿಲು ಮುಟ್ಟಿತ್ತು.

ಮಂಗಳೂರಿನ ಜಿಲ್ಲಾ ಕಾರಾಗೃಹದ ಗೋಡೆಗಳಿಗೆ ಕಲೆಯ ಸ್ಪರ್ಶ ನೀಡಿದ ಹವ್ಯಾಸಿ ಕಲಾವಿದ ಸುರೇಂದ್ರನ್ | ಪ್ರತಿಭೆ ಪ್ರೋತ್ಸಾಹಿಸುತ್ತಿರುವ ಜೈಲು ಅಧೀಕ್ಷಕರು

ನೋಡುಗರ ಸೆಳೆಯುತ್ತಿದೆ ಕೈದಿಯ ಕೈಯಲ್ಲರಳಿದ ಬಗೆ ಬಗೆಯ ಸುಂದರ ಚಿತ್ರಗಳು

ದಿಗಂತ ವಿಶೇಷ

ಮಂಗಳೂರು: ಬಂದೀಖಾನೆಗಳೆಂದರೆ ಮನಃ ಪರಿವರ್ತನೆಯ ಕೇಂದ್ರವೂ ಹೌದು. ಜೈಲು ಸೇರುವ ಮಂದಿ ಹೊರ ಬಂದ ಬಳಿಕ ಹಳೆಯದನ್ನೆಲ್ಲಾ ಮರೆತು ಹೊಸ ಬದುಕುಕೊಂಡದ್ದೂ ಇದೆ. ಮಂಗಳೂರಿನ ಕೊಡಿಯಾಲ್‌ಬೈಲ್‌ನಲ್ಲಿರುವ ಜಿಲ್ಲಾ ಕಾರಾಗೃಹ ಕೂಡ ಮನಃಪರಿವರ್ತನೆಯ ಕೇಂದ್ರವಾಗಿದೆ. ವಿವಿಧ ಕಾರಣದಿಂದ ಕೈದಿಗಳಾಗಿ ಇಲ್ಲಿ ಬರುವ ಮಂದಿಯ ಮನಃಪರಿವರ್ತನೆಯ ಕೆಲಸವನ್ನು ಇಲ್ಲಿ ಮಾಡಲಾಗುತ್ತಿದೆ.

ಕಲೆಯ ಕಳೆ ಪಡೆದ ಗೋಡೆಗಳು!

ಇತ್ತೀಚೆಗೆ ಯಾವುದೋ ಕಾರಣದಿಂದ ಜೈಲು ಸೇರಿದ ವ್ಯಕ್ತಿಯೊಬ್ಬನಿಂದಾಗಿ ಮಂಗಳೂರು ಜೈಲಿನ ಕಳೆ ಮತ್ತಷ್ಟು ಹೆಚ್ಚಿದೆ! ಕಾರಾಗೃಹದ ಭದ್ರಗೋಡೆಗಳು ಬಗೆ ಬಗೆಯ ಚಿತ್ರಣಗಳಿಂದಾಗಿ ಜೀವಕಳೆ ಪಡೆದುಕೊಂಡಿದ್ದು, ಅಲ್ಲಿ ಸೇರಿರುವ ಕೈದಿಗಳೂ ಅದನ್ನು ಚಕಿತಚಿತ್ತರಾಗಿ ನೋಡುವಂತೆ ಮಾಡಿದೆ. ಇದಕ್ಕೆ ಕಾರಣ ಆ ಕಲಾವಿದ!

ಕಲಾವಿದನೊಬ್ಬ ಎಲ್ಲೇ ಹೋದರೂ ತನ್ನ ಕಲೆಯನ್ನು ಮರೆಯುವುದಿಲ್ಲ. ಚಿತ್ರವೊಂದಕ್ಕೆ ಬಣ್ಣ ತುಂಬಿ ಜೀವ ತುಂಬುವಲ್ಲಿ ಆತ ಸಾರ್ಥಕ್ಯವನ್ನು ಕಾಣುತ್ತಾನೆ. ತಾನಂದುಕೊಂಡಂತೆ ಚಿತ್ರವೊಂದು ಪಡಿಮೂಡಿದಾಗ ಆತನಿಗಾಗುವ ಖುಷಿ ಅಷ್ಟಿಷ್ಟಲ್ಲ. ಅದನ್ನು ಹವ್ಯಾಸಿ ಕಲಾವಿದ ಸುರೇಂದ್ರನ್ ಎಂಬವರು ಮಾಡುತ್ತಿದ್ದಾರೆ. ಆದರೆ ಸದ್ಯಕ್ಕಿವರು ವಿಚಾರಣಾ ಕೈದಿ!

ಯಾವುದೋ ಕಾರಣದಿಂದ ಆರೋಪಿಯಾಗಿ ಮಂಗಳೂರು ಜೈಲು ಸೇರಿದ್ದ ಸುರೇಂದ್ರನ್ ದಿನವಿಡೀ ಮಂಕಾಗಿಯೇ ಇರುತ್ತಿದ್ದರಂತೆ. ಇದನ್ನು ಗಮನಿಸಿದ ಜೈಲು ಅಧೀಕ್ಷಕ ಶರಣ ಬಸಪ್ಪ ಅವರು ಕರೆದು ಮಾತಾಡಿಸಿದ್ದಾರೆ. ಆಗ ಸುರೇಂದ್ರನ್‌ನ ಹವ್ಯಾಸದ ಕುರಿತು ಗೊತ್ತಾಗಿದೆ. ತಕ್ಷಣ ಅಧೀಕ್ಷಕರು ಆತನ ಪ್ರತಿಭೆಯನ್ನು ಒರೆ ಹಚ್ಚುವ ಕೆಲಸ ಮಾಡಿದ್ದಾರೆ. ಕ್ಷಣಾರ್ಧದಲ್ಲಿ ಆತ ಬಿಡಿಸಿದ ಚಿತ್ರವೊಂದು ಅಧೀಕ್ಷಕರ ಗಮನ ಸೆಳೆದಿದ್ದು, ಜೈಲು ಗೋಡೆಗಳ ಮೇಲೆ ವಿವಿಧ ಚಿತ್ರಗಳನ್ನು ಬಿಡಿಸುವಂತೆ ಕೇಳಿಕೊಂಡಿದ್ದಾರೆ. ಖುಷಿಯಿಂದಲೇ ಒಪ್ಪಿಕೊಂಡಿರುವ ಸುರೇಂದ್ರನ್ ಇದೀಗ ಮಂಗಳೂರು ಜೈಲಿನೊಳಗೆ ಹಲವು ರೀತಿಯ ಚಿತ್ರಣಗಳ ಮೂಲಕ ಜೈಲಿಗೆ ಕಲೆಯ ಸ್ಪರ್ಶ ನೀಡಿದ್ದಾರೆ. ಇವರಿಗೆ ಕಲೆಯ ಆಸಕ್ತಿ ಉಳ್ಳ ವಿನೋದ್ ಮತ್ತು ಶಾಕಿರ್ ಎಂಬ ಕೈದಿಗಳೂ ಕೂಡ ಸಾಥ್ ನೀಡುತ್ತಿದ್ದಾರೆ.





ಗಾಂಧಿ, ಬೋಸ್ ಆಕರ್ಷಣೆ

ಕಲಾವಿದ ಸುರೇಂದ್ರನ್ ಅವರು ಬಿಡಿಸಿದ ಮಹಾತ್ಮ ಗಾಂಧಿ, ಸುಭಾಶ್‌ಚಂದ್ರ ಬೋಸ್, ಯಕ್ಷಗಾನದ ಚಿತ್ರಣಗಳು ಗಮನಸೆಳೆಯುತ್ತಿವೆ. ಬೃಹತ್ ಗೋಡೆಯ ಮೇಲೆ ಪಡಿಮೂಡಿರುವ ಆಳೆತ್ತರದ ಈ ಚಿತ್ರಣಗಳು ಎಲ್ಲರ ಆಕರ್ಷಣೆಯ ಕೇಂದ್ರಬಿಂದುಗಳಾಗಿವೆ.

ಕಲೆಯ ಗುರುತಿಸಿದ ಅಧೀಕ್ಷಕರು!

ಎಲ್ಲರೂ ಅವರವರ ಕೆಲಸ ಮಾಡುವುದಕ್ಕಷ್ಟೇ ಆದ್ಯತೆ ನೀಡುವುದು ಸಾಮಾನ್ಯ. ಆದರೆ ಮಂಗಳೂರಿನ ಜೈಲು ಅಧೀಕ್ಷಕರು ತಮ್ಮ ಕೆಲಸದ ಜೊತೆಗೆ ಪ್ರತಿಭಾವಂತರಿಗೆ ಅವಕಾಶಗಳನ್ನು ನೀಡುವ ಮೂಲಕ ಅವರ ಪ್ರತಿಭೆ ಕಮರದಂತೆ ನೋಡಿಕೊಳ್ಳುತ್ತಿರುವುದು ವಿಶೇಷ. ಕಲಾವಿದ ಸುರೇಂದ್ರನ್ ಅವರು ಚಿತ್ರಿಸುವ ಚಿತ್ರಗಳಿಗೆ ಬೇಕಾದ ಪೈಂಟ್, ಬ್ರಶ್ ಇತ್ಯಾದಿಗಳನ್ನು ತರಿಸಿ ಪ್ರೋತ್ಸಾಹಿಸುತ್ತಿದ್ದಾರೆ. ಅಲ್ಲದೆ ಹಾಡುವ ಹವ್ಯಾಸವುಳ್ಳವರಿಗೂ ಜೈಲಿನೊಳಗಿದ್ದುಕೊಂಡೇ ಪ್ರೋತ್ಸಾಹ ನೀಡುತ್ತಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Diganatha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 31° 25° | ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 21, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 5
ನುಳಿಪಾಡಿಯಲ್ಲಿ ಸರ್ವೀಸ್ ರಸ್ತೆಗೆ ಸಂಪರ್ಕ ಕಲ್ಪಿಸಲು ಕ್ರಮ


ಪುಟ 6
ಗಂಗೊಳ್ಳಿ: ಒಂದೆರೆಡು ವರ್ಷದಲ್ಲಿ ಕೆರೆಯೇ ಇಲ್ಲದ ಪರಿಸ್ಥಿತಿ ನಿರ್ಮಾಣ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸಂಸ್ಕಾರ ಸಂಘಟನೆ ಸೇವೆ
SPYSS MANGALURU (VALAYA)

SPYSS® Karnataka
ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ.) ಕರ್ನಾಟಕ, ಮಂಗಳೂರು



ಯೋಗ ಜಾಗೃತಿಗಾಗಿ
12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

International day of yoga 21st June
Yoga for Harmony & Peace



ಜೀವನದ ಪಯಣಕ್ಕೆ ಯೋಗದ ಬೆಳಕು

▸ ಶೈಲಶ್ರೀ ಬೆಳಿಯೂರು ಕಟ್ಟೆ

ಯೋಗವು ಭಾರತದ ಋಷಿಮುನಿಗಳ ಅಮೂಲ್ಯ ಕೊಡುಗೆಯಾಗಿದ್ದು ಅದರ ಮಹತ್ವವನ್ನು ವಿಶ್ವದಾದ್ಯಂತ ಸಾರುವ ಉದ್ದೇಶದಿಂದ 2014ರಲ್ಲಿ ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಪ್ರಸ್ತಾವದ ಮೇರೆಗೆ ವಿಶ್ವಸಂಸ್ಥೆಯು ಜೂನ್ 21ನ್ನು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಿಸಿದ್ದು, ಇದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ತರುವ ಸಂಗತಿಯಾಗಿದೆ. ಆರೋಗ್ಯವಂತ ವ್ಯಕ್ತಿಗಳಿಂದಲೇ ಸದೃಢ ಸಮಾಜ ಮತ್ತು ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ ಎಂಬ ದೂರದೃಷ್ಟಿಯಿಂದ ಯೋಗವನ್ನು ವಿಶ್ವದ ಜನತೆಗೆ ತಲುಪಿಸಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ.

ಇಂದಿನ ಆಧುನಿಕ ಜೀವನದಲ್ಲಿ ಮಕ್ಕಳು, ಗೃಹಿಣಿಯರು, ವೃದ್ಧರು, ಎಲ್ಲರೂ ಹೊರಗೆ ಎಲ್ಲ ಸೌಲಭ್ಯಗಳು ಹಾಗೂ ಸಂಪತ್ತುಗಳ ನಡುವೆ ಬದುಕುತ್ತಿದ್ದರೂ, ಒಳ ಮನಸ್ಸಿನಲ್ಲಿ ಒತ್ತಡ, ಏಕಾಂತ ಮತ್ತು ನೆಮ್ಮದಿಯ ಕೊರತೆಯನ್ನು ಅನುಭವಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸತ್ಯವಾಗಿದೆ. ಇದರಿಂದ ಹೊರಗೆ ಬರಲು ನಮ್ಮೊಳಗಿನ ಸಂತೋಷ, ನೆಮ್ಮದಿ ಮತ್ತು ಆತ್ಮಾನಂದವನ್ನು ಜಾಗೃತಗೊಳಿಸಿ ಜೀವನವನ್ನು ಸಾರ್ಥಕ ಗೊಳಿಸುವ ಶಕ್ತಿ ಯೋಗಕ್ಕಷ್ಟೇ ಇದೆ.

ಆರೋಗ್ಯಕರ ಬದುಕಿನ ದಾರಿ

ಬ್ರಹ್ಮ ಮುಹೂರ್ತದ ಪ್ರಶಾಂತ ವಾತಾವರಣ ಮತ್ತು ತಾಜಾ ಗಾಳಿಯಲ್ಲಿ ಉಸಿರಾಟದೊಂದಿಗೆ ನಿಯಮಿತವಾಗಿ ಮಾಡಿದಾಗ ಕೆಲವೇ ದಿನಗಳಲ್ಲಿ ದೇಹದಲ್ಲಿ ಹಗುರತೆ, ಚೈತನ್ಯ ಮತ್ತು ಮನಸ್ಸಿನಲ್ಲಿ ಸಂತೋಷದ ಅನುಭವವಾಗುತ್ತದೆ. ಯೋಗವು ದೇಹಕ್ಕೆ ವ್ಯಾಯಾಮ ನೀಡುವುದಷ್ಟೇ ಅಲ್ಲದೆ ಸರಿಯಾದ ಆಹಾರ ಮತ್ತು ನೀರಿನ ಸೇವನೆಯ ಸಂಸ್ಕೃತಿಯನ್ನು ಕಲಿಸಿ ಆರೋಗ್ಯಕರ ಬದುಕಿನ ದಾರಿ ತೋರಿಸುತ್ತದೆ. ಪ್ರತಿನಿತ್ಯ ಉಸಿರಾಟದೊಂದಿಗೆ ಯೋಗ ಅಭ್ಯಾಸ ಮಾಡುವುದರಿಂದ ರಕ್ತ ಸಂಚಾರ ಸುಧಾರಿಸುತ್ತದೆ, ಶ್ವಾಸಕೋಶಗಳ ಸಾಮರ್ಥ್ಯ ಹೆಚ್ಚುತ್ತದೆ, ಏಕಾಗ್ರತೆ ಮತ್ತು ನೆನಪಿನ ಶಕ್ತಿ ವೃದ್ಧಿಸುತ್ತದೆ, ಒತ್ತಡ, ಆತಂಕ ಮತ್ತು ಖಿನ್ನತೆಯನ್ನು ಕಡಿಮೆ ಮಾಡುತ್ತದೆ. ಉತ್ತಮ ನಿದ್ರೆ ಬರಲು ಸಹಾಯಮಾಡುತ್ತದೆ. ದೇಹದ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಬ್ರಾಹ್ಮಿ ಮುಹೂರ್ತದ ಅಮೂಲ್ಯ ಸಮಯದಲ್ಲಿ ನಿದ್ರೆಯಲ್ಲಿ ಸಿಗುವ ಕ್ಷಣಿಕ ಸುಖಕ್ಕಿಂತ ಶಾಶ್ವತ ಸಂತೋಷವು ಯೋಗದಂತಹ ಉತ್ತಮ ಜೀವನ ಶೈಲಿಯಲ್ಲಿದೆ ಎಂಬುದು ಅರಿವಾಗುತ್ತದೆ.

ಅಷ್ಟಾಂಗ ಯೋಗ–ಉತ್ತಮ ಜೀವನಕ್ಕೆ ಅಡಿಪಾಯ

ಶ್ರೀ ಪತಂಜಲಿ ಮಹರ್ಷಿಗಳು ಮಾನವ ಕುಲದ ಒಳಿತಿಗಾಗಿ ರಾಜಯೋಗದಲ್ಲಿ ಅಷ್ಟಾಂಗದ ಎಂಟು ಮೆಟ್ಟಿಲುಗಳನ್ನು ನೀಡಿದ್ದಾರೆ. ಅಷ್ಟಾಂಗ ಯೋಗದ ಎಂಟು ಅಂಗಗಳಲ್ಲಿ ಮೊದಲನೆಯದಾದ ಯಮ ಮತ್ತು ನಿಯಮಗಳಲ್ಲಿ ಬರುವಂತಹ ಅಂಶಗಳು ಉತ್ತಮ ಜೀವನಕ್ಕೆ ಅಡಿಪಾಯವಾಗಿವೆ. ಸತ್ಯ, ಅಹಿಂಸೆ, ಶೌಚ, ಸಂತೋಷ ಹೀಗೆ ಮೊದಲಾದ ಮೌಲ್ಯಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಂಡರೆ ಜೀವನದ ನಿಜವಾದ ಅರ್ಥವೇನು ಎಂಬುದು ನಮಗೆ ನಿಧಾನವಾಗಿ ಅರಿವಾಗುತ್ತದೆ. ನಮ್ಮಲ್ಲಿರುವ ದೋಷಗಳನ್ನು ಗುರುತಿಸಿ ನಮ್ಮನ್ನು ನಾವು ಉತ್ತಮ ರೀತಿಯಲ್ಲಿ ಬದಲಾಯಿಸಿಕೊಳ್ಳುವ ಅವಕಾಶ ದೊರೆಯುತ್ತದೆ. ಆಗ ನಾವು ಹೊರಗಿನ ಸುಖವನ್ನು ಹುಡುಕುವುದಕ್ಕಿಂತ, ನಮ್ಮೊಳಗಿನ ನೆಮ್ಮದಿ ಮತ್ತು ಸಂತೋಷವನ್ನು ಅನುಭವಿಸುತ್ತಾ, ಅರ್ಥಪೂರ್ಣ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ. ಯಮ ಮತ್ತು ನಿಯಮಗಳು ಜೀವನವನ್ನು ಅರ್ಥ ಮಾಡಿಕೊಳ್ಳುವ ಜ್ಞಾನದ ಮೊದಲ ಹೆಜ್ಜೆಗಳಾಗಿವೆ.

ಅಷ್ಟಾಂಗ ಯೋಗದ ಅರಿವಿನಿಂದ ಮೌನದತ್ತ ಪಯಣ

ಅಷ್ಟಾಂಗ ಯೋಗದ ಯಮ ನಿಯಮಗಳಲ್ಲಿ ಬರುವಂತಹ ಅಂಶಗಳ ಅಭ್ಯಾಸದಿಂದ ಜೀವನದ ಅನೇಕ ವಿಷಯಗಳನ್ನು ಸರಿಯಾದ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಬೆಳೆಯುತ್ತದೆ. ಆಗ ಮನಸ್ಸಿನ ಚಂಚಲತೆ ಕಡಿಮೆಯಾಗಿ ಯೋಚನೆಗಳಲ್ಲಿ ಸ್ಪಷ್ಟತೆ ಮೂಡುತ್ತದೆ. ಈ ಅರಿವಿನೊಂದಿಗೆ ಮೌನದ ಮಹತ್ವ ನಮಗೆ ತಿಳಿಯುತ್ತದೆ. ಯೋಗ ಶಿಕ್ಷಣ ಸಮಿತಿಯ ಯೋಗವು, ಜೀವನವನ್ನು ಕೇವಲ ಬದುಕುವುದಲ್ಲ, ಸಂತೋಷ, ನೆಮ್ಮದಿ ಮತ್ತು ತೃಪ್ತಿಯೊಂದಿಗೆ ಹೇಗೆ ಸಾಗಿಸಬೇಕು ಎಂಬುದನ್ನು ಸರಳವಾಗಿ ಕಲಿಸುವ ಅಮೂಲ್ಯ ಜೀವನ ವಿದ್ಯೆಯಾಗಿದೆ.

ಪ್ರಾಣಾಯಾಮ ಮತ್ತು ಧ್ಯಾನದ ಸಾಧನೆ

ಯೋಗಾಭ್ಯಾಸದಿಂದ ಮನಸ್ಸಿನಲ್ಲಿ ಏಕಾಗ್ರತೆ ಮತ್ತು ಮೌನ ಬೆಳೆಯತೊಡಗಿದಾಗ ಪ್ರಾಣಾಯಾಮ ಮತ್ತು ಧ್ಯಾನವನ್ನು ಇನ್ನಷ್ಟು ಆಳವಾಗಿ ಅಭ್ಯಾಸ ಮಾಡಲು ಸಾಧ್ಯವಾಗುತ್ತದೆ. ಪ್ರಾಣಾಯಾಮದ ಮೂಲಕ ಸರಿಯಾದ ರೀತಿಯಲ್ಲಿ ದೀರ್ಘ ಮತ್ತು ಸಮತೋಲನಯುತ ಉಸಿರಾಟ ಮಾಡುವುದನ್ನು ಯೋಗದಿಂದ ಕಲಿಯುತ್ತೇವೆ. ಇದರ ಫಲವಾಗಿ ದೇಹಕ್ಕೆ ಹೆಚ್ಚಿನ ಚೈತನ್ಯ, ಮನಸ್ಸಿಗೆ ಶಾಂತಿ, ದೊರೆತು, ಆರೋಗ್ಯವನ್ನು ಕಾಪಾಡಿಕೊಳ್ಳುವ ಮಹತ್ವದ ಅರಿವು ಮೂಡುತ್ತದೆ.

ಯೋಗ–ಸಾರ್ಥಕ ಜೀವನದ ದಾರಿ ದೀಪ"

ನಾವು ಯೋಗವನ್ನು ನಿಯಮಿತವಾಗಿ ಅಧ್ಯಯನ ಮಾಡಿ ಜೀವನದಲ್ಲಿ ಅಳವಡಿಸಿಕೊಂಡಾಗ, ಸರಿಯಾದ ಆಹಾರ ಪದ್ಧತಿ, ಮನಸ್ಸಿನ ನೆಮ್ಮದಿ, ಸಮಯೋಚಿತ ನಿದ್ರೆ, ಶಿಸ್ತಿನ ದಿನಚರಿ, ಸಕಾರಾತ್ಮಕ ಚಿಂತನೆ, ಮನಸ್ಸಿನ ನೆಮ್ಮದಿ ಮತ್ತು ಆರೋಗ್ಯಕರ ಜೀವನ ಶೈಲಿಯ ಮಹತ್ವ ಅರಿವಾಗಿ ಪರಿಪೂರ್ಣ ಜೀವನವನ್ನು ನಡೆಸುವ ಜ್ಞಾನ ದೊರೆಯುತ್ತದೆ. ಇಂದಿನ ಯಾಂತ್ರಿಕ ಜೀವನದಲ್ಲಿ ಮನುಷ್ಯನು ದಿನವಿಡೀ ಕೆಲಸ, ಜವಾಬ್ದಾರಿ ಮತ್ತು ಒತ್ತಡಗಳ ನಡುವೆ ಸಿಲುಕಿಕೊಂಡಿದ್ದಾನೆ. ಎಷ್ಟೇ ಸಾಧನೆ, ಸಂಪತ್ತು ಮತ್ತು ಸೌಲಭ್ಯಗಳಿದ್ದರೂ ಆರೋಗ್ಯವಿಲ್ಲದ ಅವೆಲ್ಲವೂ ವ್ಯರ್ಥ; ಆದ್ದರಿಂದ ಆರೋಗ್ಯ, ನೆಮ್ಮದಿ ಮತ್ತು ಸಂತೋಷವನ್ನು ಕಾಪಾಡಿಕೊಳ್ಳಲು ಯೋಗವು ಇಂದಿನ ಯುಗದಲ್ಲಿ ಪ್ರತಿಯೊಬ್ಬರಿಗೂ ತುಂಬಾ ಅಗತ್ಯವಾಗಿದೆ.

ನಾವು ಪ್ರತಿನಿತ್ಯ ಯೋಗವನ್ನು ನಮ್ಮ ಜೀವನದ ದಿನಚರಿಯ ಅವಿಭಾಜ್ಯ ಭಾಗವಾಗಿಸಿಕೊಂಡಾಗ, ಜೀವನದ ನಿಜವಾದ ಸತ್ಯ, ಸುಖ ಮತ್ತು ನೆಮ್ಮದಿ ಅರ್ಥವನ್ನು ಅರಿಯಲು ಸಾಧ್ಯವಾಗುತ್ತದೆ. ಯೋಗದ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ವ್ಯಕ್ತಿಗಳಾಗಿ, ಉತ್ತಮ ಸಮಾಜ ಮತ್ತು ಉಜ್ವಲ ರಾಷ್ಟ್ರವನ್ನು ನಿರ್ಮಿಸಲು ನಾವೆಲ್ಲರೂ ಕೈಜೋಡಿಸೋಣ.

ವಿಶ್ವಯೋಗ ದಿನದ ಕಾರ್ಯಕ್ರಮಕ್ಕೆ ಸ್ವಾಗತ ಬಯಸುವ

ಸುತ್ತಮುತ್ತ

ಇಂದು ವಿಶ್ವಯೋಗ ದಿನಾಚರಣೆ

ಮುಲ್ಕಿ: ರೋಟರಿ ಕ್ಲಬ್ ಬೈಕಂಪಾಡಿ, ಜೆಸಿಐ ಸುರತ್ಕಲ್, ಪ್ರಿಯದರ್ಶಿನಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಹಳೆಯಂಗಡಿ, ಪೂಜಾ ಫ್ರೆಂಡ್ಸ್ ಹಳೆಯಂಗಡಿ, ಶ್ರೀ ಓಂಕಾರೇಶ್ವರಿ ಮಂದಿರ ತೋಕೂರು ಮತ್ತು ಒಂಬತ್ತು ಮಾಗಣೆ ಮುಂಡಾಲ ಸಮಾಜ ಸೇವಾ ಟ್ರಸ್ಟ್ ತೋಕೂರುನ ಸಹಕಾರದಲ್ಲಿ 10ನೇ ತೋಕೂರಿನ ಫೇಮಸ್ ಯೂತ್ ಕ್ಲಬ್ ಮತ್ತು ಮಹಿಳಾ ಮಂಡಲದ ಪ್ರಾಯೋಜಕತ್ವದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವು ತೋಕೂರಿನ ಶ್ರೀ ಓಂಕಾರೇಶ್ವರಿ ಮಂದಿರದ ವಠಾರದಲ್ಲಿ ಜರಗಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಗುರುರಾಜ್ ಎಸ್. ಪೂಜಾರಿ ವಹಿಸಲಿದ್ದು, ಕೆಂಚನಕೆರೆಯ ಯೋಗ ತರಬೇತಿ ಕೇಂದ್ರದ ಯೋಗ ಗುರು ಯಾದವ ದೇವಾಡಿಗ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಲಿದ್ದಾರೆ. ಪಡುಪಣಂಬೂರು ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ರಾಮಕೃಷ್ಣ ಐತಾಳ್, ರೋಟರಿ ಕ್ಲಬ್ ಬೈಕಂಪಾಡಿಯ ಅಧ್ಯಕ್ಷ ಕಶ್ಯಪ್ ಪ್ರಭು,ಜೆಸಿಐ ಸುರತ್ಕಲ್‌ನ ಅಧ್ಯಕ್ಷ ಅಶೋಕ್ ಎನ್ , ಪ್ರಿಯದರ್ಶಿನಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಹಳೆಯಂಗಡಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುದರ್ಶನ್, ಪೂಜಾ ಫ್ರೆಂಡ್ಸ್ ಹಳೆಯಂಗಡಿಯ ಜೈ ಕೃಷ್ಣ ಕೋಟ್ಯಾನ್, ಶ್ರೀ ಓಂಕಾರೇಶ್ವರಿ ಮಂದಿರ ತೋಕೂರು ಮತ್ತು ಮತ್ತು ಒಂಬತ್ತು ಮಾಗಣೆ ಮುಂಡಾಲ ಸಮಾಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ಸದಾಶಿವ ಕುಂದರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಜೂ.23ರಂದು ವಿದ್ಯುತ್ ವ್ಯತ್ಯಯ

ಮಂಗಳೂರು: ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೂಡಬಿದ್ರೆ ಪೇಟೆ, ಗಾಂಧಿನಗರ, ಮಹಾವೀರ ಕಾಲೇಜ್, ವಿವೇಕಾನಂದ ನಗರ, ಸ್ವರಾಜ್ ಮೈದಾನ, ಒಂಟಿಕಟ್ಟೆ, ಕಡಲಕೆರೆ, ಪಿಲಿಪಂಜರ, ನಾಗರಕಟ್ಟೆ, ಅರಮನೆಬಾಗಿಲು, ಜ್ಯೋತಿನಗರ, ಜೈನ್ ಪೇಟೆ, ಮಹಾವೀರ ಕಾಲೇಜ್ ರೋಡ್, ಪುಚ್ಚೆಮೊಗರು ವಾಟರ್ ಸಪ್ಲೈ, ಮಾಸ್ತಿಕಟ್ಟೆ ಶೇಡಿಗುರಿ, ಹೊಸಬೆಟ್ಟು, ಇರುವೈಲು, ಹೊಸ್ಮಾರ್ ಪದವು ಕೊನ್ನೆಪದವು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.23ರಂದು ಬೆಳಿಗ್ಗೆ 9.30ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕುಲಶೇಖರ, ತುಂಗನಗರ

ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ, ಕೆಎಚ್‌ಬ್‌ಬಿ ಕಾಲನಿ, ಕೆಎಚ್‌ಬಿ ಪಕ್ಕಲಡ್ಕ, ಕೆಎಚ್‌ಬಿ ಪ್ರಗತಿನಗರ, ಶಾಫಿ ಕ್ಲಿನಿಕ್, ಪಕ್ಕಲಡ್ಕ ಸ್ನೇಹಾ ಸ್ಕೂಲ್, ಜೆ.ಎಂ ರೋಡ್, ಆಲ್ವಿನ್ ಗೋದ್ರೆಜ್, ಆದರ್ಶ ಸ್ಕೂಲ್, ಆದರ್ಶನಗರ, ಬಬ್ಬುಸ್ವಾಮಿ ಟೆಂಪಲ್, ಬಟ್ರಬೆಟ್ಟು, ದರ್ಬಾರ್ ಗುಡ್ಡೆ, ಕಟ್ಟೆಪುಣಿ, ಫೈಸಲ್ ನಗರ, ಹೇಮಾವತಿನಗರ, ತುಂಗನಗರ, ಫಾರೆಸ್ಟ್ ಆಫೀಸ್ ಪಡೀಲ್, ಜಲ್ಲಿಗುಡ್ಡೆ, ಜಲ್ಲಿಗುಡ್ಡೆ ಜಯನಗರ, ಜಲ್ಲಿಗುಡ್ಡೆ ಪೋಸ್ಟ್ ಆಫೀಸ್, ಜಲ್ಲಿಗುಡ್ಡೆ ಪಂಚಾಯತ್, ಕೆ.ಬಿ.ಎಂ. ಕಲ್ಲಿಕಟ್ಟೆ, ಕರ್ಮಾರ್, ಬಜಾಲ್ ನಂತೂರು, ಪಲ್ಲಿಕೆರೆ, ರಾಮದಾಸ್ ನಗರ, ಶಾಂತಿನಗರ, ವೀರನಗರ, ಪರ್ಲ ವೀರನಗರ, ವಿಜಯನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೂ.23ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಅಲ್ಪಸಂಖ್ಯಾತರ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮಂಗಳೂರು: ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳಿಂದ 2026-27ನೇ ಸಾಲಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿದಲ್ಲಿ 1 ನೇ ತರಗತಿಯಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಕರ್ನಾಟಕದ ನಿವಾಸಿಯಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ರೂ. 1 ಲಕ್ಷದ ಒಳಗಿರಬೇಕು. ಅರ್ಜಿಯನ್ನು ಎಸ್.ಎಸ್.ಪಿ ಪೋರ್ಟಲ್ ನಲ್ಲಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮಂಗಳೂರು(0824-2433078), ಬಂಟ್ವಾಳ (08255-232470), ಬೆಳ್ತಂಗಡಿ 0826-295335), ಪುತ್ತೂರು(08251-237078), ಸುಳ್ಯ (08257-230666) ಹಾಗೂ ಇಲಾಖೆಯ ವೆಬ್‌ಸೈಟ್ ಅಥವಾ ಸಹಾಯವಾಣಿ: 8277799990 ಗೆ ಸಂಪರ್ಕಿಸಿ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಶಾಮುಕ್ತ ಭಾರತ ಅಭಿಯಾನ ಸಪ್ತಾಹ

ಮುಲ್ಕಿ: ಕೇಂದ್ರ ಸರಕಾರದ ನಶಮುಕ್ತ ಭಾರತ ಅಭಿಯಾನ ಯೋಜನೆಯಡಿ ನಶಾಮುಕ್ತ ಭಾರತ ಅಭಿಯಾನ ಸಪ್ತಾಹ ಆಚರಣೆ ಪಂಜಿನಡ್ಕ ಅನುದಾನಿತ ಕೆ.ಪಿ.ಎಸ್.ಕೆ.ಸ್ಮಾರಕ ಪ್ರೌಢಶಾಲೆಯಲ್ಲಿ ನಡೆಯಿತು. ಇದೇ ಸಂದರ್ಭ ದೇಶವನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಲು ನಮ್ಮ ಕೈಯಲ್ಲಾದಷ್ಟು ಸಾಧ್ಯವಿರುವ ಸತತ ಪ್ರಯತ್ನವನ್ನು ಮಾಡುತ್ತೇನೆಂದು ಶಾಲೆಯ ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದರು. ಮತ್ತು ಮಾದಕ ವ್ಯಸನದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಮಕ್ಕಳಿಂದ ರಚಿತವಾದ ತಂಬಾಕು ನಿಂದ ಆಗುವ ದುಷ್ಪರಿಣಾಮ ಮೂಡಿಸುವ ಕಲಾ ಕೃತಿಯನ್ನು ಹಾಗೂ ಸಿಗರೇಟ್ ಸೇವನೆಯಿಂದಾಗುವ ದುಷ್ಪರಿಣಾಮಗಳ ಕಲಾಕೃತಿಗಳನ್ನು ಪ್ರದರ್ಶಿಸಲಾಯಿತು ಶಿಕ್ಷಕ ವೆಂಕಿ ಫಲಿಮಾರ್, ದೈಹಿಕ ಶಿಕ್ಷಕ ಕರುಣಾಕರ್ ಶಿವಪ್ರಸಾದ್ ಬಿ . ಅರ್ಪಣಾ ವಿ.ವಿ.ಶಿಲ್ಪ ನಿರೀಕ್ಷಾ .ಮಮತಾ .ದೀಪಕ್ ಕುಮಾರ್ ಉಪಸ್ಥಿತರಿದ್ದರು.

ಸುಳ್ಯ ಸಿಎ ಬ್ಯಾಂಕ್ ಅಜ್ಜಾವರ ಶಾಖೆಯ ನವೀಕೃತ ಕಚೇರಿ, ಸಭಾಭವನ ಉದ್ಘಾಟಿಸಿ ಕಿಶೋರ್ ಕುಮಾರ್ ಬಣ್ಣನೆ

ರೈತನ ಏಳಿಗೆಗಾಗಿ ಸಹಕಾರಿ ಸಂಘಗಳಿಂದ ಪ್ರಾಮಾಣಿಕ ಸೇವೆ

ಸುಳ್ಯ: ರೈತ ದೇಶದ ಬೆನ್ನೆಲುಬು. ರೈತರ ಏಳಿಗಾಗಿ ಸಹಕಾರಿ ಸಂಘಗಳು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಕ್ಲಪ್ತ ಸಮಯದಲ್ಲಿ ಸಾಲ ಸೌಲಭ್ಯಗಳನ್ನು ನೀಡುವುದರ ಜೊತೆಗೆ ಕನಿಷ್ಠ ಬಡ್ಡಿ ದರದಲ್ಲಿ ಸಾಲ ನೀಡುತ್ತಿರುವುದು ಕೃಷಿಪತ್ತಿನ ಅಭಿವೃದ್ಧಿಗೆ ಹಿಡಿದ ಕೈಗನ್ನಡಿಯಾಗಿದೆ. 'ಸೇವೆಯೆಂಬ ಯಜ್ಞದಲ್ಲಿ ಸಮಿದೆಯಂತೆ ಉರಿಯುವ' ಎಂಬ ಸಾಲಿನಂತೆ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿರುವುದು ಸ್ವಾಗತಾರ್ಹ ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ ಹೇಳಿದರು.

ಅವರು ಶನಿವಾರ ಸುಳ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಜ್ಜಾವರ ಶಾಖೆಯ ನವೀಕೃತ ಕಚೇರಿ ಹಾಗೂ ಸಭಾಭವನ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

ಕೃಷಿಕರು ಶಿಸ್ತಿನ ಸಿಪಾಯಿಗಳಾಗಿ ಪಡೆದ ಸಾಲಗಳನ್ನು ಸಕಾಲದಲ್ಲಿ ಪಾವತಿಸಿ ಕೃಷಿಪತ್ತನ್ನು ಬೆಳೆಸುವಲ್ಲಿ ಸದಸ್ಯರು ಸಹಕರಿಸಬೇಕು. ಇದೇ ಮಾದರಿಯಲ್ಲಿ ಪ್ರತಿ ಗ್ರಾಮ, ತಾಲೂಕುಗಳಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳು ಆಗುವಂತಾಗಲಿ ಎಂದು ಶುಭಹಾರೈಸಿದರು.



ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಅಧ್ಯಕ್ಷ ವಿಕ್ರಮ್ ಎ.ವಿ. ಮಾತನಾಡಿ, ದಾನಗೈದವರನ್ನು ನೆನೆಯುವುದು ಕರ್ತವ್ಯವಾಗಿದೆ. ಶಾಖೆಯಲ್ಲಿ ಲಿಫ್ಟ್ ಇಲ್ಲದ ಕಾರಣ ಮೆಟ್ಟಿಲು ಹತ್ತಲು ಕಷ್ಟ ಸಾಧ್ಯವಾಗಬಹುದು. ಸಂಘದ ಸಿಬ್ಬಂದಿಗಳು ಅಂತಹ ಹಿರಿಯರಿಗೆ ನೆರವಾಗಲಿದ್ದಾರೆ. ಅಲ್ಲದೇ ಮಹಾ ಸಭೆಯಲ್ಲಿ ಅನುಮತಿ ಪಡೆದಂತೆ ಆಸ್ತಿ ಖರೀದಿ ಮಾಡಲಿದ್ದು, ಮಹಾಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಸದಸ್ಯರು ಅಕಾಲಿಕವಾಗಿ ಮರಣ ಹೊಂದಿದಲ್ಲಿ ಅಂತಹ ಕುಟುಂಬಕ್ಕೆ ನೆರವಾಗುವ ನಿಟ್ಟಿನಲ್ಲಿ ಸಾಲ ಮನ್ನಾಕ್ಕೆ ಶ್ರಮಿಸುವುದಾಗಿ ಹೇಳಿದರು. ಹವಾ ನಿಯಂತ್ರಿತ ಕಚೇರಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು ನಿರ್ದೇಶಕ ಎಸ್. ಎನ್. ಮನ್ಮಥ ಉದ್ಘಾಟಿಸಿ ಶುಭಹಾರೈಸಿದರು. ಇದೇ ಸಂಧರ್ಭದಲ್ಲಿ ವೇದಿಕೆಯಲ್ಲಿ ಅಜ್ಜಾವರ ಗ್ರಾಮದಿಂದ ನಿರ್ದೇಶಕರಾಗಿ ಆಯ್ಕೆಗೊಂಡ ಮಾಜಿ ನಿರ್ದೇಶಕರಿಗೆ ಸನ್ಮಾನಿಸಲಾಯಿತು.

ಸಭಾ ವೇದಿಕೆಯಲ್ಲಿ ಮಂಗಳೂರು ಸಹಕಾರ ಸಂಘಗಳ ಉಪನಿಬಂಧಕ ರಮೇಶ್ ಎಚ್.ಎನ್,ಸಹಕಾರ ಸಂಘಗಳ ಸಹಾಯಕ ಉಪನಿಬಂಧಕ ರಘು ಎಸ್.ಎಂ, ಸಂಘದ ಉಪಾಧ್ಯಕ್ಷ ಚಂದ್ರಶೇಖರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುದರ್ಶನ್ ಎಸ್.ಪಿ, ನಿರ್ದೇಶಕರಾದ ರಾಮಚಂದ್ರ ಎನ್.ಎ, ಶಿವರಾಮ ಕೆ., ಹರಿಣಾಕ್ಷಿ ಬಿ., ಹೇಮಂತ್ ಕೆ.ಆರ್, ಪ್ರಬೋದ್ ಶೆಟ್ಟಿ ಮೇನಾಲ, ವಾಸುದೇವ ನಾಯಕ್ ಪಿ., ಕೇಶವ ಸಿ.ಎ, ಬಾಲಗೋಪಾಲ ಎಂ., ವೆಂಕಟ್ರಮಣ ಮುಳ್ಯ, ನವ್ಯ ಎ.ಸಿ, ಚಂದ್ರಶೇಖರ ಡಿಕೆ ಉಪಸ್ಥಿತರಿದ್ದರು. ಪ್ರಬೋದ್ ಶೆಟ್ಟಿ ಮೇನಾಲ ಸ್ವಾಗತಿಸಿ, ಉಪಾಧ್ಯಕ್ಷ ಚಂದ್ರಶೇಖರ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿರ್ದೇಶಕ ಕೇಶವ ಸಿ.ಎ ವಂದಿಸಿದರು. ಬಾಲಕೃಷ್ಣ ಮೇನಾಲ ಕಾರ್ಯಕ್ರಮ ನಿರ್ವಹಿಸಿದರು.

> **ರೈತರ ಪರ**
>
> ಸುಳ್ಯ ತಾಲೂಕಿನ ಪ್ರತಿಯೊಂದು ಸಹಕಾರಿ ಸಂಸ್ಥೆಗಳು ಇದೀಗ ರಾಷ್ಟ್ರೀಯ ಬ್ಯಾಂಕ್‌ಗಳ ಮಾದರಿಯಲ್ಲಿ ಪ್ರತಿಯೊಂದು ಸೇವೆಗಳನ್ನು ಸದಸ್ಯರಿಗೆ ಒದಗಿಸುತ್ತಿದೆ. ಜೊತೆಗೆ ಬೆಳೆ ವಿಮೆಗಳನ್ನು ಕೂಡ ಅಚ್ಚುಕಟ್ಟಾಗಿ ಪಾವತಿಸಿ ಸದಸ್ಯರಿಗೆ ಕಳೆದ ಬಾರಿ ಹರಸಾಹಸದ ಮೂಲಕ ಪಾವತಿಯಾಗುವಂತೆಯು ಸಹಕಾರಿ ಸಂಘಗಳು ಪ್ರಯತ್ನ ಪಟ್ಟಿದ್ದು, ಮುಂದೆಯು ಸಹಕಾರಿ ಸಂಘಗಳು ರೈತರ ಪರವಾಗಿ ನಿಲ್ಲಲಿದ್ದು, ಇಲ್ಲಿ ಸೇರಿದ ಜನಸಂಖ್ಯೆಯೇ ಸಿಎ ಬ್ಯಾಂಕ್ ಆಡಳಿತಕ್ಕೆ ಹಿಡಿದ ಕೈಗನ್ನಡಿ.
>
> ● **ಎಸ್.ಎನ್.ಮನ್ಮಥ,** ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಮಂಗಳೂರು ನಿರ್ದೇಶಕ

ಗುರುಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ನೂತನ ಪದಾಧಿಕಾರಿಗಳ ಪದಗ್ರಹಣ



ಕೈಕಂಬ: ಗುರುಪುರ ಬ್ಲಾಕ್ ಕಾಂಗ್ರೆಸ್ ಸಮಿತಿಯ ನೂತನ ಪದಾಧಿಕಾರಿಗಳ ಪದಗ್ರಹಣ, ಪಕ್ಷ ಸೇರ್ಪಡೆ, ಎಸ್‌ಐಆರ್ ಹಾಗೂ ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ಸಮಿತಿ ಅಧ್ಯಕ್ಷ ಪದ್ಮನಾಭ ಕೋಟ್ಯಾನ್(ಬಿಎಲ್‌ಪಿ) ಅವರ ಅಧ್ಯಕ್ಷತೆಯಲ್ಲಿ ಜೂ. 18ರಂದು ಗುರುಪುರ-ಕೈಕಂಬ ಪೊಳಲಿ ದ್ವಾರದ ಬಳಿಯ ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಚೇರಿಯಲ್ಲಿ ಕಾರ್ಯಕರ್ತರ ವಿಶೇಷ ಸಭೆ ನಡೆಯಿತು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಇನಾಯತ್ ಅಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ, ಮುಖ್ಯಮಂತ್ರಿ ಡಿಕೆಶಿ ಅವರು ಇದೇ ಪ್ರಥಮ ಬಾರಿಗೆ ಮಂಗಳೂರಿನಲ್ಲಿ ಸಂಪುಟ ಸಭೆ ನಡೆಸಲು ಉದ್ದೇಶಿಸಿದ್ದಾರೆ. ಬಿ.ಕೆ. ಹರಿಪ್ರಸಾದ್ ಅವರು ಕಾಂಗ್ರೆಸ್ ಆಸ್ತಿ. ಅವರ ಪದಗ್ರಹಣ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷ ಕಾರ್ಯಕರ್ತರು ಬೆಂಗಳೂರಿಗೆ ತೆರಳಲು ವ್ಯವಸ್ಥೆ ಮಾಡಲಾಗಿದೆ. ಎಂದರು.

ಬ್ಲಾಕ್ ಸಮಿತಿಯ ಅಧ್ಯಕ್ಷ ಪದ್ಮನಾಭ ಕೋಟ್ಯಾನ್, ಕಾಂಗ್ರೆಸ್ ಬಲಪಡಿಸುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು. ಕಾಂಗ್ರೆಸ್ ನಾಯಕಿ ಶಾಂತಲಾ ಗಟ್ಟಿ ಮತ್ತು ರಾಜ್‌ಕುಮಾರ್ ಶೆಟ್ಟಿ ಅವರು ಎಸ್‌ಐಆರ್ ವಿಷಯದಲ್ಲಿ ಮಾತನಾಡಿದರು. ಸಭೆಯಲ್ಲಿ ಕಾಂಗ್ರೆಸ್ ಪ್ರಮುಖರಾದ ಪ್ರಥ್ವೀರಾಜ್ ಆರ್. ಕೆ, ಗಿರೀಶ್ ಆಳ್ವ, ಗಣೇಶ್ ಗಂಜಿಮಠ, ಜಯಲಕ್ಷ್ಮೀ ಅಡ್ಡೂರು, ನೂರ್ ಅಹ್ಮದ್, ಬಾಷಾ ಗುರುಪುರ, ಕೃಷ್ಣ ಅಮೀನ್, ಸ್ವರೂಪ್ ರೈ, ಸಮಿತಿ ಪದಾಧಿಕಾರಿಗಳು, ಪಕ್ಷಪ್ರಮುಖರು, ಬಿಎಲ್‌ಎಗಳು, ಗ್ರಾಪಂ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು. ಈ ಸಂದರ್ಭ ಕಳೆದ 25 ವರ್ಷಗಳಿಂದ ಸಿಪಿಎಂನಲ್ಲಿದ್ದ ಜಯಪರಾರಿ ಅವರು ಕಾಂಗ್ರೆಸ್ ಸೇರ್ಪಡೆಗೊಂಡರು. ತಾಪಂ ಮಾಜಿ ಸದಸ್ಯ ಸುನಿಲ್ ಗಂಜಿಮಠ ಅವರು ನಿರೂಪಿಸಿದರು.

ಮಕ್ಕಳ ಪೋಷಣೆಯಲ್ಲಿ ತಂದೆಯ ಪಾತ್ರವೂ ಬಹುಮುಖ್ಯ: ರಮೇಶ ಕೆ.



ಮಂಗಳೂರು: ಶಕ್ತಿನಗರದ ಶಕ್ತಿ ರೆಸಿಡೆನ್ಸಿಯಲ್ ಶಾಲೆಯ ಶಕ್ತಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಫಾದರ್ಸ್ ಡೇ ಕಾರ್ಯಕ್ರಮ ಆಯೋಜಿಸಲಾಯಿತು.

ಸಂಸ್ಥೆಯ ಪ್ರಧಾನ ಸಲಹೆಗಾರ ರಮೇಶ ಕೆ. ಕಾರ್ಯಕ್ರಮದಲ್ಲಿ ಭಾಗವಹಿಸಿ, ಒಂದು ಮಗುವಿನ ಬೆಳವಣಿಗೆಯಲ್ಲಿ ತಾಯಿ ಶ್ರಮದ ಜೊತೆ ತಂದೆಯ ಪಾತ್ರವೂ ಬಹುಮುಖ್ಯವಾದುದು. ತಂದೆಯು ಅವರ ದುಡಿಮೆಯ ಜೊತೆ ಮಗುವಿಗೂ ಹೆಚ್ಚು ಸಮಯವನ್ನು ಕೊಟ್ಟು ಅವರನ್ನು ಪ್ರೋತ್ಸಾಹಿಸುತ್ತಿತ್ತಾರೆ. ಇಂದು ಕಾರ್ಯಕ್ರಮದಲ್ಲಿ ಎಲ್ಲಾ ಮಕ್ಕಳ ತಂದೆಯಂದಿರು ಖುಷಿ ಯಿಂದ ಭಾಗವಹಿಸಿರುವುದು ಅಭಿನಂದನೀಯವಾಗಿದೆ ಎಂದು ಹೇಳಿದರು.

ಶಕ್ತಿ ರೆಸಿಡೆನ್ಸಿಯಲ್ ಶಾಲೆಯ ಪ್ರಾಂಶುಪಾಲೆ ಡಾ. ಸುರೇಖಾ ಭಟ್ ಮಾತನಾಡಿ, ಮಗುವಿಗೆ ಸಂಸ್ಕಾರವನ್ನು ಶಾಲೆಯಲ್ಲಿ ಶಿಕ್ಷಕರು ಮತ್ತು ಮನೆಯಲ್ಲಿ ಪೋಷಕರು ನೀಡಬೇಕು. ಮಗುವಿನ ಜೊತೆಯಲ್ಲಿಯೇ ಕುಟುಂಬ ಸದಸ್ಯರು ಒಟ್ಟಿಗೆ ಊಟ ಮಾಡುವುದರ ಮೂಲಕ ಕುಟುಂಬವನ್ನು ಬಲವರ್ದನೆ ಮಾಡಬೇಕು. ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸುವ ಕೆಲಸವನ್ನು ನಿರಂತರವಾಗಿ ನಾವೆಲ್ಲರೂ ಒಟ್ಟಾಗಿ ಮಾಡಬೇಕೆಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಕೆ.ಸಿ ನ್ಯಾಕ್ ವಹಿಸಿ ಶುಭ ಹಾರೈಸಿದರು. ರೇಣುಕ ಸ್ವಾಗತಿಸಿ, ಪೂಜ ವಂದಿಸಿ, ನಿರೂಪಿಸಿದರು.

ಮಂಗಳೂರು ಮಂಡಲ ಓಬಿಸಿ ಮೋರ್ಚಾದ ಕಾರ್ಯಕಾರಿಣಿ ಸಭೆ



ಬಂಟ್ವಾಳ: ಭಾರತೀಯ ಜನತಾ ಪಾರ್ಟಿ ಮಂಗಳೂರು ಮಂಡಲ ಓಬಿಸಿ ಮೋರ್ಚಾದ ಕಾರ್ಯಕಾರಿಣಿ ಸಭೆಯು ತೊಕ್ಕೊಟ್ಟಿನ ಪಕ್ಷದ ಕಚೇರಿಯಲ್ಲಿ ನಡೆಯಿತು.

ಮಂಗಳೂರು ಮಂಡಲದ ಓಬಿಸಿ ಮೋರ್ಚಾದ ಅಧ್ಯಕ್ಷ ಗಣೇಶ್ ಸುವರ್ಣ ತುಂಬೆ ಅವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಜಿಲ್ಲಾ ಓಬಿಸಿ ಮೊರ್ಚಾದ ಪ್ರಧಾನ ಕಾರ್ಯದರ್ಶಿ ಮೋನಪ್ಪ ದೇವಸ್ಯ ಅವರು ಮುಂದಿನ ದಿನಗಳಲ್ಲಿ ಓಬಿಸಿ ಮೋರ್ಚಾ ವತಿಯಿಂದ ನಡೆಸಯಬೇಕಾಸ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು. ಮಂಗಳೂರು ಮಂಡಲ ಓಬಿಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಶೇಖರ್ ಕಣೆರ್ ತೋಟ ಸ್ವಾಗತಿಸಿ, ಇನ್ನೊರ್ವ ಪ್ರಧಾನ ಕಾರ್ಯದರ್ಶಿ ಗಣೇಶ್ ಕಾಪಿಕಾಡು ವಂದಿಸಿದರು. ಹಿಂದುಳಿದ ಮೋರ್ಚಾದ ಪದಾಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಬಂಟರ ಭವನ ನಿರ್ಮಾಣ: ಆರ್ಥಿಕ ಕ್ರೋಢೀಕರಣಕ್ಕೆ ಮನೆ ಮನೆ ಭೇಟಿಗೆ ತೆರೆ



ಮಂಗಳೂರು: ಕಾವೂರು ಬಂಟರ ಸಂಘದ ಮತ್ತು ಕಟ್ಟಡ ಸಮಿತಿಯ ಪದಾಧಿಕಾರಿಗಳು ಕಳೆದ ಒಂದು ವರ್ಷದಿಂದ ಕಾವೂರು ಮಾಲಾಡಿ ಕೋರ್ಟ್ ಮುಖ್ಯ ರಸ್ತೆಯಲ್ಲಿ ಬಂಟರ ಭವನದ ಅಂತಿಮ ಕಾಮಗಾರಿಕೆ ನಡೆಯುತ್ತಿದ್ದು, ಈ ನಿಟ್ಟಿನಲ್ಲಿ ಪದಾಧಿಕಾರಿಗಳು ಬಂಟರ ಸಮುದಾಯ ಮತ್ತು ಗಣ್ಯರ ಆರ್ಥಿಕ ಸಹಾಯಕ್ಕಾಗಿ ಕಾವೂರು (ಪಳನೀರು, ದೇವಸ, ಗಾಂಧಿ ನಗರ, ಶಾಂತಿನಗರ, ಕುದುರೆಮುಖ ಕ್ವಾರ್ಟರ್ಸ್), ಮರಕಡ, ಕುಂಜತ್ತಬೈಲ್ (ವಿದ್ಯಾನಗರ, ಉರುಂದಾಡಿ), ಪಂಜಿಮೊಗರು, ಕೂಳೂರು (ಪಡುಕೋಡಿ, ಮಡಕಾನ), ಮಾಲಾಡಿ ಆಕಾಶಭವನ, ಕಾವೂರುಗುತ್ತು, ಮುಲ್ಲಕಾಡು, ಬೊಲ್ಪುಗುಡ್ಡೆ, ಪರ್ಲಗುರಿ, ದೇರೆಬೈಲು (ಬಾರೆಬೈಲು, ಮಾಲೆಮಾರ್, ಕೊಂಚಾಡಿ, ವ್ಯಾಸನಗರ), ಯೆಯ್ಯಾಡಿ, ಗುರುನಗರ, ಮುಗೋಡಿ, ಪದವಿನಂಗಡಿ, ಪಡುಶೆಡ್ಡೆ (ಬೊಂದೇಲ್, ಪಚ್ಚನಾಡಿ, ಸರಕಾರಿ ಕ್ವಾರ್ಟರ್ಸ್, ಕೃಷ್ಣನಗರ) ಮನೆ ಮನೆ ಭೇಟಿ ನೀಡುತ್ತಿದ್ದರು. ಇದರ ಅಂತಿಮ ಹಂತದ ಭೇಟಿ ಹಾಗೂ ಸಮಾರೋಪ ಕಾರ್ಯಕ್ರಮ ಕಟ್ಟಡ ಸಮಿತಿಯ ಅಧ್ಯಕ್ಷ ಡಿ. ಸುಧಾಕರ ಶೆಟ್ಟಿ ಮುಗೋಡಿ ಇವರ ನೇತೃತ್ವದಲ್ಲಿ ಇತ್ತೀಚೆಗೆ ನಡೆಯಿತು.

ಈ ಸಂದರ್ಭದಲ್ಲಿ ಹರಿಣಾಕ್ಷಿ ಮತ್ತು ರಾಮಚಂದ್ರ ಕಿಲ್ಲೆಮುಗೋಡಿ ಇವರು ತಲಾ ರೂಪಾಯಿ ಒಂದು ಲಕ್ಷ ದೇಣಿಗೆಯನ್ನು ಕಟ್ಟಡ ಸಮಿತಿಗೆ ಹಸ್ತಾಂತರಿಸಿದರು.

ಸಮಾರೋಪ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸುಧಾಕರ ಶೆಟ್ಟಿ ಮಾತನಾಡಿ ಬಂಟರ ಭವನವು ಸುಮಾರು ಹತ್ತು ಲಕ್ಷ ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದೆ. ಎಲ್ಲಾ ಬಂಟ ಭಾಂದವರು, ದಾನಿಗಳು ಆರ್ಥಿಕ ಪ್ರೋತ್ಸಾಹ ನೀಡಬೇಕಾಗಿ ವಿನಂತಿಸಿದರು. ಅಲ್ಲದೆ ಭವನದ ಕಾಮಗಾರಿಕೆ, ಸವಲತ್ತುಗಳು ಬಂಟರ ಸಮುದಾಯಕ್ಕೆ ಆಗುವ ಪ್ರಯೋಜನಗಳು ಈ ಬಗ್ಗೆ ವಿವರಿಸಿದರು.

ಈ ಸಂದರ್ಭದಲ್ಲಿ ಕಟ್ಟಡ ಮತ್ತು ಸಂಘದ ಪದಾಧಿಕಾರಿಗಳಾದ ಸುಧಾಕರ ಶೆಟ್ಟಿ ಆನಂದ ಶೆಟ್ಟಿ ಅವಿನಾಶ್ ನಾಯಕ್, ಸುಧಾಕರ ಆಳ್ವ, ಮಹಾಬಲ ಶೆಟ್ಟಿ, ವಿಠಲ ಆಳ್ವ, ಶಂಭು ಶೆಟ್ಟಿ, ರಮೇಶ್ ಹೆಗ್ಡೆ ರಾಮಚಂದ್ರ ಕಿಲ್ಲೆ, ದಿವಾಕರ ಶೆಟ್ಟಿ ಪ್ರಸಾದ್ ಶೆಟ್ಟಿ ಹರೀಶ್ ಆಳ್ವ ಮತ್ತಿತರರು ಉಪಸ್ಥಿತರಿದ್ದರು.

ನಿವೃತ್ತ ಪ್ರಾಂಶುಪಾಲ ಪ್ರೊ. ಬಾಲಕೃಷ್ಣ ಗಟ್ಟಿಗೆ ಶ್ರದ್ಧಾಂಜಲಿ, ನುಡಿನಮನ ಸಲ್ಲಿಕೆ

ಬಂಟ್ವಾಳ: ಇತ್ತೀಚೆಗೆ ನಿಧನ ಹೊಂದಿದ ಹಿರಿಯ ಪತ್ರಕರ್ತ, ನಿವೃತ್ತ ಪ್ರಾಂಶುಪಾಲ ಪ್ರೊ. ಬಾಲಕೃಷ್ಣ ಗಟ್ಟಿ ಅವರ ಸಾರ್ವಜನಿಕ ಶ್ರದ್ಧಾಂಜಲಿ ಸಭೆ, ನುಡಿನಮನ ಕಾರ್ಯಕ್ರಮ ಬಂಟ್ವಾಳ ಸ್ಪರ್ಶ ಕಲಾ ಮಂದಿರದಲ್ಲಿ ಬಂಟ್ವಾಳ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶುಕ್ರವಾರ ಸಂಜೆ ನಡೆಯಿತು.

ರಾಣಿ ಅಬ್ಬಕ್ಕ ತುಳು ಅಧ್ಯಯನ ಕೇಂದ್ರದ ಅಧ್ಯಕ್ಷ ಪ್ರೊ. ತುಕಾರಾಮ ಪೂಜಾರಿ ನುಡಿನಮನಸಲ್ಲಿಸಿ, ಗಟ್ಟಿಯವರ ನಡವಳಿಕೆ, ಅವರು ತೋರಿಸುತ್ತಿದ್ದ ಆತ್ಮೀಯತೆ,ವ್ಯಕ್ತಿತ್ವ ಅಪೂರ್ವವಾದುದು, ತುಳು ರಾಣಿ ಅಬ್ಬಕ್ಕ ಅಧ್ಯಯನ ಕೇಂದ್ರದ ಬೆಳವಣಿಗೆಯಲ್ಲೂ ಅವರ ಕೊಡುಗೆ ಅಪಾರ. ಅವರ ವ್ಯಕಿತ್ವ ಮುಂದಿನ ಪೀಳಿಗೆಗೆ ದಾರಿದೀಪವಾಗಲಿ ಎಂದು ಸ್ಮರಿಸಿಕೊಂಡರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಬಿ.ಎನ್. ಪುಷ್ಪರಾಜ್ ಮಾತನಾಡಿದರು. ಹಿರಿಯ ಪತ್ರಕರ್ತ ಜಯಾನಂದ ಪೆರಾಜೆ ಮಾತನಾಡಿ ತಾಲೂಕು ಪತ್ರಕರ್ತರ ಸಂಘದ ಸ್ಥಾಪನೆಯ ಕುರಿತು ಮಾತನಾಡಿದರು. ಹಿರಿಯ ಪತ್ರಕರ್ತ ವೆಂಕಟೇಶ ಬಂಟ್ವಾಳ ಅವರು ಗಟ್ಟಿಯರೊಂದಿಗೆ ವೃತ್ತಿ ಜೀವನವನ್ನು ನೆನಪಿಸಿಕೊಂಡರು. ಎಸ್.ವಿ.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಪಾಂಡುರಂಗ ನಾಯಕ್ ಮಾತನಾಡಿದರು. ಬಾಲಕೃಷ್ಣ ಗಟ್ಟಿ ಅವರ ಪುತ್ರ ಸುಕುಮಾರ ಗಟ್ಟಿ, ಬಂಟ್ವಾಳ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪ್ರಶಾಂತ್ ಪುಂಜಾಲಕಟ್ಟೆ, ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ವಿಶ್ವನಾಥ ಬಂಟ್ವಾಳ, ಬುಡಾ ಮಾಜಿ ಅಧ್ಯಕ್ಷ ಸದಾಶಿವ ಬಂಗೇರ,ಕವಿ ಅಬುಬಕ್ಕರ್ ಅಮ್ಮುಂಜೆ,ಬಂಟ್ವಾಳ ಜೇಸಿಸ್ ಅಧ್ಯಕ್ಷ ಕಿಶೋರ್ ಹಾಗೂ ಮತ್ತಿತರರಿದ್ದರು. ತಾಲೂಕು ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಮೌನೇಶ ವಿಶ್ವಕರ್ಮ ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಸಂದೀಪ್ ಸಾಲ್ಯಾನ್ ವಂದಿಸಿದರು. ಸಂಘದ ಸದಸ್ಯ ರತ್ನದೇವ್ ಪುಂಜಾಲಕಟ್ಟೆ, ಹರೀಶ್ ಮಾಂಬಾಡಿ, ವಾಮನ ಪೂಜಾರಿ ಪೊಳಲಿ ಸಹಕರಿಸಿದರು.



ಪಂಜ ದೇವಸ್ಥಾನದ ಕದಿರು ಗದ್ದೆಯಲ್ಲಿ ನೇಜಿ ನಾಟಿ ಸಂಭ್ರಮ



ಸುಳ್ಯ: ಪಂಜ ಸೀಮೆಯ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ಕದಿರು ಗದ್ದೆಯಲ್ಲಿ ನೇಜಿ ನಾಟಿ ಮಾಡುವ ಕಾರ್ಯಕ್ರಮ ಶನಿವಾರ ನಡೆಯಿತು.

ಜೆಸಿಐ ಪಂಜ ಪಂಚಶ್ರೀ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಸಹಕಾರದಲ್ಲಿ ನಡೆದ ನೇಜಿ ನಾಟಿ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಾಯದ ಕುರಿತು ವಿವರಿಸಲಾಯಿತು. ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್ ಕಾರ್ಯಕ್ರಮ ಉದ್ಘಾಟಿಸಿದರು. ಪಂಜ ಪಂಚಶ್ರೀ ಜೇಸಿ ಅಧ್ಯಕ್ಷ ದೇವಿಪ್ರಸಾದ್ ಚಿಕ್ಕುಳಿ ಅಧ್ಯಕ್ಷತೆ ವಹಿಸಿದ್ದರು. ಪರಿವಾರ ಪಂಜ ರೈತ ಉತ್ಪಾದಕ ಕಂಪೆನಿ ಅಧ್ಯಕ್ಷ ತೀರ್ಥಾನಂದ ಕೊಡೆಂಕಿರಿ, ಪಂಜ ರೈತ ಸಂಪರ್ಕ ಕೇಂದ್ರದ ಸಹಾಯಕ ತಾಂತ್ರಿಕ ವ್ಯವಸ್ಥಾಪಕಿ ಸ್ಮಿತಾ ಹೆಚ್. ಎನ್. ಮಾಹಿತಿ ನೀಡಿದರು. ಭಾರತ್ ಸ್ಕಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಬಿ.ಕೆ.ಮಾಧವ, ನಾಗತೀರ್ಥ ಶಾಲೆಯ ಮುಖ್ಯ ಶಿಕ್ಷಕಿ ಸರೋಜಿನಿ, ಕಾರ್ಯಕ್ರಮ ನಿರ್ದೇಶಕ ಮದನ್ ಕೊಲ್ಯ, ಪಂಜ ಪಂಚಶ್ರೀ ಜೇಸಿಯ ಮಾಜಿ ಅಧ್ಯಕ್ಷ ವಾಚಣ್ಣ ಕೆರೆಮೂಲೆ ಇದ್ದರು. ಬಾಳಿಲ, ಪಂಜ, ನಾಗತೀರ್ಥ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿ ಬೇಸಾಯದ ಪಾಠ ಕಲಿತರು. ಪಂಜ ಪಂಚಶ್ರೀ ಜೇಸಿ ಅಧ್ಯಕ್ಷ ದೇವಿಪ್ರಸಾದ್ ಚಿಕ್ಕುಳಿ ಸ್ವಾಗತಿಸಿ, ಕಾರ್ಯದರ್ಶಿ ಪ್ರಕಾಶ್ ಅಳ್ಳೆ ವಂದಿಸಿದರು.

ವಿಟ್ಲ: ಜೂ.24ರಂದು ಜನಸಂಪರ್ಕ ಸಭೆ

ಮಂಗಳೂರು: ಮೆಸ್ಕಾಂ ವಿಟ್ಲ ಉಪವಿಭಾಗ ಕಚೇರಿ ವ್ಯಾಪ್ತಿಯ ಜನ ಸಂಪರ್ಕ ಸಭೆಯು ಜೂ.24ಕ್ಕೆ ವಿಟ್ಲದ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಬೆಳಿಗ್ಗೆ 11ರಿಂದ 12ರವರೆಗೆ ನಡೆಯಲಿದ್ದು ಮೆಸ್ಕಾಂನ ಅಧಿಕಾರಿಗಳು ಭಾಗ ವಹಿಸಲಿದ್ದಾರೆ. ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಸಲ್ಲಿಸಲು ಅವಕಾಶವಿದ್ದು, ದೂರವಾಣಿ ಮೂಲಕವೂ 08255-239909 ಸಂಪರ್ಕಿಸಿ ದೂರು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿನೂತನ ಶೈಕ್ಷಣಿಕ ಸೇವಾ ಯೋಜನೆ ಅಂಗವಾಗಿ ವಿದ್ಯಾರ್ಥಿಗಳಿಗೆ ಆಕಾಂಕ್ಷಾ ಟ್ರಸ್ಟ್, 'ಗೆಟಿಕ್ಸ್‌ಹೆಲ್ತ್'ನಿಂದ ಆಸರೆ

ಪುತ್ತೂರು ತಾಲೂಕಿನ 1,100 ಗ್ರಾಮೀಣ ಮಕ್ಕಳಿಗೆ ಶಾಲಾ ಕಿಟ್ ವಿತರಣೆ

ಪುತ್ತೂರು: ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಆಕಾಂಕ್ಷಾ ಟ್ರಸ್ಟ್ ಹಾಗೂ ಗೆಟಿಕ್ಸ್ ಹೆಲ್ತ್ ಇಂಡಿಯಾ ಪ್ರೈ.ಲಿ. ಜಂಟಿ ಆಶ್ರಯದಲ್ಲಿ ವಿನೂತನ ಶೈಕ್ಷಣಿಕ ಸೇವಾ ಯೋಜನೆ ಹಮ್ಮಿಕೊಂಡಿದ್ದು, ತಾಲೂಕಿನ 8 ಗ್ರಾಮೀಣ ಶಾಲೆಗಳ ಒಟ್ಟು 1,100 ವಿದ್ಯಾರ್ಥಿಗಳಿಗೆ ಉಚಿತವಾಗಿ ಶಾಲಾ ಕಿಟ್‌ಗಳನ್ನು ವಿತರಿಸುವ ಮೂಲಕ ಮಕ್ಕಳ ಕಲಿಕೆಗೆ ಪ್ರೇರಣೆ ತುಂಬಿದೆ.

ಗೆಟಿಕ್ಸ್ ಹೆಲ್ತ್ ಸಂಸ್ಥೆಯ ಸಿ.ಎಸ್.ಆರ್. ಯೋಜನೆಯ ಆರ್ಥಿಕ ನೆರವಿನೊಂದಿಗೆ ಈ ಬೃಹತ್ ವಿತರಣಾ ಕಾರ್ಯಕ್ರಮ ಯಶಸ್ವಿಯಾಗಿ ಜರಗಿದೆ. ಗ್ರಾಮೀಣ ಭಾಗದ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಮನಗಂಡು, ಪ್ರತಿ ವಿದ್ಯಾರ್ಥಿಗೂ ಅವರ ತರಗತಿ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಉತ್ತಮ ಗುಣಮಟ್ಟದ ಶಾಲಾ ಬ್ಯಾಗ್, ನೋಟ್ ಪುಸ್ತಕಗಳು ಹಾಗೂ ಪೆನ್, ಪೆನ್ಸಿಲ್ ಸೇರಿದಂತೆ ಅಗತ್ಯ ಬರಹ ಸಾಮಗ್ರಿಗಳನ್ನು ಒಳಗೊಂಡ ಕಿಟ್‌ಗಳನ್ನು ಸಿದ್ಧಪಡಿಸಿ ವಿತರಿಸಲಾಗಿದೆ. ಶೈಕ್ಷಣಿಕ ವರ್ಷದ ಆರಂಭದಲ್ಲೇ ಈ ಕಿಟ್‌ಗಳನ್ನು ತಲುಪಿಸಿರುವುದರಿಂದ ಮಕ್ಕಳ ಕಲಿಕೆಗೆ ಸಕಾಲಿಕ ನೆರವು ಸಿಕ್ಕಂತಾಗಿದೆ.



ಆಕಾಂಕ್ಷಾ ಟ್ರಸ್ಟ್ ಅಪ್ರತಿಮ ಸೇವೆ

12 ವರ್ಷಗಳಿಂದ ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣ ಹಾಗೂ ಯುವಜನರ ಕೌಶಲ್ಯಾಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಆಕಾಂಕ್ಷಾ ಟ್ರಸ್ಟ್ ಈವರೆಗೆ 160ಕ್ಕೂ ಅಧಿಕ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮ ಆಯೋಜಿಸಿ ಮುನ್ನಡೆಯುತ್ತಿದೆ.

> ಗ್ರಾಮೀಣ ಶಾಲೆಗಳಲ್ಲಿ ಶೈಕ್ಷಣಿಕ ಸುಧಾರಣೆ ಹಾಗೂ ಗುಣಮಟ್ಟದ ಕಲಿಕೆಗೆ ನಿರಂತರ ಬೆಂಬಲ ನೀಡುತ್ತಾ ಬಂದಿದ್ದೇವೆ. ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಮತ್ತಷ್ಟು ವೇಗ ನೀಡಲು ಈ ಶಾಲಾ ಕಿಟ್‌ಗಳು ಅತ್ಯಂತ ಸಹಕಾರಿಯಾಗಲಿವೆ. ನಮ್ಮ ಈ ಸಾಮಾಜಿಕ ಕಳಕಳಿಗೆ ಹೆಗಲು ಕೊಟ್ಟು ಸಿ.ಎಸ್.ಆರ್. ನಿಧಿಯ ಮೂಲಕ ಬೆಂಬಲವಾಗಿ ನಿಂತ ಗೆಟಿಕ್ಸ್ ಹೆಲ್ತ್ ಇಂಡಿಯಾ ಸಂಸ್ಥೆಗೆ ನಾವು ಆಭಾರಿಯಾಗಿದ್ದೇವೆ.
>
> ● **ಡಾ. ಶ್ರೀಶ ಭಟ್,** ಸಂಸ್ಥಾಪಕರು, ಆಕಾಂಕ್ಷಾ ಟ್ರಸ್ಟ್

ಪುರಸ್ಕಾರದ ಗರಿ

ಆಕಾಂಕ್ಷಾ ಟ್ರಸ್ಟ್‌ನ ಈ ಗಮನಾರ್ಹ ಸಾಮಾಜಿಕ ಕೊಡುಗೆ ಗುರುತಿಸಿ, ಕರ್ನಾಟಕ ಸರಕಾರದ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆಯು ಸಂಸ್ಥೆಯನ್ನು ಅಧಿಕೃತವಾಗಿ ಪುರಸ್ಕರಿಸಿ ಸನ್ಮಾನಿಸಿದೆ.

ಸಂಸ್ಥೆಯು ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿರುವ ಗ್ರಂಥ ಮಿತ್ರ ತರಗತಿಗಳು, ಎನ್.ಎಂ.ಎಂ.ಎಸ್ ಪರೀಕ್ಷಾ ತರಬೇತಿ ಹಾಗೂ ಮಾನಸಿಕ ಆರೋಗ್ಯ ವೃದ್ಧಿಸುವ ಆಪ್ತ ಸಮಾಲೋಚನೆಯಂತಹ ಉತ್ಕೃಷ್ಟ ಸೇವಾ ಕಾರ್ಯಗಳು ಸಾರ್ವಜನಿಕ ವಲಯದಲ್ಲಿ ವ್ಯಾಪಕ ಶ್ಲಾಘನೆಗೆ ಪಾತ್ರವಾಗಿವೆ.

ಸುತ್ತ ಮುತ್ತ

ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ವಿರೋಧ

ಬಂಟ್ವಾಳ: ರಾಜ್ಯದ ವಿದ್ಯುತ್ ಸರಬರಾಜ ಕಂಪನಿಗಳನ್ನು ಹಂತಹಂತವಾಗಿ ಖಾಸಗೀಕರಣ ಗೊಳಿಸುವ ಪ್ರಕ್ರಿಯೆಗೆ ಮಾಜಿ ಬಂಟ್ವಾಳ ತಾಲೂಕು



ಪಂಚಾಯತ್ ಸದಸ್ಯ ಪ್ರಭಾಕರ ಪ್ರಭು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಕುರಿತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಿರುವ ಅವರು, ರಾಜ್ಯದಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಟಾಟಾ ಪವರ್‌ಸೇರಿದಂತೆ ಯಾವುದೇ ಖಾಸಗಿ ಕಂಪೆನಿಗಳಿಗೆ ವಹಿಸಿ ಕೊಡಬಾರದು ಅವರು ಒತ್ತಾಯಿಸಿದ್ದಾರೆ.

ಸಾರ್ವಜನಿಕ ಸೇವಾ ಮನೋಭಾವನೆಯೊಂದಿಗೆ ಕಾರ್ಯನಿರ್ವಹಿಸುವ ವಿದ್ಯುತ್, ಕುಡಿಯುವ ನೀರು, ಆರೋಗ್ಯ ಹಾಗೂ ರಸ್ತೆ ನಿರ್ಮಾಣದಂತಹ ಮೂಲಭೂತ ಸೇವೆಗಳು ಸರ್ಕಾರದ ನಿಯಂತ್ರಣ ದಲ್ಲಿಯೇ ಇರಬೇಕು ಎಂಬುದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯವಾಗಿದೆ ಎಂದು ಅವರು ತಿಳಿಸಿದ್ದಾರೆ. ಖಾಸಗಿ ಸಂಸ್ಥೆಗಳು ಸಲ್ಲಿಸಿರುವ ಅರ್ಜಿಗಳನ್ನು ತಿರಸ್ಕರಿಸಿ, ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನೇ ಮುಂದುವರಿಸಬೇಕು ಎಂದು ಅವರು ಮನವಿಯಲ್ಲಿ ಆಗ್ರಹಿಸಿದ್ದಾರೆ.

ತುಂಬೆ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘ ರಚನೆ

ಬಂಟ್ವಾಳ: ತುಂಬೆ ಪದವಿ ಪೂರ್ವ ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಸತ್ತಿನ ಚುನಾವಣೆ ಯಶಸ್ವಿಯಾಗಿ ನಡೆಯಿತು.





ಚುನಾವಣೆಯಲ್ಲಿ ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿ ಮೊಹಮ್ಮದ್ ನಿಹಾದ್ ಅವರು ಅತ್ಯಧಿಕ ಮತಗಳನ್ನು ಪಡೆದು ವಿದ್ಯಾರ್ಥಿ ಸಂಸತ್ತಿನ ಅಧ್ಯಕ್ಷರಾಗಿ ಆಯ್ಕೆಯಾದರೆ, ಅದೇ ವಿಭಾಗದ ವಿದ್ಯಾರ್ಥಿನಿ ಫಾತಿಮತುಲ್ ಅಲೀಮಾ ಸನಾಮಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆಯ ಸಮಗ್ರ ಪ್ರಕ್ರಿಯೆಗೆ ರಾಜ್ಯಶಾಸ್ತ್ರ ಉಪನ್ಯಾಸಕರಾದ ದಿನೇಶ್ ಶೆಟ್ಟಿ ಅಳಿಕೆ ಮಾರ್ಗದರ್ಶನ ನೀಡಿದರು. ಚುನಾವಣಾಧಿ ಕಾರಿಯಾಗಿ ಸಾಯಿರಾಂ ಜೆ. ನಾಯಕ್ ಕೆ., ಸಹ ಚುನಾವಣಾಧಿಕಾರಿಗಳಾಗಿ ಶರತ್ ಆಳ್ವ ಚನಿಲ ಹಾಗೂ ಚಂದ್ರಶೇಖರ್ ಶೆಟ್ಟಿ ಕರ್ತವ್ಯ ನಿರ್ವಹಿಸಿದರು. ಮತಗಟ್ಟೆ ಅಧ್ಯಕ್ಷಾಧಿಕಾರಿಗಳಾಗಿ ಡಾ. ವಿಶ್ವನಾಥ ಪೂಜಾರಿ, ಅಬ್ದುಲ್ ರಹಿಮಾನ್ ಡಿ.ಬಿ., ಕವಿತಾ ಕೆ. ಬೇಬಿ,ಅಖಿಲಾ ನೀತಾಶ್ರೀ, ಪ್ರಫುಲ್ಲ ಶೆಟ್ಟಿ ಹಾಗೂ ಚಿತ್ರಾ ಅವರು ಚುನಾವಣಾ ಪ್ರಕ್ರಿಯೆಯನ್ನು ನಡೆಸಿಕೊಟ್ಟರು. ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ಸಹಕರಿಸಿದರು.

ಶ್ರೀ ಓಂಕಾರೇಶ್ವರ ದೇಗುಲದಲ್ಲಿ ಮಳೆಗಾಗಿ ವಿಶೇಷ ಪೂಜೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ನಿಗದಿತ ಅವಧಿಯಲ್ಲಿ ಬಾರದೇ ಇರುವು ದರಿಂದ ಹಾಗೂ ವಾಡಿಕೆಗಿಂತ ಮಳೆ ಕಡಿಮೆ ಆಗಿರುವುದರಿಂದ ಕೃಷಿ ಚಟುವಟಿಕೆಗಳಿಗೂ ಹಾಗೂ ಕುಡಿಯುವ ನೀರಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಸಕಾಲದಲ್ಲಿ ಮಳೆ ಉಂಟಾಗಿ ನಾಡಿಗೆ ಸುಭಿಕ್ಷೆ ಉಂಟು ಮಾಡಲಿ ಎಂದು ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಜೂ.22 ರಂದು ಬೆಳಗ್ಗೆ 11 ಗಂಟೆಗೆ ಮಳೆಗಾಗಿ ವಿಶೇಷ ಪೂಜೆಯನ್ನು ದೇವಾಲಯದ ವ್ಯವಸ್ಥಾಪನಾ ಸಮಿತಿಯಿಂದ ಏರ್ಪಡಿಸಲಾಗಿದೆ.

ಭಕ್ತಾದಿಗಳು ಮಳೆಗಾಗಿ ವಿಶೇಷ ಪೂಜಾ ಕಾರ್ಯ ಕ್ರಮದಲ್ಲಿ ಭಾಗವಹಿಸುವಂತೆ ಶ್ರೀ ಓಂಕಾರೇಶ್ವರ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ದೇವರಾಜು ಅವರು ಕೋರಿದ್ದಾರೆ.

ಕಾಪು ಉಪವಿಭಾಗ ಕಚೇರಿ: ಜನ ಸಂಪರ್ಕ ಸಭೆ

ಕಾಪು: ಮೆಸ್ಕಾಂನ ಕಾಪು ಉಪವಿಭಾಗ ಕಚೇರಿಯಲ್ಲಿ ಜೂ.24.ರಂದು ಬೆಳಿಗ್ಗೆ10.30 ರಿಂದ12.00 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದೆ. ಸಭೆಗೆ ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದು, ಈ ವೇಳೆ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲು ಗಳನ್ನು ಸ್ವೀಕರಿಸಲಾಗುವದು. ಈ ಕುರಿತು ಮಾಹಿತಿಗಾಗಿ ದೂರವಾಣಿಸಂಖ್ಯೆ 0820-2579977 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ವಿಶ್ವಯೋಗ ದಿನಾಚರಣೆಯ ಸಂಭ್ರಮ | ಪ್ರತಿ ಕ್ಷೇತ್ರದಲ್ಲೂ ಹೆಚ್ಚುತ್ತಿದೆ ಮನ್ನಣೆ

ಜನರ ಬದುಕಿಗೆ ಹೊಸ ಆಯಾಮ ಕೊಟ್ಟ ಯೋಗಾಭ್ಯಾಸ!

■ ರಾಜೇಶ್ ಪಟ್ಟೆ

ಪುತ್ತೂರು: ಭಾರತೀಯ ಪ್ರಾಚೀನ ವಿದ್ಯಾ ಕಲೆಯಾಗಿರುವ ಯೋಗಕ್ಕೆ ಇಂದು ಅಂತಾರಾಷ್ಟ್ರೀಯ ಮನ್ನಣೆ ದೊರಕಿದೆ. ನೂರಾರು ಯುವಕ-ಯುವತಿಯರು ಇಂದು ವಿದೇಶಗಳಲ್ಲಿ ಭಾರತೀಯ 'ಯೋಗ ಶಿಕ್ಷಣ' ನೀಡುವುದನ್ನು ತಮ್ಮ ಬದುಕಾಗಿಸಿಕೊಂಡಿದ್ದಾರೆ. ಯೋಗಾಭ್ಯಾಸಕ್ಕೆ ಮತ್ತೆ ಹೊಸ ಯೋಗ ತಂದುಕೊಟ್ಟ ಗೌರವ ದೇಶದ ಪ್ರಧಾನಿ ಮೋದಿಯವರಿಗೆ ಸಲ್ಲುತ್ತದೆ.

ಕೆಲ ವರ್ಗಕ್ಕೆ ಮಾತ್ರ ಸೀಮಿತವಾಗಿದ್ದ ಯೋಗ ಇದೀಗ ಸಾಮಾನ್ಯ ವರ್ಗದ ಜನರ ಬದುಕಿನಲ್ಲಿಯೂ ಹಾಸು ಹೊಕ್ಕಾಗಿ ಬೆಳೆದು ನಿಂತಿದೆ. ಗ್ರಾಮೀಣ ಭಾಗದಲ್ಲಿಯೂ ಯೋಗಕ್ಕೆ ಹೆಚ್ಚು ಆದ್ಯತೆ ದೊರೆಯುತ್ತಿದೆ. ಜೂ. 21 ವಿಶ್ವಯೋಗ ದಿನಾಚರಣೆ ಪ್ರಪಂಚದಾದ್ಯಂತ ಜನತೆಯ ಬದುಕಿಗೆ ಹೊಸ ಕಲ್ಪನೆ ತಂದಿದೆ.

ಮಾನವನ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಲು ಯೋಗದಂತಹ ವಿಧಾನ ಮತ್ತೊಂದಿಲ್ಲ. ಯೋಗದಿಂದ ಮಾನಸಿಕ ಶಾಂತಿ ಮತ್ತು ಏಕಾಗ್ರತೆ ಹೆಚ್ಚಾಗುತ್ತದೆ. ಮಾನಸಿಕ ಒತ್ತಡವನ್ನು ಕಡಿಮೆ



ಗೊಳಿಸುತ್ತದೆ. ಹಿಂದೆ ಋಷಿ ಮುನಿಗಳು ಯೋಗದ ಮೂಲಕ ಹಲವು ಅದ್ಭುತ ಚಮತ್ಕಾ ರಗಳನ್ನು ಮಾಡುತ್ತಿದ್ದರಂತೆ. ಔಷಧಿರಹಿತವಾಗಿ ದೇಹದ ಆರೋಗ್ಯ ರಕ್ಷಣೆಗೆ ಯೋಗ ಒಂದು ಸರಳವಾದ ಮಾರ್ಗ. ಈ ಹಿನ್ನಲೆ ಯೋಗಕ್ಕೆ ಮಹತ್ವ ಹೆಚ್ಚಾಗಿದೆ. ಜನತೆಯ ದಿನಚರಿಯ ಭಾಗವಾಗುತ್ತಿದೆ.

ಹಳ್ಳಿ ಹಳ್ಳಿಗಳಲ್ಲಿ ಯೋಗ

ಯೋಗ ವಿದ್ಯೆ ಜನಾನುರಾಗಿಯಾಗುತ್ತಿದ್ದಂತೆ

> **ಜಗತ್ತಿಗೆ ವಿಸ್ತಾರ**
>
> ಮನುಷ್ಯನ ಆರೋಗ್ಯವನ್ನು ಕಾಪಾ ಡಿಕೊಳ್ಳಲು ಯೋಗಾಭ್ಯಾಸ ಅತ್ಯಂತ ಶಕ್ತಿಯುತ ಮಾರ್ಗ. ಭಾರತದ ಪ್ರಾಚೀನ ವಿದ್ಯೆಯಾದರೂ ನರೇಂದ್ರ ಮೋದಿ ಯವರು ಅದರ ಮಹತ್ವವನ್ನು ಅರಿತು ಜಗತ್ತಿಗೇ ಸಾರಿದ್ದಾರೆ.
>
> ● ಪುಣ್ಯಶ್ರೀ, ನ್ಯಾಚುರೋಪತಿ ವಿದ್ಯಾರ್ಥಿನಿ

ಯೋಗ ಶಿಕ್ಷಣದತ್ತ ಹೆಚ್ಚು ಒಲವು ಕಂಡುಬರುತ್ತಿದೆ. ಗ್ರಾಮೀಣ ಜನತೆಗೂ ಯೋಗದ ಅಗತ್ಯತೆ ಹೆಚ್ಚು ಅರಿವಾಗುತ್ತಿದೆ. ಈ ಕಾರಣದಿಂದ ಹಳ್ಳಿಯಲ್ಲೂ ಯೋಗ ಕಲಿಕೆಯ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಅಲ್ಲಲ್ಲಿ ಯೋಗ ಕಲಿಕಾ ಕೇಂದ್ರಗಳು ತಲೆ ಎತ್ತಿವೆ. ಖಾಸಗಿ ಶಾಲಾ ಕಾಲೇಜುಗಳಲ್ಲಿ 'ಯೋಗ ಕಲಿಕೆ' ಒಂದು ಪಾಠವಾಗಿ ಬೆಳೆದುಬರುತ್ತಿದೆ.

ಮೋದಿ ಬೂಸ್ಟ್

ಯೋಗವಿದ್ಯೆಗೆಪ್ರಾಚೀನತೆಇದ್ದರೂಒಂದುಕಾಲದಲ್ಲಿ ಹೆಚ್ಚು ಪ್ರಚಲಿತವಾಗಿರಲಿಲ್ಲ. ಆದರೆ ಕೆಲ ವರ್ಷಗಳ ಹಿಂದೆ ಈ ಯೋಗ ಶಿಕ್ಷಣಕ್ಕೆ ಪ್ರಧಾನಿ ಮೋದಿ ಅವರು ನೀಡಿದ ಬೂಸ್ಟ್ ಪರಿಣಾಮಕಾರಿಯಾಯಿತು. ಇಂದು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಯೋಗ ಶಿಕ್ಷಣಕ್ಕೆ ಮುನ್ನುಡಿ ಬರೆಯಲಾಗಿದೆ. ಪ್ರಸ್ತುತ ಜೂನ್ 21 ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಆಚರಿಸಲ್ಪಡುತ್ತಿದೆ. ತಾಲೂಕು-ಜಿಲ್ಲಾ, ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿಯೂ ಯೋಗ ದಿನಾಚರಣೆ ಆರಂಭಗೊಂಡಿದೆ. ದೇಶದ ಪ್ರಧಾನಿ ರಾಜ್ಯದ ಮುಖ್ಯಮಂತ್ರಿಗಳೂ ಸೇರಿದಂತೆ ಎಲ್ಲರು ತಮ್ಮನ್ನು ತೊಡಗಿಸಿಕೊಳ್ಳುತ್ತಿರುವುದು ಹೆಚ್ಚಿನ ಮಹತ್ವ ದೊರೆಯುವಂತೆ ಮಾಡಿದೆ.

ಸರ್ಕಾರಿ ಶಾಲೆಗಳಲ್ಲಿ ಯೋಗ ಕೊರತೆ

ವಾಸ್ತವವಾಗಿ ಹಿಂದಿನಿಂದಲೇ ಪ್ರಾಥಮಿಕ ಶಾಲೆಗಳಲ್ಲಿಯೇ ಯೋಗ ದೈಹಿಕ ಶಿಕ್ಷಣದಲ್ಲಿ ಒಂದು ಭಾಗವಾಗಿತ್ತು. ಪಾರ್ಟ್ ಬಿ ಯಲ್ಲಿ ವಿವಿಧ ಆಸನಗಳನ್ನು, ಪ್ರಾಣಾಯಾಮ, ಸೂರ್ಯನಮಸ್ಕಾರ ಮತ್ತಿತರ ವಿಚಾರಗಳನ್ನು ಮಕ್ಕಳಿಗೆ ನೀಡುವುದು ಕಡ್ಡಾಯವಾಗಿತ್ತು. ಸೇವಾದಳದಲ್ಲಿಯೂ ಒಂದು ಪ್ರಮುಖ ಪಾಠವಾಗಿತ್ತು. ಆದರೆ ಬಹುತೇಕ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೇ ಇಲ್ಲ. ಇರುವ ಕಡೆಗಳಲ್ಲಿಯೂ ಯೋಗ ಶಿಕ್ಷಣ ಸಮರ್ಪಕತೆ ಪಡೆದುಕೊಂಡಿಲ್ಲ. ಹಾಗಾಗಿ ಸರಕಾರಿ ಶಾಲೆಗಳ ಮಕ್ಕಳು ವರ್ಷಕ್ಕೊಂದು ಬಾರಿ ದೀಪಾವಳಿಯ ಸಂಭ್ರಮದಂತೆ 'ಯೋಗದಿನಾಚರಣೆ' ಯಲ್ಲಿ ಪಾಲ್ಗೊಳ್ಳುತ್ತಾರೆ. ಅದನ್ನು ಹೊರತುಪಡಿಸಿದರೆ 'ಯೋಗ' ಶಿಕ್ಷಣವಾಗಿ ಬದಲಾಗಿಲ್ಲ. ಕನ್ನಡನಾಡಿನ ಎಷ್ಟೋ ಮಂದಿ ವಿಯೆಟ್ನಾಂ ನಂತಹ ದೇಶದಲ್ಲಿ ಹೋಗಿ ಯೋಗ ಕಲಿಸುತ್ತಿದ್ದರೆ, ನಮ್ಮ ಸರಕಾರಿ ಶಾಲಾ ಮಕ್ಕಳು ಇಂದು ಕೂಡಾ ಯೋಗದ 'ಯೋಗ'ಕ್ಕಾಗಿ ಕಾಯುತ್ತಿದ್ದಾರೆ. ಸರಕಾರಿ ಶಾಲೆಗಳಲ್ಲಿಯೂ ಯೋಗ ಶಿಕ್ಷಣ ಕಡ್ಡಾಯವಾಗಬೇಕಾಗಿದೆ. ಪ್ರಾಚೀನ ಪರಂಪರೆಯ ವಿದ್ಯಾಕಲೆಯೊಂದು ಪುಟ್ಟಪುಟ್ಟ ಮಕ್ಕಳ ಮೂಲಕ ಮತ್ತಷ್ಟು ತೆರೆದುಕೊಳ್ಳಬೇಕಾಗಿದೆ.

ವಿದ್ಯಾರ್ಥಿಗಳು ಶಿಕ್ಷಣದ ಜೊತೆ ಉತ್ತಮ ನಡವಳಿಕೆ ಬೆಳೆಸಿಕೊಳ್ಳಲಿ



ಬಂಟ್ವಾಳ: ಶಿಕ್ಷಣದ ಮೂಲಕ ವಿದ್ಯಾರ್ಥಿ ಗಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬೇಕು. ದೃಢ ಚಿತ್ತದಿಂದ ವಿದ್ಯಾಭ್ಯಾಸ ಮಾಡಿ ಜೊತೆಗೆ ಉತ್ತಮ ಗುಣನಡತೆಗಳನ್ನು ಬೆಳೆಸಿಕೊಳ್ಳಬೇಕು ಎಂದು ಎಸ್‌ವಿಎಸ್‌ಪ. ಪೂ. ಕಾಲೇಜಿನ ಸಂಚಾಲಕ, ಸ್ವರ್ಣೋದ್ಯಮಿ ಬಿ.ಸುರೇಶ ವಿ.ಬಾಳಿಗ ಹೇಳಿದರು.

ಕಾಲೇಜಿನ ನೂತನ ವಿದ್ಯಾರ್ಥಿಗಳ ಸ್ವಾಗತ ಹಾಗೂ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಗಂಗಾಧರ ಆಳ್ವ ಮಾತನಾಡಿ, ಪಿಯುಸಿ ಹಂತದ ಕಲಿಕೆ ಮುಂದಿನ ವಿದ್ಯಾಭ್ಯಾಸ ಹಾಗೂ ಜೀವನಕ್ಕೆ ಅಡಿಪಾಯವಾಗಿದ್ದು ಕಲಿಕೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುವುದಕ್ಕೆ ಅವಕಾಶವಿದ್ದು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿ ನಾಯಕರಿಗೆ ಉಪನ್ಯಾಸಕ ವೆಂಕಟೇಶ ನಾಯಕ್ ಪ್ರತಿಜ್ಞಾವಿಧಿ ಬೋಧಿಸಿದರು. ಆಡಳಿತ ಮಂಡಳಿ ಸದಸ್ಯರಾದ ವೆಂಕಟರಮಣ ಶೆಣೈ,ಭಾಮಿ ಲಕ್ಷ್ಮಣ ಶೆಣೈ, ಬಿ.ಸುಬ್ರಾಯ ನಾಯಕ್ ಉಪಸ್ಥಿತರಿದ್ದು ಶುಭ ಹಾರೈಸಿದರು. ವಿದ್ಯಾರ್ಥಿ ನಾಯಕಿ ವಿಭಾ ಸ್ವಾಗ ತಿಸಿ, ವಿಜ್ಞಾ ನಿರೂಪಿಸಿದರು. ಬಳಿಕ ವಿದ್ಯಾರ್ಥಿ ಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಯಾಗಿ ಮೋಕ್ಷಿತಾ, ಕ್ರೀಡಾ ಕಾರ್ಯದರ್ಶಿಗಳಾಗಿ ಅಹಮ್ಮದ್ ಶಾಹಿಲ್,ಗೀತ್ ಪ್ರಕಾಶ್, ಶಿಕ್ಷಣ ಕಾರ್ಯದರ್ಶಿ ತನುಶ್ರೀ, ಸಾಂಸ್ಕೃತಿಕ ಕಾರ್ಯದರ್ಶಿ ಚರಿಷ್ಮಾ, ಸೃಜನ್, ಶಿಸ್ತು ಕಾರ್ಯದರ್ಶಿ ಖುಷ್ಬೂ ಪರಿಸರ ಕಾರ್ಯದರ್ಶಿಯಾಗಿ ದೀಪಿಕಾ ಜವಾಬ್ದಾರಿ ಸ್ವೀಕರಿಸಿದರು.

ಸುಂಟಿಕೊಪ್ಪ: ಸಾಂಕ್ರಾಮಿಕ ರೋಗದ ಕುರಿತು ಮಾಹಿತಿ, ಅರಿವು ಕಾರ್ಯಕ್ರಮ



ಸುಂಟಿಕೊಪ್ಪ: ಪ್ರಾಥಮಿಕ ಆರೋಗ್ಯ ಕೇಂದ್ರ ಚೆಟ್ಟಳ್ಳಿಯಲ್ಲಿ ಮಲೇರಿಯಾ ವಿರೋಧ ಮಾಸಾಚರಣೆ ಹಾಗೂ ಮಳೆಗಾಲದಲ್ಲಿ ಹರಡುವ ಸಾಂಕ್ರಾಮಿಕ ರೋಗ ಡೆಂಗ್ಯೂ ಜ್ವರದ ಬಗ್ಗೆ ಆರೋಗ್ಯ ಅರಿವು ಮಾಹಿತಿ ಕಾರ್ಯಕ್ರಮವನ್ನು ನಡೆಸಲಾಯಿತು.

ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವಜ್ಞ ಅವರು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರಿಗೆ ಮಲೇರಿಯಾ ವಿರೋಧ ಮಾಸಾಚರಣೆಯ ಮಹತ್ವ ರೋಗ ಲಕ್ಷಣಗಳ ಕುರಿತು, ಚಿಕಿತ್ಸಾ ವಿಧಾನಗಳ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು.

ಡೆಂಗ್ಯೂ ಜ್ವರದ ಲಕ್ಷಣ, ಚಿಕಿತ್ಸಾ ವಿಧಾನ, ಎಚ್‌ಪಿವಿ ವ್ಯಾಕ್ಸಿನೇಷನ್ ಮಹತ್ವದ ಬಗ್ಗೆ ತಿಳಿಸಿ, ವ್ಯಾಕ್ಸಿನೇಷನ್ ಮಾಡಿಸಿಕೊಳ್ಳುವಂತೆ ಮನವೊಲಿಸಲಾಯಿತು.

ಆರೋಗ್ಯ ಕಾರ್ಯಕ್ರಮದ ಮಾಹಿತಿ

ಚೆಟ್ಟಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರೀಕ್ಷಣಾಧಿಕಾರಿಗಳಾದ ಶಿವಪ್ಪ ಮಳೆಗಾಲದಲ್ಲಿ ಹರಡುವ ಸಾಂಕ್ರಾಮಿಕ ರೋಗ, 100 ಡೇಸ್ ಟಿಬಿ ಕ್ಯಾಂಪೇನ್, ನಶಮುಕ್ತ ಭಾರತ ಅಭಿಯಾನದ ಮಹತ್ವ ಹಾಗೂ ಪಲ್ಸ್‌ಪೋಲಿಯೋ ನಿರ್ಮೂಲನಾ ಕಾರ್ಯಕ್ರಮ, ಸ್ಟಾಪ್ ಡಯೆರಿಯಾ ಕ್ಯಾಂಪೇನ್ ಹಾಗೂ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಿದರು.

ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳಾದ ಲಕ್ಷ್ಮೀ, ಸಮುದಾಯ ಆರೋಗ್ಯ ಅಧಿಕಾರಿಗಳಾದ ಹರ್ಷಿತಾ, ಭುವನ, ಆಶಾ ಕಾರ್ಯಕರ್ತೆಯರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

ಕಲ್ಲಡ್ಕ ಶ್ರೀರಾಮ ಪಪೂ ಕಾಲೇಜಿನಲ್ಲಿ ವಿಶ್ವಯೋಗ ದಿನಾಚರಣೆಯ ಸಂಭ್ರಮ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಆಜಾದ್ ಸಭಾಂಗಣದಲ್ಲಿ ಭಾಮತಿ ವಾಣಿಜ್ಯ ಸಂಘದ ವತಿಯಿಂದ ಶನಿವಾರ ಆಚರಿಸಲಾಯಿತು.

ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಗಣೇಶ್, ಯೋಗದ ಮಹತ್ವವನ್ನು ವಿವರಿಸಿ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಹೆಚ್ಚಿಸಲು, ಓದಿನಲ್ಲಿ ಆಸಕ್ತಿ ಬರಲು ಪ್ರತಿನಿತ್ಯ ಯೋಗ ಮಾಡಬೇಕು. ಮಾನಸಿಕ ಮತ್ತು ದೈಹಿಕವಾಗಿ ಸದೃಢ ಜೀವನ ನಡೆಸುವಲ್ಲಿ ಯೋಗದ ಪಾತ್ರ ಮಹತ್ವವಾಗಿದ್ದು, ನಿತ್ಯ ಯೋಗ ಮಾಡಿದರೆ ಯೋಗ ನಮ್ಮನ್ನು ಕಾಯುತ್ತದೆ ಎಂದು ಹೇಳಿದರು.

ಇನ್ನೋರ್ವ ಅತಿಥಿ ಆನಂದ್ ಯೋಗದ ಪ್ರಾತ್ಯಕ್ಷಿಕೆಯನ್ನು ನೀಡುವುದರೊಂದಿಗೆ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸವನ್ನು ನಡೆಸಿಕೊಟ್ಟರು.

ವಿದ್ಯಾರ್ಥಿಗಳು ಸರಳ ವ್ಯಾಯಮ, ಪ್ರಾಣಾಯಾಮ, ತಾಡಾ ಸನ, ವೃಕ್ಷಾಸನ, ವಜ್ರಾಸನ ಮುಂತಾದ ಆಸನಗಳ ಪ್ರಯೋಜನ ಪಡೆದುಕೊಂಡರು. ಕಾಲೇಜಿನ ಪ್ರಾಂಶು ಪಾಲರಾದ ವಸಂತ್ ಬಲ್ಲಾಳ್ ಅಧ್ಯಕ್ಷತೆ ಯನ್ನು ವಹಿಸಿದ್ದರು. ತೃಪ್ತಿ ಕಾರ್ಯಕ್ರಮ ನಿರ್ವಹಿಸಿದರು.



ಬಂಟ್ವಾಳದ ವಿದ್ಯಾಗಿರಿ ಶ್ರೀ ವೆಂಕಟರಮಣ ಸ್ವಾಮಿ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಶನಿವಾರ ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಮುಖ್ಯೋಪಾಧ್ಯಾರಾದ ಹರಿಪ್ರಸಾದ್ ಯೋಗ ದಿನದ ಸಾಮೂಹಿಕ ಪ್ರತಿಜ್ಞೆಯನ್ನು ಬೋಧಿಸಿದರು. ಶಾಲೆಯ ಸಹಶಿಕ್ಷಕಿ ಸುಷ್ಮಾ ಕುಮಾರಿ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಚೈತ್ರಾ ಶೆಟ್ಟಿ, ಪೂರ್ವಪ್ರಾಥಮಿಕ ವಿಭಾಗದ ಸಂಯೋಜಕಿ ವೀಣಾ ದೇವಾಡಿಗ,ವಿದ್ಯಾರ್ಥಿನಿ ಚಾರ್ವಿ ಎಲ್. ಪಿ., ರಿಝ್ವಾ ಹಲೀಮಾ, ಆರ್ವಿ ಎಸ್. ಪೂಂಜ ಮತ್ತು ಮನಿತ್ ಎಂ. ಶೆಟ್ಟಿಗಾರ್, ತನ್ವಿಶ್ರೀ ಸಹಿತ ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದರು.

ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ವಿರೋಧ: ಶಾಸಕ ಕೊಡ್ಗಿಗೆ ಮನವಿ



ಕುಂದಾಪುರ: ಮೆಸ್ಕಾಂ ವ್ಯಾಪ್ತಿಯಲ್ಲಿ ಸಮಾನಾಂತರ ವಿದ್ಯುತ್ ವಿತರಣೆಗೆ ಟಾಟಾ ಕಂಪೆನಿ ಸಲ್ಲಿಸಿರುವ ಅರ್ಜಿಯನ್ನು ರದ್ದುಪಡಿಸಬೇಕು ಹಾಗೂ ವಿದ್ಯುತ್ ಕ್ಷೇತ್ರದ ಖಾಸಗೀಕರಣವನ್ನು ತಡೆಗಟ್ಟಬೇಕು ಎಂದು ಒತ್ತಾಯಿಸಿ ಕರ್ನಾಟಕ ವಿದ್ಯುತ್ ಮಂಡಳಿಯ ನೌಕರರು ಮತ್ತು ಸಂಘಗಳ ಒಕ್ಕೂಟದ ಪದಾಧಿಕಾರಿಗಳು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು.

ಶಾಸಕರ ಕಚೇರಿಗೆ ಭೇಟಿ ನೀಡಿದ ನೌಕರರ ನಿಯೋಗವು ವಿದ್ಯುಚ್ಛಕ್ತಿ ಕಾಯ್ದೆ 108ನೇ ಪರಿಚ್ಛೇದದ ಪ್ರಾವಧಾನ ಬಳಸಿ ರಾಜ್ಯ ಸರಕಾರವು ಟಾಟಾ ಪವರ್ ಅರ್ಜಿಯನ್ನು ರದ್ದುಪಡಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿದೆ. ರೈತರು, ಬಡವರು, ಮಧ್ಯಮ ವರ್ಗ,

> ■ ಕರ್ನಾಟಕ ವಿದ್ಯುತ್ ಮಂಡಳಿಯ ನೌಕರರು ಮತ್ತು ಸಂಘಗಳ ಒಕ್ಕೂಟದ ಪದಾಧಿಕಾರಿಗಳಿಂದ ಮನವಿ
>
> ■ ಗ್ರಾಮೀಣ ಗ್ರಾಹಕರ ಹಿತದೃಷ್ಟಿಯಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ

ಮಹಿಳೆಯರು, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ-ಪಂಗಡ ಹಾಗೂ ಗ್ರಾಮೀಣ ಗ್ರಾಹಕರ ಹಿತದೃಷ್ಟಿಯಿಂದ ಮತ್ತು ಮೆಸ್ಕಾಂ ನೌಕರರ ಪರವಾಗಿ ಸರಕಾರದ ಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರು.

ಇದ್ದಕ್ಕೆ ಪೂರಕವಾಗಿ ಸ್ಪಂದಿಸಿದ ಶಾಸಕರು, ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಬೀದಿ ನಾಟಕದ ಮೂಲಕ ಜಾಗೃತಿ ಮೂಡಿಸುವ ಕೆಲಸ ಉತ್ತಮ: ಉಮೇಶ್



ಕುಂದಾಪುರ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾ ಭಿವೃದ್ಧಿ ಯೋಜನೆ, ಬಿ.ಸಿ ಟ್ರಸ್ಟ್ ಕುಂದಾ ಪುರ ತಾಲೂಕಿನ ಚಿತ್ತೂರು ವಲಯದ ಮಾರಣಕಟ್ಟೆ ಒಕ್ಕೂಟದ ಓಂಕಾರ ಜ್ಞಾನವಿಕಾಸ ಹಾಗೂ ಹೊಂಬೆಳಕು ಜ್ಞಾನ ವಿಕಾಸ ಕೇಂದ್ರದಲ್ಲಿ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಉಪ್ಪಿನ ಕುದ್ರು ಪಂಚಗಂಗಾವಳಿ ಜ್ಞಾನವಿಕಾಸ ಕೇಂದ್ರದ ಸದಸ್ಯರಿಂದ ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ವಠಾರದಲ್ಲಿ ಬೀದಿನಾಟಕ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಕುಂದಾಪುರ ತಾಲೂಕಿನ ಯೋಜನಾಧಿಕಾರಿ ಉಮೇಶ್ ಶೆಟ್ಟಿ ಎಚ್. ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಅನೇಕ ಸಮಾಜಮುಖಿ ಕಾರ್ಯಕ್ರಮಗಳು ನಡೆಯುತ್ತದೆ. ಶಿಕ್ಷಣ, ಆರೋಗ್ಯ, ನೀರಿನ ಸದ್ಬಳಕೆ, ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛತೆ ಮಾಡುವ ಬಗ್ಗೆ ಬೀದಿ ನಾಟಕ ಮಾಡುವ ಮೂಲಕ ಉತ್ತಮವಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ನಡೆಸುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಮೊಕ್ತೇಸರ ಸದಾ ಶಿವ ಶೆಟ್ಟಿ ವಹಿಸಿದ್ದರು. ಚಿತ್ತೂರು ಜನ ಜಾಗೃತಿ ವೇದಿಕೆಯ ವಲಯ ಅಧ್ಯಕ್ಷ ಡಾ. ಅತುಲ್ ಕುಮಾರ್ ಶೆಟ್ಟಿ ಮಾತನಾಡಿದರು.

ದೇವಸ್ಥಾನ ಆಡಳಿತ ಅಧಿಕಾರಿ ರಘು ರಾಮ್ ಶೆಟ್ಟಿ ಜನಜಾಗೃತಿ ಸದಸ್ಯ ವೆಂಕಟ ರಮಣ ಆಚಾರ್ ಇಡೂರು ಕುಂಜ್ಞಾಡಿ, ಬಾಲಕೃಷ್ಣ ಶೆಟ್ಟಿ ಇಂಬು, ನಮ್ಮ ಭೂಮಿ ಸಂಸ್ಥೆ ಕಾರ್ಯಕರ್ತ ನರಸಿಂಹ ಗಾಣಿಗ, ಸೇವಾ ಪ್ರತಿನಿಧಿ ಶೋಭಾ ಶೆಟ್ಟಿ ವಸಂತಿ, ಗೀತಾ, ಮಂಜುನಾಥ,ಹಾಗೂ ಜ್ಞಾನ ವಿಕಾಸ ಕೇಂದ್ರ, ಸ್ವ ಸಹಾಯ ಸಂಘದ ಸದಸ್ಯರು, ಉಪಸ್ಥಿತರಿದ್ದರು. ಜ್ಞಾನ ವಿಕಾಸ ಸಮನ್ವಯಾದಿಕಾರಿ ರೇಣುಕಾ ಕಾರ್ಯಕ್ರಮ ನಿರ್ವಹಿಸಿದರು.



ಬಂಟ್ವಾಳದ ಅಮ್ಟಾಡಿ ವಿದ್ಯಾನಿಕೇತನ ವಿದ್ಯಾಸಂಸ್ಥೆಯಲ್ಲಿ ವಿಶ್ವಯೋಗ ದಿನಾಚರಣೆಯನ್ನು ಸಂಸ್ಥೆಯ ಆಡಳಿತ ಟ್ರಸ್ಟಿ ಕಿರಣ್ ಎಸ್ .ಬಾಳಿಗಾ ಉದ್ಘಾಟಿಸಿ ಶುಭಹಾರೈಸಿದರು. ವಿದ್ಯಾಕೇಂದ್ರದ ಐನೂರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಸಾಮೂಹಿಕ ಸೂರ್ಯನಮಸ್ಕಾರ ,ಯೋಗಾಸನ, ಪ್ರಾಣಾಯಾಮಗಳನ್ನು ಪ್ರದರ್ಶನ ಮಾಡಿದರು. ಶಾರೀರಿಕ ಶಿಕ್ಷಕಿ ವೀಣಾ ಕುಮಾರಿ ಯೋಗ ತರಬೇತಿ ನೀಡಿ ಸಂಯೋಜಿಸಿದರು. ಪಿಟಿಎ ಅಧ್ಯಕ್ಷ ಕೆ.ರಾಜೀವ , ಶಾಲಾ ಮುಖ್ಯೋಪಾಧ್ಯಾಯಿನಿ ಹೇಮಲತಾ,ಮಾಂಟೆಸ್ಸೋರಿ ಶಿಕ್ಷಣ ಮುಖ್ಯಶಿಕ್ಷಕಿ ಸವಿತಾ ಕಿರಣ್ , ಸುಜಾತ ಬಾಳೆಹೊಳೆ ಉಪಸ್ಥಿತರಿದ್ದರು.

ಕಿಲ್ಪಾಡಿ ಗ್ರಾಮ ಪಂಚಾಯತ್ ಗ್ರಾಮ ಸಭೆ | ಅಧಿಕಾರಿಗಳ ಗೈರಿನ ವಿರುದ್ಧ ಅಸಮಾಧಾನ | ನೀರು, ರಸ್ತೆ ಸಹಿತ ಹಲವು ವಿಚಾರಗಳ ಚರ್ಚೆ

ಪಂಚಾಯತ್ ಸ್ವಂತ ಕಟ್ಟಡಕ್ಕೆ ಮಂಜೂರಾದ ಸ್ಥಳ ಏಕಾಏಕಿ ರದ್ದು: ಗ್ರಾಮಸ್ಥರ ಆಕ್ರೋಶ

ಮುಲ್ಕಿ: ಕಿಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ 2026 27 ನೇ ಸಾಲಿನ ಪ್ರಥಮ ಹಂತದ ಗ್ರಾಮ ಸಭೆ ಪಂಚಾಯತ್ ಸಭಾಭವನದಲ್ಲಿ ನಡೆಯಿತು.

ಗ್ರಾಮ ಸಭೆಗೆ ಅಧಿಕಾರಿಗಳ ಗೈರು, ಕಿನ್ನಿಗೋಳಿ ಮೆಸ್ಕಾಂನ ಸಿಬ್ಬಂದಿಗಳು ರಾತ್ರಿ ಹೊತ್ತು ಸ್ಪಂದಿಸದ ಬಗ್ಗೆ, ಅಪಾಯಕಾರಿ ಮರಗಳ ತೆರವುಗೊಳಿಸುವಿಕೆ, ಪಂಚಾಯತ್ ಕಟ್ಟಡದ ಸ್ಥಳ ರದ್ದು, ಅವೈಜ್ಞಾನಿಕ ಅಮೃತ್ ಪೈಪ್ ಲೈನ್ ಕಾಮಗಾರಿ, ತ್ಯಾಜ್ಯ ಸಮಸ್ಯೆ ಮತ್ತಿತರ ವಿಚಾರಗಳ ಬಗ್ಗೆ ಚರ್ಚಿಸಲಾಯಿತು.

ಸಭೆ ಶುರುವಾಗುತ್ತಿದ್ದಂತೆ ಸಭೆಗೆ ಅಧಿ ಕಾರಿಗಳ ಗೈರಿಗೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು. ಸಭೆಗೆ ಕೃಷಿ ಅಧಿಕಾರಿಯ ಗೈರು ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಗ್ರಾಮಸ್ಥ ಗೋಪಿನಾಥ ಪಡಂಗ ಮಾತನಾಡಿ, ಕೃಷಿ ಪ್ರಧಾನವಾದ ಕಿಲ್ಪಾಡಿ



ಗ್ರಾ. ಪಂ. ವ್ಯಾಪ್ತಿಯಲ್ಲಿ ಕೃಷಿಕರೇ ಹೆಚ್ಚಿದ್ದು ಜನರ ಸಮಸ್ಯೆಗೆ ಪರಿಹಾರ ದೊರಕಿಸಬೇಕಾದ ಅಧಿಕಾರಿಗಳ ಗೈರು ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಪಂಚಾಯತ್ ಸ್ವಂತ ಕಟ್ಟಡಕ್ಕೆ ಸರಕಾರದಿಂದ 31 ಸೆನ್ಸ್ ನಿವೇಶನವಿದ್ದು, ಆದರೆ ಪಂ.ಗಮನಕ್ಕೆ ತಾರದೆ ಕಂದಾಯ ಇಲಾಖೆ ಅಧಿಕಾರಿಗಳು ಏಕಾಏಕಿ ಸ್ಥಳವನ್ನು ಬೇರೆಯವರಿಗೆ ಮಂಜೂರು ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿ, ಈ ಕುರಿತು ನ್ಯಾಯಾಲಯಕ್ಕೆ ದೂರು ಸಲ್ಲಿಸಲಾಗಿದೆ. ಈ ಬಗ್ಗೆ ಮುಂದಿನ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ ಎಂದರು.

ಅಪ್ರಾಪ್ತರು ವಾಹನ ಚಲಾಯಿಸುವ ಬಗ್ಗೆ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು. ಹೆದ್ದಾರಿ ಅವೈಜ್ಞಾನಿಕ ಚತುಷ್ಪಥ ಕಾಮಗಾರಿಯಿಂದ ಮುಲ್ಕಿಯಲ್ಲಿ ಅನೇಕ ಅಪಘಾತಗಳು ಸಂಭವಿಸಿ ಅನೇಕ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ. ಹೆದ್ದಾರಿಯಲ್ಲಿ ನೂತನ ಮೇಲ್ಸೇತುವೆ ನಿರ್ಮಾಣಕ್ಕೆ ಗೋಪಿನಾಥ ಪಡಂಗ ಒತ್ತಾಯಿಸಿದರು. ಮುಲ್ಕಿ ಪೊಲೀಸ್ ಠಾಣೆಯ ಎಎಸ್‌ಐ ಹರಿಶೇಖರ್ ಸೈಬರ್ ಕ್ರೈಂ ಬಗ್ಗೆ ಮನಾಹಿತಿ ನೀಡಿದರು. ಇದಕ್ಕೆ ಪೂರಕವಾಗಿ ಗ್ರಾಮಸ್ಥ ಜಗನ್ನಾಥ ಕರ್ಕೇರ, ತಮಗೂ ಡಿಜಿಟಲ್ ಅರೆಸ್ಟ್ ಎಂಬ ಅನಾಮಧೇಯ ಕರೆ ಬಂದಿದ್ದು ತಾವು ಸಂಬಂಧಪಟ್ಟ ಸೈಬರ್ ಅಧಿಕಾರಿಗಳನ್ನು ಸಂಪರ್ಕಿಸಿದರೆ ಯಾವುದೇ ಉತ್ತರ ದೊರಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮುಲ್ಕಿ ಆರೋಗ್ಯ ಕೇಂದ್ರದ ಪ್ರಭಾರ ವೈದ್ಯಾಧಿಕಾರಿ ಡಾ. ಕೃಷ್ಣಪ್ರಸಾದ್ ಮಾತನಾಡಿ, ಮುಲ್ಕಿ ಆರೋಗ್ಯ ಕೇಂದ್ರವನ್ನು ತಾಲೂಕು ಆಸ್ಪತ್ರೆಯನ್ನಾಗಿಸಲು ಪ್ರಯತ್ನ ನಡೆಯುತ್ತಿದೆ. ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿಗಳ ಕೊರತೆ ಇದೆ ಎಂದು ಹೇಳಿದರು.

ಮೆಸ್ಕಾಂ ಸಿಬ್ಬಂದಿಯಿಂದ ಉಡಾಫೆ ಉತ್ತರ

ರಾತ್ರಿ ಹೊತ್ತು ವಿದ್ಯುತ್ ಕೈ ಕೊಟ್ಟರೆ ಮೆಸ್ಕಾಂ ಸಿಬ್ಬಂದಿಗಳು ಸ್ಪಂದನೆ ನೀಡುತ್ತಿಲ್ಲ, ಕೇಳಿದರೆ ಉಡಾಫೆ ಉತ್ತರ ನೀಡುತ್ತಾರೆ ಎಂದು ಕೆರೆಕಾಡು ನಿವಾಸಿ ಆನಂದ ಆಕ್ರೋಶವ್ಯಕ್ತಪಡಿಸಿದರು. ಪಂ.ವ್ಯಾಪ್ತಿಯ ಕುಬೆವೂರು, ಕೆಂಚನಕೆರೆ, ಶಿಮಂತೂರು ರಸ್ತೆ ಮತ್ತಿತರ ಕಡೆಗಳಲ್ಲಿ ಎಲ್ಲೆಂದರಲ್ಲಿ ಕಿಡಿಗೇಡಿಗಳು ತ್ಯಾಜ್ಯ ಎಸೆಯುತ್ತಿದ್ದಾರೆ. ಅಲ್ಲಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವಂತೆ ಗ್ರಾಮಸ್ಥರು ಒತ್ತಾಯಿಸಿದರು. ಉಳಿದಂತೆ ಅಮೃತ್ ಯೋಜನೆ ಪೂರ್ಣಗೊಳಿಸಲು ಹಾಗೂ ಅಪಾಯಕಾರಿ ಮರಗಳ ತೆರವುಗೊಳಿಸಲು, ಕುಬೆವೂರು ಶಿಮಂತೂರು ರಸ್ತೆಗೆ ಸೂಕ್ತ ಚರಂಡಿ, ಕೆಂಚನಕೆರೆ ರಾಜ್ಯ ಹೆದ್ದಾರಿಯಿಂದ ರೈಲ್ವೆ ನಿಲ್ದಾಣ ಸಂಪರ್ಕ ರಸ್ತೆ ಅಭಿವೃದ್ಧಿ, ಶಿವಗಿರಿ ಎಸ್ಟೇಟ್ ಕೆಎಸ್ ರಾವ್ ನಗರ ಸಂಪರ್ಕ ರಸ್ತೆ ದುರಸ್ತಿ, ಕುಮಾರ ಮಂಗಿಲ ರಸ್ತೆ ಅವ್ಯವಸ್ಥೆಗೆ ಪರಿಹಾರ ಒದಗಿಸಲು ಗ್ರಾಮಸ್ಥರು ಆಗ್ರಹಿಸಿದರು.

ನೋಡಲ್ ಅಧಿಕಾರಿಯಾಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಸಂಗಮೇಶ್, ಪಂ. ಆಡಳಿತ ಅಧಿಕಾರಿ ರಾಮಕೃಷ್ಣ ಐತಾಳ, ಪಂ. ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ, ಕೆಮ್ರಾಲ್ ಆರೋಗ್ಯ ಅಧಿಕಾರಿ ಡಾ. ಅನ್ನಿಲ, ಮುಲ್ಕಿ ಮೆಸ್ಕಾಂ ಅಧಿಕಾರಿ ಕೃಷ್ಣಪ್ಪ, ಕೆರೆಕಾಡು ಯುನಾನಿ ಆಸ್ಪತ್ರೆಯ ಡಾ. ಮಹಮ್ಮದ್ ಅಶ್ಫಾಕ್, ಪಂ.ಕಾರ್ಯದರ್ಶಿ ಹರಿಶ್ಚಂದ್ರ ಮತ್ತಿತರರು ಗ್ರಾಮಸ್ಥರ ಪ್ರಶ್ನೆಗಳಿಗೆ ಉತ್ತರಿಸಿದರು.

ಸುತ್ತ ಮುತ್ತ

ಕಲ್ಯಾಣಿ ಬೆಂಗಳೂರು ತಂಡದ ಫಿಜಿಯೋಥೆರಪಿಸ್ಟ್ ಆಗಿ ಡಾ.ಚೆಕ್ಕೆರ ಪೂವಯ್ಯ ಆಯ್ಕೆ



ಶ್ರೀಮಂಗಲ: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಯೋಜಿಸಿರುವ ಮಹಾರಾಜ ಟ್ರೋಫಿ ಟಿ20 ಟೂರ್ನಮೆಂಟ್‌ನಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ ತಂಡದ ಮುಖ್ಯ ಫಿಜಿಯೋಥೆರಪಿಸ್ಟ್ ಆಗಿ ಕೊಡಗಿನ ಡಾ. ಚೆಕ್ಕೆರ ಪೂವಯ್ಯ ಅವರು ನೇಮಕಗೊಂಡಿದ್ದಾರೆ. ಪ್ರಸ್ತುತ ಐರ್ಲ್ಯಾಂಡ್‌ನಲ್ಲಿ ಫಿಜಿಯೋಥೆರಪಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿರುವ ಇವರು, ಪೊನ್ನಂಪೇಟೆ ತಾಲೂಕು ಹುದಿಕೇರಿ- ಹೈಸೊಡ್ಲೂರು ಗ್ರಾಮದ ಚೆಕ್ಕೆರ ರಮೇಶ್ ಹಾಗೂ ಗೀತಾ ದಂಪತಿಯ ದ್ವಿತೀಯ ಪುತ್ರರಾಗಿದ್ದಾರೆ.

ವಿಟ್ಲ ತಾಲೂಕು ಕೇಂದ್ರ ರಚನೆಗೆ ಆಗ್ರಹ: ಜೂ.23ರಂದು ಜಾಥಾ

ವಿಟ್ಲ: ಬಹುಕಾಲದಿಂದ ವಿಟ್ಲ ತಾಲೂಕು ಕೇಂದ್ರ ಮಾಡಬೇಕೆಂಬ ಹೋರಾಟಗಳು ನಡೆಯುತ್ತಲಿದೆ. ತಾಲೂಕು ಕೇಂದ್ರವನ್ನಾಗಿ ಮಾಡಲು ಬೇಕಾದ ಎಲ್ಲಾ ಅರ್ಹತೆ ಇದ್ದರೂ, ಕಾರ್ಯರೂಪಕ್ಕೆ ಬಂದಿಲ್ಲ. ಜನ ಜಾಗೃತಿ ಮಾಡುವ ನಿಟ್ಟಿನಲ್ಲಿ ಜೂ.23ರಂದು ವಿಟ್ಲ ಜೈನ ಬಸದಿಯಿಂದ ನಾಡಕಚೇರಿವರೆಗೆ ಸಾಂಕೇತಿಕ ವೇಗ ಜಾಥಾ ನಡೆಯಲಿದೆ ಎಂದು ವಿಟ್ಲ ತಾಲೂಕು ಹಾಗೂ ವಿಟ್ಲ ವಿಧಾನಸಭಾ ಕ್ಷೇತ್ರ ಮರುಸ್ಥಾಪನಾ ಸಮಿತಿ ಕಾರ್ಯದರ್ಶಿ ಕಾನ ಈಶ್ವರ ಭಟ್ ಹೇಳಿದರು.

ಎಲ್ಲಾ ಪಕ್ಷದವರನ್ನು ಸೇರಿಸಿಕೊಂಡು ರಾಜಕೀಯ ರಹಿತವಾಗಿ ನಮ್ಮ ಹೋರಾಟವಾಗಿದೆ. ಈಗಾಗಲೇ ಪುತ್ತೂರು ಶಾಸಕರಾದ ಅಶೋಕ್ ಕುಮಾರ್ ರೈ ಅವರಿಗೆ ಮನವಿ ಮಾಡಿದ್ದೇವೆ. ಬಂಟ್ವಾಳ ಶಾಸಕರಾದ ರಾಜೇಶ್ ನಾಯ್ಕ್ ಅವರಿಗೆ ಮುಂದಿನ ದಿನಗಳಲ್ಲಿ ಮನವಿ ನೀಡಲಾಗುವುದು. ಈ ಕುರಿತಾಗಿ ಸಂಬಂದಪಟ್ಟ ಇಲಾಖೆಗಳಿಗೆ ಮನವಿ ಮಾಡಲಾಗಿದೆ. ಈ ಹಿಂದೆ ಇದ್ದ ವಿಟ್ಲ ವಿಧಾನಸಭಾ ಕ್ಷೇತ್ರವು ಕಣ್ಮರೆಯಾಗಿದೆ. ಅದನ್ನು ಮರಳಿ ಪಡೆಯುವ ನಿಟ್ಟಿನಲ್ಲಿಯೂ ನಮ್ಮ ಹೋರಾಟ ಮುಂದುವರೆಯಲಿದೆ. ಇದಕ್ಕೆ ಎಲ್ಲ ವರ್ಗದ ಜನರು ಸಹಕಾರ ನೀಡಬೇಕೆಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿಟ್ಲ ತಾಲೂಕು ಹಾಗೂ ವಿಟ್ಲ ವಿಧಾನಸಭಾ ಕ್ಷೇತ್ರ ಮರುಸ್ಥಾಪನಾ ಸಮಿತಿ ಪ್ರಧಾನ ಕಾರ್ಯದರ್ಶಿ ರಮಾನಾಥ ವಿಟ್ಲ ಮಾತನಾಡಿ, ಹಿಂದೆ ವಿಟ್ಲ ವಿಧಾನಸಭಾ ಕ್ಷೇತ್ರ ಇದ್ದ ಕಾಲದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳಾಗಿವೆ. ವಿಟ್ಲ ಪ್ರತ್ಯೇಕ ಆದರೆ ಬಹಳಷ್ಟು ಪ್ರಯೋಜನ ಇದೆ. ಹಲವಾರು ಹಿರಿಯರು ಸೇರಿಕೊಂಡು ಈ ಒಂದು ಕಾರ್ಯದಲ್ಲಿ ಮುಂದಡಿ ಇಟ್ಟಿದ್ದೇವೆ. ಈ ಒಂದು ವಿಟ್ಲವನ್ನು ತಾಲೂಕು ಮಾಡುವುದು ಹಲವರ ಕನಸಾಗಿದೆ ಎಂದರು. ವಿಟ್ಲ ತಾಲೂಕು ಹಾಗೂ ವಿಟ್ಲ ವಿಧಾನ ಸಭಾ ಕ್ಷೇತ್ರ ಮರುಸ್ಥಾಪನಾ ಸಮಿತಿ ಅಧ್ಯಕ್ಷ ಬಿ.ಕೆ.ಚರ್ಣಿ, ಉಪಾಧ್ಯಕ್ಷ ಹಸ್ಸೆನಾರ್, ಸಂಚಾಲಕ ರಾಮಣ್ಣ ಶೆಟ್ಟಿ ಉಪಸ್ಥಿತರಿದ್ದರು.

ವಿವೇಕಾನಂದ ಸ್ವಾಯತ್ತ ಕಾಲೇಜು: ಪದವಿ ಪರೀಕ್ಷಾ ಫಲಿತಾಂಶ ಪ್ರಕಟ

ಪುತ್ತೂರು: ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತ ಮಹಾವಿದ್ಯಾಲಯದಲ್ಲಿ 2026 ರ ಮೇ-ಜೂನ್ ತಿಂಗಳಲ್ಲಿ ನಡೆದ ಪದವಿ ತರಗತಿಗಳ ಎರಡನೆಯ, ನಾಲ್ಕನೆಯ ಮತ್ತು ಆರನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವು ಪ್ರಕಟಗೊಂಡಿದೆ. ವಿದ್ಯಾರ್ಥಿಗಳು ಯುಯುಸಿಎಂಎಸ್ ಪೋರ್ಟಲ್ ನಲ್ಲಿ ತಮ್ಮ ನೋಂದಣಿ ಸಂಖ್ಯೆಯನ್ನು ಹಾಕಿ ಫಲಿತಾಂಶಗಳನ್ನು ಪರಿಶೀಲಿಸಬಹುದು. ಆರನೇ ಸೆಮಿಸ್ಟರ್‌ನ ಬ್ಯಾಚುಲರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಬಿಬಿಎ) ಶೇ. 100, ಬ್ಯಾಚುಲರ್ ಆಫ್ ಆರ್ಟ್ಸ್ (ಬಿಎ) ಶೇ. 98.77, ಬ್ಯಾಚುಲರ್ ಆಫ್ ಕಾಮರ್ಸ್ (ಬಿಕಾಂ) ಶೇ. 97.97, ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್ (ಬಿಸಿಎ) ಶೇ. 95.08 ಹಾಗೂ ಬ್ಯಾಚುಲರ್ ಆಫ್ ಸೈನ್ಸ್(ಬಿಎಸ್ಸಿ) ಶೇ. 95.00 ಫಲಿತಾಂಶ ದಾಖಲಾಗಿದೆ. ಆರನೇ ಸೆಮಿಸ್ಟರ್ ಬಿಬಿಎಯಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲಾ 53 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ. 100 ಫಲಿತಾಂಶ ಸಾಧಿಸಿದ್ದಾರೆ. ಅದೇ ರೀತಿ ಬಿಎಯಲ್ಲಿ ಪರೀಕ್ಷೆಗೆ ಹಾಜರಾದ 81 ವಿದ್ಯಾರ್ಥಿಗಳ ಪೈಕಿ 80 ವಿದ್ಯಾರ್ಥಿಗಳು, ಬಿಕಾಂನಲ್ಲಿ 197 ವಿದ್ಯಾರ್ಥಿಗಳ ಪೈಕಿ 193 ವಿದ್ಯಾರ್ಥಿಗಳು, ಬಿಸಿಎಯಲ್ಲಿ 264 ವಿದ್ಯಾರ್ಥಿಗಳ ಪೈಕಿ 251 ವಿದ್ಯಾರ್ಥಿಗಳು ಹಾಗೂ ಬಿಎಸ್ಸಿಯಲ್ಲಿ 60 ವಿದ್ಯಾರ್ಥಿಗಳ ಪೈಕಿ 57 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಪ್ರಾಂಶುಪಾಲ ಶ್ರೀಕೃಷ್ಣ ಗಣರಾಜ ಭಟ್ ಮತ್ತು ಕುಲಸಚಿವ ಪ್ರಕಾಶ್ ಕುಮಾರ್ ಪಿ. ಕಾಲೇಜಿನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುತ್ತೂರು ತಾಲೂಕಿನ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆ

ಯುವನಿಧಿ ಫಲಾನುಭವಿಗಳಿಗೆ ಉದ್ಯೋಗ ಮೇಳ ಆಯೋಜನೆ

ಪುತ್ತೂರು: ಈಗಾಗಲೇ ಯುವನಿಧಿ ಯೋಜನೆಯಡಿ ಪ್ರಯೋಜನ ಪಡೆದುಕೊಂಡಿರುವ ಯುವ ಸಮುದಾಯದಲ್ಲಿ ಕೆಲವರಿಗೆ 2 ವರ್ಷ ಪೂರ್ಣಗೊಳ್ಳುತ್ತಿದೆ. ಮುಂದೆ ಅವರು ಯೋಜನೆಯಿಂದ ಹೊರಗುಳಿಯಲಿದ್ದಾರೆ. ಅಂತಹ ಯುವ ಸಮುದಾಯವನ್ನು ಸ್ವಉದ್ಯೋಗಕ್ಕೆ ಅರ್ಹತೆ ಹೊಂದಿದ್ದರೆ ಅವರಿಗೆ ನಾವು ಶಕ್ತಿ ತುಂಬುವ ಕೆಲಸ ಮಾಡಬೇಕಾಗಿದೆ. ಪುತ್ತೂರಿನಲ್ಲಿ ಉದ್ಯೋಗ ಮೇಳ ಸಂಯೋಜಿಸಲು ತಯಾರಿ ನಡೆಸಲಾಗುತ್ತಿದೆ ಎಂದು ಪುತ್ತೂರು ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ ಪೆರ್ನೆ ತಿಳಿಸಿದರು.

ಪುತ್ತೂರು ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ವರದಿ ಮಂಡಿಸಿದ ಯುವನಿಧಿ ಯೋಜನೆಯ ಅಧಿಕಾರಿಗಳು ತಾಲೂಕಿನಲ್ಲಿ ಒಟ್ಟು 771 ಯುವನಿಧಿ ಫಲಾನುಭವಿಗಳಿದ್ದಾರೆ. ಈ ಪೈಕಿ ಕೆಲವರು ಕಾಲೇಜು ಶಿಕ್ಷಣವನ್ನು ಮುಂದುವರಿಸುತ್ತಿದ್ದು ಇನ್ನು ಕೆಲವರು 2 ವರ್ಷ ಪೂರ್ಣವಾಗುತ್ತಿದೆ. ಅಂತಹ ಫಲಾನುಭವಿಗಳ ಸೇವಾ ಸಿಂಧು ಪೋರ್ಟಲ್‌ನಲ್ಲಿ ರಿಜೆಕ್ಟ್ ಆಗುತ್ತದೆ. ರಿಜೆಕ್ಟ್ ಆಗಿದ್ದರೆ, ಮರು ಸೇರ್ಪಡೆ ಮಾಡಲು ಸಾಧ್ಯವಾಗುವುದಿಲ್ಲ. ಮಾರ್ಚ್ ತಿಂಗಳ ತನಕದ ಅನುದಾನ ಫಲಾನುಭವಿಗಳ ಖಾತೆಗೆ ಜಮೆಯಾಗಿದೆ ಎಂದು ತಿಳಿಸಿದರು.

ಪಡಿತರ ವಿತರಣೆ ಅಂಗಡಿಗಳಿಗೆ ಭೇಟಿ ನೀಡಿ

ಅನ್ನಭಾಗ್ಯ ಯೋಜನೆಯಡಿ 27,835 ಪಡಿತರ ಚೀಟಿಯ 1,07,221 ಸದಸ್ಯರಿಗೆ ಒಟ್ಟು ರೂ. 58,16,78,120 ಮೊತ್ತದ ಅಕ್ಕಿ ವಿತರಣೆ ಮಾಡಲಾಗಿದೆ ಎಂದು ಆಹಾರ ಇಲಾಖೆಯ ಅಕಾರಿಗಳು ಮಾಹಿತಿ ನೀಡಿದರು. ಈ ಬಗ್ಗೆ ವಿವರಣೆ ಪಡೆದ ಅಧ್ಯಕ್ಷರು, ಅಧಿಕಾರಿಗಳು ಪಡಿತರ ವಿತರಣೆಯ ಅಂಗಡಿಗಳಿಗೆ ಕನಿಷ್ಠ ತಿಂಗಳಿಗೆ ಒಂದೆರಡು ಬಾರಿ ಆದರೂ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಫಲಾನುಭವಿಗಳಿಂದ ಅಭಿಪ್ರಾಯ ಪಡೆದುಕೊಳ್ಳಬೇಕು. ಅವ್ಯವಸ್ಥೆಗಳು ಕಂಡು ಬಂದಲ್ಲಿ ಸರಿಪಡಿಸುವ ಕೆಲಸ ಮಾಡಬೇಕು. ಮುಂದಿನ ಪಾಲನಾ ವರದಿಯಲ್ಲಿ ಭೇಟಿಯ ಬಗ್ಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

75 ವರ್ಷ ಮೇಲ್ಪಟ್ಟ ವಯಸ್ಕರು ಮಾತ್ರ ಇರುವ ಕುಟುಂಬಗಳಿಗೆ ಹಾಗೂ ಒಂಟಿ ವೃದ್ಧರು ವಾಸವಿರುವವರ ಮನೆಗಳಿಗೆ ತೆರಳಿ ಅಕ್ಕಿ ವಿತರಣೆ ಮಾಡಬೇಕಾಗಿದೆ. ತಾಲೂಕಿನಲ್ಲಿ ಇಂತಹ ಎಷ್ಟು ಮನೆಗಳಿವೆ, ಎಷ್ಟು ಮನೆಗೆ ತೆರಳಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ ಎಂಬುದರ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ಒದಗಿಸುವಂತೆ ಸೂಚನೆ ನೀಡಿದರು.

ಶಕ್ತಿ ಯೋಜನೆಯಲ್ಲಿ ಪುತ್ತೂರಿನಲ್ಲಿ ಒಟ್ಟು 3,57,64,927 ಪ್ರಯಾಣಿಕರು ಪ್ರಯಾಣ ನಡೆಸಿದ್ದಾರೆ. ಈ ತನಕ ಯೋಜನೆಯಲ್ಲಿ ಒಟ್ಟು ರೂ. 88,06,36,668 ಹಣ ವಿನಿಯೋಗಿಸಲಾಗಿದೆ ಎಂದು ಕೆಎಸ್ಆರ್ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು. ಈ ಸಂದರ್ಭ ಬಸ್ಸು ಓಡಾಟದ ಬಗ್ಗೆ ವಿಚಾರಿಸಿದ ಅಧ್ಯಕ್ಷರು, ವಿಟ್ಲದಿಂದ ಪೆರ್ನೆ ಮಾರ್ಗದಲ್ಲಿ ಉಪ್ಪಿನಂಗಡಿಗೆ ಓಡಾಟ ನಡೆಸುತ್ತಿದ್ದ ಬಸ್ಸನ್ನು ಕೋವಿಡ್ ಸಂದರ್ಭದಲ್ಲಿ ನಿಲುಗಡೆ ಮಾಡಲಾಗಿತ್ತು. ಈ ಮಾರ್ಗದಲ್ಲಿ ಸಾಕಷ್ಟು ವಿದ್ಯಾರ್ಥಿಗಳು ಶಾಲಾ ಕಾಲೇಜ್‌ಗಳಿಗೆ ತೆರಳುತ್ತಿದ್ದಾರೆ. ಈ ಬಸ್ಸು ಓಡಾಟವನ್ನು ಮತ್ತೆ ಪ್ರಾರಂಭಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಚೆಲ್ಯಡ್ಕ ಮಾರ್ಗದಲ್ಲಿ ಬಸ್‌ಗಾಗಿ ಒತ್ತಾಯ

ಗ್ಯಾರಂಟಿ ಸಮಿತಿ ಸದಸ್ಯ ಸಂತೋಷ್ ಚೆಲ್ಮೆತ್ತಾರ್ ಅವರು, ಪುತ್ತೂರಿನಿಂದ ಸಂಟ್ಯಾರ್-ರೆಂಜ ಮಾರ್ಗವಾಗಿ ಬೆಳಗ್ಗೆ 7.30 ರಿಂದ 9 ಗಂಟೆಯ ತನಕ 6 ಬಸ್ಸುಗಳು ಓಡಾಟ ನಡೆಸುತ್ತಿದೆ. ಈ ಪೈಕಿ ಕನಿಷ್ಠ 3 ಬಸ್ಸುಗಳನ್ನಾದರೂ ಚೆಲ್ಯಡ್ಕ ಭಾಗದ ರಸ್ತೆಯಲ್ಲಿ ಓಡಾಟ ನಡೆಸುವಂತೆ ವ್ಯವಸ್ಥೆಗೊಳಿಸಿ. ಸಂಟ್ಯಾರ್-ರೆಂಜ ಮಾರ್ಗದಲ್ಲಿ ಸಾಕಷ್ಟು ಇತರ ವಾಹನಗಳ ವ್ಯವಸ್ಥೆಗಳಿವೆ. ಆದರೆ ಚೆಲ್ಯಡ್ಕ ಮಾರ್ಗದಲ್ಲಿ ಬಸ್ಸನ್ನೇ ನಂಬಿಕೊಂಡಿದ್ದಾರೆ. ಇಲ್ಲಿನವರಿಗೆ ಬಸ್ಸೇ ಗತಿ ಎಂದರು. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಕೆಎಸ್ಆರ್ಟಿಸಿ ಅಧಿಕಾರಿಗಳು ತಿಳಿಸಿದರು.

ಜು. 11ರಿಂದ ಗಂಡು ಮಕ್ಕಳಿಗೂ ಉಚಿತ ಪ್ರಯಾಣ ಆರಂಭವಾಗಲಿದೆ. ಈ ಯೋಜನೆಯಲ್ಲಿ ಯಾವುದೇ ವಿದ್ಯಾರ್ಥಿಗಳಿಗೆ ಲೋಪವಾಗದಂತೆ ಎಚ್ಚರ ವಹಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಗೃಹಜ್ಯೋತಿ ಯೋಜನೆಯಲ್ಲಿ 60,394 ಫಲಾನಭವಿಗಳಿಗೆ ರೂ. 1,20,60,000 ಅನುದಾನ ಒದಗಿಸಲಾಗಿದೆ ಎಂದು ಮೆಸ್ಕಾಂ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು. ಈ ಸಂದರ್ಭ ಮೆಸ್ಕಾಂ ಇಲಾಖೆಯನ್ನು ಖಾಸಗೀಕರಣ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ ಅಧ್ಯಕ್ಷರು, ಮೆಸ್ಕಾಂ ಇಲಾಖೆಯನ್ನು ಸರಕಾರ ಖಾಸಗಿಯವರಿಗೆ ನೀಡಿದಲ್ಲಿ ಮುಂದೆ ಎಲ್ಲರಿಗೂ ತೊಂದರೆಯಾಗಲಿದೆ. ಅದಕ್ಕಾಗಿ ನಾವು ಮೆಸ್ಕಾಂ ಅಧಿಕಾರಿಗಳ ಜೊತೆಗೆ ಕೈಜೋಡಿಸಿಕೊಂಡು ಸರಕಾರಕ್ಕೆ ಮನವರಿಕೆ ಮಾಡುವ ಕೆಲಸ ಮಾಡಬೇಕು. ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ಗೃಹಲಕ್ಷ್ಮೀ ಯೋಜನೆಯಿಂದ 35,854 ಮಂದಿಗೆ ಪ್ರಯೋಜನ

ಗೃಹಲಕ್ಷ್ಮೀ ಯೋಜನೆಯಲ್ಲಿ 35,854 ಫಲಾನುಭವಿಗಳು ಪ್ರಯೋಜನ ಪಡೆದುಕೊಂಡಿದ್ದು ಒಟ್ಟು 29 ಕಂತುಗಳಲ್ಲಿ ರೂ. 198,19,58,000 ಅನುದಾನ ಬಿಡುಗಡೆಯಾಗಿರುತ್ತದೆ. ಪ್ರಸ್ತುತ ಯೋಜನೆಗೆ ನೋಂದಾಯಿಸಿಕೊಳ್ಳಲು 4816 ಫಲಾನುಭವಿಗಳು ಬಾಕಿ ಇದ್ದಾರೆ. ಈ ಪೈಕಿ 3873 ಫಲಾನುಭವಿಗಳನ್ನು ಸಂಪರ್ಕಿಸಲಾಗಿದೆ. ಉಳಿದ 943 ಫಲಾನುಭವಿಗಳನ್ನು ಸಂಪರ್ಕಿಸಲು ಕ್ರಮ ವಹಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ತಾ.ಪಂ. ಕಾರ್ಯನಿರ್ವಹಣಾಧಿಕಾರಿ ನವೀನ್ ಕುಮಾರ್ ಭಂಡಾರಿ ಸ್ವಾಗತಿಸಿ, ವಂದಿಸಿದರು.



> **ಉದ್ಯೋಗ ದೊರಕಿದಲ್ಲಿ ಯೋಜನೆ ಸಫಲ**
> ಯುವನಿಧಿ ಫಲಾನುಭವಿಗಳಿಗೆ 2 ವರ್ಷಗಳು ಮಾತ್ರ ಯುವನಿಧಿ ಯೋಜನೆಯಡಿ ಅನುದಾನ ಪಡೆಯಲು ಅವಕಾಶವಿದೆ. ಈಗಾಗಲೇ 2 ವರ್ಷ ಪೂರ್ಣಗೊಂಡವರ ಬಗ್ಗೆ ಹಾಗೂ ಮುಂದೆ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಬಯಸುವವರಿಗೆ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗುವುದು. ಇದಕ್ಕಾಗಿ ಶಾಸಕರ ಜೊತೆಗೆ ಚರ್ಚೆ ನಡೆಸಿ ದಿನ ನಿಗದಿಪಡಿಸಲಾಗುವುದು. ಯೋಜನೆಯ ಫಲಾನುಭವಿಗಳ ಪೈಕಿ ಕನಿಷ್ಠ 200 ಮಂದಿಗೆ ಆದರೂ ಉದ್ಯೋಗ ದೊರಕಿದಲ್ಲಿ ಯೋಜನೆ ಸಫಲವಾಗಲಿದೆ.
> ● ಉಮಾನಾಥ ಶೆಟ್ಟಿ, ಅಧ್ಯಕ್ಷರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ

ಕಲ್ಲಡ್ಕ ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆ: ಸಹಪಠ್ಯೇತರ ಚಟುವಟಿಕೆಗಳ ಉದ್ಘಾಟನೆ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಆಂಗ್ಲಮಾಧ್ಯಮ ಶಾಲೆಯಲ್ಲಿ ಸಹ ಪಠ್ಯೇತರ ಚಟುವ ಟಿಕೆಗಳ ಉದ್ಘಾಟನಾ ಕಾರ್ಯಕ್ರಮ ಶಂಕರಾಚಾರ್ಯ ಸಭಾಂಗಣದಲ್ಲಿ ನಡೆಯಿತು.

ಅತಿಥಿಗಳು ದೀಪ ಪ್ರಜ್ವಲನೆಯ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕೃಷ್ಣನಿಗೆ ಕ್ಷೀರಾಭಿಷೇಕ ಮಾಡುವ ಮೂಲಕ ಹಾಗೂ ನಾದಸ್ವರ ವಾದನ ಗಳೊಂದಿಗೆ ಭರತನಾಟ್ಯ, ಸಂಗೀತ, ಕರಾಟೆ, ಸ್ಟೆಮ್, ತರಗತಿಗಳ ಉದ್ಘಾಟನೆಯನ್ನು ನೆರವೇರಿಸಲಾಯಿತು.

ಅತಿಥಿಯಾಗಿ ಭಾಗವಹಿಸಿದ್ದ ಯಕ್ಷಗಾನ ಗುರುಗಳಾದ ಅಶ್ವಥ್ ಮಂಜನಾಡಿ ಅವರು ಮಾತನಾಡಿ, ಸಮುದ್ರದಲ್ಲಿ ಅಲೆ ಮರದಲ್ಲಿ ಎಲೆ ಇದ್ದಂತೆ ಜೀವನದಲ್ಲಿ ಕಲೆ ಎಂಬುದು ಮುಖ್ಯವಾಗಿದೆ ಎಂದರು.

ಶ್ರೀರಾಮ ವಿದ್ಯಾ ಕೇಂದ್ರದ ಸಂಚಾಲಕರಾದ ವಸಂತ ಮಾಧವ ಶ್ರೀಮಾನ್ ಅಧ್ಯಕ್ಷತೆ ವಹಿಸಿದ್ದರು. ಸಂಗೀತ ಗುರುಗಳಾದ ಕೃಷಾಚಾರ್ಯ ಬಂಟ್ವಾಳ, ಭರತನಾಟ್ಯ ಗುರುಗಳಾದ ಪ್ರಭಾ. ಬಿ. ಶಂಕರ್, ಕರಾಟೆ ಗುರುಗಳಾದ ಸತೀಶ್, ಹಾಗೂ ಸ್ಟೆಮ್ ತರಬೇತುದಾರರಾದ ಸಾವನ್, ಪ್ರಾಂಶುಪಾಲರಾದ ತಿರುಮಲೇಶ್ವರ ಪ್ರಶಾಂತ್ ಹಾಗೂ ಸಹಪಠ್ಯೇತರ ಚಟುವಟಿಕೆಗಳ ಸಂಯೋಜಕರಾದ ನಿತಿನ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ನೀನಾದ್ ಕೈರಂಗಳ ನಿರೂಪಿಸಿ, ಪ್ರಾಪ್ತಿ ಸ್ವಾಗತಿಸಿದಳು, ಅನರ್ಘ್ಯ ವಂದಿಸಿದರು.

ಕಂಬಾರರು ದೇಸೀ ಪರಂಪರೆಯ ಪ್ರತಿಪಾದಕರು: ಡಾ.ಧನಂಜಯ ಕುಂಬ್ಳೆ



ಮಂಗಳೂರು: ಕನ್ನಡ ನವ್ಯ ಸಾಹಿತ್ಯ ಟಿ.ಎಸ್. ಎಲಿಯೆಟ್ ಮತ್ತು ಇತರೆ ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾಗ ಸಾಹಿತಿ ಚಂದ್ರಶೇಖರ ಕಂಬಾರರು 'ಹೇಳತೇನ ಕೇಳಾ' ಮೂಲಕ ಭಾರತೀಯ ಪರಂಪರೆ ಮತ್ತು ದೇಸೀ ಜಾನಪದ ಸಂಸ್ಕೃತಿಯನ್ನು ಪ್ರತಿಪಾದಿಸಿದವರು. ನಮ್ಮಲ್ಲೇ ಶ್ರೀಮಂತವಾದ ಮೌಖಿಕ ಮತ್ತು ಸಮೃದ್ಧ ಸಾಹಿತ್ಯ ಇರುವಾಗ ಪಾಶ್ಚಾತ್ಯ ಚಿಂತನೆಗಳಿಗೆ ನಾವು ಯಾಕೆ ಮರುಳಾಗಬೇಕು ಎಂದು ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ಧನಂಜಯ ಕುಂಬ್ಳೆ ಹೇಳಿದರು.

ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಕಾನೂನು ಶಿಕ್ಷಣ ವಿಭಾಗದ ಸಭಾಂಗಣದಲ್ಲಿ ನಡೆದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ ಕವಿ, ಕಾವ್ಯ ಸಾಹಿತ್ಯ ಪರಂಪರೆ ಎಂಬ ವಿಷಯದ ಕುರಿತ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಎಂ.ಪಿ. ಶ್ರೀನಾಥ್ ಅಧ್ಯಕ್ಷತೆ ವಹಿಸಿದ್ದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಸಹಪ್ರಾಧ್ಯಾಪಕಿ ಡಾ.ಫರೀಟಾ ವೇಗಸ್ ಉದ್ಘಾಟಿಸಿದರು. ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡೆಲ್ಲಾ ಲೋಬೊ, ಕಾರ್ಯಕ್ರಮದ ಸಂಯೋಜಕಿ, ಉಪನ್ಯಾಸಕಿ ಸಂಧ್ಯಾ ಉಪಸ್ಥಿತರಿದ್ದರು. ಸಹಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮೀ ನಾಯಕ್ ಸ್ವಾಗತಿಸಿದರು. ವಿದ್ಯಾರ್ಥಿನಿ ಅಶ್ವಿನಿ ವಂದಿಸಿದರು. ಮೇಘನಾ ಕುಂದಾಪುರ ನಿರೂಪಿಸಿದರು.

ಅಡ್ಯನಡ್ಕ ಜನತಾ ಶಾಲೆಯಲ್ಲಿ ಉಚಿತ ಸಮವಸ್ತ್ರಗಳ ವಿತರಣೆ



ಅಡ್ಯನಡ್ಕ: ಇಲ್ಲಿನ ಜನತಾ ಪ್ರೌಢ ಶಾಲೆಯಲ್ಲಿ 8ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಉಚಿತ ಸಮವಸ್ತ್ರಗಳನ್ನು ಜೂನ್ 18ರಂದು ವಿತರಿಸಲಾಯಿತು.

ಅಡ್ಯನಡ್ಕ ಜನತಾ ವಿದ್ಯಾಸಂಸ್ಥೆಗಳ ಸಂಚಾಲಕರಾದ ಡಾ. ಅಶ್ವಿನಿ ಕೃಷ್ಣಮೂರ್ತಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆಡಳಿತ ಮಂಡಳಿ ಸದಸ್ಯರಾದ ಹರೀಶ್ ಬಳಂತಿಮೊಗರು ಹಾಗೂ ಹಳೆ ವಿದ್ಯಾರ್ಥಿ ಅನೀಶ್ ಭಟ್ ಅಡ್ಯನಡ್ಕ ದಾನಿಗಳ ಪರವಾಗಿ ಮಾತನಾಡಿದರು.

ಅಡ್ಯನಡ್ಕ ಎಜುಕೇಶನಲ್ ಸೊಸೈಟಿಯ ಆಡಳಿತಾಧಿಕಾರಿ ರಮೇಶ್ ಎಂ. ಬಾಯಾರು, ಅಡ್ಯನಡ್ಕ ಎಜುಕೇಶನಲ್ ಸೊಸೈಟಿಯ ಕೋಶಾಧಿಕಾರಿ ಕೇಶವ ಭಟ್ ಚವರ್ಕಾಡು ಶುಭ ಹಾರೈಸಿದರು. ಶಾಲಾ ಉಸ್ತುವಾರಿ ಗೋವಿಂದರಾಯ ಶೆಣೈ ಅಡ್ಯನಡ್ಕ, ಜನತಾ ಕಾಲೇಜಿನ ಪ್ರಾಂಶುಪಾಲರಾದ ರವಿಕುಮಾರ್ ಆರ್. ಎಸ್. ಉಪಸ್ಥಿತರಿದ್ದರು.

ದಾನಿಗಳಾದ ನಾರಾಯಣ ಪೈ ಬೆಂಗಳೂರು, ರವಿಶಂಕರ ಎಂ. ಯು., ಹರೀಶ್ ಬಳಂತಿಮೊಗರು, ಬಾಬು ಕೊಪ್ಪಳ, ಈಶ್ವರ ನಾಯ್ಕ ಬಾಕಿಲಪದವು, ಪ್ರಭಾಕರ ಬಾಕಿಲಪದವು, ಅನೀಶ್ ಭಟ್ ಅಡ್ಯನಡ್ಕ, ಯೋಗೀಶ್ ನಾಯ ಅವರು ಸಮವಸ್ತ್ರಗಳ ವಿತರಣೆಗೆ ದಾನಿಗಳಾಗಿ ಸಹಕರಿಸಿದರು.

ಜನತಾ ಶಾಲೆ ಮುಖ್ಯೋಪಾಧ್ಯಾಯರಾದ ಟಿ. ಆರ್. ನಾಯ್ಕ್ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತ ನಾಡಿದರು. ಕನ್ನಡ ಶಿಕ್ಷಕರಾದ ಶಿವಕುಮಾರ್ ನಾಯ ಅವರು ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ಕುಸುಮಾವತಿ ವಂದಿಸಿದರು.

ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಇತರೆ ಕ್ಷೇತ್ರದಲ್ಲೂ ಸಾಧನೆ ಮಾಡಿ



ಮುಲ್ಕಿ: ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆ ಹಾಗೂ ಕ್ರೀಡೆ ಯಲ್ಲಿ ಉತ್ತಮ ಸಾಧನೆ ಮಾಡಿ ಶಾಲೆಗೆ ಕೀರ್ತಿ ತರಬೇಕು ಎಂದು ಮುಲ್ಕಿ ಸರಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜಿನ ಪ್ರಾಂಶುಪಾಲ ಡಾ. ವಾಸುದೇವ ಬೆಳ್ಳೆ ಹೇಳಿದರು.

ಮುಲ್ಕಿ ಸ. ಪ. ಪೂ. ಕಾಲೇಜಿನ ಪ್ರೌಢ ಶಾಲಾ ವಿಭಾಗದ ಎಸ್‌ಡಿಎಂಸಿ ಶಾಲಾ ಸಂಸತ್ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಲೇಜಿನ ಎಸ್‌ಬಿಸಿ ಉಪಾಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ ಎಸ್‌ಡಿಎಂಸಿ ಉಪಾಧ್ಯಕ್ಷ ವೆಂಕಟೇಶ್, ಕಾರ್ನಾಡ್ ಶ್ರೀರಾಮ ಸೇವಾ ಮಂಡಳಿಯ ಅಧ್ಯಕ್ಷ ಭಾಸ್ಕರ್ ಶೆಟ್ಟಿಗಾರ್, ಶಾಲಾ ಹಿರಿಯ ಶಿಕ್ಷಕಿ ಜಯಲಕ್ಷ್ಮೀ ಟಿ. ನಾಯಕ್, ಶಾಲಾ ನಾಯಕ ಮುತ್ತಪ್ಪ ಬಸಪ್ಪ ಹೊಸೂರು ಹಾಗೂ ವಿರೋಧ ಪಕ್ಷದ ನಾಯಕ ದಕ್ಷಿತ್ ಉಪಸ್ಥಿತರಿದ್ದರು.

ಸಮಾರಂಭದಲ್ಲಿ ನೂತನ ಎಸ್‌ಡಿಎಂಸಿ ಅಧ್ಯಕ್ಷರನ್ನಾಗಿ ಶಿವಾನಂದ ಆರ್. ಕೆ. ಅವರನ್ನು ಆಯ್ಕೆ ಮಾಡಲಾಯಿತು. ಈ ಹಿಂದೆ ಎಸ್‌ಡಿಎಂಸಿ ಅಧ್ಯಕ್ಷರಾಗಿದ್ದ ಹರ್ಷರಾಜ ಶೆಟ್ಟಿ ಮತ್ತು ಯೋಗಿನಿ ಅವರನ್ನು ಗೌರವಿಸಲಾಯಿತು. ವಿದ್ಯಾರ್ಥಿಗಳಾದ ಸಾಕ್ಷಿ ಸ್ವಾಗತಿಸಿದರು, ಪ್ರೇಕ್ಷಾ ವಂದಿಸಿದರು. ಸಿದ್ದಣ್ಣ ಅಜ್ಜಪ್ಪ ವಗ್ಗಗೋಳ ನಿರೂಪಿಸಿದರು.

ಅಯ್ಯಂಗಾಳಿ ಸಂಸ್ಮರಣೆ: ಪೈವಳಿಕೆಯಲ್ಲಿ ಸ್ಮೃತಿ ದಿನ ಆಚರಣೆ



ಮಂಜೇಶ್ವರ: ಅಯ್ಯಂಗಾಳಿ ಸಂಸ್ಮರಣೆ ಅಂಗವಾಗಿ ಪೈವಳಿಕೆ ಪಂಚಾಯತ್ ಎಸ್‌ಸಿ ಮೋರ್ಚಾ ಸಮಿತಿ ವತಿಯಿಂದ ಸ್ಮೃತಿ ದಿನವನ್ನು ಏದಾರು ಎಸ್‌ಸಿ ಕಾಲನಿಯಲ್ಲಿ ಆಚರಿಸಲಾಯಿತು.

ಎಸ್‌ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎ.ಕೆ.ಕಯ್ಯಾರು ಮಾತನಾಡಿ, ಅಯ್ಯಂಗಾಳಿಯವರು ಸಮಾಜಕ್ಕೆ ಬೇಕಾಗಿ ನಡೆಸಿದ ಹೋರಾಟಗಳ ಬಗ್ಗೆ ವಿವರಿಸಿದರು. ಅಲ್ಲದೆ ಬಡಜನರಿಗೆ ಬೇಕಾಗಿ ವಿವಿಧ ಯೋಜನೆಗಳನ್ನು ಮುಡಿಪಾಗಿಟ್ಟ ಅವರು ತನ್ನ ಸರ್ವಸ್ವವನ್ನು ತ್ಯಾಗ ಮಾಡಿದ ಮಹಾನ್ ವ್ಯಕ್ತಿಯಾಗಿದ್ದರು ಎಂದು ನುಡಿದರು.

ಸಮಾರಂಭದಲ್ಲಿ ಬಿಜೆಪಿ ಪೈವಳಿಕೆ ಪಂಚಾ ಯತ್ ಸಮಿತಿ ಅಧ್ಯಕ್ಷ ಸತ್ಯಶಂಕರ ಭಟ್ ಮಳಿವು ಅಧ್ಯಕ್ಷತೆ ವಹಿಸಿದ್ದರು.

ಎಸ್‌ಸಿ ಮೋರ್ಚಾ ಮಂಜೇಶ್ವರ ಮಂಡಲ ಅಧ್ಯಕ್ಷ ರಾಮ ಏದಾರು, ಮಂಡಲ ಕಾರ್ಯದರ್ಶಿ ರಮೇಶ್ ಎ.ಎಸ್., ಜಿಲ್ಲಾ ಕಾರ್ಯದರ್ಶಿ ಸಂದೇಶ್ ಪೆರ್ವೋಡಿ, ಕೃಷ್ಣರಾಜ್ ಅಟ್ಟೆಗೋಳಿ ಮಾತನಾಡಿದರು.

ಭಾವಚಿತ್ರಕ್ಕೆ ಪುಷ್ಪಾರ್ಚನೆ

ಇದೇ ವೇಳೆ ಅಯ್ಯಂಗಾಳಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಡೆಸಲಾಯಿತು. ರಮೇಶ್ ಅಟ್ಟೆಗೋಳಿ ಸ್ವಾಗತಿಸಿ, ಕೃಷ್ಣರಾಜ್ ಧನ್ಯವಾದವಿತ್ತರು.



ಕೇರಳ ರಾಜ್ಯ ಕೃಷಿ ಸಚಿವ ಟಿ.ಸಿದ್ದಿಕ್ ಅವರು ಶನಿವಾರ ತಿರುವನಂತಪುರದ ವರ್ಕಲ ಶಿವಗಿರಿ ಮಠಕ್ಕೆ ಭೇಟಿ ನೀಡಿದರು. ಈ ಸಂದರ್ಭ ಅವರನ್ನು ಸ್ವಾಮೀಜಿಗಳು ಬರಮಾಡಿಕೊಂಡರು.



ಬದಿಯಡ್ಕ ಗ್ರಾ. ಪಂ.ನ 8ನೇ ವಾರ್ಡ್ ವ್ಯಾಪ್ತಿಯ ಪಳ್ಳತ್ತಡ್ಕದಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಆರೋಗ್ಯ ಉಪಕೇಂದ್ರದ ನಿರ್ಮಾಣ ಸ್ಥಳಕ್ಕೆ ಗ್ರಾ.ಪಂ. ಅಧಿಕೃತರು ಭೇಟಿ ನೀಡಿ ಪರಿಶೀಲಿಸಿದರು. ಗ್ರಾ. ಪಂ.ಅಧ್ಯಕ್ಷ ಶಂಕರ ಡಿ., ವಾರ್ಡ್ ಸದಸ್ಯೆ ಉಷಾ ಪಳ್ಳತ್ತಡ್ಕ, ಪಂಚಾಯತ್ ಸದಸ್ಯ ಬಾಲಕೃಷ್ಣ ಶೆಟ್ಟಿ ಕೆ., ಕಾರ್ಯದರ್ಶಿ ಮನೋಜ್ ಕುಮಾರ್, ಗ್ರಾ. ಪಂ. ಅಧಿಕಾರಿ ಶಾಜಿ ಎಸ್. ಜೊತೆಗಿದ್ದರು.

ಕೊಡುಗು ಜಿಲ್ಲಾ ನೀರು ಮತ್ತು ನೈರ್ಮಲ್ಯ ಅಭಿಯಾನ ಸಮಿತಿ ಸಭೆ | ತುರ್ತು ಕುಡಿಯುವ ನೀರಿನ ಯೋಜನೆಯ ಕುರಿತು ಚರ್ಚೆ

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆಗೆ ಗಮನಹರಿಸಿ: ಆನಂದ್ ಪ್ರಕಾಶ್ ಮೀನಾ

ಮಡಿಕೇರಿ: ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ಸಂಬಂಧ ಜಿಲ್ಲಾ ನೀರು ಮತ್ತು ನೈರ್ಮಲ್ಯ ಅಭಿಯಾನ ಸಮಿತಿ ಸಭೆ ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ನಗರದ ಜಿಲ್ಲಾ ಪಂಚಾಯತ್ ಸಿಇಒ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪ್ರಸಕ್ತ ಸಾಲಿನಲ್ಲಿ ತುರ್ತು ಕುಡಿಯುವ ನೀರಿನ ಯೋಜನೆ ಕೈಗೊಳ್ಳುವ ನಿಟ್ಟಿನಲ್ಲಿ ಕ್ರಿಯಾಯೋಜನೆಗೆ ಅನುಮೋದನೆ ಸಂಬಂಧ ಚರ್ಚಿಸಲಾಯಿತು.

ಹಾಗೆಯೇ ಎಸ್‌ಡಿಪಿ ಮತ್ತು ನಾನ್ ಎಸ್‌ಡಿಪಿ ಯೋಜನೆಯನ್ನು ಮಾರ್ಪಡಿಸಿ ಕ್ರಿಯಾಯೋಜನೆ ತಯಾರಿಸುವ ಸಂಬಂಧ ಸುದೀರ್ಘ ಚರ್ಚೆ ನಡೆಯಿತು. ಜಲಜೀವನ್ ಮಿಷನ್ ಯೋಜನಾ ಕಾಮಗಾರಿಗಳ ಕುಂದುಕೊರತೆ ಸಂಬಂಧಿಸಿದಂತೆ ಸಿಇಒ ಆನಂದ ಪ್ರಕಾಶ್ ಮಾಹಿತಿ ಪಡೆದರು.



ಪ್ರತಿ ಮನೆಗೂ ನಲ್ಲಿ ನೀರು ಸಂಪರ್ಕ

ಈ ಸಂದರ್ಭ ಮಾತನಾಡಿದ ಅವರು, ತುರ್ತು ಕುಡಿಯುವ ನೀರಿನ ಕಾಮಗಾರಿ ಕೈಗೊಳ್ಳಬೇಕು. ಜಲಜೀವನ್ ಮಿಷನ್ ಯೋಜನೆಯಡಿ ಪ್ರತಿ ಮನೆಗೂ ನಲ್ಲಿ ನೀರು ಸಂಪರ್ಕ ಕಲ್ಪಿಸಬೇಕು. ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಗಮನ ಹರಿಸಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಇದುವರೆಗೆ ಕಡಿಮೆ ಮಳೆಯಾಗಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನಿಗಾ ವಹಿಸಬೇಕು ಎಂದು ಅವರು ನಿರ್ದೇಶನ ನೀಡಿದರು.

> **ಸ್ವಚ್ಛತೆಗೆ ಆದ್ಯತೆ ನೀಡಿ**
> ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿನ ಕುಡಿಯುವ ನೀರಿನ ಸಂಗ್ರಹಣೆ ಕೇಂದ್ರಗಳು ಹಾಗೂ ನೀರಿನ ಮೂಲಗಳ ಸ್ವಚ್ಛತೆಗೆ ಆದ್ಯತೆ ನೀಡಿ ತಕ್ಷಣ ಕ್ರಮ ಕೈಗೊಳ್ಳಬೇಕು.
> ● ಆನಂದ್ ಪ್ರಕಾಶ್ ಮೀನಾ

ಸಭೆಯಲ್ಲಿ ತುರ್ತು ಕುಡಿಯುವ ನೀರಿನ ಬಗ್ಗೆ, ವಿಶೇಷ ಅಭಿವೃದ್ಧಿ ಕಾರ್ಯಕ್ರಮ, ಜಲಜೀವನ್ ಮಿಷನ್ ಯೋಜನೆಗಳ ಕಾಮಗಾರಿ, ಡಿಸಿನ್ಫೆಕ್ಷನ್ ಯೂನಿಟ್, ಹರ್ ಘರ್ ಜಲ್ ವಿಷಯ, ನೀರಿನ ಗುಣಮಟ್ಟ ಪರೀಕ್ಷೆ ಹಾಗೂ ಇಎಫ್‌ಐ ಮತ್ತು ಇ.ಒ.ಟಿಗಳ ಕುರಿತು ಚರ್ಚಿಸಲಾಯಿತು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಭಾಸ್ಕರ್ ಮಾತನಾಡಿ, ಜಲಜೀವನ್ ಮಿಷನ್ 2.0 ಯೋಜನೆ ಅನುಷ್ಠಾನ ಸಂಬಂಧಿಸಿದಂತೆ ವಿವರಿಸಿದರು.

ಸ್ವಚ್ಛತೆ ಮತ್ತು ದುರಸ್ತಿ ಕಾಮಗಾರಿಗಳು, ಕುಡಿಯುವ ನೀರಿನ ಸಮಸ್ಯೆಯಾಗಿರುವ ಗ್ರಾಮಗಳನ್ನು ಗುರುತಿಸಿ ಸಮರ್ಪಕ ನೀರು ಪೂರೈಕೆಗೆ ಕ್ರಮ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕಾಮಗಾರಿಗಳಿಗೆ ಚಾಲನೆ ಮತ್ತಿತರ ಬಗ್ಗೆ ಭಾಸ್ಕರ್ ಮಾಹಿತಿ ನೀಡಿದರು.

ಗಾಳಿಬೀಡು ಗ್ರಾ.ಪಂ.ವ್ಯಾಪ್ತಿಯ ಜವಾಹರ್ ನವೋದಯ ಶಾಲೆಗೆ ರೂ.78.50 ಲಕ್ಷ ವೆಚ್ಚದಲ್ಲಿ ಹೊಸ ನೀರು ಶುದ್ಧೀಕರಣ ಘಟಕ ನಿರ್ಮಾಣದ ಆಡಳಿತಾತ್ಮಕ ಅನುಮೋದನೆಗೆ ಚರ್ಚೆ ನಡೆಸಲಾಯಿತು. ವಾಟರ್ ಬಜೆಟ್, 20 ಓವರ್ ಹೆಡ್ ಟ್ಯಾಂಕ್‌ಗಳ ದುರಸ್ತಿ ಮತ್ತು ಕಂಪ್ಯೂಟರ್ ಆಪರೇಟರ್ ಹಾಗೂ ಡ್ರೈವರ್ -ಸಿಬ್ಬಂದಿ ಮುಂದುವರಿಕೆ ಕುರಿತು ಇದೇ ಸಂದರ್ಭ ಚರ್ಚಿಸಲಾಯಿತು.

ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಟಿ.ಪಿ.ವೀರೇಂದ್ರ, ತಾಲೂಕು ಆರೋಗ್ಯಾಧಿಕಾರಿ ಡಾ.ಸನತ್ ಕುಮಾರ್, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಸವರಾಜು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರಸನ್ನಕುಮಾರ್, ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಕುಮಾರ್, ಜಿಲ್ಲಾ ಯೋಜನಾ ವ್ಯವಸ್ಥಾಪಕ ಪುಟ್ಟಸ್ವಾಮಿ, ಸಹಾಯಕ ಎಂಜಿನಿಯರ್‌ಗಳು, ಕಿರಿಯ ಸಹಾಯ ಎಂಜಿನಿಯರ್‌ಗಳು, ಐಎಂಇಎಸ್, ಐಎಸ್‌ಎ ಸಿಬ್ಬಂದಿಗಳು, ಮಾದರಿ ಸಂಗ್ರಹ ತಂಡ, ಸ್ವಚ್ಛ ಭಾರತ್ ಮಿಷನ್ ಸಿಬ್ಬಂದಿಗಳು ಹಾಜರಿದ್ದರು.

ಸುತ್ತಮುತ್ತ

ಜನಗಣತಿ: ಎಡನೀರು ಶ್ರೀ, ಎಸ್ಪಿಯಿಂದ ಮಾಹಿತಿ ದಾಖಲು

ಕಾಸರಗೋಡು: ಜಿಲ್ಲೆಯಲ್ಲಿ ಜನಗಣತಿ ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ಪೊಲೀಸ್



ವರಿಷ್ಠಾಧಿಕಾರಿ ಪಿ.ನಿತಿನ್ ರಾಜ್ ಹಾಗೂ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅವರು ತಮ್ಮ ವ್ಯಯಕ್ತಿಕ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಶನಿವಾರ ದಾಖಲಿಸುವ ಮೂಲಕ ಮೂಲಕ ಸ್ವಯಂ ಗಣತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು. ಎಡಿಎಂ ಪಿ.ಉದಯಕುಮಾರ್, ಜಿಲ್ಲಾಡಳಿತದ ಹಿರಿಯ ಅಧೀಕ್ಷಕ ಕೆ.ರಮೇಶ್, ಜನಗಣತಿ ವಿಭಾಗದ ಕಿರಿಯ ಅಧೀಕ್ಷಕ ಕೆ.ಜಗದೀಶ ಮತ್ತು ಜನಗಣತಿ ವಿಭಾಗ ಗುಮಾಸ್ತ ಪಿ.ರಾಕೇಶ್, ಜನಗಣತಿ ನಿರ್ದೇಶನಾಲಯದ ಅಧಿಕಾರಿ ಟಿ.ರಾಜ್, ಉಪಸ್ಥಿತರಿದ್ದರು.

ಇಂದು ಪ್ರತಾಪನಗರ 7ನೇ ವಾರ್ಡ್ ಗ್ರಾಮಸಭೆ

ಉಪ್ಪಳ: ಮಂಗಲ್ಪಾಡಿ ಗ್ರಾಮ ಪಂಚಾಯತ್‌ನ 7ನೇ ವಾರ್ಡ್ ಪ್ರತಾಪನಗರದ ಗ್ರಾಮಸಭೆಯು ಜೂ.21ರಂದು ಬೆಳಗ್ಗೆ 10 ಗಂಟೆಗೆ ಪ್ರತಾಪನಗರದಲ್ಲಿರುವ ಬಿಲ್ಲಾರ್ಡ್ಸ್ ಶಾಲೆಯಲ್ಲಿ ನಡೆಯಲಿದೆ. ಸಭೆಯಲ್ಲಿ ಗ್ರಾಮದ ಎಲ್ಲಾ ಸದಸ್ಯರು ಭಾಗವಹಿಸಬೇಕೆಂದು ವಾರ್ಡ್ ಸದಸ್ಯ ವಸಂತಕುಮಾರ್ ಮಯ್ಯ ವಿನಂತಿಸಿದ್ದಾರೆ.

ನೂತನ ಎಡಿಎಂ ಪಿ.ಉದಯಕುಮಾರ್ ಅಧಿಕಾರ ಸ್ವೀಕಾರ

ಕಾಸರಗೋಡು: ಕಾಸರಗೋಡು ಜಿಲ್ಲೆಯ ನೂತನ ಎಡಿಎಂ ಆಗಿ ಪಿ.ಉದಯಕುಮಾರ್ ಶನಿವಾರ ಅಧಿಕಾರ ವಹಿಸಿಕೊಂಡರು. ಅವರು ಎಲ್‌ಎ ಎನ್



ಎಚ್ ವಿಶೇಷ ತಹಶೀಲ್ದಾರ್ ಆಗಿದ್ದರು. 1996ರಲ್ಲಿ ಎಲ್‌ಎ ಜನರಲ್ ಕಚೇರಿಯಲ್ಲಿ ಎಲ್‌ಡಿ ಕ್ಲರ್ಕ್ ಆಗಿ ಕರ್ತವ್ಯಕ್ಕೆ ಸೇರಿದ್ದ ಉದಯಕುಮಾರ್ ಅವರು ಕಾಸರಗೋಡು ತಾಲೂಕು ಕಚೇರಿಯಲ್ಲಿ ಹಿರಿಯ ಕ್ಲರ್ಕ್ ಆಗಿ ನಂತರ ಶೇಣಿ, ಆಡೂರು, ಬದಿಯಡ್ಕ, ಕುಂಬ್ಡಾಜೆ ಮತ್ತು ಬೇಳ ಗ್ರಾಮ ಕಚೇರಿಗಳಲ್ಲಿ ಗ್ರಾಮ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಮಾತ್ರವಲ್ಲದೆ ಕಾಸರಗೋಡು ಕಲೆಕ್ಟರೇಟ್, ಮಂಜೇಶ್ವರ ತಾಲೂಕು ಮತ್ತು ಕಾಸರಗೋಡು ಆರ್‌ಡಿಒ ಕಚೇರಿಯಲ್ಲಿ ಜೂನಿಯರ್ ಸೂಪರಿಂಟೆಂಡೆಂಟ್ ಆಗಿ ಕಾಸರಗೋಡು ಆರ್‌ಡಿಒ ಕಚೇರಿಯಲ್ಲಿ ಹಿರಿಯ ಸೂಪರಿಂಟೆಂಡೆಂಟ್ ಆಗಿ ಮತ್ತು ಭೂ ನ್ಯಾಯಮಂಡಳಿ ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ.

ವರ್ಕಾಡಿ ಆರೋಗ್ಯ ಕೇಂದ್ರದಲ್ಲಿ ಸಂದರ್ಶನ

ಮಂಜೇಶ್ವರ: ವರ್ಕಾಡಿ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಎಚ್‌ಎಂಸಿ ಮೂಲಕ ಫಾರ್ಮಸಿಸ್ಟ್ ಹುದ್ದೆಯ ನೇಮಕಾತಿಗಾಗಿ ಸಂದರ್ಶನವು ಜೂ.30ರಂದು ಬೆಳಗ್ಗೆ 11 ಗಂಟೆಗೆ ವರ್ಕಾಡಿ ಕುಟುಂಬ ಆರೋಗ್ಯ ಕೇಂದ್ರದಲ್ಲಿ ನಡೆಯಲಿದೆ. ಪ್ಲಸ್ ಟು ಸಯನ್ಸ್, ಡಿ.ಫಾರ್ಮ್, ಬಿ.ಫಾರ್ಮ್, ಕೇರಳ ರಾಜ್ಯ ಫಾರ್ಮಸಿ ಕೌನ್ಸಿಲ್ ನೋಂದಣಿ ವಿದ್ಯಾರ್ಹತೆಯಾಗಿದೆ. ವಯಸ್ಸಿನ ಮಿತಿ 18-40 ಆಗಿದೆ. ಹೆಚ್ಚಿನ ಮಾಹಿತಿಗಾಗಿ 04998 203900 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಪ್ರೊಬೇಷನ್ ಕಚೇರಿ: ಸಂದರ್ಶನ

ಕಾಸರಗೋಡು: ಸಾಮಾಜಿಕ ನ್ಯಾಯ ಇಲಾಖೆಯಲ್ಲಿರುವ ಕಾಸರಗೋಡು ಪ್ರೊಬೇಷನ್ ಕಚೇರಿಯಲ್ಲಿ ಪ್ರೊಬೇಷನ್ ಸಹಾಯಕ ಹುದ್ದೆಗೆ ನೇಮಕಾತಿ ಸಂದರ್ಶನವು ಜುಲೈ 1ರಂದು ಬೆಳಗ್ಗೆ 10 ಗಂಟೆಗೆ ವಿದ್ಯಾನಗರ ಸಿವಿಲ್ ಸ್ಟೇಷನ್‌ನಲ್ಲಿರುವ ಜಿಲ್ಲಾ ಪ್ರೊಬೇಷನ್ ಕಚೇರಿಯಲ್ಲಿ ನಡೆಯಲಿದೆ. ಎಂಎಸ್‌ಡಬ್ಲ್ಯೂ (ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಮಾಜ ಕಾರ್ಯದಲ್ಲಿ ಸ್ನಾತಕೋತ್ತರ ಪದವಿ), ಸಮಾಜ ಕಾರ್ಯ ಕ್ಷೇತ್ರದಲ್ಲಿ ಕನಿಷ್ಠ ಎರಡು ವರ್ಷಗಳ ಕೆಲಸದ ಅನುಭವ ವಿದ್ಯಾರ್ಹತೆಯಾಗಿದೆ. ವಯೋಮಿತಿ 40 ವರ್ಷಗಳು. ಹೆಚ್ಚಿನ ವಿವರಗಳಿಗೆ 04994 255366 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ತಜ್ಞರ ಸಮಿತಿ ವರದಿ, ನಗರಸಭೆ ಮನವಿ ಹಿನ್ನೆಲೆ | ಸ್ಥಳಕ್ಕೆ ಖುದ್ದು ಜಿಲ್ಲಾಧಿಕಾರಿ ಭೇಟಿ ನೀಡಿ ಪರಿಶೀಲನೆ

ನುಳ್ಳಿಪ್ಪಾಡಿಯಲ್ಲಿ ಸರ್ವೀಸ್ ರಸ್ತೆಗೆ ಸಂಪರ್ಕ ಕಲ್ಪಿಸಲು ಕ್ರಮ

ಕಾಸರಗೋಡು: ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕಾಸರಗೋಡು ಚೌಕಿ ಮತ್ತು ವಿದ್ಯಾನಗರದ ನಡುವೆ ನುಳ್ಳಿಪ್ಪಾಡಿಯಲ್ಲಿ ಸರ್ವೀಸ್ ರಸ್ತೆಯಿಂದ ಹೆದ್ದಾರಿಗೆ ನೂತನ ಸಂಪರ್ಕ ಕಲ್ಪಿಸುವ ಯೋಜನಾ ಪ್ರಕ್ರಿಯೆಗಳನ್ನು ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಚುರುಕುಗೊಳಿಸಿದ್ದಾರೆ.

ಕಾಸರಗೋಡು ನಗರ ಮತ್ತು ವಿದ್ಯಾನಗರ ಸಿವಿಲ್ ಸ್ಟೇಷನ್ ಪ್ರದೇಶದಲ್ಲಿ ಹೆಚ್ಚುತ್ತಿರುವ ಸಂಚಾರ ದಟ್ಟಣೆಗೆ ಶಾಶ್ವತ ಪರಿಹಾರ ಒದಗಿಸಲು ಜಿಲ್ಲಾಧಿಕಾರಿಗಳು ಶನಿವಾರ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ, ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿದ್ದಾದರು.

ಕಾಸರಗೋಡು ನಗರಸಭೆಯ ಅಧ್ಯಕ್ಷೆ ಶಾಹಿನಾ ಸಲೀಂ ನೇತೃತ್ವದ ನಗರಸಭೆಯ ಬೇಡಿಕೆ ಮತ್ತು ವಿವಿಧ ಸಂಘಟನೆಗಳು ಸಲ್ಲಿಸಿದ ಮನವಿಯನ್ನು ಪರಿಗಣಿಸಿ ಜಿಲ್ಲಾಧಿಕಾರಿಗಳು ಈ ಸಮಸ್ಯೆಗೆ ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ.

ಈ ಸಮಸ್ಯೆ ಕುರಿತು ಇತ್ತೀಚೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಹೆದ್ದಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್



ಪ್ರಸ್ತಾಪಿಸಿದ್ದರು. ಇದೇ ವೇಳೆ ಆರ್‌ಟಿಒ, ಪೊಲೀಸ್, ಲೋಕೋಪಯೋಗಿ ಇಲಾಖೆ, ನಗರಸಭೆ ಮತ್ತು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡ ತಜ್ಞರ ಸಮಿತಿ ರಚಿಸಲಾಗಿತ್ತು. ಮತ್ತು ಸಮಗ್ರ ಪರಿಶೀಲನೆಗೆ ಆದೇಶಿಸಲಾಗಿತ್ತು.

ತಜ್ಞರ ಸಮಿತಿಯ ವರದಿಯ ಆಧಾರದ ಮೇಲೆ ನುಳ್ಳಿಪ್ಪಾಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ಇರುವ ಸರ್ವೀಸ್ ರಸ್ತೆಯನ್ನು ಮುಖ್ಯ ರಸ್ತೆಯ ಮಟ್ಟಕ್ಕೆ ಏರಿಸಿ ಪ್ರವೇಶ ಮಾರ್ಗವನ್ನು ನಿಗದಿಪಡಿಸುವುದು ವಾಹನ ದಟ್ಟಣೆ ನಿಯಂತ್ರಣಕ್ಕೆ ಪರಿಣಾಮಕಾರಿ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಗಳ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ಸಮ್ಮುಖದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಅಂತಿಮ ಪರಿಶೀಲನೆಯನ್ನು ನಡೆಸಿದ್ದಾರೆ.

ಚೌಕಿ ಅಂಡರ್‌ಪಾಸ್ ಮತ್ತು ವಿದ್ಯಾನಗರದ ನಂತರ ಪ್ರವೇಶ ಮಾರ್ಗದ ನಡುವೆ ಸುಮಾರು ಎಂಟು ಕಿಲೋ ಮೀಟರ್‌ಗಳವರೆಗೆ ಬೇರೆ ಯಾವುದೇ ಪ್ರವೇಶ ಸೌಲಭ್ಯವಿಲ್ಲದ ಕಾರಣ ಸರ್ವೀಸ್ ರಸ್ತೆಯಲ್ಲಿ ಸಂಚರಿಸುವ ಎಲ್ಲಾ ವಾಹನಗಳು ಕಾಸರಗೋಡು ನಗರದ ಮೂಲಕ ಹಾದು ಹೋಗುತ್ತವೆ. ಹೊಸ ಬಸ್ ನಿಲ್ದಾಣದಿಂದ ಜಿಲ್ಲಾಧಿಕಾರಿ ಕಚೇರಿ ತನಕದ ಪ್ರದೇಶಗಳಲ್ಲಿ ಪ್ರತಿದಿನ ಅನುಭವಿಸುತ್ತಿರುವ ತೀವ್ರ ಸಂಚಾರ ದಟ್ಟಣೆಗೆ ನುಳ್ಳಿಪ್ಪಾಡಿ ಪರಿಸರದಲ್ಲಿ ಪ್ರವೇಶದ್ವಾರ ಇಲ್ಲದಿರುವುದು ಮುಖ್ಯ ಕಾರಣ ಎಂದು ತಪಾಸಣೆಯಲ್ಲಿ ತಿಳಿದುಬಂದಿದೆ.

ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಉಪಾಧ್ಯಕ್ಷ ಕೆ.ಎಂ.ಹನೀಫ್, ಕೌನ್ಸಿಲರ್‌ಗಳಾದ ರಹಮಾನ್ ತೋಟನ್, ಸಮೀನಾ ಮುಜೀಬ್, ಉಪ ಕಲೆಕ್ಟರ್ ಲಿಪು ಎಸ್.ಲಾರೆನ್ಸ್, ಎಲ್‌ಎಎನ್‌ಎಚ್ ಉಪ ಕಲೆಕ್ಟರ್ ಶಶಿಕುಮಾರ್, ಕಾಸರಗೋಡು ತಹಶೀಲ್ದಾರ್ ಶಮೀಲ್ ಬಾಬು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಇಂಜಿನಿಯರ್ ಶಂಕರ್ ಗಣೇಶ್, ಮೋಟಾರು ವಾಹನ ಇಲಾಖೆ, ಪೊಲೀಸ್, ಲೋಕೋಪಯೋಗಿ ಇಲಾಖೆ, ಯುಎಲ್‌ಸಿಸಿಎಸ್ ಸಂಸ್ಥೆಯ ಪ್ರತಿನಿಧಿಗಳು ಮತ್ತು ಇತರರು ಹಾಜರಿದ್ದರು.

ಕಾಸರಗೋಡು ನಗರದಲ್ಲಿ ಸಂಚಾರ ದಟ್ಟಣೆಗೆ ಪರಿಹಾರ

ತಜ್ಞರ ಸಮಿತಿ ವರದಿ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಮಂಡಳಿಯ ಶಿಫಾರಸ್ಸುಗಳನ್ನು ಪರಿಗಣಿಸಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿ ಕಾರದ ಕಣ್ಣೂರು ಯೋಜನಾ ನಿರ್ದೇಶಕರು ಕೇರಳ ಪ್ರಾದೇಶಿಕ ಅಧಿಕಾರಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಇದಕ್ಕಾಗಿ ಕೆಲ ಸುರಕ್ಷತಾ ಮಾನದಂಡಗಳನ್ನು ಪಾಲಿಸಬೇಕಾಗಿದೆ. ಇದಕ್ಕೆ ಸಂಬಂಧಿಸಿದ ತಾಂತ್ರಿಕ ಕೆಲಸಗಳು ಪ್ರಗತಿಯಲ್ಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಸರ್ವೀಸ್ ರಸ್ತೆಗೆ ಪ್ರವೇಶ ಕಲ್ಪಿಸಿದರೆ ನಗರದಲ್ಲಿ ವಾಹನ ದಟ್ಟಣೆ ಕಡಿಮೆ ಯಾಗುತ್ತದೆ ಮತ್ತು ವಿದ್ಯಾನಗರ, ಸಿವಿಲ್ ಸ್ಟೇಷನ್, ಡಿಸಿ ಕಚೇರಿ ಸ್ಥಳಗಳಲ್ಲಿ ಸಂಚಾರವು ಸುಗಮವಾಗಲಿದೆ ಸಮಿತಿತ ವರದಿ ತಿಳಿಸಿದೆ.

ಯೋಗಾಭ್ಯಾಸವು ಒಂದು ದಿನದ ಆಚರಣೆಯಲ್ಲ: ಸ್ವಾಮಿ ವಿವಿಕ್ತಾನಂದ

ಕಾಸರಗೋಡು: ಅಂತಾರಾಷ್ಟ್ರೀಯ ಯೋಗ ದಿನ ಹಾಗೂ ಸಂಗೀತ ದಿನದ ಅಂಗವಾಗಿ ಕಾಸರಗೋಡು ಚಿನ್ಮಯ ವಿದ್ಯಾಲಯದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಶನಿವಾರ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿನ್ಮಯ ಮಿಷನ್ ಕೇರಳ ಘಟಕದ ಮುಖ್ಯಸ್ಥ ಸ್ವಾಮಿ ವಿವಿಕ್ತಾನಂದ ಸರಸ್ವತಿ ಅವರು, ಆರೋಗ್ಯಕರ ದೇಹ ಮತ್ತು ಶಾಂತ ಮನಸ್ಸಿಗೆ ಯೋಗ ಅತ್ಯಾವಶ್ಯಕವಾಗಿದ್ದು, ಯೋಗವು ಒಂದು ದಿನದ ಆಚರಣೆಯಲ್ಲ ಎಂದು ಅವರು ತಿಳಿಸಿದರು. ಯೋಗವು ಜೀವನಶೈಲಿಯಾಗಿ ಅಳವಡಿಸಿಕೊಳ್ಳಬೇಕಾದ ಅಭ್ಯಾಸವಾಗಿದೆ ಎಂದು ಅವರು ತಿಳಿಸಿದರು.

ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಯೋಗ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಸುಬ್ರಹ್ಮಣ್ಯ ಪೈಲೂರು ಕಾರ್ಯಕ್ರಮ ಉದ್ಘಾಟಿಸಿ, ಯೋಗಾಸನಗಳ ನಿಯಮಿತ ಅಭ್ಯಾಸವು ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗಿದ್ದು, ಜೀವನಶೈಲಿ ಸಂಬಂಧಿತ ರೋಗಗಳನ್ನು ನಿಯಂತ್ರಿಸುವಲ್ಲಿ ಯೋಗದ ಪಾತ್ರ ಮಹತ್ತರವಾಗಿದೆ ಎಂದು ಹೇಳಿದರು.

ವ್ಯಕ್ತಿತ್ವ ವಿಕಾಸ ಮತ್ತು ಮೌಲ್ಯಾಧಾರಿತ ಜೀವನಕ್ಕೆ ಯೋಗವು ಪ್ರೇರಣೆಯಾಗುತ್ತದೆ



ಎಂದು ವಿದ್ಯಾಲಯದ ಪ್ರಾಂಶುಪಾಲ ಟಿ.ವಿ.ಸುಕುಮಾರನ್ ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಂದ ಯೋಗಾಸನ ಪ್ರದರ್ಶನ ಹಾಗೂ ಸಂಗೀತ ಕಾರ್ಯಕ್ರಮ ನಡೆಯಿತು. ಅಂತಾರಾಷ್ಟ್ರೀಯ ಯೋಗ ದಿನ ಮತ್ತು ಸಂಗೀತ ದಿನವನ್ನು ಸಂಯುಕ್ತವಾಗಿ ಆಚರಿಸಿದ ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆರೋಗ್ಯ ಜಾಗೃತಿ ಮತ್ತು ಕಲಾಸ್ವಾದನೆಯನ್ನು ಬೆಳೆಸುವ ಗಮನಾರ್ಹ ವೇದಿಕೆಯಾಯಿತು. ವಿದ್ಯಾಲಯದ ಉಪಪ್ರಾಂಶುಪಾಲ ಅಭಿಜಿತ್ ಎಂ.ಕೆ., ಮುಖ್ಯ ಶಿಕ್ಷಕಿ ಪೂರ್ಣಿಮಾ ಎಸ್. ಆರ್. ಹಾಗೂ ಸಿಂಧು ಶಶೀಂದ್ರನ್, ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾಸರಗೋಡಿನಲ್ಲಿ 1,03,001 ಮಕ್ಕಳಿಗೆ ಪೋಲಿಯೋ ಲಸಿಕೆ ನೀಡುವ ಗುರಿ: ಡಿಸಿ



ಕಾಸರಗೋಡು: ಜಿಲ್ಲೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕೆ ವಿತರಣೆ ಕಾರ್ಯಕ್ರಮವು ಜೂ.28ಕ್ಕೆ ನಡೆಯಲಿದ್ದು, ಈ ಕಾರ್ಯಕ್ರಮ ಯಶಸ್ವಿಗೊಳಿಸಲು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ಇಲಾಖೆಗಳ ಸಮನ್ವಯ ಸಮಿತಿ ಸಭೆ ಜರಗಿತು.

ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪರಿಶಿಷ್ಟ ವಿಭಾಗಗಳ ಮಕ್ಕಳು ಮತ್ತು ಅತಿಥಿ ಕಾರ್ಮಿಕರ ಮಕ್ಕಳು ಸೇರಿದಂತೆ ಎಲ್ಲಾ ಐದು ವರ್ಷದೊಳಗಿನ ಮಕ್ಕಳು ಪಲ್ಸ್ ಪೋಲಿಯೋ ಲಸಿಕೆ ಪಡೆಯುವಂತಾಗಲಿ ಎಂದು ಜಿಲ್ಲಾಧಿಕಾರಿ ಹೇಳಿದರು.

ಜಿಲ್ಲೆಯಲ್ಲಿ ಐದು ವರ್ಷದೊಳಗಿನ 1,03,001 ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಜಿಲ್ಲೆಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ವಿತರಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಡಿಸಿ ವಿವರಿಸಿದರು.

ವಲಸೆ ಕಾರ್ಮಿಕರ ಮಕ್ಕಳನ್ನು ಪೋಲಿಯೋ ಬೂತ್‌ಗಳಿಗೆ ಕರೆದೊಯ್ಯುವಂತೆ ಜಿಲ್ಲಾಧಿಕಾರಿ ಪೊಲೀಸ್ ಮತ್ತು ಕಾರ್ಮಿಕ ಇಲಾಖೆಗೆ ನಿರ್ದೇಶನ ನೀಡಿದ್ದಾರೆ. ಐದು ವರ್ಷದೊಳಗಿನ 1,03,001 ಮಕ್ಕಳಿಗೆ ಲಸಿಕೆ ನೀಡಲು ಜಿಲ್ಲೆಯಲ್ಲಿ 1,272 ಬೂತ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಜಿಲ್ಲಾ ಸಮೂಹ ಮಾಧ್ಯಮ ಅಧಿ ಕಾರಿ ಅಬ್ದುಲ್ ಲತೀಫ್ ಮಡತ್ತಿಲ್, ಜಿಲ್ಲಾ ವೈದ್ಯಕೀಯ ಕಚೇರಿಯ ಪ್ರತಿನಿಧಿ ಬಾಸಿಲ್ ವರ್ಗೀಸ್, ಡಿಡಿಇ ಟಿ. ಶೈಲಾ, ಜಿಲ್ಲಾ ಮಹಿಳಾ ಸೆಲ್‌ನ ಎಎಸ್‌ಐಗಳಾದ ಬಿ. ಸುಪ್ರಭಾ, ಎ.ಎಂ.ಸರಳಾ, ಜಿಲ್ಲಾ ಸಾಮಾಜಿಕ ನ್ಯಾಯ ಅಧಿಕಾರಿ ಆರ್ಯ ಪಿ.ರಾಜ್, ಕಾಸರಗೋಡು ಪರಿಶಿಷ್ಟ ಅಭಿವೃದ್ಧಿ ಅಧಿಕಾರಿ ಕೆ.ಮಧುಸೂದನನ್, ಐಸಿಡಿಎಸ್ ಅಧಿಕಾರಿಗಳು, ಕೆಎಸ್‌ಇಬಿ ಹಾಗೂ ಕುಟುಂಬಶ್ರೀ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕಾಳ್ಯಂಗಾಡು: ಬ್ರಹ್ಮಕಲಶೋತ್ಸವ ಲೆಕ್ಕಪತ್ರ ಮಂಡನೆ, ಅಭಿನಂದನಾ ಸಭೆ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಸಮಿತಿಯ ಸಭೆಯು ಜರಗಿತು.

ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಹಾಗೂ ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ ಅಧ್ಯಕ್ಷತೆ ವಹಿಸಿ ಬ್ರಹ್ಮಕಲಶೋತ್ಸವದಲ್ಲಿ ನಿರಂತರ ಸೇವೆಗೈದ ಮಾತೃ ಸಮಿತಿ, ಎಸ್‌ಎಂಸಿ ಕ್ಲಬ್ ಕಾಳ್ಯಂಗಾಡು, ಮಹಾದಾನಿಗಳು, ಸೇವಾ ಕಚೇರಿ, ವೇದಿಕೆ, ಪಾಕಶಾಲೆ, ಉಗ್ರಾಣ, ಅಚ್ಚುಕಟ್ಟಾಗಿ ಲೆಕ್ಕಪತ್ರ ತಯಾರಿಸಿದ ಕೋಶಾಧಿಕಾರಿ ಹಾಗೂ ಬ್ರಹ್ಮಕಲಶೋತ್ಸವದ ಯಶಸ್ಸಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸೇವೆಗೈದ ಎಲ್ಲಾ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದರು.

ಶ್ರೀ ಕ್ಷೇತ್ರದ ತಂತ್ರಿವರ್ಯ ಶ್ರೀಕೃಷ್ಣ ಗುರೂಜಿ, ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಬ್ರಹ್ಮಕಲಶ ಸಮಿತಿ ಗೌರವ ಸಲಹೆಗಾರ ಗೋಪಾಲಕೃಷ್ಣ ಕುಲಾಲ್ ವಾಂತಿಚ್ಚಾಲ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನ್ ರಾಜ್ ಕೊರಕೋಡು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ಬ್ರಹ್ಮಕಲಶ ಸಮಿತಿ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಸಹ ಕೋಶಾಧಿಕಾರಿ ಪುನೀತ್ ಕೆಮ್ಮಣ್ಣು, ಕೆ.ಜಗದೀಶ್ ಕೂಡ್ಲು, ಮಹಿಳಾ ಸಮಿತಿ ಕಾರ್ಯದರ್ಶಿ ಹರ್ಷಿತಾ, ಮಾತೃ ಸಮಿತಿ ಅಧ್ಯಕ್ಷೆ ರಾಧಿ ಕಾ ರಂಜಿತ್, ಕಾರ್ಯದರ್ಶಿ ದೀಪಾ ರಾಜೇಶ್, ಪುಷ್ಪಲತಾ ಮೊದಲಾದವರು ಇದ್ದರು. ಕೋಶಾಧಿಕಾರಿ ಶಾಂತಕುಮಾರ್ ಲೆಕ್ಕಪತ್ರ ಮಂಡಿಸಿ, ಕೊನೆಯಲ್ಲಿ ಜೀರ್ಣೋದ್ಧಾರ ಸಮಿತಿ, ಬ್ರಹ್ಮಕಲಶೋತ್ಸವ ಸಮಿತಿ, ಮಾತೃ ಸಮಿತಿಗಳನ್ನು ವಿಸರ್ಜಿಸಲಾಯಿಯತು. ಹರ್ಷಿತಾ ಕಾಳ್ಯಂಗಾಡು ಪ್ರಾರ್ಥಿಸಿದರು. ಬ್ರಹ್ಮಕಲಶ ಸಮಿತಿ ಕಾರ್ಯದರ್ಶಿ ರಂಜಿತ್ ಮನ್ನಿಪ್ಪಾಡಿ ಸ್ವಾಗತಿಸಿ, ಗೋವಿಂದ ನಾಯ್ಕ್ ಕಾಳ್ಯಂಗಾಡು ವಂದಿಸಿದರು. ಪತ್ರಕರ್ತ ವೀಜಿ ಕಾಸರಗೋಡು ನಿರೂಪಿಸಿದರು.

ಧರ್ಮತ್ತಡ್ಕ ಶಾಲೆಯ ವಿದ್ಯಾರ್ಥಿ ಪೊಲೀಸ್ ಕೆಡೆಟ್‌ಗೆ ದೈಹಿಕ ಪರೀಕ್ಷೆ



ಮಂಜೇಶ್ವರ: ಧರ್ಮತ್ತಡ್ಕ ಎಸ್ ಡಿಪಿಎಚ್‌ಎಸ್ ಶಾಲೆಯ ವಿದ್ಯಾರ್ಥಿ ಪೊಲೀಸ್ ಕೆಡೆಟ್ (ಎಸ್‌ಪಿಸಿ) ವತಿಯಿಂದ 2026-27ನೇ ವರ್ಷದ ಜೂನಿಯರ್ ಬ್ಯಾಚ್‌ಗೆ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯ ಅಂಗವಾಗಿ ದೈಹಿಕ ಸಾಮರ್ಥ್ಯ ಪರೀಕ್ಷೆಯು ಶುಕ್ರವಾರ ಶಾಲಾ ಮೈದಾನದಲ್ಲಿ ನಡೆಯಿತು.

ಆಯ್ಕೆ ಪ್ರಕ್ರಿಯೆಯಲ್ಲಿ ಎಂಟನೇ ತರಗತಿಗೆ ಪ್ರವೇಶ ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯ, ಸಹಿಷ್ಣುತೆ, ಚುರುಕುತನ ಹಾಗೂ ಕ್ರೀಡಾ ಕೌಶಲ್ಯಗಳನ್ನು ಪರಿಗಣಿಸಿ ವಿವಿಧ ಹಂತಗಳ ಪರೀಕ್ಷೆ ಏರ್ಪಡಿಸಲಾಯಿತು. 100 ಮೀಟರ್ ಓಟ, 400 ಮೀಟರ್ ಓಟ, ಸ್ಟ್ಯಾಂಡಿಂಗ್ ಬ್ರಾಡ್ ಜಂಪ್, ಶಟಲ್ ರನ್, ಪುಶ್ ಅಪ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲಾಯಿತು. ಆಯ್ಕೆ ಪ್ರಕ್ರಿಯೆಯು ಅತ್ಯಂತ ಪಾರದರ್ಶಕ ಹಾಗೂ ಶಿಸ್ತುಬದ್ಧ ರೀತಿಯಲ್ಲಿ ನಡೆಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಪ್ರಕ್ರಿಯೆಯ ಬಳಿಕ ಲಿಖಿತ ಪರೀಕ್ಷೆ ನಡೆಯಲಿದ್ದು ನಂತರ ಆಯ್ಕೆಯಾದ ವಿದ್ಯಾರ್ಥಿಗಳು ಮುಂದಿನ ಹಂತದ ತರಬೇತಿಗೆ ಅರ್ಹತೆ ಪಡೆಯುವರು. ನಂತರ ವಿದ್ಯಾರ್ಥಿಗಳು ಸಮಾಜಮುಖಿ ಚಟುವಟಿಕೆಗಳು, ನಾಯಕತ್ವ ಗುಣಗಳು, ದೇಶಪ್ರೇಮ ಹಾಗೂ ಉತ್ತಮ ನಾಗರಿಕ ಮೌಲ್ಯಗಳನ್ನು ಬೆಳೆಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿರುವ ಎಸ್‌ಪಿಸಿ ಯೋಜನೆಯ ಭಾಗವಾಗಲಿದ್ದಾರೆ.

ಕಾರ್ಯಕ್ರಮದ ಯಶಸ್ವಿ ನಿರ್ವಹಣೆಗೆ ಶಾಲಾ ಮುಖ್ಯೋಪಾಧ್ಯಾಯರು, ಬದಿಯಡ್ಕ ಪೊಲೀಸ್ ಠಾಣೆಯ ಡಿಐ ರಜೀಶ್ ಮತ್ತು ಎಡಿಐ ಪ್ರಸೀತಾ, ಸಿಪಿಒ ಈಶ್ವರಿ ಡಿ., ಎಸಿಪಿಒ ಶಿವಪ್ರಸಾದ್ ಸಿ., ದೈಹಿಕ ಶಿಕ್ಷಕರಾದ ಸಂತೋಷ್ ಕುಮಾರ್ ಎಂ., ಶಿಕ್ಷಕರಾದ ಅಭಿಲಾಷ್ ಬಿ., ಪ್ರಶಾಂತ ಹೊಳ್ಳ ಎನ್., ರಾಜಕುಮಾರ್ ಕೆ., ಪ್ರದೀಪ್ ಕೆ. ಸಹಕರಿಸಿದರು.

ಮ್ಯಾಂಗ್ರೋವ್ ಕಾಡುಗಳು ಕರಾವಳಿ ಸಂರಕ್ಷಣೆಗೂ ಸಹಕಾರಿಯಾಗಿದೆ: ಅಶ್ವಿನಿ



ಕಾಞಂಗಾಡು: ಪ್ರಕೃತಿಯ ವಿದ್ಯಮಾನಗಳ ಮುಂದೆ ಮನುಷ್ಯ ಅತ್ಯಲ್ಪನಾಗಿದ್ದಾನೆ. ಭಾರತವು ಜಗತ್ತಿಗೆ ತೋರಿಸಿದ ಮಾದರಿಯು ಪ್ರಕೃತಿಯನ್ನು ರಕ್ಷಿಸುವುದಲ್ಲ, ಬದಲಾಗಿ ಪ್ರಕೃತಿಯನ್ನು ಪೂಜಿಸುವುದಾಗಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್. ಅಶ್ವಿನಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನೀಲೇಶ್ವರ ಸಮೀಪದ ಕಡಿಂಞಿಮೂಲೆ ಮ್ಯಾಂಗ್ರೋವ್ ನರ್ಸರಿಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಕೆಲವು ದಶಕಗಳಿಂದ ಕೇರಳದಲ್ಲಿ ಮ್ಯಾಂಗ್ರೋವ್ ಕಾಡುಗಳ ಪ್ರಸ್ತುತತೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ಜೀವವೈವಿಧ್ಯತೆಯ ಭಂಡಾರವಾಗಿರುವ ಮ್ಯಾಂಗ್ರೋವ್ ಕಾಡುಗಳು ಕರಾವಳಿಯ ಸಂರಕ್ಷಣೆಗೂ ಉಪಯುಕ್ತವಾಗಬಹುದು ಎಂಬುದು ಸಾಬೀತಾಗಿದೆ. ಲಕ್ಷಾಂತರ ಮ್ಯಾಂಗ್ರೋವ್ ಗಿಡಗಳನ್ನು ನೆಡುವ ಧ್ಯೇಯವನ್ನು ಕೈಗೆತ್ತಿಕೊಂಡಿರುವ ಕಡಿಞಿಮೂಲೆ ನಿವಾಸಿ ಪಿ.ವಿ.ದಿವಾಕರನ್ ಅವರಿಗೆ ಬಿಜೆಪಿ ಎಲ್ಲಾ ಬೆಂಬಲವನ್ನು ನೀಡುತ್ತದೆ ಎಂದು ಎಂ.ಎಲ್.ಅಶ್ವಿನಿ ಹೇಳಿದರು.

ತೀಯಾ ಮಹಾಸಭಾ ರಾಜ್ಯಾಧ್ಯಕ್ಷ ಗಣೇಶ್ ಅರಮಂಗಾನಂ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನೀಲೇಶ್ವರ ನಗರಸಭೆಯ ಮಾಜಿ ಸದಸ್ಯ ವಿನಯರಾಜ್ ಪಿ.ವಿ., ನೆಲ್ಲಿಕಾತುರುತ್ತಿ ಕಳಗಂ ಅಧ್ಯಕ್ಷ ಕೆ.ವಿ.ಅಂಬಾಡಿ, ಬಿಜೆಪಿ ಕಾಸರಗೋಡು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್. ಸುನೀಲ್, ನೀಲೇಶ್ವರ ಮಂಡಲ ಅಧ್ಯಕ್ಷ ಸಾಗರ್ ಚಾತಮತ್ತ್, ಕೆ.ಟಿ.ಕುಂಞಿಕೃಷ್ಣನ್, ಉದಿನೂರು ಸುಕುಮಾರನ್, ಪ್ರವೀಣ್ ಮಾಸ್ಟರ್, ಸಂಗೀತಾ ವಿಜಯನ್ ಮುಂತಾದವರು ಮಾತನಾಡಿದರು.

ಕುಂಬ್ಡಾಜೆ ಗ್ರಾಮ ಪಂಚಾಯತ್‌ನಲ್ಲಿ ಕಾಲುಬಾಯಿ ರೋಗ ಲಸಿಕೆ ವಿತರಣೆ



ಬದಿಯಡ್ಕ: ಪಶುಸಂಗೋಪನಾ ಇಲಾಖೆಯ ಆಶ್ರಯದಲ್ಲಿ ಕೈಗೊಂಡಿರುವ ಎಂಟನೇ ಹಂತದ ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆ ವಿತರಣೆಯ ಕುಂಬ್ಡಾಜೆ ಗ್ರಾಮ ಪಂಚಾಯತ್ ಮಟ್ಟದ ಉದ್ಘಾಟನೆಯನ್ನು ಹೈನುಗಾರಿಕಾ ಕೃಷಿಕ ಮಾಧವ ಭಟ್ ಅವರ ನಿವಾಸದಲ್ಲಿ ಶನಿವಾರ ಹಮ್ಮಿಕೊಳ್ಳಲಾಯಿತು.

ಪಂಚಾಯತ್ ಅಧ್ಯಕ್ಷೆ ಯಶೋಧಾ ಎನ್. ಅವರು ಲಸಿಕೆ ಕಿಟ್‌ನ್ನು ಲೈವ್ ಸ್ಟೋಕ್ ಇನ್‌ಸ್ಪೆಕ್ಟರ್ ಗೋಪಾಲನ್ ಕೆ.ಎನ್. ಅವರಿಗೆ ಹಸ್ತಾಂತರಿಸುವ ಮೂಲಕ ನಿರ್ವಹಿಸಿದರು. ಕುಂಬ್ಡಾಜೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ, ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ., ವಾರ್ಡ್ ಸದಸ್ಯರಾದ ಸೌಭಾಗ್ಯಲಕ್ಷ್ಮಿ ಕೆ., ಎಸ್.ಮೊಹಮ್ಮದ್ ಕುಂಞಿ, ಗೀತಾ ಡಿ., ಮಹೇಶ್ ಅಜ್ಜಿಮೂಲೆ, ಜಯನಗರ ಡೈರಿ ಸಹಕಾರಿ ಸಂಘದ ಕಾರ್ಯದರ್ಶಿ ಸೂರ್ಯನಾರಾಯಣ ಭಟ್, ಅಶೋಕ ಜಿ., ವೆಟರ್ನರಿ ಸರ್ಜನ್ ಡಾ.ಶ್ರೀಲಾ ಎಲ್., ಲೈವ್ ಸ್ಟೋಕ್ ಇನ್‌ಸ್ಪೆಕ್ಟರ್‌ಗಳಾದ ಆದರ್ಶ್ ಜೆ., ಆಸಿಫ್ ಹೈದರ್, ಜಯನ್ ಪಿ.ಪಿ. ಮತ್ತು ಸಿಬ್ಬಂದಿ ತಂಗಮಣಿ ಭಾಗವಹಿಸಿದ್ದರು.

ಜು.13ರವರೆಗೆ ಲಸಿಕೆ

ಎಂಟನೇ ಹಂತದ ಕಾಲುಬಾಯಿ ರೋಗ ಪ್ರತಿರೋಧ ಚುಚ್ಚುಮದ್ದು ವಿತರಣೆಯು ಜುಲೈ 13ರ ತನಕ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯಲಿದೆ.

ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದಿಂದ 'ಪ್ರಸಕ್ತ ವಿದ್ಯಮಾನಗಳತ್ತ ಬೆಳಕಿನ ಕಿರಣ' ವಿಚಾರಗೋಷ್ಠಿ | ಪ್ರಬಂಧ ಮಂಡನೆ

ಯಕ್ಷಗಾನದ ಕಲೆಯ ಉಳಿವಿಗಾಗಿ ಸ್ತುತ್ಯರ್ಹ ಕಾರ್ಯಕ್ರಮ: ಎಡನೀರು ಸ್ವಾಮೀಜಿ ಮೆಚ್ಚುಗೆ

ಕಾಸರಗೋಡು: ಯಕ್ಷಗಾನ ಕಲೆಯ ದೀಪಕ್ಕೆ ತೈಲ ಧಾರೆಗಳಾಗೋಣ ಎಂಬ ಶೀರ್ಷಿಕೆಯಡಿ ಯಕ್ಷಗಾನ ವಲಯದ ವಿದ್ವಾಂಸರು, ಸಂಘಟಕರು, ಕಲಾವಿದರು ಹಾಗೂ ಮಾಧ್ಯಮದವರು ಜೊತೆಗೂಡಿ ಪ್ರಸಕ್ತ ವಿದ್ಯಮಾನಗಳತ್ತ ಬೆಳಕಿನ ಕಿರಣ ಎಂಬ ವಿಚಾರಗೋಷ್ಠಿಯನ್ನು ಸಿರಿಬಾಗಿಲು ಪ್ರತಿಷ್ಠಾನವು ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರದಲ್ಲಿ ಆಯೋಜಿಸಿರುವುದು ಸ್ತುತ್ಯರ್ಹ ಕಾರ್ಯ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.

ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದ ಶ್ರೀ ಕೇಶವಾನಂದ ಭಾರತೀ ಸ್ಮೃತಿ ಮಂದಿರದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಆಶೀರ್ವಚನ ನೀಡಿದರು.

ವಿದ್ವಾಂಸ ಡಾ.ಎಂ. ಪ್ರಭಾಕರ ಜೋಶಿ ಮತ್ತು



ಪ್ರಸಂಗಕರ್ತ, ವಿದ್ವಾಂಸ ಡಾ.ರಾಘವನ್ ನಂಬಿಯಾರ್ ವಿಚಾರಗೋಷ್ಠಿಗೆ ಚಾಲನೆ ನೀಡಿ ಉಪನ್ಯಾಸವಿತ್ತರು.

ಹಿಂದಿನ ಕಲಾ ಪ್ರದರ್ಶನ, ಹಿಂದಿನ ಪ್ರೇಕ್ಷಕರು, ಸ್ಪಂದನೆ, ಇಂದಿನ ಕಲಾವಿದರ ರಂಗಪ್ರಸ್ತುತಿ, ಹಾಸ್ಯವನ್ನು ಸೇರಿಸಿ ಕಲಾವಿದರ ಅಭಿಮಾನಿಗಳಾಗುವ ಪ್ರೇಕ್ಷಕರು, ಅದಕ್ಕೆ ಸ್ಪಂದಿಸುವ ಕಲಾವಿದರು, ಸಂಪ್ರದಾಯ ಮತ್ತು ನವೀನತೆಯ ನಡುವೆ ಸಮತೋಲನ ಹೇಗೆ ಸಾಧಿಸಬಹುದು, ಯುವ ಪೀಳಿಗೆ ಮತ್ತು ಯಕ್ಷಗಾನವು ಯುವಕರನ್ನು ರಂಗದತ್ತ ಸೆಳೆಯುವಲ್ಲಿ ನಾವು ಯಶಸ್ವಿಯಾಗಿದ್ದೇವೆಯೇ ಮುಂತಾದ ವಿಷಯಗಳ ಕುರಿತು ಉಪನ್ಯಾಸಕ, ಹವ್ಯಾಸಿ ಭಾಗವತ ಹರಿಕೃಷ್ಣ ಹೊಳ್ಳ ಬ್ರಹ್ಮಾವರ ವಿಷಯ ಮಂಡಿಸಿದರು.

ಲಕ್ಷ್ಮಿ ಮಚ್ಚಿನ ಮಾತನಾಡಿ, ಸಾಮಾಜಿಕ ಜಾಲತಾಣದ ಮೂಲಕ ಯಕ್ಷಗಾನಕ್ಕೆ ಹೊಸ ಪ್ರೇಕ್ಷಕರು ದೊರೆಯುತ್ತಿದ್ದಾರೆಯೇ ಎಂಬ ವಿಷಯದಲ್ಲಿ ಪ್ರಬಂಧ ಮಂಡಿಸಿದರು. ಯಕ್ಷಗಾನ ಪ್ರಸಂಗಗಳ ಸಂದೇಶ, ಸಮಾಜದ ಪರಿವರ್ತನೆ, ಜನಪ್ರಿಯತೆಯ ಹೆಸರಿನಲ್ಲಿ ಕಲಾತ್ಮಕ ಗುಣಕ್ಕೆ ಧಕ್ಕೆ ಉಂಟಾಗುತ್ತಿದೆಯೇ ಎಂಬಿತ್ಯಾದಿ ವಿಚಾರವಾಗಿ ಕುರಿಯ ವಿಠಲ ಶಾಸ್ತ್ರಿ ಪ್ರತಿಷ್ಠಾನದ ಸಂಚಾಲಕ, ಕಲಾವಿದ ಉಜಿರೆ ಅಶೋಕ ಭಟ್ ವಿಚಾರ ಮಂಡನೆ ಮಾಡಿದರು.

ಪರಿವರ್ತನೆ, ಸ್ವೀಕರಿಸುವ ಪ್ರೇಕ್ಷಕ ವರ್ಗ, ಸಾಮಾಜಿಕ ಜಾಲತಾಣದ ಮೆಚ್ಚುಗೆ ಮತ್ತು ಅತಿರೇಕದ ಆರಾಧನೆಗಳ ನಡುವಿನ ವ್ಯತ್ಯಾಸ ಎಂಬ ವಿಷಯಗಳತ್ತ ಲೇಖಕ ಹಾಗೂ ಅರ್ಥಧಾರಿ ರಾಧಾಕೃಷ್ಣ ಕಲ್ಚಾರ್ ವಿಷಯ ಮಂಡಿಸಿ ಮಾತನಾಡಿದರು.

ಮುಂದಿನ 25 ವರ್ಷಗಳ ಯಕ್ಷಗಾನದ ಮುನ್ನಡೆಯ ಮುನ್ನೋಟ ಎಂಬ ವಿಚಾರವಾಗಿ ಕಾಸರಗೋಡು ಸರಕಾರಿ ಕಾಲೇಜಿನ ಉಪನ್ಯಾಸಕ ಡಾ.ರತ್ನಾಕರ ಮಲ್ಲಮೂಲೆ ಬೆಳಕು ಚೆಲ್ಲಿದರು. ಕಾರ್ಯಕ್ರಮದಲ್ಲಿ ಗೋಪಿಕಾ ಸತೀಶ ಮಯ್ಯ, ಸತೀಶ ಅಡಪ್ಪ ಸಂಕಬೈಲು, ಯೋಗೀಶ ರಾವ್ ಚಿಗುರುಪಾದೆ, ವೆಂಕಟೇಶ ನಾವಡ ಪೊಳಲಿ, ಧನಂಜಯ ನೆಲ್ಯಾಡಿ ಮೈಸೂರು, ವಿ.ರಾಘವೇಂದ್ರ ಉಡುಪ ನೇರಳೆಕಟ್ಟೆ, ನಿತ್ಯಾನಂದ ರಾವ್ ವೇಜಾವರ, ಪದ್ಮಾ ಆಚಾರ್ ಪುತ್ತೂರು, ಮಹೇಶ ಮಣಿಯಾಣಿ ದೊಡ್ಡತೋಟ, ದೇವಕಾನ ಶ್ರೀಕೃಷ್ಣ ಭಟ್, ದಿವಾಣ ದುರ್ಗಾಪ್ರಸಾದ್ ಕಟೀಲು, ದಿನೇಶ ಉಪ್ಪೂರ, ಸದಾಶಿವ ನಲ್ಲಿಮಾರು ಮೂಡುಬಿದರೆ, ವಿಷ್ಣು ಶರ್ಮ ವಾಟೆಪಡ್ಪು, ರವಿ ಅಲೆವೂರಾಯ, ದೇವಾನಂದ ಭಟ್ ಬೆಳುವಾಯಿ, ಸಿತ್ಲಾ ರಂಗನಾಥ ರಾವ್, ರಾಜಾರಾಮ ರಾವ್ ಮೀಯಪದವು, ಸುಬ್ಬಪ್ಪ ಕೈಕಂಬ, ಭುಜಬಲಿ ಧರ್ಮಸ್ಥಳ, ಅಮ್ಮುಂಜೆ ಜನಾರ್ದನ, ಶ್ಯಾಮ್ ಕುಂಚಿನಡ್ಕ ಮುಂತಾದ ಗಣ್ಯರು ಭಾಗವಹಿಸಿದ್ದರು.

ಡಾ. ಶ್ರುತಿಕೀರ್ತಿರಾಜ ಉಜಿರೆ ಮತ್ತು ಹರೀಶ ಬಳಂತಿಮೊಗರು ನಿರೂಪಿಸಿದರು. ಪ್ರತಿಷ್ಠಾನದ ಅಧ್ಯಕ್ಷ, ಭಾಗವತ ರಾಮಕೃಷ್ಣ ಮಯ್ಯ ಸಿರಿಬಾಗಿಲು ಸ್ವಾಗತಿಸಿ, ವಂದಿಸಿದರು. ವಿಘ್ನೇಶ ಕಾರಂತ ಕೂಡ್ಲು ಉದಯ ಕಂಬಾರು ಪ್ರಾರ್ಥಿಸಿದರು. ಬಳಿಕ ಗುರುದಕ್ಷಿಣೆ – ಅಸಿಕಾ ಪರಿಣಯ ಎಂಬ ಯಕ್ಷಗಾನ ಪ್ರದರ್ಶನ ನಡೆಯಿತು.

ಸುತ್ತ ಮುತ್ತ

ಇಂದು ಜಿಲ್ಲಾ ಬಿಜೆಪಿಯಿಂದ ಯೋಗ ದಿನಾಚರಣೆ

ಉಡುಪಿ: ಬಿಜೆಪಿ ಉಡುಪಿ ಜಿಲ್ಲೆ ಇದರ ನೇತೃತ್ವದಲ್ಲಿ ಜಿಲ್ಲಾ ಯುವ ಮೋರ್ಚಾ ಇದರ ಸಹಯೋಗದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಜೂ.21, ಬೆಳಿಗ್ಗೆ 7.30ಕ್ಕೆ ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಸಂಸದರು ಮತ್ತು ಶಾಸಕರ ಉಪಸ್ಥಿತಿಯಲ್ಲಿ ಉಡುಪಿಯ ಹೋಟೆಲ್ ಕಿದಿಯೂರ್ ನ ಮಾಧವ ಕೃಷ್ಣ ಸಭಾಂಗಣದಲ್ಲಿ ನಡೆಯಲಿದೆ.
ಪಕ್ಷದ ಪ್ರಮುಖರು, ಬಿಜೆಪಿ ಜಿಲ್ಲಾ, ಮೋರ್ಚಾ, ಪ್ರಕೋಷ್ಠ ಮಂಡಲ ಸಹಿತ ವಿವಿಧ ಸ್ತರದ ಪದಾಧಿಕಾರಿಗಳು, ಸಮಿತಿ ಸದಸ್ಯರು ಹಾಗೂ ಕಾರ್ಯಕರ್ತ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿರುವಂತೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಹೆರ್ಗ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು 'ಕಲಾ ನಡಿಗೆ ನಿಮ್ಮ ಬಳಿಗೆ' ಸಂಗೀತ

ಉಡುಪಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಡುಪಿ ಜಿಲ್ಲೆ, ಸಿಂಫನಿ ಸಂಗೀತಬಳಗ, ಭ್ರಾಮರಿ ಜನಪದ ಕಲಾ ತಂಡ ಉಡುಪಿ ಇವರ ಸಹಯೋಗದಲ್ಲಿ ಕಲಾ ನಡಿಗೆ ನಿಮ್ಮ ಬಳಿಗೆ ಸುಗಮ ಸಂಗೀತ ಹಾಗೂ ಜನಪದ ನೃತ್ಯ ಕಾರ್ಯಕ್ರಮ ಜೂ.21 ರಂದು ಸಂಜೆ 5 ಗಂಟೆಗೆ ಮಲ್ಪೆ ಬೀಚ್‌ನಲ್ಲಿ ನಡೆಯಲಿದೆ.
ಕಾರ್ಯಕ್ರಮವನ್ನು ಶಾಸಕ ಯಶ್‌ಪಾಲ್ ಸುವರ್ಣ ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಹುದ್ದೆಗಳ ನೇಮಕಾತಿ: ಅರ್ಜಿ ಆಹ್ವಾನ

ಉಡುಪಿ: ವಿವಿಧ ಗ್ರೂಪ್ 'ಬಿ' ಗೆಜೆಟೆಡ್ ಅಲ್ಲದ ಮತ್ತು ಗ್ರೂಪ್ 'ಸಿ' ಹುದ್ದೆಗಳ ನೇಮಕಾತಿಗಾಗಿ ಸಿಬ್ಬಂದಿ ಆಯ್ಕೆ ಆಯೋಗವು ಉದ್ಯೋಗಾಕಾಂಕ್ಷಿಗಳಿಂದ ವೆಬ್‌ಸೈಟ್ https://ssc.gov.in ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.
ಮಾನ್ಯತೆ ಪಡೆದ ವಿವಿ / ಸಂಸ್ಥೆಯಿಂದ ಪದವಿ ಅಥವಾ ತತ್ಸಮಾನ ಪದವಿ ಪಡೆದಿರುವ 18 ರಿಂದ 32 ವರ್ಷ ವಯೋಮಿತಿ ಒಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಆಯ್ಕೆಯನ್ನು ಮುಕ್ತ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಮಾಡಲಾಗುತ್ತದೆ. ಅರ್ಜಿಗಳನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ. ಜೂ.22 ಆನ್‌ಲೈನ್ ನೋಂದಣಿಗೆ ಕೊನೆಯ ದಿನ. ಮಾಹಿತಿಗೆ ಸಹಾಯವಾಣಿ 080–25502520, 25527342 ಅನ್ನು ಸಂಪರ್ಕಿಸ ಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಉದ್ಯೋಗಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಕೋಟ ಬ್ಲಾಕ್ ವ್ಯಾಪ್ತಿಯ ಪಕ್ಷದ ಬೂತ್ ಏಜೆಂಟ್ ಸಭೆ

ಕೋಟ: ಕೋಟ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಕೋಟ ಬ್ಲಾಕ್ ವ್ಯಾಪ್ತಿಯ ಪಕ್ಷದ ಬೂತ್ ಏಜೆಂಟ್‌ಗಳ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ, ಕೇಂದ್ರ ಸರಕಾರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿದೆ. ಹೀಗಾಗಿ ಕಾಂಗ್ರೆಸ್ ಆಡಳಿತವಿರುವ ರಾಜ್ಯ ಹಾಗೂ ಪ್ರಾಬಲ್ಯದ ಪ್ರದೇಶಗಳಲ್ಲಿ ನಮ್ಮ ಮತದಾರರನ್ನು ಕಾಪಿಟ್ಟುಕೊಳ್ಳುವ ಕಾರ್ಯ ಮಾಡಬೇಕು ಎಂದರು.
ಬ್ಲಾಕ್ ಅಧ್ಯಕ್ಷ ಶಂಕರ್ ಕುಂದರ್ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಪ್ರಮುಖರಾದ ಕಿಶನ್ ಹೆಗ್ಡೆ ಕೊಳ್ಕೆಬೈಲು, ದಿನೇಶ್ ಹೆಗ್ಡೆ ಮೊಳಹಳ್ಳಿ, ಕೆ.ಪಿ.ಸಿ.ಸಿ. ಸಾಮಾಜಿಕ ಜಾಲತಾಣದ ಉಪಾಧ್ಯಕ್ಷ ಚಂದ್ರಶೇಖರ ಶೆಟ್ಟಿ, ಬ್ಲಾಕ್ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಸುವರ್ಣ, ಪ್ರಮುಖರಾದ ರೋಷನ್ ಶೆಟ್ಟಿ ತಿಮ್ಮಪೂಜಾರಿ ಕೋಟ, ಗಣೇಶ್ ನೆಲ್ಲಿಬೆಟ್ಟು, ದಿನೇಶ್ ಬಂಗೇರ ಹಾಗೂ ಪ್ರಮುಖರು ಇದ್ದರು.

ಬೆಳೆ ವಿಮೆ ಯೋಜನೆ ನೋಂದಣಿ

ಉಡುಪಿ: ಜಿಲ್ಲೆಯಲ್ಲಿ ಅಡಿಕೆ ಮತ್ತು ಕಾಳುಮೆಣಸು ಬೆಳೆಗಳಿಗೆ ಹವಾಮಾನ ವೈಪರಿತ್ಯದಿಂದ ಉಂಟಾಗುವ ಬೆಳೆ ನಷ್ಟಕ್ಕೆ ಪ್ರಸಕ್ತ ಸಾಲಿನ ಮರು ವಿನ್ಯಾಸಗೊಳಿಸಿದ ಹವಾಮಾನಾಧಾರಿತ ಬೆಳೆ ವಿಮೆ ಕಾರ್ಯಕ್ರಮದಡಿ ನೊಂದಣಿ ಮಾಡಿಕೊಳ್ಳಲು ರೈತರಿಗೆ ಅವಕಾಶ ಕಲ್ಪಿಸಲಾಗಿದೆ. ಯೋಜನೆಯಡಿ ನೊಂದಣಿ ಮಾಡಿಸಲು ಜೂ.30 ಕೊನೆಯ ದಿನವಾಗಿದ್ದು, ರೈತರು ವಿಮಾ ಕಂತುಗಳ ಪಾವತಿಸಲು ನಿಗದಿತ ದಾಖಲೆಗಳೊಂದಿಗೆ ಹತ್ತಿರದ ಬ್ಯಾಂಕ್, ವ್ಯವಸಾಯ ಸೇವಾ ಸಹಕಾರಿ ಸಂಘ, ಸಿ.ಎಸ್.ಸಿ ಹಾಗೂ ಗ್ರಾಮ ಒನ್ –ಸೇವಾ ಕೇಂದ್ರಗಳನ್ನು ಸಂಪರ್ಕಿಸಬಹುದು.

ಎಸ್‌ವಿಟಿ: ಯಕ್ಷಗಾನ ಕೇಂದ್ರದ ಉಚಿತ ತರಬೇತಿಯ ಉದ್ಘಾಟನೆ



ಕಾರ್ಕಳ: ಎಸ್‌ವಿಟಿ ಸಮೂಹ ಶಿಕ್ಷಣ ಸಂಸ್ಥೆಗಳ ಯಕ್ಷಗಾನ ಕೇಂದ್ರದ ಉಚಿತ ತರಬೇತಿಯ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಎಸ್‌ವಿ ಎಜ್ಯುಕೇಶನ್ ಟ್ರಸ್ಟ್‌ನ ಕಾರ್ಯದರ್ಶಿ ಕೆ.ಪಿ. ಶೆಣೈ ಅಧ್ಯಕ್ಷತೆ ವಹಿಸಿ ಉದ್ಘಾಟನೆ ನೆರವೇರಿಸಿದರು.
ಯಕ್ಷಗಾನ ಕೇಂದ್ರದ ನಿರ್ದೇಶಕರಾದ ಎಸ್.ರಾಮ್ ಭಟ್ ಮಾತನಾಡಿ, ಎಸ್‌ವಿಟಿ ವಿದ್ಯಾ ಸಂಸ್ಥೆಯಲ್ಲಿ ಯಕ್ಷಗಾನ ನಡೆದು ಬಂದ ರೀತಿ ವಿವರಿಸಿದರು.
ಪ್ರೌಢಶಾಲಾ ಹಿರಿಯ ಸಹ ಶಿಕ್ಷಕ ಯೋಗೇಂದ್ರ ನಾಯಕ್, ಆಂಗ್ಲ ಮಾಧ್ಯಮ ಮುಖ್ಯೋಪಾಧ್ಯಾಯಿನಿ ಮಾಲಿನಿ ಕೆ., ಪ್ರಾ.ಶಾಲಾ ಮುಖ್ಯೋಪಾಧ್ಯಾಯರಾದ ಎಚ್.ಜಿ. ಬಂಡಿವಡ್ಡರ್ ಮತ್ತಿತರರಿದ್ದರು. ಕೇಂದ್ರದ ಗುರುಗಳಾದ ಅಜಿತ್ ಕುಮಾರ್ ಜೈನ್ ವಂದಿಸಿ, ಶಿಕ್ಷಕ ಸುನಿಲ್ ಎಸ್. ಶೆಟ್ಟಿ ಸ್ವಾಗತಿಸಿ, ದೇವದಾಸ್ ಕೆರೆಮನೆ ನಿರೂಪಿಸಿದರು.

ಗಂಗೊಳ್ಳಿಯಲ್ಲಿ ಕೆರೆ ಅತಿಕ್ರಮಣ ತೆರವಿಗೆ ಅಧಿಕಾರಿಗಳ ಹಿಂದೇಟು | ಸ್ಥಳೀಯರ ಆಕ್ರೋಶ, ಕ್ರಮಕ್ಕೆ ಆಗ್ರಹ

ಒಂದೆರೆಡು ವರ್ಷದಲ್ಲಿ ಕೆರೆಯೇ ಇಲ್ಲದ ಪರಿಸ್ಥಿತಿ ನಿರ್ಮಾಣ!

ಗಂಗೊಳ್ಳಿ: ಕುಂದಾಪುರ ತಾಲೂಕಿನ ಗಂಗೊಳ್ಳಿಯಲ್ಲಿ ಕೆರೆ ಅತಿಕ್ರಮಣ ತೆರವುಗೊಳಿಸಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಿಂದೇಟು ಹಾಕುತ್ತಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ
ರಾಜ್ಯದ ಹಲವೆಡೆ ಕೆರೆಗಳನ್ನು ಅತಿಕ್ರಮಿಸಿಕೊಂಡು ರಸ್ತೆ, ಮನೆ, ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿಕೊಂಡಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಸರಕಾರ ಕೆರೆ ಒತ್ತುವರಿ ತೆರವುಗೊಳಿಸಲು ಮುಂದಾಗಿದೆ. ಆದರೆ ಗಂಗೊಳ್ಳಿಯಲ್ಲಿ ಮಾತ್ರ ಇಂತಹ ಯಾವುದೇ ಗಂಭೀರ ಕ್ರಮಗಳು ನಡೆಯದಿರುವುದರಿಂದ ಅಸ್ತಿತ್ವದಲ್ಲಿರುವ ಕೆರೆಗಳು ಹಂತ ಹಂತವಾಗಿ ಅತಿಕ್ರಮಣಗೊಳ್ಳುತ್ತಿದೆ. ಕೆರೆ ಅತಿಕ್ರಮಣ ತಡೆಯುವಂತೆ ಸಾರ್ವಜನಿಕರು ಮಾಡಿದ ಮನವಿಗೆ ಆಡಳಿತ ವರ್ಗ ಸ್ಪಂದಿಸದಿರುವುದು ಅತಿಕ್ರಮಣದಾರರಿಗೆ ವರದಾನವಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಒಂದೆರೆಡು ವರ್ಷದಲ್ಲಿ ಕೆರೆಯೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗುವುದು ಖಚಿತ.

ಹಲವು ಕೆರೆಗಳಿವೆ
ಸರಕಾರಿ ದಾಖಲೆಗಳ ಪ್ರಕಾರ ಗಂಗೊಳ್ಳಿಯಲ್ಲಿ ಸುಮಾರು 15ಕ್ಕೂ ಮಿಕ್ಕಿ ಸಣ್ಣ ಕೆರೆಗಳಿದ್ದು, ಸುಮಾರು 5 ಕೆರೆಗಳು ಅತಿ ದೊಡ್ಡ ಕೆರೆಗಳಾಗಿವೆ. ಕೃಷಿ ಉದ್ದೇಶಗಳಿಗೆ ಬಳಕೆಯಾಗುತ್ತಿದ್ದ ಸಣ್ಣ ಕೆರೆಗಳು ಇದೀಗ ಕೃಷಿ ಚಟುವಟಿಕೆ ಇಲ್ಲದಿರುವುದರಿಂದ ಮುಚ್ಚಿ ಹೋಗಿದೆ. ಶ್ರೀ ವೀರೇಶ್ವರ ದೇವಳ ಕೆರೆ, ಇಗರ್ಜಿ ಮದಗ ಕೆರೆ ಮತ್ತು ಮೀನುಗಾರಿಕಾ ಬಂದರಿನ ಸಮೀಪದಲ್ಲಿರುವ ಚೋಳ ಸದ್ಯ ಕೆರೆ ಎಂದು ಹೇಳುವ ಮಟ್ಟದಲ್ಲಿದೆ.
ಮಡಿವಾಳ ಕೆರೆ ಹಾಗೂ ಚಿಟ್ಟಿ ಕೆರೆ ಹೆಸರಿಗೆ ಮಾತ್ರ ಇದ್ದು ಹಂತ ಹಂತವಾಗಿ ಕೆರೆ ಅತಿಕ್ರಮಣಗೊಳ್ಳುತ್ತಿದೆ. ಮಡಿವಾಳ ಕೆರೆ ಅತಿ ಪುರಾತನ ಕೆರೆಯಾಗಿದ್ದು ಈ ಕೆರೆಯಲ್ಲಿ ಮಡಿವಾಳರು ಬಟ್ಟೆಗಳ ಒಗೆಯುತ್ತಿದ್ದರು. ಕಾಲಕ್ರಮೇಣ ಈ ಕೆರೆ ಕೂಡ ಅವನತಿಯತ್ತ ಸಾಗಿದ್ದು, ಗುಡ್ಡೆಕೇರಿ ಪರಿಸರದ ಚಿಟ್ಟಿ ಕೆರೆ ಕೂಡ ಇದೇ ಹಾದಿಯಲ್ಲಿದೆ. ಕೆರೆಯ ಬಹುತೇಕ ಭೂಭಾಗ ಅತಿಕ್ರಮಣಗೊಂಡಿದೆ. ಕೆರೆಯ ಕಲ್ಲುಗಳು ಜಾರಿ ಕೆರೆ ಇದೆಯೇ ಎಂಬ ಪ್ರಶ್ನೆ ಉದ್ಭವಿಸುವಂತಿದೆ.

ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದೆ
ಗಂಗೊಳ್ಳಿಯಲ್ಲಿ ಅಳಿದುಳಿದ ಕೆರೆಗಳು ಕಣ್ಣೆದುರಿನಲ್ಲಿಯೇ ಅತಿಕ್ರಮಣಗೊಳ್ಳುತ್ತಿದ್ದರೂ ತಾಲೂಕು, ಜಿಲ್ಲಾ ಆಡಳಿತ ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದೆ. ಗಂಗೊಳ್ಳಿಯಲ್ಲಿರುವ ಬಹುತೇಕ ಕೆರೆಗಳು ಉಳ್ಳವರ ಪಾಲಾಗುತ್ತಿದ್ದು ಸರಕಾರದಿಂದ ಈವರೆಗೆ ಯಾವುದೇ ಕ್ರಮ ಜರುಗಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಕೆರೆಗಳ ಜಾಗದ ಸರ್ವೆ ಈವರೆಗೆ ನಡೆದಿಲ್ಲ. ಹಲವು ವರ್ಷಗಳ ಹಿಂದೆ ಗಂಗೊಳ್ಳಿ ಗ್ರಾಮ ಸಭೆಗಳಲ್ಲಿ ಕೆರೆ ಒತ್ತುವರಿ ತೆರವುಗೊಳಿಸುವ ನಿರ್ಣಯ ಕೈಗೊಳ್ಳಲಾಗಿದ್ದರೂ ಕಂದಾಯ ಇಲಾಖೆ ಅಧಿಕಾರಿಗಳು ಈ ವಿಚಾರದಲ್ಲಿ ಮೌನ ವಹಿಸಿದ್ದಾರೆ. ಇಲಾಖೆಯ ಅಧಿಕಾರಿಗಳ ಈ ನಡೆ ಹಿಂದೆ ಬಲವಾದ ಲಾಬಿ ಕೆಲಸ ಮಾಡಿದೆ ಎಂಬ ಆರೋಪ ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಿದೆ.
ಒಟ್ಟಿನಲ್ಲಿ ಸರಕಾರ ಹಾಗೂ ಕಂದಾಯ ಇಲಾಖೆಯ ದಿವ್ಯನಿರ್ಲಕ್ಷ್ಯದಿಂದ ಗಂಗೊಳ್ಳಿ ಗ್ರಾಮದಲ್ಲಿ ಬಹುತೇಕ ಕೆರೆಗಳು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದು ಮುಂದಿನ ದಿನಗಳಲ್ಲಿ ಇಂತಹ ಕೆರೆಗಳ ಸಂರಕ್ಷಣೆಗೆ ಇಲಾಖೆ ಯಾವ ಕ್ರಮಕೈಗೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಿದೆ.



ಸಂಶಯಕ್ಕೆ ಎಡೆ ಮಾಡಿದೆ
ಬಡವರು ಸರಕಾರಿ ಭೂಮಿಯನ್ನಾಗಲಿ ಅಥವಾ ಕೆರೆ ಒತ್ತುವರಿ ಮಾಡಿಕೊಂಡಿದ್ದರೆ ತಕ್ಷಣ ಕ್ರಮಕೈಗೊಳ್ಳುವ ಕಂದಾಯ ಇಲಾಖೆ ಅಧಿಕಾರಿಗಳು ಗಂಗೊಳ್ಳಿಯ ಕೆರೆ ಒತ್ತುವರಿ ಪ್ರಕರಣದಲ್ಲಿ ಈವರೆಗೆ ಕ್ರಮ ಜರಗಿಸಲು ಮುಂದಾಗದಿರುವುದು ಸಾರ್ವಜನಿಕರಲ್ಲಿ ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ.

ನಿರ್ಣಯಕ್ಕೆ ಬೆಲೆ ನೀಡಿಲ್ಲ
ಮುಂದಿನ ದಿನಗಳಲ್ಲಿ ಕೆರೆಗಳನ್ನು ಉಳಿಸಿಕೊಳ್ಳುವ ಅನಿವಾರ್ಯತೆ ಇದೆ. ಕೆರೆ ಸಂರಕ್ಷಣೆ ಬಗ್ಗೆ ಸರಕಾರ ಹೇಳಿಕೊಳ್ಳುತ್ತಿದ್ದರೂ ಗಂಗೊಳ್ಳಿಯಲ್ಲಿ ದಿನದಿಂದ ದಿನಕ್ಕೆ ಕೆರೆಗಳ ಒತ್ತುವರಿ ಹೆಚ್ಚಾಗುತ್ತಿದೆ. ಇಲಾಖೆ ಅಧಿಕಾರಿಗಳು ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದ್ದಾರೆ. ಗ್ರಾಮಸಭೆ ನಿರ್ಣಯಕ್ಕೂ ಬೆಲೆ ನೀಡುತ್ತಿಲ್ಲ.
● ನರಸಿಂಹ, ಗ್ರಾಮಸ್ಥರು, ಗಂಗೊಳ್ಳಿ

ಕಾನೂನು ಕ್ರಮ ಕೈಗೊಳ್ಳಲಾಗುವುದು
ಕೆರೆ ಅತಿಕ್ರಮಣ, ಕೆರೆ ಮುಚ್ಚುವಂತಹ ಪ್ರಕರಣಗಳು ನಡೆದರೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿ ಕಾನೂನು ಕ್ರಮಕೈಗೊಳ್ಳಲಾಗುವುದು. ಕೆರೆ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದ್ದು, ಕೆರೆ ಅತಿಕ್ರಮಣ ನಡೆದಿದ್ದರೆ ತೆರವುಗೊಳಿಸಲು ಕ್ರಮಕೈಗೊಳ್ಳಲಾಗುವುದು.
● ರವಿ, ಪಿಡಿಒ, ಗಂಗೊಳ್ಳಿ ಗ್ರಾಪಂ.

ಮುಂಡ್ಕೂರು ಕಾಲೇಜಿನಲ್ಲಿ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಅಭಿನಂದನೆ

ತಂತ್ರಜ್ಞಾನ ಜೊತೆ ಶೈಕ್ಷಣಿಕ ಸಾಧನೆ ಅತ್ಯಗತ್ಯ: ಸುನಿಲ್

ಶಿರ್ವ: ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ವಿದ್ಯಾವರ್ಧಕದ ಪ್ರಯತ್ನ ಶ್ಲಾಘನೀಯ. ವಿದ್ಯಾರ್ಥಿಗಳು ತಂತ್ರಜ್ಞಾನದ ಕಡೆಗೆ ಸಾಗುವ ಮೂಲಕ ಶೈಕ್ಷಣಿಕವಾಗಿಯೂ ಸಾಧನೆ ಮಾಡಬೇಕು ಎಂದು ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್ ಹೇಳಿದ್ದಾರೆ.
ಅವರು ಬೆಳ್ಮಣ್ ಸಮೀಪ ಮುಂಡ್ಕೂರು ವಿದ್ಯಾವರ್ಧಕ ಪ.ಪೂ. ಕಾಲೇಜಿನಲ್ಲಿ ಆಡಳಿತ ಮಂಡಳಿ, ಮುಂಬೈನ ವಿದ್ಯಾದುರ್ಗ ಟ್ರಸ್ಟ್ ಮುಂಡ್ಕೂರು ವೇದಾವತಿ ರಾಘವೇಂದ್ರ ಪ್ರಭು ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್‌ನಿಂದ ಶನಿವಾರ ನಡೆದ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ಪ್ರದಾನ, ಸಾಧಕರ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಕಾರ್ಯಕ್ರಮ ಉದ್ಘಾಟಿಸಿದ ನೈರುತ್ಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಮಾತನಾಡಿ, ಕಾಲೇಜಿನ ರಸ್ತೆ ಅಭಿವೃದ್ಧಿಗೆ ರೂ.5 ಲಕ್ಷ ಅನುದಾನ ನೀಡುತ್ತೇನೆ. ವಿದ್ಯಾರ್ಥಿಗಳ ಹೆಚ್ಚಳಕ್ಕೆ ಪೂರಕ ವಸತಿ ನಿಲಯ ಪ್ರಾರಂಭಕ್ಕೂ ಇಲಾಖೆ ಮೂಲಕ ಸ್ಪಂದಿಸುತ್ತೇನೆ ಎಂದರು.
ಮುಂಡ್ಕೂರು ಸರ್ಕಾರಿ ಹಿ.ಪ್ರಾ. ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದು ವರ್ಗಾವಣೆಗೊಂಡ ರಂಗಸ್ವಾಮಿ ಸರ್ ಅವರನ್ನು ಪತ್ನಿ ಅಂಬಿಕಾ ಜೊತೆ ಸನ್ಮಾನಿಸಿದರು. ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರೀ ದೇವಳ ಪ್ರಧಾನ ಅರ್ಚಕ ರಾಮದಾಸ ಆಚಾರ್ಯ ಆಶೀರ್ವಚನ ನೀಡಿದರು. ಮುಂಡ್ಕೂರು ವೇದಾವತಿ ರಾಘವೇಂದ್ರ ಪ್ರಭು ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್‌ನಿಂದ ಸಮವಸ್ತ್ರಪಠ್ಯ ಪೂರಕ ಸಾಮಗ್ರಿ ನೀಡಲಾಯಿತು. ಕಾಲೇಜು, ಸರ್ಕಾರಿ ಹಿ.ಪ್ರಾ. ಶಾಲಾ ವೆಬ್ ಸೈಟ್ ಬಿಡುಗಡೆಗೊಳಿಸಲಾಯಿತು.
ಆಡಳಿತ ಮಂಡಳಿ ಅಧ್ಯಕ್ಷ ಮುಲ್ಲಡ್ಕ ಗುರುಪ್ರಸಾದ್ ಸುಧಾಕರ ಶೆಟ್ಟಿ ನಿ.ಪೂ. ಸಂಚಾಲಕ ಡಾ.ಪಿ.ಬಾಲಕೃಷ್ಣ ಆಳ್ವ ನಿ.ಪೂ. ಕಾರ್ಯದರ್ಶಿ ಪಾಂಡುರಂಗ ಪ್ರಭು, ಕಜೆ ಶ್ರೀ ಮಹಾಮ್ಮಾಯಿ ದೇವಳ ಆಡಳಿತ ಮಂಡಳಿ ಗೌರವಾಧ್ಯಕ್ಷ ಎಂ.ಜಿ.ಕರ್ಕೇರ, ಮುಂಡ್ಕೂರು ಶ್ರೀದುರ್ಗಾಪರಮೇಶ್ವರಿದೇವಳವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೋರಿಬೆಟ್ಟುಗುತ್ತು ಸುರೇಂದ್ರ ಎಸ್.ಶೆಟ್ಟಿ, ಸದಸ್ಯ ಸಚ್ಚೇರಿಪೇಟೆ ನಡಿಗುತ್ತು ಜಗದೀಶ್ ಶೆಟ್ಟಿ ಲಯನ್ಸ್ ಸೇವಾ ಟ್ರಸ್ಟ್ ಅಧ್ಯಕ್ಷಡಾ.ರಾಜಾರಾಮ ರೈ, ಆಡಳಿತ ಮಂಡಳಿ ಕಾರ್ಯದರ್ಶಿ ಶರತ್ ಶೆಟ್ಟಿ, ಮುಂಡ್ಕೂರು ಕ್ಲಸ್ಟರ್ ಸಿಆರ್‌ಪಿ ಶ್ರೀಕಾಂತ ಮೂಲ್ಯ, ಪ.ಪೂ. ಕಾಲೇಜಿನ ಪ್ರಾಚಾರ್ಯ ಮಾಲತೇಶ್ ಇಂಗಳಕಿ, ಪ್ರೌಢಶಾಲಾ ಮುಖ್ಯ ಶಿಕ್ಷಕಿ ಸವಿತಾ ಸದಾನಂದ್, ಪ್ರಾ.ಶಾಲೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷಉಮಾಧರ ಆಚಾರ್ಯ, ಆಡಳಿತಮಂಡಳಿ ಜತೆ ಕಾರ್ಯದರ್ಶಿ ಪ್ರಕಾಶ್ ಕೆ.ಎನ್., ಅಶೋಕ್ ಶೆಟ್ಟಿ, ಮುಲ್ಲಡ್ಕ ಪರಾರಿ ರವೀಂದ್ರ ಶೆಟ್ಟಿ ಅವಿಲ್ ಡಿಸೋಜಾ, ಭಾಸ್ಕರ ಶೆಟ್ಟಿ ಜನ್ನೊಟ್ಟಿ ರಾವ್, ನಳಿನಿ ಶೆಟ್ಟಿ ಅಂಗ ಗುತ್ತು, ದೇವಪ್ಪ ಸಪಲಿಗ, ಗಣೇಶ್ ರಾವ್, ಸದಾನಂದ ಪೂಜಾರಿ, ಉಪನ್ಯಾಸಕರಾದ ಅಕ್ಷತಾ, ಮಾಲತಿ , ಶರತ್, ಸವಿತಾ ಸದಾನಂದ, ಕೊಂಡಳ್ಳಿ ಪ್ರಭಾಕರ ಶೆಟ್ಟಿ ಪ್ರಕಾಶ್ ನಾಯಕ್ ಮತ್ತಿತರರಿದ್ದರು.



ಗೌರವ, ಪ್ರತಿಭಾ ಪುರಸ್ಕಾರ
ಶತಾಂಶ ಫಲಿತಾಂಶ ಪಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳನ್ನು, ಕಾರಣರಾದ ಶಿಕ್ಷಕರನ್ನು, ಶಿಕ್ಷಕೇತರರನ್ನು, ಪ.ಪೂ. ಭಾಗದ ಶಿಕ್ಷಕ ಶಿಕ್ಷಕೇತರರನ್ನು, ಸಾಧಕ ವಿದ್ಯಾರ್ಥಿಗಳ ಗೌರವಿಸಲಾಯಿತು. ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ, ಅಶಕ್ತ ವಿದ್ಯಾರ್ಥಿಗಳಿಗೆ ನೆರವು ನೀಡಲಾಯಿತು.

ಕುಂದಾಪುರ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ರಕ್ತದಾನಿಗಳ ದಿನಾಚರಣೆ

ರಕ್ತದಾನದಿಂದ ಜೀವದಾನದ ಪುಣ್ಯ: ಕೋಟ

ಕುಂದಾಪುರ: ರಕ್ತದಾನವು ಜೀವ ಉಳಿಸುವ ಮಹತ್ವದ ಕಾರ್ಯವಾಗಿದೆ. ಅತ್ಯಮೂಲ್ಯ ರಕ್ತವನ್ನು ಸಂಗ್ರಹಿಸುವ ಮಹತ್ವದ ಕಾರ್ಯದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಕುಂದಾಪುರ ಘಟಕದ ಸೇವೆ ಶ್ಲಾಘನೀಯ ಎಂದು ಉಡುಪಿ ಮತ್ತು ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ.
ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕುಂದಾಪುರ ಘಟಕ ಮತ್ತು ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ಸಹಯೋಗದಲ್ಲಿ ಕುಂದಾಪುರ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಶನಿವಾರ ನಡೆದ ರಕ್ತದಾನಿಗಳ ದಿನಾಚರಣೆ – 2026 ನ್ನು ಉದ್ಘಾಟಿಸಿ ಅವರು ಮಾತನಾಡಿದರು.
ರಕ್ತದಾನವು ಜೀವ ಉಳಿಸುವ ನಿಟ್ಟಿನಲ್ಲಿ ಅತ್ಯಂತ ಪ್ರಾಮಾಣಿಕ ಕಾರ್ಯವಾಗಿದೆ. ಯುದ್ಧ ಹಾಗೂ ಅವಘಡಗಳ ಸಂದರ್ಭ ಅಗತ್ಯ ರಕ್ತ ನೀಡುವುದು ಮತ್ತು ಆರೋಗ್ಯ ಸೇವೆಗಳ ಮೂಲಕ ರೆಡ್ ಕ್ರಾಸ್ ಸಂಸ್ಥೆ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುತ್ತಿದೆ. ಜಗತ್ತಿನಲ್ಲಿ ಶಾಂತಿ, ನೆಮ್ಮದಿ, ಪ್ರೀತಿ, ಮತ್ತು ಮಾನವೀಯತೆ ಪಸರಿಸುವ ಕೆಲಸವನ್ನು ರೆಡ್‌ಕ್ರಾಸ್ ಸಂಸ್ಥೆ ಮಾಡುತ್ತಿದೆ. ರಕ್ತದಾನದ ಬಗ್ಗೆ ಸಾಕಷ್ಟು ಜಾಗೃತಿ, ಮೂಡಿಸುವುದು ಮತ್ತು ರಕ್ತದಾನಿಗಳ ಸಂಖ್ಯೆ ಹೆಚ್ಚಾಗಲಿ ಎಂದು ಆಶಿಸಿದರು
ರೆಡ್‌ಕ್ರಾಸ್ ಸಂಸ್ಥೆ ಕುಂದಾಪುರ ಘಟಕದ ಸಭಾಪತಿ ಎಸ್.ಜಯಕರ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜುಗಳ ಪರವಾಗಿ ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು ಮತ್ತು ರಕ್ತದಾನಿಗಳ ಪರವಾಗಿ 75 ಬಾರಿ ರಕ್ತದಾನ ಮಾಡಿದ ಸುದರ್ಶನ ಬರೆಕಟ್ಟೆ ಅನಿಸಿಕೆ ವ್ಯಕ್ತಪಡಿಸಿದರು.
ರೆಡ್‌ಕ್ರಾಸ್ ಸಂಸ್ಥೆ ಕೋಶಾಧ್ಯಕ್ಷ ಶಿವರಾಮ ಶೆಟ್ಟಿ, ಭಂಡಾರ್ಕಾರ್ಸ್ ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರಾಚಾರಿ, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಸತ್ಯನಾರಾಯಣ, ಪ.ಪೂ. ಕಾಲೇಜಿನ ಪ್ರಾಂಶುಪಾಲೆ ಡಾ.ಸರೋಜ ಎಂ. ಮೊದಲಾದವರು ಈ ಸಂದರ್ಭ ಉಪಸ್ಥಿತರಿದ್ದರು.
ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕುಂದಾಪುರ ಘಟಕದ ಕಾರ್ಯದರ್ಶಿ ಸತ್ಯನಾರಾಯಣ ಪುರಾಣಿಕ್ ಸ್ವಾಗತಿಸಿ, ಖಜಾಂಚಿ ಶಿವರಾಮ ಶೆಟ್ಟಿ ವಂದಿಸಿ, ಪ್ರಥಮ ಚಿಕಿತ್ಸೆ ತರಬೇತುದಾರೆ ಡಾ.ಸೋನಿ ಡಿಕೋಸ್ತಾ ನಿರೂಪಿಸಿದರು.



ಸನ್ಮಾನಿತರು
ಕಾರ್ಯಕ್ರಮದಲ್ಲಿ ರಕ್ತದಾನ ಶಿಬಿರ ಆಯೋಜಿಸಿದ ಉಡುಪಿ ಜಿಲ್ಲೆಯ ವಿವಿಧ ಪದವಿ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕ ರನ್ನು ಮತ್ತು ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ ವರನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು.

ಉಚ್ಚಿಲ ಸರಸ್ವತಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಬಳಕೆ ವಿರೋಧಿ ದಿನಾಚರಣೆ



ಪಡುಬಿದ್ರಿ: ಉಚ್ಚಿಲ ಸರಸ್ವತಿ ಮಂದಿರ ಶಾಲೆಯಲ್ಲಿ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಬಳಕೆ ವಿರೋಧಿ ದಿನ, ವಿಶ್ವ ತಂಬಾಕು ರಹಿತ ದಿನ ಜಾಗೃತಿ ಅಭಿಯಾನ ಕಾರ್ಯಕ್ರಮ ಸರಸ್ವತಿ ಮಂದಿರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಬಾಬುರಾಯ ಆಚಾರ್ಯ ಅಧ್ಯಕ್ಷತೆಯಲ್ಲಿ ನೆರವೇರಿತು.
ಅತಿಥಿಯಾಗಿದ್ದ ಪಡುಬಿದ್ರಿ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕ ಅನಿಲ್ ಕುಮಾರ್ ಟಿ. ನಾಯಕ್ , ಮಾದಕ ದ್ರವ್ಯ ಸೇವಿಸುವುದರಿಂದ ಆಗುವ ಅನಾಹುತಗಳ ಬಗ್ಗೆ , ತಂಬಾಕುಗಳ ಪರಿಣಾಮದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.
ಮುಖ್ಯ ಅತಿಥಿ ಪಡುಬಿದ್ರಿ ಪೊಲೀಸ್ ಠಾಣಾ ಸಿಬ್ಬಂದಿ ರುಕ್ಮಿಣಿ ಇವರು ಪೋಕ್ಸೋ ಕಾಯ್ದೆ ಬಗ್ಗೆ ಮಾಹಿತಿ ನೀಡಿದರು.
ಪಡುಬಿದ್ರಿ ರೋಟರಿ ಕ್ಲಬ್‌ನ ಅಧ್ಯಕ್ಷ ಸುನಿಲ್ ಕುಮಾರ್ ಮಾತನಾಡಿ, ಇಂದು ವಿದ್ಯಾರ್ಥಿಗಳು ಎದುರಿಸುತ್ತಿರುವ ಆಹಾರ ಸಮಸ್ಯೆಗಳು ಹಾಗೂ ಮಾದಕ ದ್ರವ್ಯಗಳ ಬಗ್ಗೆ ಸಮಯೋಚಿತವಾಗಿ ಮಾತನಾಡಿದರು.
ಬಾಬುರಾಯ ಆಚಾರ್ಯ ವಿಶ್ವ ತಂಬಾಕು ರಹಿತ ದಿನದ ಪ್ರತಿಜ್ಞಾ ವಿಧಿ ಬೋಧಿಸಿದರು. ವೇದಿಕೆಯಲ್ಲಿ ಶಾಲಾ ವಿದ್ಯಾರ್ಥಿ ನಾಯಕಿ ಕುಮಾರಸ್ವಾಮಿ, ರೋಟರಿ ಕಾರ್ಯದರ್ಶಿ ಪವನ್ ಸಾಲಿಯನ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ಮಮತಾ ಕಾರ್ಯಕ್ರಮ ನಿರೂಪಿಸಿದರು. ವಿಜಯಲಕ್ಷ್ಮಿ ವಂದಿಸಿದರು.

- ಅಂತಾರಾಷ್ಟ್ರೀಯ ಮಾದಕ ದ್ರವ್ಯ ಬಳಕೆ ವಿರೋಧಿ ದಿನ, ವಿಶ್ವ ತಂಬಾಕು ರಹಿತ ದಿನ ಜಾಗೃತಿ ಅಭಿಯಾನ ಕಾರ್ಯಕ್ರಮ
- ಮಾದಕ ದ್ರವ್ಯ ಸೇವಿಸುವುದರಿಂದ ಆಗುವ ಅನಾಹುತ ಬಗ್ಗೆ ಮಾಹಿತಿ
- ಪ್ರತಿಜ್ಞಾ ವಿಧಿ ಬೋಧನೆ

ಉಪ್ಪುಂದ ದೇವಾಡಿಗರ ಸಂಘ: ಮಕ್ಕಳಿಗೆ ಪುಸ್ತಕ ವಿತರಣೆ, ಶೈಕ್ಷಣಿಕ ಸಾಧಕರಿಗೆ ಸನ್ಮಾನ



ಬೈಂದೂರು: ಶಿಕ್ಷಣದ ಮೂಲಕವೇ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಸಮಾಜದ ಭವಿಷ್ಯ ರೂಪಿಸುವ ಅತ್ಯಂತ ಶಕ್ತಿಯುತ ಸಾಧನ ಶಿಕ್ಷಣ. ಆ ಶಿಕ್ಷಣದ ಬೆಳಕು ಸಮಾಜದ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪಬೇಕು. ಅದರ ಜೊತೆ ಶೈಕ್ಷಣಿಕ ಸಾಧಕರನ್ನು ಗುರುತಿಸಿ ಸಾರ್ವಜನಿಕವಾಗಿ ಗೌರವಿಸುವ ಮೂಲಕ ಅಂತವರ ಪ್ರತಿಭೆಗೆ ಸೂಕ್ತ ಮೌಲ್ಯ ನೀಡುತ್ತಿರುವುದು ಶ್ಲಾಘನೀಯ ಎಂದು ಕೊಲ್ಲೂರು ದೇವಳ ವ್ಯವಸ್ಥಾಪನಾ ಸಮಿತಿ ಸದಸ್ಯ ಆಲೂರು ರಘುರಾಮ ದೇವಾಡಿಗ ಹೇಳಿದ್ದಾರೆ.
ಉಪ್ಪುಂದ ದೇವಾಡಿಗರ ಸಂಘ ವತಿಯಿಂದ ಇಲ್ಲಿನ ಮಾತೃಶ್ರೀ ಸಭಾಭವನದಲ್ಲಿ ಮೊದಲ ಬಾರಿಗೆ ಸಮಾಜದ ಶೈಕ್ಷಣಿಕ ಪ್ರಗತಿ ಮತ್ತು ಪ್ರತಿಭೆಗಳ ಪ್ರೋತ್ಸಾಹ ನೀಡುವ ಉದ್ದೇಶದಿಂದ ಆಯೋಜಿಸಲಾದ ಪುಸ್ತಕ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.
ಸಂಘದ ಅಧ್ಯಕ್ಷ ರಾಮಚಂದ್ರ ದೇವಾಡಿಗ ಅಧ್ಯಕ್ಷತೆ ವಹಿಸಿದ್ದರು. ಎಸ್ಸೆಸ್ಸೆಲ್ಸಿ , ಪಿಯುಸಿಯಲ್ಲಿ ಅತ್ಯುತ್ತಮ ಅಂಕಗಳಿಸಿ ಶೈಕ್ಷಣಿಕ ಸಾಧನೆ ಮಾಡಿದ ಸಮಾಜ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಸಂಘದಿಂದ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ, ಬ್ಯಾಗ್ ವಿತರಿಸಲಾಯಿತು.
ಬೆಂಗಳೂರು ದೇವಾಡಿಗ ಸಂಘದ ಅಧ್ಯಕ್ಷ ರಮೇಶ ದೇವಾಡಿಗ ವಂಡ್ಸೆ, ಖಜಾಂಚಿ ಎಸ್. ಎಂ. ಚಂದ್ರ ದೇವಾಡಿಗ, ಜೊತೆ ಕಾರ್ಯದರ್ಶಿ ಶಿವಶಂಕರ ಆರ್. ದೇವಾಡಿಗ, ಉದ್ಯಮಿ ಯು. ಎ. ಮಂಜು ದೇವಾಡಿಗ, ಮಹಿಳಾ ಘಟಕದ ಅಧ್ಯಕ್ಷೆ ಗಿರಿಜಾ ದೇವಾಡಿಗ ಉಪಸ್ಥಿತರಿದ್ದರು. ಗೌರವಾಧ್ಯಕ್ಷ ರವೀಂದ್ರ ದೇವಾಡಿಗ ಸ್ವಾಗತಿಸಿ, ಮಂಜುನಾಥ ದೇವಾಡಿಗ ಪ್ರಸ್ತಾವನೆಗೈದರು. ದೇವರಾಯ ದೇವಾಡಿಗ ವಂದಿಸಿದರು. ಸುಧಾಕರ ದೇವಾಡಿಗ ನಿರೂಪಿಸಿದರು.

'ಮನ್ ಕಿ ಬಾತ್' ಕೇವಲ ಕಾರ್ಯಕ್ರಮ ಮಾತ್ರವಲ್ಲ, ನೇರ ಸಂವಾದಕ್ಕಿರುವ ವೇದಿಕೆ



ಕುಂದಾಪುರ: ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ಮನ್ ಕಿ ಬಾತ್' ಕಾರ್ಯಕ್ರಮ ರಾಜ್ಯದಾದ್ಯಂತ ಯಶಸ್ವಿಯಾಗಿ ನಡೆದ ಹಿನ್ನೆಲೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಜಗನ್ನಾಥ ಭವನದಲ್ಲಿ ಶುಕ್ರವಾರ ರಾಜ್ಯ ಮಟ್ಟದ 'ಮನ್ ಕಿ ಬಾತ್ ಸಂವಾದ' ಕಾರ್ಯಕ್ರಮ ನಡೆಯಿತು.

ಮಾದರಿಯಾಗಿ ಕೆಲಸ ಮಾಡಿದೆ
ವಿಶೇಷ ಸಂವಾದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಮನ್ ಕಿ ಬಾತ್' ಕೇವಲ ಕಾರ್ಯಕ್ರಮವಲ್ಲ, ಪ್ರತಿ ಬೂತ್‌ನಲ್ಲಿ ಜನರೊಂದಿಗೆ ನೇರ ಸಂವಾದಕ್ಕೆ ಇರುವ ವೇದಿಕೆ. ಉಡುಪಿ ಬಿಜೆಪಿ ಜಿಲ್ಲಾ ಮಂಡಲ ತಂಡ ಕರಾವಳಿಯಲ್ಲಿ ಮಾದರಿಯಾಗಿ ಕೆಲಸ ಮಾಡಿದೆ ಎಂದು ಶ್ಲಾಘಿಸಿದರು.
ಈ ಕಾರ್ಯಕ್ರಮಕ್ಕೆ ಉಡುಪಿ ಜಿಲ್ಲಾ ಬಿಜೆಪಿ ತಂಡಕ್ಕೆ ವಿಶೇಷ ಆಹ್ವಾನ ನೀಡಲಾಗಿತ್ತು. ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ನೇತೃತ್ವದಲ್ಲಿ ಉಡುಪಿ ಜಿಲ್ಲೆಯ ಎಲ್ಲ ಮಂಡಲಗಳ ಅಧ್ಯಕ್ಷರು ಭಾಗವಹಿಸಿದ್ದರು.

ಕುಂದಾಪುರದಿಂದಲೂ ಭಾಗಿ
ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ 'ಮನ್ ಕಿ ಬಾತ್' ಅತ್ಯಂತ ಯಶಸ್ವಿಯಾಗಿ ಆಯೋಜಿಸಿದ್ದ ಹಿನ್ನೆಲೆಯಲ್ಲಿ ಕುಂದಾಪುರ ಮಂಡಲ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ ಹಾಗೂ ಮಂಡಲ ಪ್ರಧಾನ ಕಾರ್ಯದರ್ಶಿ ಮತ್ತು 'ಮನ್ ಕಿ ಬಾತ್' ಸಂಚಾಲಕ ಸತೀಶ್ ಪೂಜಾರಿ ವಕ್ವಾಡಿ ಸಂವಾದದಲ್ಲಿ ಪಾಲ್ಗೊಂಡರು.
ಈ ಸಂದರ್ಭ ರಾಜ್ಯ ಬಿಜೆಪಿಯ ಪ್ರಮುಖರು, ವಿವಿಧ ಮಂಡಲ ಅಧ್ಯಕ್ಷರು ಹಾಗೂ 'ಮನ್ ಕಿ ಬಾತ್' ಸಂಚಾಲಕರು ಉಪಸ್ಥಿತರಿದ್ದರು.

ಜಿಲ್ಲೆಯ 200 ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಹೆಗ್ಗುಂಜೆ ರಾಜೀವ ಶೆಟ್ಟಿ ವಿದ್ಯಾ ಪೋಷಕ ಪ್ರಶಸ್ತಿ , ವೆಬ್‌ಸೈಟ್ ಅನಾವರಣ

ಮಕ್ಕಳಿಗೆ ಸಂಸ್ಕೃತಿ-ಸಂಸ್ಕಾರ ನೀಡುವ ಕೆಲಸ ಪೋಷಕರಿಂದಾಗಬೇಕು: ನರೇಂದ್ರ ರೈ

ಉಡುಪಿ: ಕೋವಿಡ್ ಮಹಾಮಾರಿಯ ಬಳಿಕದ 5 ವರ್ಷಗಳಿಂದ ಮಕ್ಕಳನ್ನು ಒಂದು ಗಂಟೆ ತರಗತಿ ಕೋಣೆಗಳಲ್ಲಿ ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ಮಕ್ಕಳಲ್ಲಿ ಸಂವೇದನಾಶೀಲತೆ ಸಂಪೂರ್ಣ ಮಾಯವಾಗುತ್ತಿದೆ. ಆದ್ದರಿಂದ ಮಕ್ಕಳಿಗೆ ಸಂಸ್ಕೃತಿಸಂಸ್ಕಾರ ನೀಡುವ ಕೆಲಸ ಪೋಷಕರಿಂದಾಗಬೇಕೆಂದು ಲೇಖಕ ನರೇಂದ್ರ ರೈ ದೇರ್ಲ ಆತಂಕ ವ್ಯಕ್ತಪಡಿಸಿದರು.
ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ವತಿಯಿಂದ ಜಿಲ್ಲಾ ಅನುದಾನಿತ ಶಾಲಾ ಸಂಘಗಳು, ಉಡುಪಿ ಇವರ ಸಹಯೋಗದೊಂದಿಗೆ ಶನಿವಾರ ಯಕ್ಷಗಾನ ಕಲಾರಂಗದಲ್ಲಿ ನಡೆದ ಜಿಲ್ಲೆಯ '200 ಅನುದಾನಿತ ಶಾಲೆಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ 20,000 ಜೊತೆ ಉಚಿತ ಶಾಲಾ ಸಮವಸ್ತ್ರಗಳ ವಿತರಣೆ ಹಾಗೂ ಹೆಗ್ಗುಂಜೆ ರಾಜೀವ ಶೆಟ್ಟಿ ವಿದ್ಯಾ ಪೋಷಕ ಪ್ರಶಸ್ತಿ ಮತ್ತು ವೆಬ್‌ಸೈಟ್ ಅನಾವರಣ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.
ಮಾನವ ಹಕ್ಕುಗಳ ರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಡಾ. ರವೀಂದ್ರನಾಥ ಶಾನುಭಾಗ್ ಮಾತನಾಡಿ, ಇಂದು ರಾಜಕಾರಣಿಗಳ ಹಾಗೂ ಸರ್ಕಾರದ ಇಚ್ಛಾಶಕ್ತಿ ಕೊರತೆಯಿಂದ ತಳ ಮಟ್ಟದ ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜನಪ್ರತಿನಿಧಿಗಳು ಸರಿಯಾಗಿ ದನಿ ಎತ್ತದ ಕಾರಣ 2010ರಲ್ಲಿ 29 ಕೊರಗರಿಗೆ ವಿತರಿಸಲಾದ ಹಕ್ಕುಪತ್ರದಿಂದ ಇದುವರೆಗೂ ಅಲ್ಲಿ ಮನೆ ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ, ಎಲ್ಲವನ್ನೂ ಹೋರಾಡಿಯೇ ಪಡೆಯಬೇಕಾದ ಸ್ಥಿತಿ ಇದೆ ಎಂದು ಅಸಮಾದಾನ ಹೊರಹಾಕಿದರು. ಅಧಿಕಾರಿ ವರ್ಗ ಹಾಗೂ ಜನಪ್ರತಿನಿಧಿಗಳು ಸಮಾಜ ಸೇವಕರು ಎಂದು ಜನರು ಸ್ವೀಕರಿಸಿ, ಜನಜಾಗೃತರಾದರೆ ಮಾತ್ರ ಗಣರಾಜ್ಯವಾಗುತ್ತದೆ ಎಂದರು.
ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಯಕ್ಷಗಾನ ಕಲಾರಂಗದ ಕಾರ್ಯದರ್ಶಿ ಮುರಳಿ ಕಡೆಕಾರು, ಜಿಲ್ಲಾ ಅನುದಾನಿತ ಪ್ರೌಢಶಾಲೆಗಳ ನೌಕರರ ಸಂಘದ ಅಧ್ಯಕ್ಷರಾದ ಡಾ. ಜಯಶೀಲ ಶೆಟ್ಟಿ ಕಂದಾವರ, ಜಿಲ್ಲಾ ಪ್ರಾಥಮಿಕ ಅನುದಾನಿತ ಶಾಲಾ ಸಂಘದ ಅಧ್ಯಕ್ಷ ಕೆ. ಅರುಣ್ ಕುಮಾರ್ ಶೆಟ್ಟಿ, ಟ್ರಸ್ಟಿನ ಉಪಾಧ್ಯಕ್ಷ ಹಾಲಾಡಿ ನಾಗರಾಜ ಶೆಟ್ಟಿ ಹಾಗೂ ವಿವಿಧ ಗಣ್ಯರು ಉಪಸ್ಥಿತರಿದ್ದರು.
ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಟ್ರಸ್ಟ್ ಅಧ್ಯಕ್ಷ ಡಾ. ಎಚ್. ಎಸ್. ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದಾಮೋದರ ಶರ್ಮಾ ಕಾರ್ಯಕ್ರಮ ನಿರೂಪಿಸಿದರು.



ಪಾಠ ಮಾಡುವುದೇ ದೊಡ್ಡ ಸವಾಲು
ಇಂದು ಶಿಕ್ಷಕರು ಮಕ್ಕಳಿಗೆ ಪಾಠ ಮಾಡುವುದೇ ದೊಡ್ಡ ಸವಾಲಾಗುತ್ತಿದೆ. ಈ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮುಂದಿನ ಪೀಳಿಗೆಗೆ ದೊಡ್ಡ ಆಪತ್ತು ಕಾದಿದೆ. ಮಕ್ಕಳನ್ನು ಯಂತ್ರತ್ವದಿಂದ ಸುಸಂಕೃತರನ್ನಾಗಿಸಬೇಕು.
● ನರೇಂದ್ರ ರೈ ದೇರ್ಲ